ಮೈಸೂರು ವಿ.ವಿ. ಬಿಕಾಂ ಬಿಬಿಎಂ. ಮೂರನೆಯ ಸೆಮಿಸ್ಟರ್ ಪಠ್ಯಪುಸ್ತಕ

ಕೃಷ್ಣಾನಂದ ಕಾಮತ

ನಾನೂ ಅಮೇರಿಕೆಗೆ ಹೋಗಿದ್ದೆ



ಡಾ. ಕೃಷ್ಣಾನಂದ ಕಾಮತ ಕನ್ನಡ ನಾಡು ಕಂಡ ಅಪೂರ್ವ ಸಂಶೋಧಕರು. ಅಧ್ಯಯನಕಾರರಿಗೆ ಕ್ಷೇತ್ರಕಾರ್ಯ ಮಾರ್ಗದರ್ಶಿ. ಸೃಜನಶೀಲ ಬರಹಗಾರ, ಕುಂಚ ಕಲಾಕಾರ, ಛಾಯಾಗ್ರಾಹಕ, ಪ್ರಾಣಿ–ಪಕ್ಷಿ–ಕೀಟ ಅಧ್ಯಯನಿ, ಪರಿಸರ ತಜ್ಞ, ಪಾಕಶಾಸ್ತ್ರ ಪ್ರವೀಣ –ಹೀಗೆ ಬಹು ಆಯಾಮಗಳಲ್ಲಿ ದುಡಿದವರು.

ಸೆಪ್ಟೆಂಬರ್ 29, 1934ರಲ್ಲಿ ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ ಜನನ. ಲಕ್ಷ್ಮಣ ಕಾಮತ್, ರಮಾಬಾಯಿ ಕಾಮತರ ಹನ್ನೊಂದು ಮಕ್ಕಳಲ್ಲಿ ಕೃಷ್ಣಾನಂದ ಕಾಮತರು ಮೂರನೇಯವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಿಎಸ್ಸಿ, ಎಂಎಸ್ಸಿ., ಪದವಿಗಳನ್ನು ಮುಗಿಸಿ ಅಲ್ಲಿಯೇ ಎರಡು ವರ್ಷಗಳ ಕಾಲ ಅರೆಕಾಲಿಕ ಉಪನ್ಯಾಸಕರಾಗಿ ಬೋಧನಾನುಭವ ಪಡೆದರು. ಪತ್ನಿ ಹೆಸರಾಂತ ಇತಹಾಸ ತಜ್ಞರು ಮತ್ತು ಆಕಾಶವಾಣಿ ನಿಲಯದ ವಿಶ್ರಾಂತ ನಿರ್ದೇಶಕಿ ಡಾ. ಜ್ಯೋತ್ಸ್ನಾ ಕಾಮತ, ಅಮೆರಿಕಾದಲ್ಲಿ ನೆಲೆಸಿರುವ ಮಗ ವಿಕಾಸ ಕಾಮತ.

ಅಮೇರಿಕಾದ ಪ್ರತಿಷ್ಠಿತ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಕೀಟಶಾಸ್ತ್ರ ಅಧ್ಯಯನಕ್ಕೆ ಫೆಲೋಷಿಪ್ ಪಡೆದದ್ದಲ್ಲದೆ ಅಲ್ಲಿಯೇ ರಾಕ್‌ಫೆಲರ್ ಫೌಂಡೇಷನ್‌ನ ಸ್ಕಾಲರ್‌ಷಿಪ್ ಕೂಡ ಪಡೆದವರು. ಅರಣ್ಯಶಾಸ್ತ್ರ ಕುರಿತು ಇವರು ಮಂಡಿಸಿದ ಮಹಾಪ್ರಬಂಧಕ್ಕೆ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಅದರೊಟ್ಟಿಗೆ ಅಮೇರಿಕಾದ ಇಪ್ಪತ್ತೆರಡು ರಾಜ್ಯಗಳಲ್ಲಿ ಅರಣ್ಯ ವೀಕ್ಷಣಾ ತರಬೇತಿಗೆ ಆಯ್ಕೆ ಮಾಡಿತು.

ಸೈಂಟಿಸ್ಟ್ ಪೂಲ್ ಆಫಿಸರ್ ಆಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ ಕಾಮತರು ರಾಜಾಸ್ಥಾನದ ಉದಯಪುರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೋಧಕರಾಗಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿದರು.

ನಾನೂ ಅಮೇರಿಕೆಗೆ ಹೋಗಿದ್ದೆ, ಬಸ್ತರ ಪ್ರವಾಸ ಹಾಗೂ ಪ್ರಾಣಿ ಪರಿಸರ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಕೀಟ ಜಗತ್ತು, ನಾ ರಾಜಾಸ್ತಾನದಲ್ಲಿ, ಕಾವಿಕಲೆ, ಪಶುಪಕ್ಷಿ ಪ್ರಪಂಚ, ಪ್ರೇಯಸಿಗೆ ಬರೆದ ಪತ್ರಗಳು, ಕಾಗೆಯ ಕತೆ, ಇರುವೆಯ ಇರವು, ಮರುಪಯಣ, ಕುಂಚ ಪ್ರಪಂಚ ಸೇರಿದಂತೆ ಇಪ್ಪತ್ತಾರು ಕೃತಿಗಳನ್ನು ಬರೆದಿದ್ದಾರೆ.

ಕೃಷ್ಣಾನಂದ ಕಾಮತರು ತಮ್ಮ ಅಮೇರಿಕಾದ ಪ್ರವಾಸದ ಅನುಭವಗಳನ್ನು ಕಥನರೂಪದಲ್ಲಿ ನಿರೂಪಿಸಿದ್ದಾರೆ. ವಾಚಾಳಿತನಕ್ಕೆ ಆಸ್ಪದ ನೀಡದೆ, ಅತಿರೇಕದ ವಿವರಣೆಗೆ ಹೋಗದೆ ಸರಳವಾಗಿ ನಿರೂಪಿಸುತ್ತಲೇ ಅಮೇರಿಕಾದ ಎಲ್ಲ ಮಗ್ಗುಲುಗಳನ್ನು ವಿಷದ ಪಡಿಸಿದ್ದಾರೆ. ಪ್ರವಾಸ ಕಥನವೊಂದು ಹೇಗಿರಬೇಕು ಎಂಬುದರ ಮಾದರಿ ಈ ಕೃತಿ. 1995ರಲ್ಲಿಯೇ wwwkamat.com ಎಂಬ ಅಂತರ್ಜಾಲ ತಾಣವನ್ನು ಸೃಷ್ಟಿಸಿ ವಿಶ್ವದಾದ್ಯಂತ ಲಕ್ಷ ಲಕ್ಷ ಜನರಿಗೆ ಕರ್ನಾಟಕ ಸಂಸ್ಕೃತಿಯನ್ನು ಪರಿಚಯಿಸಿದ ಕೀರ್ತಿಗೆ ಭಾಜನರಾದ ಕಾಮತರು 2002 ಫೆಬ್ರವರಿ 20ರಂದು ನಿಧನರಾದರು.

ಪ್ರಗತಿ ಪುಸ್ತಕ ಮಾಲೆ–159

ಮೈಸೂರು ವಿವಿ ಬಿಕಾಂ, ಬಿಬಿಎಂ, ಬಿಸಿಎ. ಪದವಿ ಮೊದಲ ಸೆಮಿಸ್ಟರ್ ಪಠ್ಯಪುಸ್ತಕ

ನಾನೂ ಅಮೇರಿಕೆಗೆ ಹೋಗಿದ್ದೆ

(ಪ್ರವಾಸ ಕಥನ)

ಕೃಷ್ಣಾನಂದ ಕಾಮತ

ಪ್ರಗತಿ ಗ್ರಾಫಿಕ್ಸ್–ಬೆಂಗಳೂರು

119, 3ನೇ ಕ್ರಾಸ್, 8ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು

NAANOO AMERIKEGE HOGIDDE-Kannada Travelogue A Special Personal Writing by Dr. Krishnananda Kamat, 110, Shashikiran, Malleswara 18 Cross, Bangalore 560055.

Publisher: **M. Byregowda** for **Pragati Graphics**, Bangalore # 119, 3rd cross, 8th main, Hampinagara(RPC Layout), Bengaluru-104.

Ph: 080-2340 9512. email: byregowda.m1@gmail.com

ISBN :	978-93-81441-71-8		
First Impression:	1969	Fiftht Edition:	1987
Second Edition:	1971	Sixth Edition:	2002
Third Edition:	1983	Seventh Edition:	2016
Fourth Edition:	1983		
Pages:	xiv+136		
Price :	RS. 125/-		
paper :	Maplitho 70 GSM		
size :	1/8 Demy		

ಕಾಗದ:	ಮ್ಯಾಪ್ಲಿಥೊ 70 ಜಿಎಸ್ಎಂ
ಬೆಲೆ:	ರೂ 125/-
ಪುಟಗಳು:	xvi+136
ಸೈಜ್:	**1/8 ಡೆಮಿ**
ಪ್ರತಿಗಳು:	**1000**
ರಕ್ಷಾಪುಟ ವಿನ್ಯಾಸ:	**ಅಜಿತ್ ಕೌಂಡಿನ್ಯ ಶಿಡ್ಲಘಟ್ಟ**
ಪ್ರಕಾಶಕರು:	**ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್ - ಬೆಂಗಳೂರು** ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ, ಬೆಂಗಳೂರು-104. ದೂರವಾಣಿ: 080-23409512
ಮುದ್ರಣ:	ಪ್ರಗತಿ ಗ್ರಾಫಿಕ್ಸ್ ಹಂಪಿನಗರ, ಬೆಂಗಳೂರು
ಅಧಿಕೃತ ಮಾರಾಟಗಾರರು:	ಅಭಿರುಚಿ ಪ್ರಕಾಶನ ಮೈಸೂರು ಫೋ: 9980560013

ISBN Not updated

ಅರ್ಪಣೆ

ಪಿತೃಸ್ಮೃತಿಗೆ

ಸ್ವಗತ

ಹೇಳಿದ್ದೇ ಹೇಳುವುದು
ಮೂವತ್ತಾರು ವರುಷ 1933ರಿಂದ
'ತೋಂ ಝುಣಕ ಥೈ, ಥೈ ಝುಣಕ ತೋಂ'
ವೇಷ ಬೇರೆ, ಆರ್ಭಟ ಬೇರೆ ಆದರೂ
ಅಟ್ಟ ಅದೇ
ಅವೇ ಕುಣಿತ, ಅವೇ ಪ್ರಸಂಗ
ಪತ್ರ; ತಾರು; ಫೋನು
ಊಟ ಉಪಚಾರ, ಕಾಲಿಗೆ ನೆಲವಾಗಿ, ಹೊಟ್ಟೆಗೆ ಹಸಿವಾಗಿ.
ಹಿಗ್ಗಿ, ಹಿಗ್ಗಿಸಿ–ಒಬ್ಬರಿಗೊಬ್ಬರು ಕೃತಜ್ಞ
ಅಮೂಲ್ಯ, ಅಪ್ರತಿಮ, ಚಿರನವ ಎಂದದ್ದೆಲ್ಲ
ಕಾಲದ ಝಳಕ್ಕೆ ನಿರ್ಮಾಲ್ಯ, ನಿರ್ವೀರ್ಯ...
ಓಹ್! ಕಟ್ಟಿದ ವೇಷಕ್ಕೆ ಹಿಲಾಲಿನ ಬೆಳಕು
ಥಳಕ್ ಥಳಕು
'ತಾವು ಬಂದಂಥವರು ಧಾರು ಸ್ವಾಮಿ?
ಅತಳ ಸುತಳ ಅಖಿಳ ಬ್ರಹ್ಮಾಂಡಕ್ಕೂ ಒಬ್ಬನೇ ಆದ'... ಇಂಥವ.
ನೆರೆಮನೆಯ ಕಲ್ಲ್ಯಾ, ಮಲ್ಲ್ಯಾ, ಭೀಮ ಅರ್ಜುನ.
ಹೌದು ಇದೆಲ್ಲಾ ಆಯ್ತು ಸ್ವಾಮೀ ಮುಂದೇನು?

ಏನು.
'ನಾನೂ ಅಮೇರಿಕೆಗೆ ಹೋಗಿದ್ದೆ'
ಇದ್ದು ಮೂವತ್ತೆರಡನೇ ವರ್ಷದ ಪುಸ್ತಕ
ವರ್ಷದ ಮೊದಲನೆಯದು

ದೇಶ ದೇಶ ಪರ್ಯಟನ ಮಾಡಿ ಬಂದವರು ಹೇಳಿದ ಕಥಿ
ಓದಲಿಕ್ಕೆ ಭಾಳ ರುಚಿ
ಸಾರಥಿ–ಕಾರ್ಯ ಆಯಿತಲ್ಲ, ಇನ್ನು ಮುಂದೇನು?
ನಾಮಾಂಕಿತ ಬೇಕೆ? ಹೇಳುತ್ತೇನೆ ಕೇಳಿ;
ಎದನ್ನು ಕಥಿಸಿದವರು ಸ್ವಾಮೀ, ಕೃಷ್ಣಾನಂದ ಕಾಮತರು.
ಉತ್ತರ ಕನ್ನಡದವರು ಸ್ವಾಭಿಮಾನಿಗಳು.

ಹೊರತಂದದ್ದು: ಪ್ರಗತಿ ಪುಸ್ತಕ ಮಾಲೆ

ವೇಷ ಕಟ್ಟಿದವರು, ರುಬಾಬ್ ಮಾಡಿದವರು,
ಛಂದನ್ನ ಮೇಲ್ದಿ ಹೊಂದಿಸಿದವರು ಅಜಿತ್ ಕೌಂಡಿನ್ಯ
ಶಿಡ್ಲಘಟ್ಟದಲ್ಲಿದ್ದವರು

ಇದನ್ನು ನಮ್ಮದಂತ ಹಚ್ಚಿಕೊಂಡು ವಾಹವ್ವಾ ಅಂತ ಬೆನ್ನು ಚಪ್ಪರಿಸಿ
ಮುಂದ ತಂದವರು ನೀವು–
ಗ್ರಾಹಕ–ವಾಚಕರು

ನಿಮಗೆಲ್ಲಾರಿಗೂ ಸಾಲ ಹಿಡಿದು ನಮಿಸ್ತೇವಿ
ಗಮನ ಕೊಟ್ಟು ಎತ್ತಿ ಹಿಡೀರಿ ತೋಲ ಕಾಯಾಕ
"ಇಲ್ ಅಂದ್ರ ನಿಲ್ ಅಂತೈತಿ ಗಾಳಿ, ತೂರಾಕ"

(ಮೊದಲ ಆವೃತ್ತಿಯಿಂದ)

ಕ್ಷಮಸ್ವ

ನನ್ನ ಮಾತು

ನಾನೂ ಅಮೇರಿಕೆಗೆ ಹೋಗಿದ್ದೆ.

ಇಂದು ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಅಮೇರಿಕೆಗೆ ಹೋಗಿ ಬರುತ್ತಾರೆ. ಹೋಗುವ ಮೊದಲು ನಾವೆಲ್ಲ ಕಟ್ಟಿಕೊಂಡ ಕನಸಿನ ನಾಡಿಗಿಂತ ಹೋದ ನಂತರ ಕಂಡ ಪ್ರತ್ಯಕ್ಷ ಅಮೇರಿಕ ಬಹಳ ಭಿನ್ನವಾಗಿದೆ. ಅಲ್ಲಿ ಹೋದೊಡನೆ ನೂರಾರು ಅನಿರೀಕ್ಷಿತ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ; ನೂರಾರು ವಿದ್ಯಾರ್ಥಿಗಳು ತಮ್ಮ ಓದನ್ನು ಮುಗಿಸದೇ ತಿರುಗಿ ಬರುತ್ತಾರೆ; ಹತ್ತಾರು ಜನ ವಿದ್ಯಾಭ್ಯಾಸ ಬಿಟ್ಟು 'ಯಾಂಕಿ' ಹುಡುಗಿಯರನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿಬಿಡುತ್ತಾರೆ; ತಾಳ್ಮೆ, ಸಂಯಮ ಪ್ರಯತ್ನಶೀಲತೆ ಇದ್ದವರು ಅಧ್ಯಯನ ಮುಗಿಸಿ ಯಶಸ್ವಿಯಾಗಿ ಹಿಂದಿರುಗುತ್ತಾರೆ.

ಇತ್ತೀಚೆಗೆ ಕೆಲವೇ ತಿಂಗಳು ಅಮೇರಿಕೆಗೆ ಹೋಗಿ ಬರಲಿ, ಕೆಲವು ವರ್ಷ ಇದ್ದು ಬರಲಿ–ಹಲವರು ಅಮೇರಿಕೆಯನ್ನು ಸರಿಯಾಗಿ ಅರ್ಥಮಾಡಿಕೊಂಡವರಂತೆ ಅಧಿಕಾರವಾಣಿಯಿಂದ ಭಾಷಣ ಬಿಗಿಯುತ್ತಾರೆ. ಲೇಖನ ಬರೆಯುತ್ತಾರೆ. ಪುಸ್ತಕಗಳನ್ನೂ ಬರೆದು ಹೊರಹಾಕುತ್ತಾರೆ. ಬಹುಶಃ ಎಲ್ಲರೂ ಅಲ್ಲಿಯ ವೈಭವವನ್ನು, ಯಾಂತ್ರಿಕ ಪ್ರಗತಿಯನ್ನು, ಸಿರಿವಂತಿಕೆಯನ್ನು ಮಾತ್ರ (ಸ್ವಾಮಿಯವರು ಕನ್ನಡದಲ್ಲೆ ಬರೆದ "ಅಮೇರಿಕೆಯಲ್ಲಿ ನಾನು" ಎಂಬುದನ್ನು ಹೊರತುಪಡಿಸಿ) ಮನಮುಟ್ಟುವಂತೆ ವಿವರಿಸುತ್ತಾರೆ. ಇದರಿಂದ ಜನರು ಅಮೇರಿಕೆಯೆಂದರೆ 'ಅಪ್ಸರೆಯ ನಾಡು, ಶ್ರೀಮಂತಿಕೆಯ ಬೀಡು, ಭೂಲೋಕದ ಸ್ವರ್ಗ' ಎಂದು ನಂಬಿ, ಏನೇನೋ ಕನಸು ಕಟ್ಟಿಕೊಂಡು, ಅಮೇರಿಕೆಗೆ ಹೋಗಿ ನಿರಾಶರಾದರೆ ಆಶ್ಚರ್ಯವೇನಿಲ್ಲ. ಅಂದರೆ ಅಮೇರಿಕೆಗೆ ಹೋಗಿ ಬಂದವರು ಹೇಳಿದ್ದು, ಬರೆದದ್ದು ಸುಳ್ಳೆಂದಲ್ಲ. ಆದರೆ ಹೆಚ್ಚಿನ ಬರಹಗಳು ಕುತೂಹಲವನ್ನು ಕೆರಳಿಸುವಂತಹವು. ವಾಸ್ತವಿಕತೆಯಿಂದ ದೂರವಾದವು. ಅವು ಅವರ ವೈಯಕ್ತಿಕ ಅನುಭವಗಳ ಶೇಕಡಾ ಹತ್ತರಷ್ಟು ಮಾತ್ರ ಇರಬಹುದು ಎಂದರೆ ಅತಿಶಯೋಕ್ತಿಯಾಗಲಾರದು. ಹೇಳದಿದ್ದ ಬರೆಯಲಾಗದ ಎಷ್ಟೋ ಕಟು ಅನುಭವಗಳಿರುತ್ತವೆ...

ನಾನು ಭಾರತೀಯನಾಗಿದ್ದುಕೊಂಡು ಅಮೇರಿಕನ್ನರನ್ನು ತೂಗಿ ನೋಡಬೇಕೆಂಬ ಹಂಬಲದವನು. ಆದ್ದರಿಂದ ವೇಳೆ ಸಂಧಿ ದೊರೆತಾಗಲೆಲ್ಲ ಅಮೇರಿಕನ್ ಸ್ನೇಹಿತರೊಂದಿಗೆ ಅಮೇರಿಕನ್ ಕುಟುಂಬಗಳೊಡನೆ ವಾಸಿಸಿ ಅವರೊಂದಿಗೆ ಒಂದಾಗಿ ಇರಲು ಯತ್ನಿಸಿ ಅವರನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಹದಿನೈದು ಸಾವಿರ ಮೈಲು ಪ್ರವಾಸ ಮಾಡಿ ಅಮೇರಿಕೆಯ ಹೆಚ್ಚಿನ ಪ್ರಾಂತಗಳನ್ನು ಸುತ್ತಾಡಿದ್ದೇನೆ. ನಾಲ್ಕು ವರ್ಷಗಳನ್ನು ಅಮೇರಿಕೆಯಲ್ಲಿ ಕಳೆದರೂ ಅಮೇರಿಕನ್ನರ ಬಗ್ಗೆ ಅಧಿಕಾರವಾಣಿಯಿಂದ ಬರೆಯುವ ಆತ್ಮವಿಶ್ವಾಸ ನನಗಿಲ್ಲ. ಆದರೆ ನನ್ನ ಕೆಲ ಅನುಭವಗಳನ್ನು ಯಥಾವತ್ತಾಗಿ ಓದುಗರಿಗೆ ನಿವೇದಿಸಿದರೆ, ಅಮೇರಿಕನ್ನರ ವೈವಿಧ್ಯಪೂರ್ಣ ಜೀವನದ ಪರಿಚಯವಾಗಿ ಒಂದು ಒಳ್ಳೆ ತಿಳಿವಳಿಕೆಗೆ ಮಾರ್ಗವಾದೀತೆಂದು ನಂಬಿದ್ದೇನೆ.

ಅಲ್ಲಿ ಸವಿದ ಕೆಲ ರಸನಿಮಿಷಗಳನ್ನೂ ಇಲ್ಲಿ ಸೇರಿಸಿದ್ದೇನೆ. ಒಂದೆರಡು ಕಟು ಅನುಭವಗಳನ್ನೂ ಸೇರಿಸದಿದ್ದರೆ ಚಿತ್ರಣ ಪೂರ್ಣವಾಗಲಿಕ್ಕಿಲ್ಲವೆಂದು ಅವನ್ನೂ ಮೂಡಿಸಲು ಯತ್ನಿಸಿದ್ದೇನೆ. ಇದರಿಂದ ನನ್ನ ಅಮೇರಿಕೆಯ ಅನುಭವಗಳು ಇಷ್ಟೇ ಎಂದು ಹೇಳಲಿಕ್ಕಾಗದು. ಇದರೊಟ್ಟಿಗೆ ಮೈಮುರಿ ದುಡಿತ, ಬೆವರ ಇಳಿತ, ರಕ್ತದ ಕುದಿತ ಇವೆಲ್ಲ ಕೂಡಿದಾಗಲೇ ನನ್ನ ಅಮೇರಿಕೆಯ ಯಾತ್ರೆ ಫಲಕಾರಿಯಾಯಿತು.

ಓದುಗರು ಏನಾದರೂ ತಮ್ಮ ಸಲಹೆ–ಸೂಚನೆಗಳನ್ನು ಸಂಶಯಗಳನ್ನು ತಿಳಿಸಬೇಕು ಎನಿಸಿದರೆ ಅವಶ್ಯವಾಗಿ ಲೇಖಕನಿಗೆ ಬರೆದು ತಿಳಿಸಬೇಕು. ಈ ಕೊಡು–ಕೊಳುವಿಗಾಗಿ ಲೇಖಕ ಅವರಿಗೆ ತುಂಬ ಋಣಿಯಾಗುವನು.

(ಮೊದಲ ಆವೃತ್ತಿಯಿಂದ)

ಕೃಷ್ಣಾನಂದ ಕಾಮತ

ಪ್ರಕಾಶಕರ ಮಾತು

ಕೃಷ್ಣಾನಂದ ಕಾಮತರನ್ನು ಪರಿಸರ ಧ್ಯಾನಿ, ಅಪರೂಪದ ಛಾಯಾಗ್ರಾಹಕ, ಅತ್ಯದ್ಭುತ ಕುಂಚಕಲಾವಿದ, ಕಾಲಿಗೆ ಚಕ್ರಗಳನ್ನು ಕಟ್ಟಿಕೊಂಡು ಪ್ರಪಂಚ ಪರ್ಯಟನೆ ಮಾಡಿದ ಪ್ರವಾಸಿ, ಬುಡಕಟ್ಟು ಲೋಕದರ್ಶಕ... ಏನೆಂದು ಪರಿಚಯಿಸುವುದು! ಸೂಕ್ಷ್ಮಾತಿ ಸೂಕ್ಷ್ಮಗಳನ್ನು ಸರಳವಾಗಿ ಅರ್ಥವಾಗುವ ಹಾಗೆ ತಮ್ಮದೇ ಧಾಟಿಯಲ್ಲಿ ಓದುಗರಿಗೆ ದಾಟಿಸುವ ಅಪೂರ್ವ ಪ್ರತಿಭೆ. ಕೃಷ್ಣಾನಂದ ಕಾಮತರ ಆಸಕ್ತಿಯ ಕ್ಷೇತ್ರ ಹಲವು. ಕೀಟಗಳನ್ನು ನೋಡಿ ಅವರ ಹೃದಯ ಮೀಟುತ್ತದೆ. ಇರುವೆಯ ಇರವನ್ನು ಗುರುತಿಸಿ ಅದರ ಜೀವನ ವಿಧಾನ ಕರಾರುವಾಕ್ಕಾಗಿ ದಾಖಲಾಗುತ್ತದೆ. ಕಣ್ಣಲ್ಲಿ ಕಣ್ಣಿಟ್ಟು ಕಾದು ಕುಳಿತು ಕಾಗೆಯ ಕತೆ ರೂಪುಗೊಳ್ಳುತ್ತದೆ... ಹೀಗೆ ಹತ್ತು ಹಲವು ವಿಚಾರಗಳ ಮೂಲಕ ಕೃಷ್ಣಾನಂದ ಕಾಮತರು ವೈಚಾರಿಕ ಪ್ರಜ್ಞೆಯಾಗಿ ಸದಾ ನಮ್ಮೊಡನಿದ್ದಾರೆ.

ಅವರು ಬರೆದ **ನಾನೂ ಅಮೇರಿಕೆಗೆ ಹೋಗಿದ್ದೆ** ಪ್ರವಾಸ ಕಥನ ಮೂರು ಮುದ್ರಣಗಳನ್ನು ಕಂಡು ಏಳನೆಯ ಮುದ್ರಣವಾಗಿ ನಿಮ್ಮ ಕೈ ಸೇರಿದೆ. ಪ್ರವಾಸಕಥನಗಳಿಗೆ ಮಾದರಿಯೆನಿಸುವ ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯದ ಬಿಕಾಂ ಮತ್ತು ಬಿಬಿಎಂ ಪದವಿಯ ಮೂರನೇ ಸೆಮಿಸ್ಟರ್‌ಗೆ ಪಠ್ಯವಾಗಿಸುವ ಮೂಲಕ ತಡವಾಗಿ ಆದರೂ ಕೃಷ್ಣಾನಂದ ಕಾಮತರಿಗೆ ತೋರುವ ಗೌರವವೆಂದು ಭಾವಿಸುವೆ. ಇಂತಹ ವೇಳೆಯಲ್ಲಿ ಪ್ರಗತಿ ಗ್ರಾಫಿಕ್ಸ್‌ಗೆ ಪ್ರಕಟಣೆಯ ಭಾಗ್ಯ ದೊರೆತದ್ದು ಸಂತಸದ ಸಂಗತಿಯೇ ಸರಿ. ಗುರುತರವಾದ ಈ ಜವಾಬ್ದಾರಿಯನ್ನು ನೀಡಿದ ಡಾ. ಜ್ಯೋತ್ಸ್ನಾ ಕಾಮತರಿಗೆ ಹಾಗೂ ವಿಕಾಸ ಕಾಮತರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತಾ, ಈ ಕೃತಿಯನ್ನು ಕನ್ನಡಿಗರ ಕೈಗಿಡುತ್ತಿದ್ದೇನೆ.

ಡಾ. ಎಂ. ಬೈರೇಗೌಡ
ಪ್ರಕಾಶಕ

ಪರಿವಿಡಿ

* * *

ಭಾಗ : ಒಂದು

ಹಿನ್ನೆಲೆಯಲ್ಲಿ

ನ್ಯೂಯಾರ್ಕ್ ವಿಶ್ವವಿದ್ಯಾಲಯದವರು ಶಿಷ್ಯವೃತ್ತಿಯನ್ನು ದಯಪಾಲಿಸಿ 'ಕೀಟಶಾಸ್ತ್ರ'ದಲ್ಲಿ (Entomology) ಪಿಎಚ್.ಡಿ ಮಾಡುವ ಸದವಕಾಶವನ್ನು ನನಗೆ ಒದಗಿಸಿದಾಗ ಸಂತಸಪಟ್ಟವರಿಗಿಂತ ಅಸಮಾಧಾನಪಟ್ಟವರ ಸಂಖ್ಯೆಯೇ ಹೆಚ್ಚು. ತಂದೆ, ತಾಯಿ, ಆಪ್ತೇಷ್ಟರು ಮೂರು ನಾಲ್ಕು ವರ್ಷ ಈತ ತಮ್ಮನ್ನಗಲಿ ಇರುವನೆಂದು ಕಳವಳಪಟ್ಟರೆ, ಕೃತಕ ಹಿತವಂತರು ತಮ್ಮ ಮಕ್ಕಳಿಗೂ ಇಂಥ ಅವಕಾಶ ಸಿಗಲಿಲ್ಲವಲ್ಲಾ ಎಂದು ಕಸಿವಿಸಿಪಟ್ಟರು. ತಮಗೆ ದೊರೆಯದ್ದು ತಮ್ಮ ವಿದ್ಯಾರ್ಥಿಗೆ ದೊರಕಿತಲ್ಲಾ ಎಂದು ಶಿಕ್ಷಕವೃಂದ ಸೋಜಿಗಪಟ್ಟರೆ, ಸಹಪಾಠಿಗಳು ತಮಗೂ ಇಂಥ ಸಂಧಿ ದೊರಕೀತೆಂದು ಕನವರಿಸಿದರು. ಒಬ್ಬ, 'ಯಾರೂ ಕೇಳಿ ಅರಿಯದ ವಿಷಯ ಕಲಿಯಲು ಹೋದರೆ ಏನು ಮಹಾ?' ಎಂದು ತೆಪ್ಪಗಾದರೆ, ಇನ್ನೊಬ್ಬನು 'ವಿದೇಶಕ್ಕೇ ಹೋಗುವದಿದ್ದರೆ ಜರ್ಮನಿಗೋ, ಬ್ರಿಟನ್ನಿಗೋ ಹೋಗಬೇಕು. ಡಿಗ್ರಿಗಳನ್ನು ಮಾರುವ ಅಮೇರಿಕೆಗೆ ಹೋದರೆ ಅದೇನು ವಿಶೇಷವಲ್ಲ' ಎಂದು ಸಮಾಧಾನಪಟ್ಟಕೊಂಡನು. ಕೆಲವರಿಗೆ ಇಷ್ಟಕ್ಕೇ ಸಮಾಧಾನವಾಗಲಿಲ್ಲ. ಪೀಡಿಸಿದಾಗಲೇ ಹೆಚ್ಚು ಸಂತೋಷ ಅವರಿಗೆ. ನಟನೆಯ ಗೆಳೆಯನೊಬ್ಬ, 'ಅಲ್ಲ ಕಣಯ್ಯಾ, ನಿನಗೊಂದು 'ಟಾಯ್' ಸರಿಯಾಗಿ ಕಟ್ಟಿಕೊಳ್ಳಲು ಬಾರದು. ಅಮೇರಿಕೆಗೆ ಹೋಗಿ ಏನು ಮಾಡುವಿಯಾ?' ಎಂದು ವ್ಯಕ್ತಪಡಿಸಿದ ಸಂದೇಹಕ್ಕೆ 'ಟಾಯ್ ಧರಿಸುವದು ಹೇಗೆಂದು ಕಲಿಯಲಿಕ್ಕೇ ಹೊರಟಿದ್ದೇನೆ' ಎಂದು ಉತ್ತರ ದೊರೆಯಿತು. 'ಮಗನಿಗೆ ಮದುವೆ ಮಾಡಿಯೇ ಕಳಿಸಮ್ಮ. ಇಲ್ಲವಾದರೆ ಕ್ರೈಸ್ತರ ಹುಡುಗಿಯೊಂದನ್ನು ತಂದಾನು.' ಎಂದು ಹೆದರಿಸಿದ ನೆರೆಮನೆಯಾಕೆ 'ಇಲ್ಲಿಯ ಬ್ರಾಹ್ಮಣ ಹುಡುಗಿ' ಅಲ್ಲಿಯ ಕ್ರಿಶ್ಚಿನ್ ಹುಡುಗಿ ಕೂಡಿ ಇಬ್ಬರಾಗಬಾರದೆಂದು ಮಗನನ್ನು ಹೀಗೆಯೇ ಕಳಿಸುತ್ತೇನಮ್ಮ' ಎಂಬ ಚುರುಕಿನ ಉತ್ತರವನ್ನು ಕೇಳಿಕೊಂಡಳು.

ಹೊರಟು ನಿಂತಾಗ ಎಚ್ಚರಿಕೆಯ ಮಾತು, ಕಿವಿಮಾತುಗಳಿಗೂ ಕಡಿಮೆಯಿರಲಿಲ್ಲ. 'ಪಿಎಚ್.ಡಿ. ಪದವಿಯನ್ನಷ್ಟೆ ತರಬೇಕು ವಿನಾ ಹುಡುಗಿಯನ್ನಲ್ಲ' ಎಂದು ಶಿಕ್ಷಕವೃಂದ ಎಚ್ಚರಿಕೆಯನ್ನಿತ್ತರೆ, 'ಬಂದ ಹಣದಲ್ಲಿ ಉಳಿಸಿ ಭಾರತದಲ್ಲಿ ಸಿಗಲಾರದ ಸಾಮಾನುಗಳನ್ನೆಲ್ಲ ತಾರೆ'ಂದು ಮಿತ್ರವೃಂದ ನಿವೇದಿಸಿಕೊಂಡಿತು. ಸಂಸಾರದ ಸುಖದುಃಖಗಳನ್ನೆಲ್ಲ ಅನುಭವಿಸಿದ ವೃದ್ಧೆಯೊಬ್ಬಳು 'ಮದುವೆಯಾಗದೇ ಹೋದರೂ ಚಿಂತೆಯಿಲ್ಲ. ಆದರೆ ಹತ್ತಿರ ಯಾವುದಾದರೂ ಯುವತಿಯ ಭಾವಚಿತ್ರ ಇಟ್ಟುಕೊಳ್ಳಲು ಮರೆಯಬೇಡ' ಎಂದು ಉಪದೇಶಿಸಿದಳು. ಇನ್ನೊಬ್ಬಾಕೆ 'ತಮ್ಮ ದೇಶಕ್ಕೆ ಕಲಿಯಲು ಬಂದ ಭಾರತೀಯರೆಲ್ಲ 'ಮಹಾರಾಜ'ರಿರುತ್ತಾರೆಂದು ತಿಳಿದು ಅಲ್ಲಿಯ ಹುಡುಗಿಯರು ಬೆನ್ನುಹತ್ತುತ್ತಾರಂತೆ. ಎಚ್ಚರವಾಗಿರು' ಎಂಬ ಕಿವಿಮಾತು ಹೇಳಿದರು. 'ಅಮೇರಿಕೆಯಿಂದ ಮರಳಿದ ನಂತರ ದೊಡ್ಡ ಸಾಹೇಬನಾಗಿ ಕಾರಿನಲ್ಲಿ ಓಡಾಡುತ್ತೀಯಾ' ಎಂದು ಆಶಾವಾದಿಯೊಬ್ಬ ನುಡಿದರೆ 'ಮರಳಿದ ನಂತರ ನಮ್ಮನ್ನೆಲ್ಲ ಮಾತಾಡಿಸುತ್ತೀಯೊ ಅಥವಾ ಮರೆತುಬಿಡುತ್ತೀಯೊ'

ಎಂದು ನಿರಾಶಾವಾದಿಯೊಬ್ಬ ರಾಗ ಎಳೆದ. ಬೆಳೆದು ನಿಂತ ಕನ್ಯೆಯರ ತಂದೆ-ತಾಯಿಗಳು, ತಿರುಗಿ ಬರುವಷ್ಟರಲ್ಲಿ ಈತ ತಯಾರಾಗುತ್ತಾನೆಂದು ಆದರ-ಆತ್ಮೀಯತೆಗಳಿಂದ ಮಾತನಾಡಿಸಿದರು. ಸಮಯ ಸಿಕ್ಕಾಗಲೆಲ್ಲ ಪತ್ರ ಬರೆಯಬೇಕೆಂದು ಎಲ್ಲರೂ ಕೇಳಿಕೊಂಡರೂ ತಾವಾಗಿ ಬರೆಯುತ್ತೇವೆಂದು ಯಾರೂ ಆಶ್ವಾಸನ ಕೊಡುವ ಗೋಜಿಗೆ ಹೋಗಲಿಲ್ಲ. ದೂರದ ಆಸೆ, ಕಾತರತೆ, ಕಳವಳಗಳಿಂದ ಎಲ್ಲರನ್ನೂ ಬೀಳ್ಕೊಟ್ಟು ಪ್ರಯಾಣಕ್ಕೆ ಸಿದ್ಧನಾದೆ.

* * *

'ಹಿಮಾಲಯ'ದಲ್ಲಿ

ಮುಂಬೈಯಲ್ಲಿ ತಂಗಿದ 'ಹಿಮಾಲಯ', ಪ್ರಮುಖ ಸಾಗರಗಾಮಿಗಳಲ್ಲಿ ಒಂದು. ಬಂದವರಲ್ಲಿ ಗದ್ದಲವೇ ಗದ್ದಲ. ಹೊರಟವರು ನೂರು ಮಂದಿಯಾದರೆ ಬೀಳ್ಕೊಡಲು ಬಂದವರು ಸಾವಿರಾರು ಮಂದಿ. ಆಪ್ತರಾಗಿ ಕೆಲವರು ಬಂದಿದ್ದರು. ಸ್ನೇಹಿತರಾಗಿ ಹಲವರು ಬಂದಿದ್ದರು. ಫೋಟೊ ತೆಗೆದನೊಬ್ಬ; ಹಾರ ಹಾಕಿದ ಇನ್ನೊಬ್ಬ; ಕಣ್ಣೀರು ಸುರಿಸಿದಳು ಮಗುದೊಬ್ಬಳು. ಗುಜರಾತಿಗೆ ತಿಲಕ ಹಚ್ಚಿದರು. ಮಾರವಾಡಿಗೆ ಬಣ್ಣ ಹಾಕಿದರು. ಮಹಾರಾಷ್ಟ್ರೀಯನಿಗೆ ಆರತಿ ಬೆಳಗಿದರು. ಇವೆಲ್ಲ ಸಂಭ್ರಮ ನೋಡುತ್ತ ನಿಂತ ನನಗೆ, ನಾನು ಹೊರಟು ನಿಂತವನೋ ಬೀಳ್ಕೊಡಲು ನಿಂತವನೋ ತಿಳಿಯದಾಯಿತು. ನನಗೆ ತಿಲಕ, ಹಾರ, ಬಣ್ಣ, ಕಣ್ಣೀರು ಒಂದೂ ಬರಲಿಲ್ಲ-ಬೇಕೂ ಇರಲಿಲ್ಲ. ಏನೋ ಹತ್ತಿರದ ಊರಿಗೆ ಹೊರಟವನಂತೆ ಇತ್ತು ನನ್ನ ವಿದೇಶಪಯಣ.

ಹತ್ತು ಗಂಟೆ ರಾತ್ರಿಯಾಗಿರಬೇಕು, 'ಹಿಮಾಲಯ' ಮುಂಬೈಯನ್ನು ಬಿಟ್ಟು ಕೊಟ್ಟಾಗ ಇಷ್ಟು ವರ್ಷ ಸಾಕಿ ಸಲುಹಿದ ಮಾತೃಭೂಮಿಯನ್ನು ಬಿಟ್ಟು, ಗೊತ್ತು ಗುರಿಯಿಲ್ಲದ ನಾಡಿಗೆ ಹೊರಟು ನಿಂತಿದ್ದೆ. ಮುಂದಾಗುವ ಘಟನೆಗಳೊ ಅನಿಶ್ಚಿತ. ಮೂರು ನಾಲ್ಕು ವರ್ಷಗಳ ನಂತರ ಭಾರತಕ್ಕೆ ಮರಳಿದಾಗ ಏನೇನು ಬದಲಾವಣೆಗಳಾಗಬಹುದು? ಕ್ರಾಂತಿಯಾಗಬಹುದು; ಯುದ್ಧವಾಗಬಹುದು. ಹಳೆಯ ನಾಯಕರು ಬಿದ್ದು ಹೊಸ ನಾಯಕರು ಬರಬಹುದು, ಇಷ್ಟು ದಿನ ಕಾಣದ, ಅನುಭವಿಸದ ವೇದನೆ ಒಮ್ಮೆಲೆ ಉಮ್ಮಳಿಸಿ ಬಂದಿತು. ನನಗೇ ತಿಳಿಯದಂತೆ ಕಣ್ಣು ತುಂಬಿಬಂದವು. ಅಂತರ್ವೇದನೆಯನ್ನು ತಾಳಲಾರದೇ ನನ್ನ 'ಕೇಬಿನ್' ಸೇರಿಕೊಂಡೆ.

ಸುಖನಿದ್ರೆಯಾಗಿ ಎಚ್ಚರವಾದದ್ದು ಯಾರೊ ಬಾಗಿಲು ಬಡಿದಾಗ, ಬಂದವನು ಸ್ಟಿವರ್ಡ (ಹಡಗದ ಮಾಣಿ). ಗಿಡ್ಡ ದೇಹ, ಮಾಟವಾದ ಮುಖವುಳ್ಳ ಬ್ರಿಟಿಶ್ ಆತ.

'ಸುಪ್ರಭಾತ' (good morning) ಎನ್ನುತ್ತಲೇ ಒಳಗೆ ನುಗ್ಗಿದ. ದೊಡ್ಡ ಹರಿವಾಣದಲ್ಲಿ ಒಂದು ಜೋಡು ಟೋಸ್ಟು, ಜಾಮ್, ಬೆಣ್ಣೆ ಮತ್ತು ಹಣ್ಣಿನ ರಸದ ಗ್ಲಾಸು ಇದ್ದವು. ಜೊತೆಗೆ ಹತ್ತಾರು ಕಾಗದಪತ್ರಗಳು, 'ತಮಗೆ ಕಪ್ಪು ಕಾಫಿ (black coffee) ಬೇಕೇ ಹಾಲು ಹಾಕಿದ ಕಾಫಿ ಬೇಕೇ?' ಎಂದು ಕೇಳಿದ. 'ಇದಿಷ್ಟೆ ಸಾಕು' ಎಂದಾಗ ಆತನಿಗೆ ಬಹಳ ಸೋಜಿಗವೆನಿಸಿತು. 'ನಾಷ್ಟಾ'ಕ್ಕೆ (break-fast) ನಿಮಗೆ ಮೊದಲ ಪಂಕ್ತಿ ಬೇಕೆ ಎರಡನೆಯದೇ? ಮೊದಲನೇ ಪಂಕ್ತಿ ಎಂಟು ಗಂಟೆಗೆ, ಎರಡನೆಯದು ಎಂಟೂವರೆಗೆ, ನಾಷ್ಟಾಕ್ಕಾಗಲಿ, ಊಟಕ್ಕಾಗಲಿ 'ಸೂಟ್' ಧರಿಸಿ ಬರಬೇಕು. ಹತ್ತು ಗಂಟೆಗೆ ನೀವು ಕುಳಿತಲ್ಲಿ ಆಯ್ಸಕ್ರೀಂ ಬರುವುದು. ಒಂದು ಗಂಟೆಗೆ ಊಟ, ನಾಲ್ಕು ಗಂಟೆಗೆ ಚಹ ಅಥವಾ ಕಾಫಿ. ರಾತ್ರಿ ಎಂಟು ಗಂಟೆಗೆ ಊಟ. ಸೆರೆ-ಸಿಗರೇಟು ಬಿಟ್ಟರೆ ಇನ್ನಾವುದಕ್ಕೂ ಹಣ ಕೊಡಬೇಕಾಗಿಲ್ಲ. ನಿಮಗೆ ಇನ್ನೇನಾದರೂ ಸಹಾಯ ಬೇಕಿದ್ದರೆ ಫೋನಿನಿಂದ ಕರೆಯಿರಿ. ಈಗ ನಿಮ್ಮ ಹಾಸಿಗೆ ಸರಿಪಡಿಸಲೇ?' ಎಂದು ತಿಳಿಸುವದನ್ನೆಲ್ಲ ತಿಳಿಸಿ, ಕೊನೆಗೆ ಕೇಳಿ, ಸಮ್ಮತಿ ಪಡೆದು, ಹಾಸಿದ ಬಟ್ಟೆಗಳನ್ನು ತೆಗೆದು ಶುಭ್ರವಾದ ಇತರ ಬಟ್ಟೆಗಳನ್ನು ಹಾಸಿದ. ಆತನ ಪ್ರತಿಯೊಂದು ಕೆಲಸದಲ್ಲಿ ಅಚ್ಚುಕಟ್ಟುತನ ಎದ್ದು ಕಾಣುತ್ತಿತ್ತು. ಹತ್ತು ನಿಮಿಷಗಳಲ್ಲಿ ಆಕರ್ಷಣೀಯ ಹಾಸಿಗೆ ಸಿದ್ಧವಾಯಿತು. ಹಾಸಿಗೆ 'ಸಿದ್ಧ' ಮಾಡುವುದರಲ್ಲಿಯೇ ಆರು ತಿಂಗಳ ತರಬೇತಿ ಪಡೆದಿದ್ದಾನಂತೆ ಆತ. ಆಮೇಲೆ ಕೋಣೆಯನ್ನೆಲ್ಲ ಸಾಫ್ ಮಾಡಿ ಪಾಲಿಶ್ ಮಾಡುವ ಬೂಟುಗಳನ್ನು ಕೋಣೆಯ ಹೊರಗೆ ಇಡುವಂತೆ ಹೇಳಿ ಹೋದ.

ಪ್ರಾತರ್ವಿಧಿಯನ್ನೆಲ್ಲಿ ಮುಗಿಸುವುದು? ಎಂದು ಆತನಿಗೆ ಕೇಳಲು ಮನಸ್ಸಾಗಲಿಲ್ಲ. ನಾನೇ ಸಂಶೋಧನೆಗೆ ಹೊರಟೆ. ಕಾಲು ಸೋತುಬರುವಷ್ಟು ಹಡಗದಲ್ಲಿ ಓಡಾಡಿದರೂ ಒಂದೂ ಕಕ್ಕಸು ಕಣ್ಣಿಗೆ ಬೀಳಲಿಲ್ಲ! ಕೊನೆಗೊಮ್ಮೆ ಸೋಲನ್ನು ಒಪ್ಪಿಕೊಂಡು ಹತ್ತಿರದಲ್ಲಿಯೇ ಬೂಟು-ಪಾಲಿಶ್ ಮಾಡುತ್ತಿದ್ದವನಿಗೆ ಕೇಳಿದೆ. 'ಸಭ್ಯಗೃಹಸ್ಥರು (gentlemen) ಎಂದು ಬರೆದಲ್ಲಿ ಹೋಗು' ಎಂದು ಹೇಳಿದ. ಇದಕ್ಕೂ ಮುಂಚೆ ಹತ್ತಾರು 'ಸಭ್ಯಗೃಹಸ್ಥರು' ಮತ್ತು 'ಮಹಿಳೆಯರು' ಬೋರ್ಡುಗಳನ್ನು ದಾಟಿ ಬಂದಿದ್ದೆ. ಅವು ಕಕ್ಕಸಗಳಾಗಿರ ಬಹುದೆಂಬ ಸಂದೇಹ ಕೂಡ ಬರುವಂತಿರಲಿಲ್ಲ. ಒಂದರ ಒಳಗೆ ಹೊಕ್ಕಾಗ ಒಳಗಿನ ಶುಭ್ರತೆ, ಅಚ್ಚುಕಟ್ಟುತನಗಳನ್ನು ನೋಡಿ ದಿಗ್ಭ್ರಮೆಯಾಯಿತು. ಕುರ್ಚಿಯಂತೆ ಇದ್ದ 'ಕಮೋಡ್' ಕಾಗದದ ಉಪಯೋಗ ಹೇಗೆ ಹೇಗೋ ಅನಿಸಿತು. ಸ್ವಚ್ಛತೆಗೆಂದು ಸ್ನಾನವನ್ನೂ ಮುಗಿಸಿಬಿಟ್ಟೆ. ಬಿಸಿನೀರು ತಣ್ಣೀರಿನ ವ್ಯವಸ್ಥೆಯೂ ಅಲ್ಲಿ ಉತ್ತಮವಾಗಿತ್ತು.

ಎಂಟು ಗಂಟೆಗೆ ಶುಭ್ರಶ್ವೇತವಸನಧಾರಿಯೊಬ್ಬ ಮಧುರವಾದ ಗಂಟೆಯೊಂದನ್ನು ಬಾರಿಸುತ್ತ ಹೊರಟ. ಸುಸಜ್ಜಿತವಾಗಿ ಉಡುಪು ಧರಿಸಿದ ಆಂಗ್ಲ ಸ್ತ್ರೀ-ಪುರುಷರು ಸಾಲುಸಾಲಾಗಿ ಊಟದ ಮನೆಯತ್ತ ಹೊರಟಿದ್ದನ್ನು ನೋಡಿ ಅದು ನಾಷ್ಟಾದ ಗಂಟೆಯೆಂದು ತಿಳಿಯಿತು.

ಊಟದ ಮನೆಗೆ ಹೋಗಲು ಲಿಫ್ಟಿನ ವ್ಯವಸ್ಥೆಯಿತ್ತು. ಅಲ್ಲಿ ಕಾಲಿಟ್ಟಾಗ ಇಂದ್ರಲೋಕವೊಂದು ಗೋಚರಿಸಿತು. ಎಲ್ಲೆಡೆ ಸುಸಜ್ಜಿತ ಟೇಬಲ್-ಕುರ್ಚಿಗಳು. ಅವುಗಳ ಮೇಲೆ ಸುಂದರವಾಗಿ ಹಾಸಿಟ್ಟ ಟಾವೆಲ್‌ಗಳು ಕಪ್ಪು-ಬಸಿ, ಚಮಚಗಳು, ಎರಡು ಟೇಬಲಿಗೊಬ್ಬ ಬಿಳಿಯ 'ಮಾಣಿ'. ಎಲ್ಲರ ಮೇಲ್ವಿಚಾರಣೆಗೆ ಅಧಿಕಾರಿಯೊಬ್ಬ, ಮೆಲುವಾದ

ಸುಮಧುರ ಸಂಗೀತ. ನನ್ನ ಟೇಬಲ್ ಹತ್ತಿರ ಹೋದಾಗ, ಆತ್ಮೀಯತೆಯ ನಸುನಗೆಯಿಂದ 'ಸುಪ್ರಭಾತ' ಕೋರಿದ ಮಾಣಿ. ಕುರ್ಚಿಯನ್ನು ಹೊಂದಿಸಿದ. 'ಇಂದಿನ ಸ್ಪೆಶಲ್' ಪತ್ರಿಕೆ ಕೈಗೆ ಕೊಟ್ಟ. ಹಲವಾರು ಹಣ್ಣಿನ ರಸಗಳು, ಹತ್ತಾರು ಖಾದ್ಯಗಳು, ಬ್ರೆಡ್-ಬೆಣ್ಣೆ ಜಾಮ್‌ಗಳಿಗಂತೂ ಲೆಕ್ಕವಿಲ್ಲ. ಚಹ, ಕಾಫಿ, ಹಣ್ಣು-ಹಂಪಲುಗಳು, ಮನದಣಿಯೆ ನಾಷ್ಟಾ ಆಯಿತು.

ಮಗ್ಗಲಿನ ಟೇಬಲ್ ಬಳಿ ಬಂಗಾಲಿಯೊಬ್ಬನಿದ್ದ. ಯಾಕೋ ಆತ ನನ್ನೆಡೆ ಎವೆಯಿಕ್ಕದೇ ನೋಡುತ್ತಿದ್ದ. ತಿಂಡಿ, ಕಾಫಿ ಮುಗಿದೊಡನೆಯೇ 'ಮಾತನಾಡಿಸಬಹುದೇ?' ಎಂದು ಕಳವಳದಿಂದ ಕೇಳಿದ. ದಿಗಿಲುಗೊಂಡವನಂತೆ ಆತ ಕಾಣುತ್ತಿದ್ದ. ಮಾತಾಡುತ್ತಿದ್ದಂತೆಯೇ ನನ್ನ ಊಹೆ ಸರಿಯಾಯಿತು. ಆತನೂ ಕಷ್ಟಪಟ್ಟು 'ಸಭ್ಯಗೃಹಸ್ಥರ ಕೋಣೆಯನ್ನು' ಹುಡುಕಿ ತೆಗೆದಿದ್ದ. ಆದರೆ ಆತನಿಗೆ ಉಪಯೋಗಿಸಿದ ಕಾಗದ ಎಲ್ಲಿ ಒಗೆಯಬೇಕೆಂಬ ಸಮಸ್ಯೆ ಉಂಟಾಯಿತಂತೆ! ಆದ್ದರಿಂದ ಯಾರಿಗೂ ಕಾಣದಂತೆ ಕಮೋಡದ ಹಿಂಬದಿಗೆ ಇಟ್ಟು ಬಂದನಂತೆ ಭೂಪತಿ! ಅವನ ಕಳವಳ ನೋಡಿ ನಗು ಬಂದಿತು. ಕಾಗದಕ್ಕಿಂತ ಘನಪದಾರ್ಥ ಹೋಗುವ ಕಮೋಡದಲ್ಲಿ ತೆಳ್ಳಗಿನ ಕಾಗದವೂ ಹೋಗುವದೆಂದು ಆತನಿಗೆ ಅದು ಹೇಗೆ ತೋಚಲಿಲ್ಲವೋ ಏನೋ!

ಕೋಣೆಗೆ ಬಂದು ಇನ್ನೇನು ಮಾಡಲೆಂದು ಯೋಚಿಸುತ್ತಿದ್ದಂತೆಯೇ ಬೆಳಿಗ್ಗೆ ತಂದ ಹಾಳೆಗಳ ಮೇಲೆ ಕಣ್ಣು ಹಾಯಿಸಿದೆ. ಒಂದು ಕಾಗದದಲ್ಲಿ ಬೆಳಗಿನಿಂದ ಮಧ್ಯರಾತ್ರಿಯ ವರೆಗೆ ಹಡಗಿನಲ್ಲಿ ನಡೆಯುವ ಕಾರ್ಯಕ್ರಮಗಳ ವಿವರಣೆಯಿತ್ತು. ಹಡಗದಲ್ಲಿ ಮುದ್ರಿಸಲ್ಪಟ್ಟ ಒಂದು ದಿನಪತ್ರಿಕೆಯಿತ್ತು. ಒಂದು ಕೈಪಿಡಿಯೂ ಇತ್ತು. ಅದರಲ್ಲಿ ಹಡಗದ ಸವಿಸ್ತಾರವಾದ ವರ್ಣನೆಯಿತ್ತು. ಹಡಗದ ತೂಕ, ನೀರಿನ ಸಂಗ್ರಹ, ಆಹಾರ ಸಂಗ್ರಹಗಳ ವಿವರದೊಂದಿಗೆ ಚಲನಚಿತ್ರ ಗೃಹ ಎಲ್ಲಿದೆ, ಈಸು-ಗೊಳ ಎಲ್ಲಿದೆ, ಪೋಸ್ಟ್-ಆಫೀಸು ಎಲ್ಲಿದೆ, ಪೇಟೆ ಎಲ್ಲಿದೆ ಎಂದು ಸಚಿತ್ರ ವಿವರಣೆಯಿತ್ತು. ಹಾಗಾದರೆ ಹಡಗನ್ನಾದರೂ ನೋಡಿಕೊಂಡು ಬರೋಣವೆಂದು ಹೊರಟೆ.

ಹಡಗಕ್ಕೆ ಹತ್ತಾರು ಅಂತಸ್ತುಗಳಿದ್ದವು. ಎಲ್ಲದಕ್ಕೂ ಎತ್ತರದಲ್ಲಿ 'ಹವಾ ಮಹಲ್' ಇಲ್ಲಿ ಕ್ರೀಡಾಗೃಹವಿತ್ತು. ನೂರಾರು ತರದ ಆಟದ ಸಾಧನಗಳಿದ್ದವು. ಗಂಡಸರು, ಹೆಂಗಸರು, ಮುದುಕರು, ತರುಣರು ಸೂರ್ಯನಿಂದ ರಕ್ಷಣೆ ಪಡೆಯಲು ತಲೆಗೆ ಹ್ಯಾಟು ಹಾಕಿ ತರತರದ ಆಟಗಳಲ್ಲಿ ಮಗ್ನರಾಗಿದ್ದರು.

ಇದರ ಕೆಳಗಿನ ಅಂತಸ್ತು 'ಬಿಸಿಲು ಕಾಯಿಸಲು' ಮೀಸಲು. ಸುಖವಾಗಿ ಹೆಬ್ಬಾವಿನಂತೆ ಬೀಳಲು ಸುಖಾಸನಗಳಿವೆ. ಕಾಲುಗಳನ್ನು ಚಾಚಲು ಸ್ಟೂಲುಗಳಿವೆ. ಅತ್ಯಲ್ಪ ಬಟ್ಟೆ ಧರಿಸಿ ಅಲ್ಲಲ್ಲಿ ಬಿದ್ದುಕೊಂಡವರಲ್ಲಿ ಮಹಿಳೆಯರೇ ಹೆಚ್ಚಾಗಿದ್ದರು.

ಇದಕ್ಕೂ ಕೆಳಗಿನ ಅಂತಸ್ತು ಜಲಕ್ರೀಡೆಗೆ ಮಾರ್ಪಟ್ಟಿತ್ತು. ಸಮಯದ ಪರಿವೆಯಿಲ್ಲದೇ ಮೀನಿನಂತೆ ಗಂಡು ಹೆಣ್ಣುಗಳು ಈಸಾಡುತ್ತಿದ್ದರು. ಈಸಿ ದಣಿದಾಗ ದಡಕ್ಕೆ ಬಂದು ಹಾಡುತ್ತ ನರ್ತಿಸುತ್ತಿದ್ದರು. ಈ ಜಲಕ್ರೀಡೆ ನೋಡುತ್ತಿದ್ದಂತೆ ಹತ್ತಾರು ತರದ ಆಯ್ಸಕ್ರೀಂ ಬಂದಿತು. ಬೇಕಾದವರಿಗೆ ಬೇಕಾದಷ್ಟು ಆಯ್ಸಕ್ರೀಂ ನೀಡುತ್ತಿದ್ದನಾತ.

ಇನ್ನೂ ಕೆಳಗಿನ ಅಂತಸ್ತುಗಳು ಪ್ರವಾಸಿಕರ ವಾಸಗೃಹಗಳು. ಸ್ವತಂತ್ರ ಬಂಗಲೆಗಳ

ಮಾದರಿಯವು. ಹಣದ ಕೊರತೆ ಕಾಣದವರಿಗೆ ಮೀಸಲಾದವು. ಹಡಗದಲ್ಲಿಯೇ ಪಾಶ್ಚಾತ್ಯ-ಜನಜೀವನದ ಮೊದಲ ಅನುಭವಗಳು ನನಗೆ ಬಂದವು. ಇದ್ದಷ್ಟು ದಿನ ಸುಖವಾಗಿರಬೇಕು ಎಂಬ ಹಂಬಲವುಳ್ಳವರು ಈ ಜನ. ಉತ್ತಮ ಊಟ, ಮನದಣಿಯೆ ಆಟ, ನೃತ್ಯಕೂಟಗಳಲ್ಲಿ ವೇಳೆ ಹೇಗೆ ಹೋಗುವದೆಂದೇ ಇವರಿಗೆ ತಿಳಿಯುತ್ತಿರಲಿಲ್ಲ. ಸಾಲದ್ದಕ್ಕೆ ಹಡಗು ಮುಖ್ಯ ಬಂದರುಗಳಲ್ಲಿ ಬೆಳಿಗ್ಗೆ ತಂಗಿ ರಾತ್ರೆಯ ಹೊತ್ತು ಹೊರಡುತ್ತಿತ್ತು. ಹೀಗಾಗಿ ಸಾಕಷ್ಟು ಅಲೆಯಲು ವೇಳೆ ದೊರೆಯುತ್ತಿತ್ತು. ಪೋರ್ಟಸೈಯದ, ಸುಯೇಝು-ಕಾಲುವೆ, ಏಡನ್, ಮಾಲ್ಟಾ, ನೇಪಲ್ಸ, ಜೀಬ್ರಾಲ್ಟರಗಳನ್ನು ನೋಡುತ್ತ ಲಂಡನ್ ಸೇರಿದೆವು. ಅಲ್ಲಿಂದ ಅತ್ಯಂತ ದೊಡ್ಡ ಹಡಗಗಳಲ್ಲಿ ಒಂದಾದ 'ಕ್ವೀನ್‌ಮೇರಿ'ಯಲ್ಲಿ ನ್ಯೂಯಾರ್ಕಿಗೆ ಹೊರಟಿದ್ದಾಯಿತು. ಐದು ದಿನದ ಪ್ರವಾಸದ ನಂತರ ಅಮೇರಿಕೆಗೆ ಸೇರಿದೆ. ನ್ಯೂಯಾರ್ಕ ಬಂದರ ತಲುಪಿದಾಗ ಸೂರ್ಯನಿನ್ನೂ ಉದಯಿಸಿರಲಿಲ್ಲ. ಮಸಕು ಬೆಳಕಿನಲ್ಲಿ 'ಸ್ವಾತಂತ್ರ ಪ್ರತಿಮೆ' (statue of Liberty) ನಮಗೆಲ್ಲ ಸುಸ್ವಾಗತ ನೀಡಿತು. ಅಲ್ಲಿಂದ ಶೀಘ್ರವಾಗಿಯೇ ಸಾಯರೆಕ್ಯೂಸ್ ತಲುಪಿದೆ.

* * *

ಹಾಯ್

ಬಹಳಷ್ಟು ಓದಿ, ಬಹಳಷ್ಟು ಕೇಳಿ ಅಮೇರಿಕೆಗೆ ಹೋದದ್ದಕ್ಕೆ ನಿರಾಶೆಯೇ ಹೆಚ್ಚಾಯಿತು ಎನಬೇಕು. ನ್ಯೂಯಾರ್ಕಿನ ಗಗನಚುಂಬಿ ಕಟ್ಟಡಗಳಾಗಲಿ, ಭೂಗರ್ಭದಲ್ಲಿ ಓಡಾಡುವ ಟ್ರೇನುಗಳಾಗಲಿ ಮನಸ್ಸನ್ನು ಸೆರೆಹಿಡಿಯಲಿಲ್ಲ. ಲಕ್ಷ ಜನ ವಾಸಿಸುವ ಸ್ಥಳಗಳಲ್ಲಿ ಕೋಟಿ ಜನ ವಾಸಿಸಲು ಬಯಸಿದರೆ ಭೂಗರ್ಭವಷ್ಟೇ ಏಕೆ, ಆಕಾಶಗರ್ಭವೂ ಹಿಡಿಸದೆ ಹೋಗಬಹುದು ಎಂದು ನನ್ನ ಮನಸ್ಸಿಗನಿಸಿತು. ಸಾಲದ್ದಕ್ಕೆ ಮೈ ಕೊರೆಯುವ ಚಳಿಯನ್ನು ನಿರೀಕ್ಷಿಸಿ ಬಂದ ಪ್ರದೇಶದಲ್ಲಿ ಮೈ ಸುಡುವ ಪ್ರಖರ ಬಿಸಿಲು. ನಾನು ಓದಿ ತಿಳಿದುಕೊಂಡ ಜನಜೀವನಕ್ಕೂ ಪ್ರತ್ಯಕ್ಷ ಕಂಡ ಅಮೇರಿಕನ್ ಜನಜೀವನಕ್ಕೂ ಅಜಗಜಾಂತರ. ಇದಕ್ಕೆ ಕಾರಣ ಭರದಿಂದ ಬದಲಾಗುತ್ತಿರುವ ಅಮೇರಿಕನ್ ಸಮಾಜ. ಅಲ್ಲದೆ ಅವರ ಜನಜೀವನದಲ್ಲಿ ಹಾಸು ಹೊಕ್ಕಾದ ವಿಜ್ಞಾನದ ಸಂಶೋಧನಗಳೂ ಇರಬಹುದು.

ಸಾಯರೆಕ್ಯೂಸ್ ವಿಶ್ವವಿದ್ಯಾಲಯದ ಆವಾರದಲ್ಲಿ ಇದ್ದ ಕಟ್ಟಡಗಳಲ್ಲಿ ಆಧುನಿಕ ಕಟ್ಟಡಗಳಿಗಿಂತ ಹಳೆಯವೇ ಹೆಚ್ಚಾಗಿದ್ದವು. ಐದು ಅಂತಸ್ತುಗಳುಳ್ಳ ಕಟ್ಟಡಕ್ಕೆ ಕೂಡ ಲಿಫ್ಟ ಇರಲಿಲ್ಲ. ನಿರೀಕ್ಷಿಸಿದ ಅಚ್ಚುಕಟ್ಟುತನವೂ ಇರಲಿಲ್ಲ. ಆವಾರದಲ್ಲಿ ಇರುವೆ ಸಾಲಿನಂತೆ

ಓಡಾಡುವ ವಿದ್ಯಾರ್ಥಿಗಳು ಮಾತ್ರ ಬಹಳ ಭಿನ್ನವಾಗಿದ್ದರು. ಎವೆಯಿಕ್ಕದೆ ಅಪರಿಚಿತ ಹೆಣ್ಣನ್ನು ನೋಡುವದು ಪಾಪ ಎಂಬ ಸಂಕಲ್ಪವಿರುವ ದೇಶದಿಂದ ಬಂದವನಿಗೆ ಇಲ್ಲಿಯ ಕುಮಾರಿಯರ ವಿಚಿತ್ರ ವಿಚಿತ್ರ ವೇಷ-ಭೂಷಣ, ಉಡಿಗೆ-ತೊಡಿಗೆ, ಕೇಶರಚನೆ, ತೀರ ಕಿರಿಸೊಂಟ, 'ಪಾಲಿಶ್' ಮಾಡಿದ ಕಾಲುಗಳು ನಿಚ್ಚಳವಾಗಿ ಕಾಣತೊಡಗಿದವು. ತಲೆಯೆತ್ತಿ ಎದುರಿಗೆ ಬರುತ್ತಿದ್ದ ಕುಮಾರಿಯೊಬ್ಬಳ ಮುಖ ನೋಡಹೋದರೆ-ಮುಗುಳುನಗೆ ಸೂಸಿ 'ಹಾಯ್' ಎಂದಳು. ಈ 'ಹಾಯ್' ನನಗೆ ಗೊಂದಲಕ್ಕಿಟ್ಟುಕೊಂಡಿತು. ಇವಳಿಗೇನು ಮುಳ್ಳು ಚುಚ್ಚಿತೇ? ಆದರೆ ನಡಿಗೆಯಲ್ಲಾಗಲಿ ನಗೆಯಲ್ಲಾಗಲಿ ಮುಳ್ಳು ಚುಚ್ಚಿದ ಲಕ್ಷಣವಿರಲಿಲ್ಲ. ತೀರ ಸ್ವಚ್ಛವಾದ ರಸ್ತೆಯ ಮೇಲೆ ಮುಳ್ಳಿಗೆಲ್ಲಿ ಅವಕಾಶ? ಈ ಮೊದಲು ಕಂಡು ಅರಿತ ಭಾರತೀಯನೇ ನಾನೆಂದು ತಪ್ಪು ತಿಳಿದು ಏನೋ ಸಂಕೇತಮಾಡಿರ ಬೇಕೆಂದು ಮುಂದೆ ಹೋದೆ. ಸರಿ ಇದುರು ಬರುತ್ತಿರುವ ಇನ್ನೊಬ್ಬ ಯುವತಿಯಿಂದಲೂ ಬಂದಿತು 'ಹಾಯ್'! ಹೀಗೆ ನಾಲ್ಕಾರು 'ಹಾಯ್'ಗಳು ಬಂದವು. ಈ 'ಹಾಯ್'ಗಳಿಗೆ ವಿಶೇಷ ಅರ್ಥವಿಲ್ಲವೆಂದೂ, ಇಂಗ್ಲಿಷ್‌ದ 'ಹಲೊ' ಅಮೇರಿಕನ್ 'ಹಾಯ್'ಗೆ ತಿರುಗಿಕೊಂಡಿದೆಯೆಂದೂ ಕಾಲಕ್ರಮೇಣ ತಿಳಿದುಕೊಂಡೆ.

ಸಾವಿರಾರು ಮೈಲು ದೂರದಿಂದ ಬಂದ ವಿದ್ಯಾರ್ಥಿಯೆಂದು ತಿಳಿದು ಸಹಪಾಠಿಯೊಬ್ಬ ನನ್ನನ್ನು ಪ್ರಾಧ್ಯಾಪಕರ ಬಳಿ ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟ. ಅವರೂ "ಹಾಯ್! ಇಂದು ಬೆಳಿಗ್ಗೆ ಹೇಗಿದ್ದೀಯಾ? (How are you this morning?)" ಎಂದು ಕೇಳಿದರು. ಯಾರೋ ಇವರಿಗೆ ನನ್ನ ಆರೋಗ್ಯ ಸರಿಯಾಗಿಲ್ಲವೆಂದು ತಪ್ಪು ಮಾಹಿತಿ ಕೊಟ್ಟಿರಬಹುದೆಂದು ಗ್ರಹಿಸಿ, "ಇಲ್ಲಿ ಬಂದಂದಿನಿಂದ ಚೆನ್ನಾಗಿಯೇ ಇದ್ದೇನೆ. ನನಗಾವ ಕಾಯಿಲೆಯೂ ಇಲ್ಲ" ಎಂದು ಹೇಳಿದೆ. ಅದಕ್ಕವರು ಮನಸ್ವೀ ನಕ್ಕು "ಈ ದೇಶದಲ್ಲಿ ಮಾತಿಗೆ ಮೊದಲು ಈ ಪ್ರಶ್ನೆ ಕೇಳುವುದು ವಾಡಿಕೆ. ಅದಕ್ಕೆ ಯಾವ ವಿಶೇಷ ಅರ್ಥವೂ ಇಲ್ಲ" ಎಂದರು. ಸರಿ, ಅಲ್ಲಿಂದ ಮಾತು-ಕತೆಗೆ ಪ್ರಾರಂಭವಾಯಿತು. ನನ್ನ ಇಂಗ್ಲೀಷಿಗೂ ಅವನ ಇಂಗ್ಲೀಷಿಗೂ ಆಕಾಶಪಾತಾಳದ ಅಂತರ!

ವಿಶ್ವವಿದ್ಯಾಲಯಕ್ಕೆ ಬರುವಾಗ ವಿದ್ಯಾರ್ಥಿಗಳನ್ನು ಅನುಸರಿಸಿ ಬಂದಿದ್ದೆನಾದರೂ ತಿರುಗಿ ಹೋಗುವುದು ಸಮಸ್ಯೆಯಾಯಿತು. ಒಂದೇ ತರದ ರಸ್ತೆಗಳು, ಒಂದೇ ತರದ ಕಟ್ಟಡಗಳು. ಮೂರು ನಾಲ್ಕು ರಸ್ತೆಗಳಿಂದ ಹೋಗಲೆತ್ನಿಸಿದೆ. ತಿರುಗಿ ವಿಶ್ವವಿದ್ಯಾಲಯಕ್ಕೆ ಬರುವಂತಾಯಿತು! ಯಾವನೋ ದಾರಿಹೋಕನು ನನ್ನ ಅಸಹಾಯತೆಯನ್ನು ಅರಿತು "ನನ್ನಿಂದ ಸಹಾಯ ಬೇಕೇ?" ಎಂದು ಕೇಳಿದ. ನಾನು ಹೋಗಬೇಕಾಗಿದ್ದ ಮನೆಯ ನಂಬರನ್ನು ತಿಳಿದುಕೊಂಡು, ತುಟಿಯ ಮೇಲೆ ಬೆರಳಿಟ್ಟು ಗಾಢವಾಗಿ ಆಲೋಚಿಸಿ "ನೀನು ಹೀಗೆ ಮಾಡು, ಆರು ಬ್ಲಾಕ್ಸ ದಕ್ಷಿಣಕ್ಕೆ 'Adams' ಮೇಲೆ ನಡೆದು ಹೋಗು. ನಂತರ ಪೂರ್ವಕ್ಕೆ ಮೂರು ಬ್ಲಾಕ್ಸ ನಡೆದರೆ ನಿನ್ನ ಮನೆ ತಪ್ಪದೇ ಸಿಗುವುದು" ಎಂದು ಹೇಳಿ ಹೊರಟೇಬಿಟ್ಟ. ಆತನ ಭಾಷೆ ಅರ್ಥವಾಗದೇ ಮನಸ್ಸಿಗೆ ಹೊಳೆದ ದಾರಿಯೊಂದರಿಂದ ಹೊರಟೆ. ಕಾಲು ಸೋತುಬರುವ ತನಕ ನಡೆದೆ. ಕೊನೆಗೂ ತಿಳಿಯದೇ ಹತ್ತಿರ ನಿಂತಿದ್ದ ಪೋಲಿಸನಿಗೆ ಕೇಳಿದೆ. ಅವನು ವಿಚಾರಮಾಡುವ ಗೋಜಿಗೆ ಹೋಗದೆ "ನೀನು ಕೆಬ್‌ನಲ್ಲಿ (cab) ಹೋಗು. ವಾಯುವೇಗದಿಂದ ನಿನ್ನ

ಸ್ಥಳ ತಲುಪುವೆ" ಎಂದು ಹೇಳಿ ನಾನು ಉತ್ತರಿಸುವ ಮೊದಲೇ ಒಂದು ಟ್ಯಾಕ್ಸಿಯನ್ನು ನಿಲ್ಲಿಸಿಯೇ ಬಿಟ್ಟ. ನಿರುಪಾಯನಾಗಿ ಕೆಬ್ ಹತ್ತಿದೆ. ನೋಡಿದರೆ ನಾನಿಳಿದ ಮನೆ ಕೇವಲ ಎರಡು ನಿಮಿಷದ ರಸ್ತೆಯಿತ್ತು! ಮೀಟರ ೬೦ ಸೆಂಟ್ ತೋರಿಸಿತು. ಡಾಲರ್ (Dollar) ನೋಟು ಕೊಟ್ಟು ಥ್ಯಾಂಕ್ಸ್ ಪಡೆದು ಎರಡು ನಿಮಿಷದ ದಾರಿಗೆ ನಾಲ್ಕು ರೂಪಾಯಿ (೧ ಡಾಲರಿಗೆ ೪.೭೮ ರೂಪಾಯಿ ಇದ್ದಾಗ) ತೆತ್ತು ಮನೆ ಸೇರಿದೆ.

ನನ್ನ ಸಹಪಾಠಿಗಳು ಇನ್ನೂ ಮನೆಗೆ ಹಿಂದಿರುಗಿರಲಿಲ್ಲ. ಏನಾದರೂ ತಿನಸುಗಳನ್ನು ತರೋಣವೆಂದು ಹತ್ತಿರವೇ ಇದ್ದ ಸಣ್ಣದೊಂದು ಕಿರಾಣಿ ಅಂಗಡಿ ಹೊಕ್ಕೆ. ಕೌಂಟರ ಹತ್ತಿರ ನಿಂತಿದ್ದ ಯುವತಿಯೊಬ್ಬಳು 'ಹಾಯ್' ಎಂದಳು. ಯೋಚಿಸುವ ಮೊದಲೇ 'ಹಾಯ್' ಎಂದು ಬಿಟ್ಟಿದ್ದೆ! "ಇಂದು ಮುಂಜಾನೆ ಹೇಗಿದ್ದೀಯಾ?" ಎಂದು ಕೇಳಿದಳು. ಅದಕ್ಕೂ "ಚೆನ್ನಾಗಿದ್ದೇನೆ. ಥ್ಯಾಂಕ್ಸ್" ಎಂಬ ಉತ್ತರ ಸಿದ್ಧವಿತ್ತು. ಅಂತೂ ಎಷ್ಟು ಬೇಗ ಅಮೇರಿಕನ್ ಪದ್ಧತಿ ಕಲಿತುಬಿಟ್ಟೆನಲ್ಲ ಎಂದು ನನಗೆ ಅಚ್ಚರಿಯಾಯಿತು. ಹಾಲು, ಬೆಣ್ಣೆ, ಮಜ್ಜಿಗೆ, ಹಣ್ಣು-ಹಂಪಲುಗಳನ್ನು ಖರೀದಿ ಮಾಡಿದೆ. ಅವುಗಳನ್ನೆಲ್ಲ ಸುಂದರವಾದ ಪೊಟ್ಟಣಗಳಲ್ಲಿ ಕಟ್ಟಿಕೊಟ್ಟಳು ಆ ಚೆಲುವೆ. ಪದ್ಧತಿಯಂತೆ "Thank you very much" (ಕೃತಜ್ಞತೆಗಳು) ಎಂದೆ. ಅದಕ್ಕವಳು "you are welcome" (ನಿನಗೆ ಸುಸ್ವಾಗತ) ಎಂದಳು. ಅದರ ಅರ್ಥವಾಗದೇ ಪೆಚ್ಚು ಮುಖಹಾಕಿ ಹಿಂತಿರುಗಿದೆ. ಸಹಪಾಠಿಗಳು ಮನೆಗೆ ಹಿಂತಿರುಗಿದ ಕೂಡಲೇ ನಾನು ಮೊದಲು ಕೇಳಿದ ಪ್ರಶ್ನೆ ಆ ಯುವತಿಯ ಮಾತಿನ ಅರ್ಥ. ಅದಕ್ಕೆ ನನ್ನ ಗೆಳೆಯನೊಬ್ಬ ಯಾರು ಕೇಳಿದ್ದು, ಏನು ಎಂಬುದರ ವಿವರ ಕೇಳಿಕೊಂಡು "ಆಕೆ ಬಹಳ ಚಾಲಾಕು ಹುಡುಗಿ. ಆಕೆಗೊಬ್ಬ ಸುಂದರ ಯುವಕ-ಸಂಗಾತಿ ಬೇಕಂತೆ. ಆದ್ದರಿಂದ ಆಕೆ ಹಾಗೆಂದಾಗ 'ಎಲ್ಲಿ? ಎಂದು?' (where and when) ಎಂದು ನೀನು ಕೇಳಬಾರದೇ?" ಎಂದ. ಆದರೆ ಮೊದಲ ದಿನ ಪುಸ್ತಕದ ಅಂಗಡಿಯ ಮುದುಕನೂ ಇದೇ ಮಾತು ಹೇಳಿದ್ದರಿಂದ ಅದಕ್ಕೆ ವಿಶೇಷ ಅರ್ಥ ಕಲ್ಪಿಸಬಾರದೆಂದುಕೊಂಡೆ.

* * *

ವರ್ಗ

ಮುಂಜಾವಿನ ಏಳು ಗಂಟೆಗೆ ಪಾಠವಿತ್ತು. ಯಾವ ಕಟ್ಟಡ, ಯಾವ ಖೋಲಿ ಎಂದು ಹುಡುಕಿ ತೆಗೆಯುವದರಲ್ಲಿ ೧೫ ನಿಮಿಷಗಳು ಕಳೆದವು. ವರ್ಗ ಹೊಕ್ಕಾಗ ಏಳು ಹೊಡೆದು ಐದು ನಿಮಿಷಗಳಾಗಿದ್ದವು. ಮೊದಲ ದಿನ ಹೀಗೆ ತಡಮಾಡಿ ಹೋದರೆ ಶಿಕ್ಷಕರು ಏನು ಅಂದುಕೊಂಡಾರು ಎಂದು ಅಳುಕಿದ್ದೆ. ವರ್ಗದೊಳಗೆ

ವಿದ್ಯಾರ್ಥಿಗಳು ತಮ್ಮ ತಮ್ಮಲ್ಲಿ ಮಾತುಕತೆ ನಡೆಸಿದ್ದರು. ಬಹುಶಃ ಬೇಸಿಗೆ ರಜೆಯನ್ನು ಹೇಗೆ ಕಳೆದೆ. ಯಾವ ಹೊಸ ಹುಡುಗಿಯ ಸಂಗಡ 'date' (ದಿನಾಂಕ) ಮಾಡಿದೆ. ಎಷ್ಟು ಹಣ ಸಂಪಾದಿಸಿದೆ ಇತ್ಯಾದಿ ಅವರ ಸಂಭಾಷಣೆಯ ವಿಷಯವಾಗಿರಬೇಕು. ವಿದ್ಯಾರ್ಥಿಗಳು ಬಾಯಲ್ಲಿಟ್ಟ ಪೈಪನಿಂದ ಒಂದೇ ಸವನೆ ಹೊಗೆ ಹೊರಹೊಮ್ಮುತ್ತಿತ್ತು. ಆಶ್ರಮದ ಹೋಮ-ಹವನದ ಧೂಮದಂತೆ! ಹಿಂದಿನ ಕುರ್ಚಿಯಲ್ಲಿ ಕುಳಿತವ, ಮುಂದಿನ ಕುರ್ಚಿಯಲ್ಲಿ ಕುಳಿತವನ ತಲೆಯ ಮೇಲೆ ಎತ್ತರಿಸಿ ಕಾಲು ಇಟ್ಟಿದ್ದ. ಶಿಸ್ತು ಒಂದು ಬಿಟ್ಟು ಉಳಿದದ್ದೆಲ್ಲ ಅಲ್ಲಿತ್ತು.

ಶಿಕ್ಷಕರು ಬಂದ ನಂತರವೇ ಒಳಗೆ ಹೋದರಾಯಿತೆಂದು ಹೊರಗೇ ನಿಂತೆ. ಇನ್ನೊಂದು ಐದು ನಿಮಿಷ ಕಳೆದಿರಬೇಕು. ಯಾರೋ ಒಳಗಡೆ ಪಾಠ ಹೇಳಿಕೊಡುತ್ತಿರುವಂತೆ ಭಾಸವಾಯಿತು. ಲಗುಬಗೆಯಿಂದ ಒಳಗೆ ಧಾವಿಸಿದೆ. ಸುತ್ತುವರೆದು ಕುಳಿತಿದ್ದ ವಿದ್ಯಾರ್ಥಿಗಳ ನಡುವೆ ಅಡ್ಡಡ್ಡಾಗಿ ಕುಳಿತ ಶಿಕ್ಷಕರು. ಪತ್ನಿಯೊಂದಿಗೆ ಸಂಭಾಷಿಸುವ ತೆರದಲ್ಲಿ ಪಾಠ ನಡೆಸಿದ್ದರು! ತಡಮಾಡಿ ಹೋದದ್ದಕ್ಕೆ ನಾಚಿಕೆಯಾಯಿತು. ಆದರೆ ಯಾರೂ ಏನೂ ಅನ್ನಲಿಲ್ಲ. ನನ್ನ ನಂತರವೂ ಹತ್ತು ಹದಿನೈದು ವಿದ್ಯಾರ್ಥಿಗಳು ಬರುತ್ತಲೇ ಇದ್ದರು. ಹತ್ತಿರ ಕುಳಿತ ವಿದ್ಯಾರ್ಥಿಯೊಬ್ಬ ಕಿಸೆಯಿಂದ ಕಾಗದದ ಕರವಸ್ತ್ರ ತೆಗೆದು ತನ್ನ ಮೂಗಿನ ಮ್ಯುನ್ಸಿಪಾಲ್ಟಿಯ ಸಫಾಯಿ ಪ್ರಾರಂಭಿಸಿದ. ಬಾರದ ಸಿಂಬಳಕ್ಕಾಗಿ ಸೂಂಸೂಂ ಶಂಖನಾದ ಪ್ರಾರಂಭಿಸಿದ. ತನ್ನಿಂದ ಇಡೀ ವರ್ಗಕ್ಕೆ ತೊಂದರೆ ಯಾಗುತ್ತದೆಂದು ಕ್ಷಣಮಾತ್ರವೂ ಆತ ಯೋಚಿಸಿದಂತೆ ತೋರಲಿಲ್ಲ. ನಂತರ ಕಾಗದವನ್ನು ಮುದ್ದೆ ಮಾಡಿ ತಿರುಗಿ ಜೇಬಿಗೆ ತುರುಕಿದ. ಮುಂದೆ ಕುಳಿತ ವಿದ್ಯಾರ್ಥಿನಿಯೊಬ್ಬಳು ಭರದಿಂದ ಕರವಸ್ತ್ರದಲ್ಲಿ ಉಗುಳಿ ಅದನ್ನು ಬ್ಯಾಗಿನಲ್ಲಿ ಇಟ್ಟಳು. ಪಾಠ ನಡೆದೇ ಇತ್ತು.

ವಿದ್ಯಾರ್ಥಿಯೋರ್ವನು ಶಿಕ್ಷಕನಿಗೆ ಪ್ರಶ್ನೆ ಕೇಳಿದ. ಹೊಲಸಾದೊಂದು ಪ್ಯಾಂಟು, ಮಿಲಟರಿಯವರು ಧರಿಸುವಂತಹ ಒರಟು ಬೂಟು, ಆರಾಮವಾಗಿ ಖುರ್ಚಿಯಲ್ಲಿ ಆರೂಢನಾಗಿ, ಹಲ್ಲುಗಳಲ್ಲಿ ಕಚ್ಚಿ ಹಿಡಿದ ಪಾಯಿಪಿನಿಂದ ಹೊಗೆಯನ್ನು ಬಿಡುತ್ತ, ಮೊದಲೇ ತಿಳಿಯದ ಇಂಗ್ಲೀಷನಲ್ಲಿ ಇನ್ನುಷ್ಟು ತಿಳಿಯದಂತೆ ಪ್ರಶ್ನೆ ಕೇಳಿದ. ಆತನ ಹಾವಭಾವದಿಂದ ಅವನಿಗೆ ಹೇಳಬೇಕಾಗಿದ್ದನ್ನು ಮಾತಿನಲ್ಲಿ ವ್ಯಕ್ತಮಾಡಲು ಬಾರದೆಂದು ತಿಳಕೊಂಡೆ. ವಿದ್ಯಾರ್ಥಿಯೊಬ್ಬ ಅವನು ಹೇಳಬೇಕಾದುದನ್ನು ಕರೆ ಹಲಿಗೆಯ ಮೇಲೆ ಬರೆದು ವಿವರಿಸಲು ಹೇಳಿದ. ಆತನು ಎದ್ದು ಬಲಗೈ ಪಾಯಿಪಿಗೆ ಬೇಕಾದ್ದರಿಂದ ಎಡಗೈಯಿಂದ ಇನ್ನೂ ಅ, ಆ, ಬರೆಯಲು ಕಲಿಯುವ ವಿದ್ಯಾರ್ಥಿಯಂತೆ ಕರಿ ಹಲಿಗೆಯ ತುಂಬ ಅಡ್ಡಡ್ಡವಾಗಿ ದೊಡ್ಡ ಸಣ್ಣ (capitals & italics) ಬಳಕೆಯಲ್ಲಿರುವ ಯಾವತ್ತೂ ಇಂಗ್ಲೀಷ್ ಕಾಗುಣಿತಾಕ್ಷರಗಳನ್ನು ಹೇಗೇಗೊ ಜೋಡಿಸಿ ಬರೆಯಲಾರಂಭಿಸಿದ. ಈ ತಮಾಷೆಯನ್ನು ನೋಡಿ, ಬಂದ ನಗೆಯನ್ನು ಕಷ್ಟದಿಂದ ತಡೆದುಕೊಂಡೆ. ಶಿಕ್ಷಕನಿಗೆ ವಿದ್ಯಾರ್ಥಿಯ ಪ್ರಶ್ನೆಗೆ ಉತ್ತರ ಕೊಡಲಾಗಲಿಲ್ಲ, ನಾಳೆ ಹೇಳುವೆನೆಂದ.

ವಿದ್ಯಾರ್ಥಿಗಳು ತಮ್ಮ ಎಲ್ಲ ಪುಸ್ತಕಗಳನ್ನು ವರ್ಗಕ್ಕೆ ಹೊತ್ತು ತರುವದು ವಾಡಿಕೆಯೆಂದು ತೋರಿತು. ವರ್ಗದಲ್ಲಿ ಕುಳಿತು ಪುಸ್ತಕದಲ್ಲಿಯ ಮುಖ್ಯ ಮುದ್ದೆಗಳನ್ನು

ಗೆರೆಯೆಳೆದು ಗುರುತು ಹಾಕುತ್ತಲೇ ಇರುತ್ತಾರೆ. ಕೆಲವರ ಪುಸ್ತಕಗಳಂತೂ ಗೆರೆಯಿಂದಲೇ ತುಂಬಿಹೋಗಿರುತ್ತವೆ. ಇಂತಹವರಿಗಾಗಿ ಪ್ರಕಾಶಕರೇ ಇಡೀ ಪುಸ್ತಕದಲ್ಲಿ ಗೆರೆಗಳನ್ನು ಮುದ್ರಿಸಿ ಮಾರುವುದು ಒಳ್ಳೆಯದೆಂದು ತೋರುತ್ತದೆ. ಕುರ್ಚಿಯಲ್ಲಿ ಕುಳಿತಾಗ ನೆಲಕ್ಕೆ ಕಾಲು ತಾಗದ ಪುಟಾಣಿಯೊಬ್ಬಳು ತನ್ನ ಪುಸ್ತಕಗಳನ್ನೇ 'ಪಾದಪೀಠ'ವಾಗಿ ಮಾಡಿಕೊಂಡು ಅದರ ಮೇಲೆ ಕಾಲು ಚಾಚಿ ಸುಖವಾಗಿ ಕುಳಿತಿದ್ದಳು. ಇಲ್ಲಿಯ ಬಹುಸಂಖ್ಯಾತ ವಿದ್ಯಾರ್ಥಿಗಳು ಪೆನ್ನನ್ನು ಉಪಯೋಗಿಸುವಂತೆ ತೋರಲಿಲ್ಲ. ಪೆನ್ಸಿಲುಗಳಿಂದಲೇ ಬರೆಯುತ್ತಾರೆ. ಆದ್ದರಿಂದ ಕಿಸೆಯಲ್ಲಿ ಅರ್ಧ ಡಜನ್ ಕೆತ್ತಿದ ಪೆನ್ಸಿಲ್‌ಗಳು ಇದ್ದೇ ಇರುತ್ತವೆ. ಪ್ರತಿಯೊಂದು ವರ್ಗದಲ್ಲಿ ಪೆನ್ಸಿಲ್ ಹರಿತ ಮಾಡುವ ಸಾಧನಗಳನ್ನಿಟ್ಟಿರುತ್ತಾರೆ. ಪೆನ್ಸಿಲಿನ ಪೂರೈಕೆಯೂ ಇರುತ್ತದೆ. ಅದರ ಲೆಕ್ಕವೇ ವಿದ್ಯಾರ್ಥಿಗಳಿಗಿರುವುದಿಲ್ಲ. ಡಿಕ್ಕನು ಬಾಬ್‌ನನ್ನು ಕರೆದಾಗ ಬಾಬ್‌ನು ನೋಡದಿದ್ದರೆ ಅವನತ್ತ ಪೆನ್ಸಿಲ್ ಒಗೆಯುವ. ಹೀಗೆ ಹೊಡೆದ ಪೆನ್ಸಿಲ್‌ಗಳನ್ನು ತಿರುಗಿ ಹೆಕ್ಕುವ ಗೋಜಿಗೂ ಹೋಗುವುದಿಲ್ಲ. ಭಾರತದಿಂದ ಹೋದ ಮೊದಲಲ್ಲಿ ನಾನು ನೂರಾರು ಪೆನ್ಸಿಲ್‌ಗಳನ್ನು ಕೂಡಿಹಾಕಿದ್ದೆ.

ಒಂದು ವರ್ಗ ಮುಗಿದು, ಇನ್ನೊಂದು ಭಾಷಣವೂ ಅದೇ ಕೋಣೆಯಲ್ಲಿ ಇದ್ದದ್ದರಿಂದ ಅಲ್ಲೇ ಕುಳಿತೆ. ವಿದ್ಯಾರ್ಥಿಗಳೆಲ್ಲ ಎದ್ದು ಹೋಗಿ ಕೈಯಲ್ಲಿ ಆಯ್ಸ್‌ಕ್ರೀಮ್, ಕೆಂಡಿ-ಬಾರ್, ಬಿಸ್ಕೀಟು, ಚ್ಯೂಯಿಂಗ್‌ಗಮ್, ಚಾಕಲೇಟ್ ಮುಂತಾದವನ್ನು ಹಿಡಿದು ತಿನ್ನುತ್ತಲೇ ಒಳಗೆ ಬಂದರು. ಕುಮಾರಿಯರು ತಮ್ಮ ತುಟಿ-ಬಣ್ಣ ಸರಿಯಾಗಿದೆಯೇ ಎಂದು ಪರ್ಸಿನಿಂದ ಕನ್ನಡಿಯೆಳೆದು ಖಚಿತಪಡಿಸಿಕೊಂಡರು. ಒಬ್ಬಿಬ್ಬರು ಎದ್ದು ಹೋಗಿ ಸರಿಪಡಿಸಿಕೊಂಡು ಬಂದರು. ಶಿಕ್ಷಕರು ಬಂದ ಮೇಲೂ ವಿದ್ಯಾರ್ಥಿಗಳು ಬರುತ್ತಲೇ ಇದ್ದರು. ಹಾಜರಿ-ಗಿಜರಿಯ ಪರಿಪಾಠವಿಲ್ಲ. ಮುದ್ರಿಸಿ ತಂದ ಹಾಳೆಗಳನ್ನು ಎಲ್ಲರಿಗೂ ಹಂಚಿದರು. ಮತ್ತೆ ಕ್ಲಾಸು ಸುರುವಾಯಿತು. ಹೊಸದಾಗಿ ಬಂದವರಿಗೆ ಇದೆಲ್ಲ ಅಶಿಸ್ತು, ಬೇಜವಾಬ್ದಾರಿಯೆಂದು ತೋರಿದರೂ ಈ ಅನೌಪಚಾರಿಕತೆ ಹಿತವಾಗಿದ್ದಂತೆ ಅನಿಸಿತು. ಆ ಕ್ಷಣ, ಪಾಠವೆಂದರೆ ಕಾಟವಾಗದೇ ಮಿತ್ರಗೋಷ್ಠಿಯಂತೆ ನಡೆದಿರುತ್ತದೆ. ವರ್ಗ ಮುಗಿದ ನಂತರ ತಡವಾಗಿ ಬಂದದ್ದಕ್ಕೆ ಶಿಕ್ಷಕರ ಕ್ಷಮೆ ಕೇಳೋಣವೆಂದು ಅವರನ್ನು ಹುಡುಕಿಕೊಂಡು ಹೊರಟೆ. ಅಮೇರಿಕೆಯಲ್ಲಿ ಎಲ್ಲ ಕೋಣೆಗಳ ಬಾಗಿಲು ಮುಚ್ಚಿರುವುದು ಸಾಮಾನ್ಯ ವಾಡಿಕೆ. ತನ್ನಷ್ಟಕ್ಕೇ ಮುಚ್ಚುವ ಬಾಗಿಲುಗಳಿರುತ್ತವೆ. ಒಂದು ಬಾಗಿಲಿನ ಮೇಲೆ 'ಪ್ರಾಧ್ಯಾಪಕರು' (Faculty) ಎಂದು ಬರೆದಿತ್ತು. ಹೋಗಿ ಎರಡು ಮೂರು ಸಲ ಬಾಗಿಲು ಬಡಿದೆ. ಯಾವ ಉತ್ತರವೂ ಬಾರದಿದ್ದರಿಂದ ಬಾಗಿಲು ನೂಕಿಕೊಂಡು ಒಳಗೆ ಹೋದೆ. ಅಲ್ಲಿ ಶಿಕ್ಷಕರ ಬದಲಾಗಿ ಕಮೋಡ್, ನೀರು, ಟಾವೆಲ್‌ಗಳು ನನ್ನನ್ನು ಸ್ವಾಗತಿಸಿದವು! "ಪ್ರಾಧ್ಯಾಪಕರಿಗಾಗಿ ಮೂತ್ರಾಲಯ" ಎಂದು ಬರೆಯಲಾರದೇ ನನ್ನನ್ನು ಮೋಸಗೊಳಿಸಿದ್ದರವರು!

* * *

ನಾಮಾಂತರ

ಫೋನು ಟ್ರಿನ್‌ನ್‌ನ್ ಎಂದು ಬಡಿದುಕೊಳ್ಳಲಾರಂಭಿಸಿದ್ದರಿಂದ ಎತ್ತಿಕೊಂಡೆ. "ಕ್ರಿಸ್‌ನ ಹತ್ತಿರ ಮಾತಾಡಬಹುದೇ? ಎಂದಿತು ಧ್ವನಿ. "ಇಲ್ಲಿ ಕ್ರಿಸ್ ಯಾರೂ ಇಲ್ಲ. ಎಲ್ಲರೂ ಭಾರತೀಯರಿದ್ದೇವೆ" ಎಂದು ಹೇಳಿದೆ. ಧ್ವನಿ ಅಷ್ಟಕ್ಕೇ ಸುಮ್ಮನಿರದೇ "ನಾನು ಮಾತಾಡಿಸಬೇಕಾದವನು ಭಾರತೀಯನೇ, ಎರಡು ವಾರಗಳ ಹಿಂದೆ ನನ್ನ ಕೀಟಶಾಸ್ತ್ರದ ಡಿಪಾರ್ಟಮೆಂಟಿಗೆ ಸೇರಿದ್ದಾನೆ." ಎಂದಾಗ ನನ್ನ ಪ್ರಾಧ್ಯಾಪಕರೇ ನನ್ನನ್ನು ಕೇಳುತ್ತಿದ್ದಾರೆಂದು ತಿಳಿಯಿತು. ಸ್ವಲ್ಪ ಕೆಲಸವಿದ್ದುದರಿಂದ ಕಾಲೇಜಿಗೆ ಬರಲಿಕ್ಕೆ ತಿಳಿಸಲು ಫೋನು ಮಾಡಿದ್ದರು. ಹಿಂದಿನ ದಿನದ ಘಟನೆ ಒಮ್ಮೆಲೆ ನೆನಪಿಗೆ ಬಂದಿತು.

ನಾನು ಕಾಲೇಜಿಗೆ ಸೇರಿದ ಎರಡು ವಾರಗಳ ತನಕ ನನ್ನ ಪ್ರಾಧ್ಯಾಪಕರರು ನನ್ನನ್ನು "ಕೈಮಾಟ್" (ಕಾಮತದ ಅಮೇರಿಕನ್ ರೂಪ) ಎಂದೇ ಕರೆಯುತ್ತಿದ್ದರು. ಹಿಂದಿನ ದಿನ ಎಂದಿನಂತೆ ವರ್ಗಕ್ಕೆ ಬಂದಾಗ "ನನ್ನನ್ನು ಕ್ಷಮಿಸು ಮಿ. ಕ್ಯಾಮಟ್ ನಾನು ನಿನ್ನ ಮೊದಲಿನ ಹೆಸರು "ಕೈಮಾಟ್" ಎಂದು ತಿಳಿದಿದ್ದೆ. ಇಂದು ನಿನ್ನ ಕಾಗದ-ಪತ್ರಗಳನ್ನು ನೋಡುತ್ತಿದ್ದಾಗ ಅದು ನಿನ್ನ ಕೊನೆಯ ಹೆಸರು ಎಂದು ತಿಳಿಯಿತು" ಅಂದರು. ನನ್ನ ಮೊದಲ ಹೆಸರೇನು ಎಂದು ಹೇಳಿ ಅದನ್ನು ಉಚ್ಚರಿಸಲಿಕ್ಕಾಗದೇ ಬೋರ್ಡಿನ ಮೇಲೆ ಬರೆಯಲು ಹೇಳಿದರು. ಅದರಂತೆ ಬರೆದು ತೋರಿಸಿದೆ. ಆದರೆ ಅವರ ಅಮೇರಿಕನ್ ನಾಲಿಗೆಗೆ ನನ್ನ ಕೃಷ್ಣನಾಮ ಹೊರಳಲೇ ಇಲ್ಲ! ಬಹಳ ಪ್ರಯತ್ನಪಟ್ಟು "ಕ್ರಿಶನಾನಂದ" (ಕೃಷ್ಣಾನಂದ) ಎಂದು ಏನೇನೋ ಗೊಣಗಿದರು. ಈ ಕ್ಲಿಷ್ಟ ಹೆಸರಿನಿಂದ ತೃಪ್ತಿಯಾಗದೆ "ಮಿತ್ರರು, ಮನೆಯವರು ನಿನ್ನನ್ನು ಏನೆಂದು ಕರೆಯುತ್ತಾರೆ?" ಎಂದು ಕೇಳಿದರು. "ಅವರೂ ಪೂರ್ಣ ಹೆಸರಿನಿಂದಲೇ ಕರೆಯುತ್ತಾರೆ" ಎಂದು ಹೇಳಿದಾಗ ಅವರಿಗೆ ಬಹಳ ನಿರಾಸೆಯಾಯಿತು. ಅವರಿಗೆ ಅಮೇರಿಕನ್ ಪದ್ಧತಿಯಂತೆ ಮೊದಲ ಹೆಸರಿನಿಂದಲೇ ನನ್ನನ್ನು ಕರೆಯುವ ಹಂಬಲ. ತುಂಬ ಹೊತ್ತು ಯೋಚಿಸಿ ಕೊನೆಗೆ "ನಿನ್ನ ಹೆಸರಿನ ಪೂರ್ವಾರ್ಧ ಅಮೇರಿಕನ್ 'ಕ್ರಿಸ್' (Chris) ಹೆಸರನ್ನು ಹೋಲುತ್ತದೆ. ಆದ್ದರಿಂದ ಅದೇ ಹೆಸರಿನಿಂದ ನಿನ್ನನ್ನು ಸಂಭೋಧಿಸಿದರೆ ಆತಂಕವಿದೆಯೇ?" ಎಂದರು. ನನ್ನ ಆತಂಕವೇನೂ ಇರದಿದ್ದರಿಂದ ಅಂದಿನಿಂದ ನಾನು 'ಕ್ರಿಸ್' ಬಳಿಕ ಕ್ರಿಶ್ ಆದೆ. ಕೃಷ್ಣನ ನಾಮ ಕ್ರಿಸ್ತನ ನಾಮದಲ್ಲಿ ಪರಿವರ್ತನೆ ಹೊಂದಿತು.

ಅಮೇರಿಕೆಗೆ ಹೊದ ಭಾರತೀಯರು ಧರ್ಮಾಂತರ ಪಡೆಯದಿದ್ದರೂ ನಾಮಾಂತರ ಹೊಂದದೇ ಇರುವುದಿಲ್ಲ. ನಾವು ಅಮೇರಿಕನ್ ಆಗಲು ಬಯಸುವ ಮೊದಲೇ ಅವರು ನಮ್ಮನ್ನು ಪರಿವರ್ತಿಸಿಬಿಡುತ್ತಾರೆ. ಹೆಸರು ಮೊದಲೇ ಮಾರ್ಪಾಟಾಗಿಬಿಡುತ್ತದೆ. ಆನಂದನು "ಎಂಡಿ"ಯಾದರೆ ಹರಿನಾರಾಯಣನು "ಹ್ಯಾರಿ"ಯಾಗುತ್ತಾನೆ. ನಮ್ಮ ಕಾಲೇಜಿನಲ್ಲಿ ಪೋಲೆಂಡಿನವನೊಬ್ಬ ಕೆಲಸಕ್ಕಿದ್ದ. ಆತ ಎಲ್ಲರಿಗೂ "ಚಾರ್ಲಿ"ಯಾಗಿದ್ದ. ಆತ ಒಮ್ಮೆ ಕಾರಿನ ಲೈಸೆನ್ಸ್‌ಫಾರ್ಮ್ ಟೈಪ ಮಾಡಲು ತಂದಾಗ ಅದರಲ್ಲಿ ಅವನ ಹೆಸರು "ಕಾಝಿಮಿರ್" (Kazimier) ಎಂದಿತ್ತು ಅವನ ಹೆಸರಿಗೂ ಚಾರ್ಲಿಗೂ ಎಲ್ಲಿಯ ಸಂಬಂಧವೆಂದಾಗ ಅವನು ತಾನು ಬಂದ ಹೊಸದರಲ್ಲಿ ಕಾರಖಾನೆಯೊಂದರಲ್ಲಿ

ಕೆಲಸ ಮಾಡುತ್ತಿದ್ದೆನೆಂದೂ ಅಲ್ಲಿಯ ಸಹೋದ್ಯೋಗಿಗಳಿಗೆ ತನ್ನ ಹೆಸರು ಹೇಳಲುಬಾರದಿದ್ದರಿಂದ ಚಾರ್ಲಿಯಾದೆನೆಂದೂ ಹೇಳಿದ. ಅದೇ ರೂಢನಾಮವಾಯಿತು. ನಾನು ಆತನನ್ನು 'ಕಾಝಿಮಿರ್' ಎಂದೇ ಕರೆಯುತ್ತಿದ್ದೆ. ಆತ ನನ್ನನ್ನು "ಕೃಷ್ಣಾ" ಎನ್ನುತ್ತಿದ್ದ.

ಅಮೇರಿಕನ್ನರಿಗೆ ನನ್ನ ಪೂರ್ಣ ಹೆಸರು ಹೇಳಬೇಕಾದರೆ ಸಾಕುಸಾಕಾಗಿ ಹೋಗುತ್ತಿತ್ತು. ಕೆ.ಎಲ್.ಕಾಮತ್ ಎಂದು ಹೇಳಿದರೆ ತಪ್ಪದೇ ಕೆ.ಎಲ್.ಗ್ಯಾಮಡ್ ಎಂದು ಬರೆಯುವರು. ಒಂದೊಂದೇ ಅಕ್ಷರ ಹೇಳಿ ಬರೆಸಬೇಕಾಗುತ್ತಿತ್ತು. ಅಂತೆಯೇ "K as in kiss, A as in Andy, M as in Mad" ಮುಂತಾಗಿ ಹೇಳುವ ಪ್ರಸಂಗ ಬರುತ್ತಿತ್ತು. ಕೊನೆಗೆ ನನ್ನ ಹೆಸರು ಕೈಮಾಟ್‌ಗೆ ಪರಿವರ್ತಿಸಿದಾಗ ಅವರು ಸರಿಯಾಗಿ ಬರೆಯಲಾರಂಭಿಸಿದರು. ಪ್ರತಿ ಎರಡು ವಾರಕ್ಕೊಮ್ಮೆ ಪಗಾರ ಕೊಡುತ್ತಿದ್ದ ಮುದುಕಿ ಸೆಕ್ರೆಟರಿ ಪ್ರತಿ ಸಲ ಹೋದಾಗಲೂ ನನ್ನ ಹೆಸರನ್ನು ಕೇಳುವುದಾಗಲಿ ಅದನ್ನು ಹೇಗೆ ಬರೆಯುತ್ತಿ ಎಂದು ಕೇಳುವುದಾಗಲಿ ಬಿಡಲಿಲ್ಲ. ಎಷ್ಟು ಹೇಳಿದರೂ ಆಕೆ ನನ್ನ ಹೆಸರನ್ನು "Comet" ಎಂದೇ ಬರೆಯುತ್ತಿದ್ದಳು! ನಾನು ಕಾಮತನಾಗುವ ಬದಲು ಮೋಕ್ಷಗುಂಡಮ್, ಷಣ್ಮುಖಂ, ಚೆಟ್ಟಿಯಾರ್, ಭಕ್ತವತ್ಸಲಮ್, ಭಯಕೃದ್ಭಯನಾಶನಾಚಾರ್ ಆಗಿದ್ದರೆ ನನ್ನ ಅವಸ್ಥೆ ಏನಾಗುತ್ತಿತ್ತೋ?

ಮೋಟು ಹೆಸರುಗಳು ಅಮೇರಿಕನ್ ವೈಶಿಷ್ಟ್ಯ. ರೊಬರ್ಟ್‌ನು 'ಬಾಬ್', ವಿಲಿಯಮ್‌ನು 'ಬಿಲ್', ರಿಚರ್ಡನು 'ಡಿಕ್' ಎಂದೇ ಕರೆಯಲ್ಪಡುತ್ತಾರೆ. ಇದರಿಂದ ಆತ್ಮೀಯತೆ ಹೆಚ್ಚುತ್ತದೆಂದು ಅವರು ನಂಬುತ್ತಾರೆ. ಈ ಪದ್ಧತಿ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಉಚ್ಚ ಅಧಿಕಾರಿಗಳಿಗೆ, ಕೆಳಗಿನ ನೌಕರರಿಗೆ ಅನ್ವಯಿಸುತ್ತದೆ. ನಮಗೆ ತೀರ ಪರಿಚಯದ 'ಸರ್' ಪದ ಅಮೇರಿಕೆಯಲ್ಲಿ ಬಳಕೆಯಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ಪ್ರಾಧ್ಯಾಪಕರನ್ನು ವಿದ್ಯಾರ್ಥಿಗಳು ಪ್ರೊಫೆಸರ್ ಅಥವಾ ಮಿಸ್ಟರ್ ಎಂದೇ ಕರೆಯುವರು. ನಾನೊಮ್ಮೆ ಪ್ರಯೋಗಶಾಲೆಯಲ್ಲಿ ಕೆಲಸದಲ್ಲಿ ತೊಡಗಿದ್ದೆ. ಪಕ್ಕದ ಕೋಣೆ ಪ್ರಾಧ್ಯಾಪಕರದಾಗಿತ್ತು. ಯಾರೋ ಅವರ ಹತ್ತಿರ ಬಂದು "ಹಾಯ್ ಮೈಕ್, ಇಂದು ಮುಂಜಾನೆ ಹೇಗಿದ್ದೀಯಾ?" ಎಂದು ಕೇಳಿದರು. ಅದಕ್ಕೆ ಅವರು "ಚೆನ್ನಾಗಿದ್ದೇನೆ ಜೆಕ್; ಥ್ಯಾಂಕ್ಸ್" ಎಂದರು. ಮಾತು ಬಹಳ ಅನೌಪಚಾರಿಕವಾಗಿ ನಡೆದಿತ್ತು. ಮಾತು ಮುಗಿದು ಜೆಕ್ ಹೊರಟಾಗ ಯಾರೆಂದು ಕುತೂಹಲದಿಂದ ಹೊರಗೆ ಬಂದು ನೋಡಿದೆ. ಆತ ನಮ್ಮ ಕೋಣೆಗಳನ್ನು ಸ್ವಚ್ಛ ಮಾಡುವ ಜಾನ್! ಅಮೇರಿಕೆಯಲ್ಲಿ ಸಾಮಾಜಿಕ ಭೇದಗಳಿಲ್ಲದ್ದರಿಂದ ಈ ಹಿತವಾದ ಅನೌಪಚಾರಿಕತೆ ಕಂಡು ಬರುತ್ತದೆ. ಪ್ರೆಸಿಡೆಂಟ್ ಕೆನಡಿ ಜೆಕ್ ಕೆನಡಿಯೆಂದೇ ಪ್ರಸಿದ್ಧರಾಗಿದ್ದರು. ಪತ್ರಿಕಾಕಾರರು, ಸುದ್ದಿಗಾರರು ಅವರನ್ನು "ಮಿಸ್ಟರ್ ಪ್ರೆಸಿಡೆಂಟ್" ಎಂದೇ ಸಂಬೋಧಿಸುತ್ತಿದ್ದರು.

* * *

ಕಣ್ಣಿನ ಪರೀಕ್ಷೆ

"ನಿನ್ನ ಕಣ್ಣಿನ ತಪಾಸಣೆಯ ದಾಖಲೆ ಇಲ್ಲದ್ದರಿಂದ ಕೂಡಲೇ ಪರೀಕ್ಷಿಸಿಕೊಳ್ಳಬೇಕು" ಎಂದು 'ವಿದ್ಯಾರ್ಥಿ-ಆರೋಗ್ಯಕೇಂದ್ರ'ದಿಂದ ಆದೇಶ ಬಂದಿತು. ಮರುದಿನವೇ ಧಾವಿಸಿದೆ. ನಿರ್ದಿಷ್ಟಪಡಿಸಿದ ಸಮಯಕ್ಕೆ. ನರ್ಸ ಒಬ್ಬಳು ನನ್ನ ಹೆಸರು ಕೇಳಿಕೊಂಡು ನನ್ನ ಆರೋಗ್ಯಚರಿತ್ರೆಯ ಫಾಯಿಲ್ ಎಳೆದಳು. ಇನ್ನೊಬ್ಬಳು ಬಂದು ಬಾಯಲ್ಲೊಂದು ಉಷ್ಣತಾಮಾಪಕಯಂತ್ರವನ್ನು ಇಟ್ಟಳು.

ಕಣ್ಣಿನ ತಪಾಸಣೆಗೂ ಎಷ್ಟೊಂದು ಕಾಳಜಿ ವಹಿಸುತ್ತಾರೆ ಈ ಡಾಕ್ಟರರು! ಶರೀರದ ಉಷ್ಣತೆಗೂ ಕಣ್ಣಿನ ದೃಷ್ಟಿಗೂ ಇರುವ ಸಂಬಂಧವನ್ನು ಸಹ ಪರಿಶೀಲಿಸುತ್ತಾರೆ. ಇದಕ್ಕೇ ಅನ್ನಬೇಕು ಮುಂದುವರಿದ ರಾಷ್ಟ್ರವೆಂದು, ಎಂದು ಮನಸ್ಸಿನಲ್ಲಿಯೇ ಅಂದುಕೊಂಡೆ. ಅದೇ ಭಾರತೀಯ ಕಣ್ಣಿನ ಡಾಕ್ಟರರಾದರೂ ಅಜ್ಜನ ಕಾಲದ ಅಕ್ಷರಪಟವನ್ನೇ ಓದಿಸಿ ಮನೆಗೆ ಕಳಿಸುತ್ತಾರೆ ಎಂದು ಭಾರತೀಯ ಡಾಕ್ಟರರನ್ನು ನನ್ನಷ್ಟಕ್ಕೇ ಮೂದಲಿಸಿದೆ. ನನ್ನ ಪಾಳಿ ಬಂದಿತು. ಡಾಕ್ಟರರು ಕುಶಲೋಪಚಾರದ ನಂತರ ಬಾಯಿ ತೆರೆಸಿ, ನಾಲಿಗೆ, ನಾಳಗಳನ್ನು ತಪಾಶಿಸಿದರು. ಮರುಕ್ಷಣದಲ್ಲಿ ನನ್ನ ಕೈಯಲ್ಲಿ ಒಂದು ಕೆಂಪು ಔಷಧದ ಬಾಟ್ಲಿ ಮತ್ತು ಗುಳಿಗೆಯ ಪೊಟ್ಟಣವೊಂದನ್ನು ಕೊಟ್ಟು ಮುಂದಿನ ಪೇಶಂಟನ್ನು ಕಳಿಸುವಂತೆ ಹೇಳಿದರು. ಇದರ ಅರ್ಥವಾಗದೇ ಡಾಕ್ಟರರ ಕೋಣೆಯಿಂದ ಹೊರಗೆ ಬಂದೆ. ಅನುಮಾನಿಸುತ್ತ ಹೊರಗೆ ನಿಂತಿದ್ದರಿಂದ ನರ್ಸ ಒಬ್ಬಳು "ಇನ್ನೇನಾದರೂ ಕೆಲಸವಾಗಬೇಕಿತ್ತೆ?" ಎಂದು ವಿಚಾರಿಸಿದಳು. ಕಿಸೆಯಿಂದ ಹಿಂದಿನ ದಿನ ಬಂದ ಕಾರ್ಡನ್ನು ತೆಗೆದು ಅವಳಿಗೆ ತೋರಿಸಿದೆ. ಅದನ್ನು ಓದಿ. ನನ್ನ ಕೈಯಲ್ಲಿದ್ದ ಔಷಧದ ಬಾಟ್ಲಿ ನೋಡಿ, ನಗೆಗಡಲಲ್ಲಿ ತೇಲುತ್ತ "ಡಾಕ್ಟರ್!ಡಾಕ್ಟರ್! ಇಂದು ನಿಮ್ಮವಳು ನಿಮಗೆ ನಾಷ್ಟಾ ಸರಿಯಾಗಿ ಕೊಟ್ಟಿಲ್ಲವೇ? ಕಣ್ಣಿನ ತಪಾಸಣೆಗೆ ಬಂದವರಿಗೆ ನೆಗಡಿಯ ಔಷಧ ಕೊಟ್ಟು ಕಳಿಸುತ್ತಿದ್ದೀರಲ್ರೀ!" ಎಂದು ಗಟ್ಟಿಸಿ ಅಂದಳು. ಡಾಕ್ಟರರು ಕೋಣೆಯಿಂದ ಹೊರಗೆ ಬಂದು ಪತ್ರವನ್ನು ಓದಿ, "ಕ್ಷಮಿಸಬೇಕು. ನೀವು ಮೊದಲೇ ಈ ಪತ್ರ ತೋರಿಸಬಾರದಾಗಿತ್ತೇ?" ಎಂದರು. ಆಸ್ಪತ್ರೆಯ ತುಂಬ ಈ ಸುದ್ದಿ ಬಲು ಬೇಗ ಹರಡಿತು. ಎಲ್ಲರೂ ಹೊರಗೆ ಓಡಿಬಂದು ಡಾಕ್ಟರರನ್ನು ಅಭಿನಂದಿಸಿ ಹೊಟ್ಟೆ ತುಂಬ ನಕ್ಕರು.

ಅಮೇರಿಕನ್ನರು ಆಸ್ಪತ್ರೆಗಳೆಂದರೆ ರೋಗಪೀಡಿತರಿಗೆ ಆಶ್ರಮಸ್ಥಾನವೆಂದು ಬಗೆಯುವುದಿಲ್ಲ. ಬದಲಾಗಿ ಮನೆಗಿಂತ ಯೋಗ್ಯ ವಿಶ್ರಾಂತಿಯ ಸ್ಥಾನವೆಂದು ನಂಬುತ್ತಾರೆ. ಅಂತೆಯೇ ಒಂದು ನೆಗಡಿಯಾದರೂ ಆಸ್ಪತ್ರೆಗೆ 'Admit' ಆಗುತ್ತಾರೆ! ಆದರೆ ಆಸ್ಪತ್ರೆಯ ಬಿಲ್ಲು ಸಾಕಷ್ಟು ಆಗುವದರಿಂದ ಸರ್ವಸಾಧಾರಣ ನಾಗರಿಕನಿಗೆ ಸಾಧ್ಯವಿಲ್ಲ. ಬಹುಶಃ ಎಲ್ಲರೂ ಆರೋಗ್ಯದ ವಿಮೆ ಇಳಿಸುತ್ತಾರೆ. ಹೀಗಾಗಿ ಯಾವನೇ ಆಗಲಿ ಕಾಯಿಲೆ ಬಿದ್ದು ಆಸ್ಪತ್ರೆಗೆ ಸೇರಿದರೆ ಬಿಲ್ಲಿನ ಬಹಳಷ್ಟು ಭಾಗವನ್ನು ವಿಮಾಕಂಪನಿಯವರೇ ಕೊಡುತ್ತಾರೆ. ಪ್ರತಿಯೊಬ್ಬ ನಾಗರಿಕನು ವರ್ಷಕ್ಕೆ ಒಮ್ಮೆಯಾದರೂ ಶರೀರಪರೀಕ್ಷೆ

ಮಾಡಿಸಿಕೊಳ್ಳುತ್ತಾನೆ. ಕೆಲವರಿಗಂತೂ ಆಸ್ಪತ್ರೆಗೆ ಹೋಗುವದೆಂದರೆ ಮಾವನ ಮನೆಗೆ ಹೋಗುವಷ್ಟು ಸಂತಸ. ಇಂತವರ ಪತ್ನಿ "ಏನು ಆಸ್ಪತ್ರೆಯಲ್ಲಿ ಬ್ಲಾಂಡ್ (blonde) ನರ್ಸ ಇದ್ದಾಳೆಯೇ?" ಎಂದೂ ಕೇಳುವುದುಂಟು. ಪತ್ನಿ ಆಸ್ಪತ್ರೆಗೆ ಎಡತಾಕುತ್ತಿದ್ದರೆ "ಏನು ಅಲ್ಲೊಬ್ಬ ತರುಣ ಡಾಕ್ಟರ್ ಬಂದಿದ್ದಾನೆಯೇ?" ಎಂದು ಪತಿಯಾದವನು ಪೀಡಿಸುವದುಂಟು. ಆರೋಗ್ಯದ ಬಗ್ಗೆ ಅತೀ ಕಾಳಜಿವಹಿಸುವ ಅಮೇರಿಕನ್ನರು ಹೆಚ್ಚು ಬೇಯಿಸಿದ ಆಹಾರನ್ನಾಗಲೀ, ಹೆಚ್ಚು ಮಸಾಲೆಯನ್ನಾಗಲೀ ತಿನ್ನುವುದಿಲ್ಲ. ಅಮೇರಿಕನ್ನರು ನುಂಗುವಷ್ಟು ಗುಳಿಗೆಗಳನ್ನು ಜಗತ್ತಿನ ಇನ್ನಾವ ರಾಷ್ಟ್ರದವರೂ ನುಂಗುವುದಿಲ್ಲವಂತೆ. ಇಷ್ಟೆಲ್ಲ ಆರೋಗ್ಯದ ಬಗ್ಗೆ ಜಾಗ್ರತೆ ವಹಿಸುವವರು ಸಿಗರೇಟು ಮತ್ತು ಸೆರೆಯನ್ನು ಅಷ್ಟೊಂದು ಏಕೆ ಪ್ರೀತಿಸುವರೋ ತಿಳಿಯದಾಗಿದೆ. ಬಹುಸಂಖ್ಯಾತ ಅಮೇರಿಕನ್ನರು ಸೆರೆ ಕುಡಿದು ಕಾರು ನಡೆಸುವಾಗ ಅನಾಹುತಕ್ಕೆ ಬಲಿಯಾಗಿಯೋ, ಹೆಚ್ಚು ಸಿಗರೇಟು ಸೇದಿ, ಪುಪ್ಪಸರೋಗಕ್ಕೆ ಬಲಿಯಾಗಿಯೋ ಸಾಯುತ್ತಾರೆ. ಹಬ್ಬಹುಣ್ಣಿಮೆಗಳಿರುವ ವಾರಾಂತ್ಯದಲ್ಲಿ ಸಾಯರೆಕ್ಯೂಸದಂತಹ ಚಿಕ್ಕ ಪಟ್ಟಣಗಳಲ್ಲಿ ೬೦೦-೭೦೦ ಜನ ಅಮೇರಿಕನ್ನರು ಕಾರಿನ ಅಪಘಾತಗಳಿಂದ ಸಾಯುತ್ತಾರೆಂದರೆ ಆಶ್ಚರ್ಯಪಡಬೇಕಾಗಿಲ್ಲ.

ಮಹಿಳೆಯರಿಗಂತೂ ಆಸ್ಪತ್ರೆಗಳೆಂದರೆ ತೌರುಮನೆ ಇದ್ದಂತೆ. ಗರ್ಭವತಿಯಾದ ಲಕ್ಷಣ ಕಾಣುತ್ತಲೆ ಆಸ್ಪತ್ರೆಯ ದರ್ಶನಕ್ಕೆ ಪ್ರಾರಂಭ. ಮೊದಲು ತಿಂಗಳಿಗೊಮ್ಮೆ ಭೆಟ್ಟಿ ಕೊಟ್ಟರೆ ನಂತರ ವಾರಕ್ಕೊಮ್ಮೆ, ಕೊನೆಕೊನೆಗೆ ದಿನಕ್ಕೊಮ್ಮೆ ಆಸ್ಪತ್ರೆಗೆ ಎಡತಾಕುತ್ತಿರುತ್ತಾರೆ. ಪ್ರಸೂತಿಗಾಗಿ ಐದು ದಿನ ಆಸ್ಪತ್ರೆಯಲ್ಲಿ ಇರುವುದು ವಾಡಿಕೆ. ಈ ಐದು ದಿನಕ್ಕೆ ೫೦೦ ಡಾಲರು (೭,೫೦೦ ರೂ.) ತೆರಬೇಕು. ಈ ಹಣವನ್ನೂ ವಿಮಾಕಂಪನಿಯವರೇ ಕೊಡುವದರಿಂದ ಮಾತಾಪಿತೃಗಳು ಅಷ್ಟೊಂದು ವಿಚಾರಕ್ರಾಂತರಾಗಬೇಕಾಗಿಲ್ಲ. ಅಮೇರಿಕೆಯಲ್ಲಿ ಒಂದು ವಿನೋದ ಸಾಮಾನ್ಯವಾಗಿದೆ. ವಿದೇಶಿಯನೊಬ್ಬ ಅಮೇರಿಕನ್ ಮಹಿಳೆಗೆ ಆಕೆಯ ಮನೆ, ಹುಟ್ಟಿದ ಊರು ಇತ್ಯಾದಿಗಳ ಬಗ್ಗೆ ವಿವರ ಕೇಳಿದನಂತೆ. ಆಕೆ ಕೊಟ್ಟ ಉತ್ತರ; "ನಾನು ರೂಪಗೊಂಡಿದ್ದು ಕಾರಿನಲ್ಲಿ, ಹುಟ್ಟಿದ್ದು ಆಸ್ಪತ್ರೆಯಲ್ಲಿ, ಬೆಳೆದದ್ದು ಮಕ್ಕಳಾಡಿಸುವವರ (Baby Sitter) ಆರೈಕೆಯಲ್ಲಿ, ಆಟವಾಡಿದ್ದು ಕಿಂಡರ್ ಗಾರ್ಟನ್ನಿನಲ್ಲಿ, ವಿದ್ಯಾಭ್ಯಾಸ ನಡೆದದ್ದು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ, ಮದುವೆಯಾದದ್ದು ಚರ್ಚಿನಲ್ಲಿ, ಈಗ ವಾಸಿಸುತ್ತಿರುವುದು ಟ್ರೇಲರ್ ಬಸ್ಸಿನಲ್ಲಿ..... ನನಗೆ ಮನೆ, ಊರು ಎಲ್ಲಿವೆ?" ಎಂದು ಮರುಸವಾಲು ಹಾಕಿದಳಂತೆ!

* * *

ನವ್ಯ ಭೂತಗಳು

ಭೂತ-ಪಿಶಾಚಿಗಳಲ್ಲಿ ಅಮೇರಿಕನ್ನರಿಗೆ ಬಹಳ ಆಸಕ್ತಿ. ಅಂತೆಯೇ ಅವುಗಳ ಬಗ್ಗೆ ರೋಮಾಂಚಕ ಕತೆಗಳನ್ನು ಕೇಳಿ ಕೇಳಿ ತಿಳಿದುಕೊಳ್ಳುತ್ತಿದ್ದರು. ನನಗೆ ಸ್ವತಃ ಇವುಗಳಲ್ಲಿ ವಿಶ್ವಾಸವಿಲ್ಲದಿದ್ದರೂ ಯಾಂಕಿಗಳ ಮನರಂಜನೆಗೆಂದು ನಮ್ಮ ಹಳ್ಳಿಗಳಲ್ಲಿ ಪ್ರಚಲಿತವಿದ್ದ, ರಾಹು, ಜಟ್ಟಿ, ಶ್ವೇತಭೂತ, ಜಡೆಮುನಿಗಳ ಕತೆಗಳನ್ನು ಹೇಳುತ್ತಿದ್ದೆ. ಇಂಥ ಕತೆಗಳು ಮಕ್ಕಳಿಗಿಂತ ಹಿರಿಯರಿಗೆ ಹೆಚ್ಚು ಹಿಡಿಸುತ್ತಿದ್ದವು. ಕಥೆ ಕೇಳಿದ ಮೇಲೆ ನೂರಾರು ಪ್ರಶ್ನೆಗಳು; "ನೀನು ಅದನ್ನು ಹಿಂಬಾಲಿಸಿ ಏಕೆ ಹೋಗಲಿಲ್ಲ? ಫೋಟೋಗಳನ್ನೇಕೆ ತೆಗೆಯಲಿಲ್ಲ? ಇತ್ಯಾದಿ." ಇಷ್ಟೆಲ್ಲ ಕಥೆ ತಮಾಷೆಗಳು ನಡೆಯುತ್ತಿದ್ದರೂ ಅಮೇರಿಕೆಯಲ್ಲೇ ಭೂತದರ್ಶನವಾಗಬಹುದೆಂಬ ಮಾತು ನನ್ನ ಕಲ್ಪನೆಯ ಹೊರತಾಗಿತ್ತು.

ಅಂದು ಜುಲೈ ನಾಲ್ಕು. ಅಮೇರಿಕನ್ನರು ಬ್ರಿಟಿಷ್ ಆಡಳಿತದಿಂದ ಮುಕ್ತರಾದ ದಿನ. ಇಡೀ ದೇಶ ಈ ಹಬ್ಬವನ್ನು ಉತ್ಸಾಹದಿಂದ ಆಚರಿಸುತ್ತದೆ. ಕಾಲೇಜಿಗೆ ರಜೆ ಇದ್ದರೂ ನನ್ನಷ್ಟಕ್ಕೆ ಏನೋ ಕೆಲಸ ನಡೆಸಿದ್ದೆ. ಸಾವಕಾಶವಾಗಿ ಸಂಧ್ಯಾದೇವಿ ಭೂಮಿಗಿಳಿದಳು. ದಡದಡ ಬಾಗಿಲು ಬಡಿದ ಸದ್ದಾಯಿತು. ಭಾರತೀಯ ಗೆಳೆಯನೊಬ್ಬ ಒಳಗೆ ಬಂದು 'ರಜೆಯ ದಿನವೇಕೆ ಕೆಲಸ ಮಾಡುತ್ತೀಯಾ?' ಎಂದು ಕಿರಿಚಿಕೊಂಡ. ಬಂದವನಿಗೆಂದು ಕಾಫಿ ಮಾಡಿದೆ. ಅದನ್ನು ಸುರಿಯುತ್ತ ತನ್ನ ಪತ್ನಿ ಯಾವದೊ ಮಹಿಳಾ ಸಮಾಜಕ್ಕೆ ಭಾಷಣ ಕೊಡಲಿಕ್ಕೆ ಹೋಗಿದ್ದಾಳೆಂದು ಹೇಳಿದ. ಆದ್ದರಿಂದಲೇ ಇವನ ಬುದ್ಧಿ ಸ್ಥಿಮಿತದಲ್ಲಿ ಇಲ್ಲವೆಂದು ನನಗೆ ಅರ್ಥವಾಯಿತು. ಚೆನ್ನಾದ ಬೆಳದಿಂಗಳು ಬಿದ್ದಿದೆ. ಎಲ್ಲಿಯಾದರೂ ವಿಹಾರಕ್ಕೆ ಹೋಗೋಣವೆಂದು ಬಲತ್ಕಾರ ಮಾಡಿದ. ತನಗೆ ಇಲ್ಲಿಯ ಅನೇಕ ವಿಹಾರಸ್ಥಳಗಳು ಚೆನ್ನಾಗಿ ಗೊತ್ತಿವೆಯೆಂದೂ ಉತ್ತಮವಾದ ಸ್ಥಳಕ್ಕೆ ಕರೆದುಕೊಂಡು ಹೋಗುತ್ತೇನೆಂದೂ ಆಶ್ವಾಸನವಿತ್ತ.

ಸ್ನೇಹಿತನ ಹಳೆಯ ಕಾರು ಪ್ರಾರಂಭವಾಗಲು ಬಹಳ ನಿರಾಕರಿಸಿತು. ಕೊನೆಗೂ ಟರ್ ಟರ್ ಎಂದು ಹೊರಟಿತು. ಕಾರು ನನ್ನ ಪರಿಚಯದ ರಸ್ತೆ ಬಿಟ್ಟು ಹೊಸದಾದ ಕಿರಿ ರಸ್ತೆಯತ್ತ ಹೊರಳಿತು. ಯಾವದೋ ಹೊಸ ಜಗತ್ತಿಗೇ ಬಂದಂತೆ ಎನಿಸಹತ್ತಿತ್ತು. ಅಂಗಡಿ, ಮನೆ, ದೀಪ ಸಹ ಇಲ್ಲದ ಪ್ರಶಾಂತ ರಸ್ತೆ ಸರೋವರದ ದಂಡೆಗುಂಟ ಹೊರಟಿತ್ತು. ಸರೋವರದ ಆಚೆ ದಂಡೆಯಿಂದ ಉನ್ನತ ಕಟ್ಟಡಗಳ ಸಂದಿಯಲ್ಲಿ ಉದಯಿಸಿ ಬರುತ್ತಿದ್ದ ಚಂದ್ರ ಆಗೀಗ ಕಾಣಿಸಿಕೊಳ್ಳುತ್ತಿದ್ದ. ಆತನ ಸುಂದರ ಶೀತಲ ಕಿರಣಗಳು ಸರೋವರದಲ್ಲಿ ಧುಮುಕಿ ತೆರೆಗಳೊಂದಿಗೆ ಸೇರಿ ನಮ್ಮತ್ತ ಬರುತ್ತಿದ್ದವು. ಸರೋವರದ ದಂಡೆಯ ಮೇಲೆ ನೂರಾರು ಕಾರುಗಳು ಸೈನಿಕ-ಶಿಸ್ತಿನಿಂದ ನಿಂತಿದ್ದವು. ಯಾವ ಕಾರಿನಲ್ಲೂ ಮಾನವರ ಸುಳಿವೇ ಇರದ್ದರಿಂದ ಪಂಕ್ತಿಗೋ, ನೌಕಾವಿಹಾರಕ್ಕೋ ಹೋಗಿರಬೇಕೆಂದು ಭಾವಿಸಿದೆವು. ನಮ್ಮ ಕಾರನ್ನೂ ಅಲ್ಲಿ ನಿಲ್ಲಿಸೋಣವೆಂದು ನನ್ನ ಸ್ನೇಹಿತ ಅಂದನಾದರೂ ಪಾರ್ಕ (park) ಮಾಡಲು ಸ್ಥಳವೇ ಇರಲಿಲ್ಲ. ಸ್ಥಳಕ್ಕಾಗಿ 'ಕ್ಯೂ' ಹಚ್ಚಿ ನಿಲ್ಲ ಬೇಕಾಯಿತು. ಅಂಥ ಸೌಂದರ್ಯಪೂರ್ಣ ಸ್ಥಳವನ್ನು ಬಿಟ್ಟುಹೋಗಲು ಯಾವ ಕಾರಿಗೆ ಮನಸ್ಸಾದೀತು? ಅಂತೂ ಅರ್ಧ ಗಂಟೆ ಕಾದ ಮೇಲೆ ಸ್ಥಳ ಸಿಕ್ಕಿತು. ವೇಗದಿಂದ ಹೋಗಿ ಸ್ಥಳ ಹಿಡಿದೆವು. ಕಾರಿನ ಹೃದಯಮಿಡಿತ ನಿಂತಾಗ ನಮ್ಮ

ಎದುರುಗಿದ್ದ ಸರೋವರ ಇನ್ನೂ ಪ್ರಶಾಂತವಾಗಿ ಕಂಡಿತು. ಆಗೊಮ್ಮೆ ಈಗೊಮ್ಮೆ ಮಂದಮಾರುತನು ಬೀಸಿದಾಗ ಸರೋವರದ ಅಲೆಗಳು ತಮ್ಮ ಮಿನುಗುವ ದಂತಪಕ್ತಿಗಳನ್ನು ತೋರಿಸುತ್ತ ನಮ್ಮನ್ನು ಸ್ವಾಗತಿಸುತ್ತಿದ್ದವು. ಸರೋವರದ ಆಚೆ, ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಮದ್ದುಗುಂಡುಗಳನ್ನು ಹಾರಿಸುತ್ತಿದ್ದ ಸಪ್ಪಳ ಕೇಳಿಸುತ್ತಿತ್ತು. ಆಗಾಗ ಕಣ್ಣು ಕುಕ್ಕುವ ಬೆಳಕು ಝಗ್ಗೆಂದರೆ ಮರುಕ್ಷಣದಲ್ಲಿ ಮತ್ತೆ ಕತ್ತಲು. ಕಾರಿನಲ್ಲಿ ಕುಳಿತು ಕುಡಿಯುತ್ತಿದ್ದುದು 'ಕೋಕೊ-ಕೊಲಾ' ಆದರೂ ಸೆರೆಯಂತೆ ಭಾಸವಾಗುತ್ತಿತ್ತು. "ಅದ್ಭುತವಾಗಿದೆಯಲ್ಲವೇ?" ಎಂದು ಕೇಳಿದ ಪ್ರಶ್ನೆಗೆ ಗೆಳೆಯನ ಉತ್ತರ ಬಾರದ್ದರಿಂದ ಅವನ ಏಕಾಗ್ರತೆಗೆ ಅಡ್ಡಿ ತರಬಾರದೆಂದು ಸುಮ್ಮನಾದೆ.

ಕೆಲ ಹೊತ್ತಿನ ಮೇಲೆ ಗೆಳೆಯನು ಏಕಾಗ್ರಚಿತ್ತದಿಂದ ನೋಡುತ್ತಿದ್ದ ಕಾರುಗಳ ಸಮೂಹದ ಕಡೆಗೆ ನಾನೂ ನೋಡಿದೆ. ಕಾರಿನಲ್ಲಿ ಒಬ್ಬರೂ ಇರಲಿಲ್ಲ. ನೂರಾರು ಕಾರುಗಳಲ್ಲಿ ನೂರಾರು ಜನರಾದರೂ ಇರಬೇಕಲ್ಲವೇ? ಕಾರಿನಲ್ಲಿ ಹೋಗಲಿ ಮಳಲ ದಂಡೆಯಲ್ಲೂ ಒಬ್ಬರೂ ಇರಲಿಲ್ಲ. ನೌಕಾವಿಹಾರವೆಂದರೆ ಒಂದು ನಾವೆಯೂ ಸರೋವರದಲ್ಲಿ ಕಾಣಲಿಲ್ಲ. ಕುತೂಹಲ ತಡೆಯಲಾರದೇ "ಕಾರಿನಲ್ಲಿಯಾಗಲಿ, ಅಕ್ಕಪಕ್ಕದಲ್ಲಿಯಾಗಲಿ ಯಾರ ಸುಳಿವೇ ಇಲ್ಲವಲ್ಲ?" ಎಂದೆ. "ನಾನೂ ಅದನ್ನೇ ನೋಡುತ್ತಿದ್ದೇನೆ ಸುಮ್ಮನಿರು" ಎಂದು ಸನ್ನೆಯಿಂದಲೇ ಸೂಚಿಸಿ ನನ್ನ ಬಾಯಿ ಮುಚ್ಚಿಸಿದ. ನಾನೂ ಕಣ್ಣಲ್ಲಿ ಕಣ್ಣಿಟ್ಟು ಸಂಶೋಧನೆ ಪ್ರಾರಂಭಿಸಿದೆ. ಎವೆಯಿಕ್ಕದೇ ಒಂದೇ ಕಾರಿನತ್ತ ದೃಷ್ಟಿ ನೆಟ್ಟೆ. ಐದು ನಿಮಿಷಗಳ ನಂತರ ಎರಡು ಹೊಳೆಯುವ ಕಣ್ಣುಗಳು ನನ್ನನ್ನೇ ನೋಡುತ್ತಿದ್ದ ಭಾಸವಾಯಿತು. ಅಧೈರ್ಯವಾಯಿತು. ಬೇರೆ ಕಡೆ ನೋಟ ಹೊರಳಿಸಿದೆ. ಮತ್ತೆ ಕಾರಿನತ್ತ ನೋಡಿದಾಗ ಕಣ್ಣುಗಳು ಮಾಯವಾಗಿದ್ದವು. ಒಮ್ಮೆಲೇ ಕಾರು ಮೇಲೆ ಕೆಳಗೆ ಪುಟಿಯಲಾರಂಭಿಸಿತು. "ಇದೇನು ಡ್ರಾಯವರನಿಲ್ಲದೇ, ಇಂಜನ್ನಿನ ಮಿಡಿತವಿಲ್ಲದೇ ಕಾರು ಚಲಿಸುವದೆಂದರೇನು?" ಎಂದು ನಿಜಕ್ಕೂ ನನಗೆ ದಿಗಿಲಾಯಿತು. ಗೆಳೆಯ ತನ್ನ ಶೋಧನೆಯಲ್ಲಿ ತಲ್ಲೀನನಾಗಿದ್ದ. ಕಾರು ಮತ್ತೆ ಶಾಂತವಾಯಿತು. ನಾನು ಭೂತ ಪಿಶಾಚಿಗಳಲ್ಲಿ ನಂಬಿಕೆಯಿಟ್ಟವನಲ್ಲ. ಆದರೆ ಆ ನೋಟ ನಿಜಕ್ಕೂ ದಿಗ್ಭ್ರಾಂತಿಯನ್ನುಂಟು ಮಾಡುವಂತೆ ಇತ್ತು. ಇಪ್ಪತ್ತು ನಿಮಿಷಗಳು ಕಳೆದಿರಬೇಕು. ಕೈಯೊಂದು ಕಾರಿನಿಂದ ಹೊರಗೆ ಬಂದು ಆಚೆ ಕಡೆಯಿಂದ ಟಾವೆಲ್ ಎಳೆದುಕೊಂಡಿತು. ಜೋರಾಗಿ ಶ್ವಾಸ ಕೂಡ ತೆಗೆಯದೆ ನೋಡುತ್ತಿದ್ದೆವು. ಒಮ್ಮಿಂದೊಮ್ಮೆ ಕಾರು ಪ್ರಾರಂಭವಾಗಿ ವಿದ್ಯುತ್‌ವೇಗದಲ್ಲಿ ಓಡಿ ಮಾಯವಾಯಿತು.

ಬರಿದಾದ ಸ್ಥಳದಿಂದ ಆಚೆ ನಿಂತ ಕಾರು ಬೆಳದಿಂಗಳಿನಲ್ಲಿ ಸ್ಪಷ್ಟವಾಗಿ ಕಾಣಲಾರಂಭಿಸಿತು. ಅದರಲ್ಲಿಯೂ ಯಾರ ಸುಳಿವೂ ಇರಲಿಲ್ಲ. ಆದರೆ ಯುವತಿಯ ಹೊರಬಟ್ಟೆಗಳನ್ನು ಕಾರಿನ ಬಾಗಿಲಿಗೆ 'ಹ್ಯಾಂಗರ್' ಮೇಲೆ ತೂಗು ಹಾಕಲಾಗಿತ್ತು. ಕೆಲವು ಭೂತಗಳು ಸುಂದರ ಯುವತಿಯ ರೂಪ ಧರಿಸಿ ನಗ್ನವಾಗಿ ಮನಸ್ಸಿಗೆ ಬಂದಂತೆ ತಿರುಗುತ್ತವೆಂದು ಎಲ್ಲೋ ಓದಿದ ನೆನಪು. ಈ ನಗ್ನ ಭೂತಗಳು ಸರೋವರದಲ್ಲಿ ಜಲಕ್ರೀಡೆಗೆ ಹೋಗಿರಬಹುದೋ ಅಥವಾ ಅದೃಶ್ಯವಾಗಿ ಒಂದು ಕಾರಿನಿಂದ ಇನ್ನೊಂದಕ್ಕೆ ಜಿಗಿಯುತ್ತವೆಯೋ ಎನ್ನುವುದು ತಿಳಿಯಲಿಲ್ಲ. ನಮ್ಮ ಕಾರಿನಲ್ಲಿ ಎಲ್ಲಿ ಹೊಕ್ಕಿದೆಯೋ

ಎಂದು ಎರಡು ಮೂರು ಬಾರಿ ಹಿಂದಿನ ಸೀಟು ನೋಡಿದೆ. ಸೀಟು ಬರಿದಾಗಿತ್ತು. ತಿರುಗಿ ಆ ಕಾರಿನತ್ತ ದೃಷ್ಟಿ ಹಾಯಿಸಿದಾಗ ಎಳೆ ವಯಸ್ಸಿನ ಸುಂದರ ನಗ್ನ ತರುಣಿಯೊಬ್ಬಳು ಅಸ್ತವ್ಯಸ್ತವಾಗಿ ಕೇಶರಾಶಿಯನ್ನು ಹಿಕ್ಕಿಕೊಳ್ಳುತ್ತ ಕುಳಿತಿದ್ದಳು. ಆಮೇಲೆ ಸಾವಧಾವಾಗಿ ಎದ್ದು 'ಹ್ಯಾಂಗರ್' ಮೇಲೆ ಇದ್ದ ಬಟ್ಟೆಗಳನ್ನು ಒಂದೊಂದಾಗಿ ಎಳೆದು ಒಳಗೆ ತೆಗೆದುಕೊಂಡು ಧರಿಸಲಾರಂಭಿಸಿದಳು. ಅವಳ ಮುಖದಲ್ಲಿ ಯಾವ ತರದ ಭಯ, ಭೀತಿ, ಲಜ್ಜೆ, ಕಾತರತೆಗಳೂ ಕಂಡುಬರಲಿಲ್ಲ. ಎಲ್ಲಿಂದಲೋ ಕನ್ನಡಿ, ಲಿಪ್‌ಸ್ಟಿಕ್‌ಗಳು ಅವಳ ಕೈಗೆ ಬಂದವು. ಅವಳಿನ್ನೂ ಹಿಂದಿನ ಸೀಟಿನಲ್ಲಿ ಸಿದ್ಧವಾಗುತ್ತಿದ್ದಾಗಲೇ ಕಾರು ಸ್ಟಾರ್ಟ ಆಗಿ ಓಡಲಾರಂಭಿಸಿತು.

ತೆರವಾದ ಸ್ಥಳದಲ್ಲಿ ಇನ್ನೆರಡು ಕಾರುಗಳು ಬಂದು ನಿಂತವು. ಅವುಗಳನ್ನು ನೋಡುವ ಧೈರ್ಯ ನನಗೆ ಉಳಿಯಲಿಲ್ಲ. "ನನಗೇಕೋ ಹೆದರಿಕೆಯಾಗುತ್ತಿದೆ. ತಿರುಗಿ ಹೋಗೋಣ ನಡಿ" ಎಂದು ಗೆಳೆಯನನ್ನು ಯಾಚಿಸಿದೆ. ಗೆಳೆಯ ನಗುತ್ತ "ಮಂಕೇ ಈ ಆಧುನಿಕ ಭೂತಪಿಶಾಚಿಗಳಿಗೆ ಹೆದರುತ್ತಾರೇನಯ್ಯಾ? ಅವುಗಳ ವಿವಿಧ ಮಾಯಾಜಾಲ ನೋಡಿ ಆನಂದಿಸುವುದನ್ನು ಬಿಟ್ಟು ಹೋಗಬೇಕೇ? ಭಾರತದಲ್ಲಿ ಎಷ್ಟು ಹಣ ಸೂರೆ ಮಾಡಿದರೆ ತಾನೇ ನಿನಗೆ ಈ ನೋಟ ಸಿಕ್ಕೀತು? ತಿರುಗಿ ಹೋಗಲೇಬೇಕೆನಿಸಿದರೆ ಹೋಗೋಣವಂತೆ" ಎಂದು ಕಾರನ್ನು ಸ್ಟಾರ್ಟಮಾಡಿದ. ಇತರ ಕಾರುಗಳ ನಡುವೆ ನಮ್ಮ ಕಾರು ಹಾಯ್ದು ಹೋಗುತ್ತಿದ್ದಂತೆ ಹೆಣ್ಣು ಭೂತಗಳ ಸಂಗಡ ಗಂಡುಭೂತಗಳೂ ಗೋಚರಿಸಿದವು! ಕಾರು ಊರಿನತ್ತ ಹೊರಟಾಗ ಗೆಳೆಯ ಈ ಭೂತಗಳ ಕೆಲವು ಸ್ವಾರಸ್ಯಮಯ ಕತೆಗಳನ್ನೂ ಹೇಳಿದ. ಅನಂತರ ಆತ ಹಲವು ಸಲ 'ಭೂತದರ್ಶನ'ಕ್ಕಾಗಿ ಕರೆದನಾದರೂ ನಾನು ಹೋಗಲಿಲ್ಲ. ಆತ ಇತರರೊಡನೆ ಆಗೀಗ ಹೋಗಿ ಬಂದು ಅಂದಿನ ಘಟನೆಗಳನ್ನು ರಸವತ್ತಾಗಿ ಬಣ್ಣಿಸುತ್ತಿದ್ದ. ಪುರಾತನ ಭೂತಗಳು ಸಾಕಷ್ಟು ಇರುವ ನಮ್ಮ ದೇಶದಲ್ಲಿ ಈ ನವ್ಯಭೂತಗಳ ಆಗಮನವಾಗದಿರಲೆಂದು ಒಳಗೊಳಗೇ ಬೇಡಿಕೊಂಡೆ.

* * *

ಇದೂ ಇದೆಯೇ?

ಕಾಲೇಜಿನ ಪ್ರಯೋಗಶಾಲೆಯಲ್ಲಿ ಕೆಲಸಕ್ಕೆ ಎಲ್ಲ ಸೌಕರ್ಯಗಳಿದ್ದುದ್ದರಿಂದ ಇಡೀ ದಿನವಷ್ಟೇ ಅಲ್ಲದೇ ರಾತ್ರಿಯೂ ಬಹಳ ಹೊತ್ತಿನ ತನಕ ಕಾಲೇಜಿನಲ್ಲಿರುತ್ತಿದ್ದೆ. ಅಂದಿನ ಕೆಲಸ ಮುಗಿಸಬೇಕಾದರೆ ರಾತ್ರಿಯ ಒಂದು ಗಂಟೆಯಾಗಿ ಹೋಗಿದೆ. ಕಟ್ಟಡದ ಮೂರನೇ ಅಂತಸ್ತಿನ ಮೇಲಿನ ಪ್ರಯೋಗಶಾಲೆಯಿಂದ ನಾಲ್ಕನೇ ಅಂತಸ್ತಿನಲ್ಲಿದ್ದ ನನ್ನ ಆಫೀಸಿಗೆ ಹೋದೆ. ಆಫೀಸಿನ ಹೊರಗೆ ವಿದ್ಯಾರ್ಥಿಯೊಬ್ಬ ಸಿಗರೇಟು ಸೇದುತ್ತ 'ಕಲಾವಿದ್ಯಾರ್ಥಿಗಳು ಇಲ್ಲಿಯೆ ಇರುತ್ತಾರೆಯೇ?" ಎಂದು ಕೇಳಿದ. ಕಲಾವಿದ್ಯಾರ್ಥಿಗಳು ರಾತ್ರಿ ಕೆಲಸ ಮಾಡುವುದು ಹೆಚ್ಚು. ಆದರೆ ಅಂದು ಏಕೋ ಬಂದಿರಲಿಲ್ಲ. "ಇಲ್ಲ" ಎಂದು ಹೇಳಿ ನನ್ನ ಆಫೀಸ್ ಕೋಣೆಯ ಬಾಗಿಲನ್ನು ತೆಗೆಯಹೋದೆ. ಕೀಲಿ ತೆಗೆದಿತ್ತು. ನಾನೇ ಹಾಕಲು ಮರೆತಿರಬೇಕೆಂದುಕೊಂಡೆ. ಅಷ್ಟರಲ್ಲಿ ಸಿಗರೇಟು ಸೇದುತ್ತಿದ್ದವ "ಖೋಲಿಯಲ್ಲಿ ಯಾರೋ ಒಬ್ಬರು ಇದ್ದಾರೆ" ಎಂದ. ಅವನ ಮಾತಿನ ಅರ್ಥವಾಗದೇ ಖೋಲಿಯೊಳಗೆ ಹೋಗಿ ದೀಪ ಹಾಕಿದೆ. ನನ್ನ ಆಫೀಸಿನಲ್ಲಿ ವಿದ್ಯಾರ್ಥಿಯೊಬ್ಬನಿದ್ದ! ಧ್ವನಿ ಎತ್ತರಿಸಿ "ನನ್ನ ಆಫೀಸಿನಲ್ಲಿ ನಿನಗೇನು ಕೆಲಸ?" ಎಂದೆ. ಅಷ್ಟಕ್ಕೆ ಆತ ಅಳುಕಿ ಸಣ್ಣಗಾಗಿಹೋದ. ಅಷ್ಟರಲ್ಲಿ ಹೊರಗಿನವನು ಬಂದು "ನಮ್ಮ ಕೆಲವು ಸಾಮಾನು ಕಳವಾಗಿ ಹೋಗಿವೆ. ಕಲಾ-ಕ್ಲಾಸಿನ ವಿದ್ಯಾರ್ಥಿಗಳು ಕದ್ದಿರಬೇಕೆಂಬ ಅನುಮಾನ ನಮಗಿದೆ. ಈ ಕೋಣೆಯೂ ಅವರಿಗೇ ಸೇರಿರಬೇಕೆಂದು ತಿಳಿದು ಹುಡುಕುತ್ತಿದ್ದೆವು." ಎಂದು ಹೇಳಿದ. "ಹುಡುಕುತ್ತಿದ್ದುದು ಕಳವಾದ ಸಾಮಾನೋ ಕದೀಬೇಕೆಂದಿರುವ ಸಾಮಾನೋ?" ಎಂದು ಕೇಳಬೇಕೆಂದಿದ್ದೆ. ಆದರೆ ಅವರು ಇಬ್ಬರಿದ್ದರು, ನಾನೊಬ್ಬನೇ, ಹತ್ತಿರದಲ್ಲಿ ಇನ್ನಾರೂ ಇರಲಿಲ್ಲ. ಆದ್ದರಿಂದ "ಹೀಗೆ ಬೇರೊಬ್ಬರ ಕೋಣೆಯಲ್ಲಿ ಅಪರಾತ್ರಿ ಬರುವುದು ಸರಿಯಲ್ಲ" ಎಂದು ಅವರಿಗೆ ಹೋಗ ಹೇಳಿದ. ಪೋಲಿಸರಿಗೆ ತಿಳಿಸೋಣವೆಂದರೆ ಹತ್ತಿರದಲ್ಲಿ ಫೋನೂ ಇರಲಿಲ್ಲ. ಸರಿ ಸಾಮಾನೇನಾದರೂ ದೆಕಳುವಾಗಿದೆಯೇ ಎಂದು ಕೋಣೆ ತುಂಬ ನೋಡಿದೆ. ಕಳವಾಗುವದರ ಬದಲಾಗಿ ಒಂದು ಹೊಸ ಚೀಲ ಕೋಣೆಯಲ್ಲಿತ್ತು! ತೆಗೆದು ನೋಡಿದರೆ ಮೂರು-ನಾಲ್ಕು ಸಾವಿರ ರೂಪಾಯಿಯ ಬೆಲೆಬಾಳುವ ಸೂಕ್ಷ್ಮದರ್ಶಕ ಯಂತ್ರವೊಂದಿತ್ತು. ಈಗೇನು ಮಾಡುವದೆಂದು ಯೋಚಿಸಿದೆ. ಮನೆಗೆ ಒಯ್ಯೋಣವೆಂದರೆ ಅವರೆಲ್ಲಿಯಾದರೂ ಅವಿತು ನಿಂತು ಆಕ್ರಮಿಸಿಯಾರು ಎಂಬ ಅಂಜಿಕೆಯಿತ್ತು. ಆದ್ದರಿಂದ ಆಫೀಸ ಕೋಣೆಯ ಕಿಟಕಿಗಳ ಬಾಗಿಲುಗಳನ್ನೆಲ್ಲಾ ಭದ್ರವಾಗಿ ಮುಚ್ಚಿ, ಬೀಗ ಸರಿಯಾಗಿ ಹಾಕಿ ಮನೆಗೆ ಬಂದು ಮಲಗಿದೆ.

ಮರುದಿನ ಬೆಳಿಗ್ಗೆ ಬೇಗ ಎದ್ದು ಎಲ್ಲರಿಗಿಂತ ಮೊದಲು ಬಂದು ಆಫೀಸ ಕೋಣೆಯ ಬಾಗಿಲು ತೆಗೆದು ನೋಡುತ್ತೇನೆ-ಚೀಲ ಮಾಯವಾಗಿತ್ತು! ಕಳ್ಳರ ಹತ್ತಿರ ಈ ಎಲ್ಲ ಕೋಣೆಗಳ ಕೀಲಿಕೈಗಳು ಇರುವುದು ಖಂಡಿತವಾಯಿತು. ಪ್ರಾಧ್ಯಾಪಕರಿಗೆ ನಡೆದ ಘಟನೆಯನ್ನು ಹೇಳಿದೆ. ಅವರು ಸಂಭವಿಸಿದ್ದೆಲ್ಲವನ್ನು ಬರೆದುಕೊಡಲು ಹೇಳಿದರು. ಆಮೇಲೆ ನನ್ನ ಅಮೇರಿಕನ್ ಸಹಪಾಠಿಯೊಬ್ಬನ ಕೋಣೆಯಿಂದ

ಸೂಕ್ಷ್ಮದರ್ಶಕ ಯಂತ್ರ ಕಳುವಾದದ್ದು ಗೊತ್ತಾಯಿತು. ಪೋಲಿಸರಿಗೆ ತಿಳಿಸಲಾಯಿತು. ಅವರು ಕಳ್ಳರ ಬದಲು ನನ್ನ ಬೆನ್ನುಹತ್ತಿಬಿಟ್ಟರು! ಹಗಲೆಂದಿಲ್ಲ, ರಾತ್ರಿಯೆಂದಿಲ್ಲ; ಕಾಲೇಜಿನಲ್ಲಿ, ಮನೆಯಲ್ಲಿ; ಓದುತ್ತಿರುವಾಗ, ಊಟ ಮಾಡುತ್ತಿರುವಾಗ ಈ ಪೋಲಿಸರು ಬಂದು ಬಂದು ನನ್ನನ್ನು ಕಾಡಿಸುವರು. ಕೊನೆಗೂ ಕಳ್ಳನು ಸಿಗದಿದ್ದರೆ ಎಲ್ಲಿ ನನ್ನನ್ನೇ ಹಿಡಿದು ಜೈಲಿನಲ್ಲಿ ಹಾಕುತ್ತಾರೋ ಎಂದು ಹೆದರಿಕೆಯಾಗಹತ್ತಿತ್ತು. ನಂತರ ಕಾಲೇಜಿನ ಎಲ್ಲ ವಿದ್ಯಾರ್ಥಿಗಳ ಫೋಟೋಗಳನ್ನು ನೋಡಿ ಅದರಲ್ಲಿ ಯಾರಾದರೂ ಇದ್ದಾರೋ ಎಂದು ನೋಡಲು ಹೇಳಿದರು. ಒಂದು ದಿನ ಕುಳಿತು ಎಲ್ಲ ಫೋಟೋಗಳನ್ನು ನೋಡಬೇಕಾಯಿತು. ಒಬ್ಬನ ಗುರುತುಹತ್ತಿತು. ಆದರೆ ಪೋಲೀಸನವರಿಗೆ ಅವನೇ ಕದ್ದದ್ದು ಎಂದು ನಾನು ಬರೆದುಕೊಡಬೇಕಂತೆ! ಅದು ಸಾಧ್ಯವಿಲ್ಲ ಎಂದಾಗ ಕೇಸು ಅಲ್ಲಿಯೇ ಕುಸಿಯಿತು. ಪೋಲಿಸರಿಗಾದರೂ ಕಳ್ಳನನ್ನು ಹಿಡಿಯುವುದು ಎಳ್ಳಷ್ಟೂ ಮನಸ್ಸಿರಲಿಲ್ಲ.

ಇನ್ನೊಂದು ರಾತ್ರಿ ಹನ್ನೊಂದು ಗಂಟೆ ಸುಮಾರಿಗೆ ಮನೆಗೆ ಹೊರಟಿದ್ದೆ. ಕಾರೊಂದು ನನ್ನ ಮುಂದಿನಿಂದ ಹಾದು ಹೋಗಿ ನಿಂತಿತು. ಅದರೊಳಗಿನಿಂದ ಒಬ್ಬ ನಿಗ್ರೊ ಹೊರಗೆ ಬಂದ. ಅವನತ್ತ ಲಕ್ಷ್ಯ ಕೊಡದೇ ನನ್ನ ಸಮಸ್ಯೆಗಳನ್ನು ಯೊಚಿಸುತ್ತ ಹೊರಟಿದ್ದೆ. ರೊಂಯ್ ಎಂದು ಕಲ್ಲೊಂದು ನನ್ನ ಕಿವಿಯ ಹತ್ತಿರದಿಂದ ಹೋಗಿ ಉರುಳಿತು. ತಿರುಗಿ ನೋಡಿದೆ. ಆ ನಿಗ್ರೊ ಕೈತುಂಬ ಕಲ್ಲುಗಳನ್ನು ಹಿಡಿದು ನನ್ನತ್ತ ಬೀಸುತ್ತಿದ್ದ. ಒಂದರ ಹಿಂದೊಂದು ಐದಾರು ಕಾರು ಹೋಗುತ್ತಿದ್ದರೂ ಯಾರೊಬ್ಬರೂ ನಿಲ್ಲಿಸಿ ನನ್ನ ಸಹಾಯಕ್ಕೆ ಬರಲಿಲ್ಲ. ಸರಿ, ಪಲಾಯನವೊಂದೇ ಮಾರ್ಗವೆಂದು ಕಾಲಿಗೆ ಬುದ್ಧಿ ಹೇಳಿದೆ. ಮನೆ ಬಂದಾಗಲೇ ನಿಂತಿದ್ದು.

ಕೆಲ ದಿನಗಳ ನಂತರದ ಮಾತಿದು. ಕಾಲೇಜಿನಲ್ಲಿ ತಲೆ ಕೆಳಗೆ ಹಾಕಿ ಏನೋ ಬರೆಯುತ್ತಿದ್ದೆ. ನನ್ನ 'ರೂಮ್-ಮೇಟ್' ತೇಕುತ್ತ ಬಂದು "ಇದೀಗ ಮನೆಯಿಂದ ಬಂದೆಯಾ" ಎಂದು ಕೇಳಿದ. ಇಲ್ಲವೆಂದಾಗ "ನಿನ್ನ ಟ್ರಂಕ್, ಸಾಮಾನುಗಳೆಲ್ಲಾ ಅಸ್ತವ್ಯಸ್ತವಾಗಿ ಹರಡಿಕೊಂಡಿವೆ" ಎಂದು ಹೇಳಿದ. ಲಗುಬಗೆಯಿಂದ ಮನೆಗೆ ಧಾವಿಸಿದೆ. ನನ್ನ ಕ್ಯಾಮರಾ ಹೊರಗೆ ಸೋಫಾದ ಮೇಲೆ ಬಿದ್ದಿತ್ತು. ಸಾಮಾನುಗಳೆಲ್ಲ ಕೋಣೆಯ ತುಂಬ ಹರಡಿ ಬಿದ್ದಿದ್ದವು. ಟ್ರಂಕಿನೊಳಗಿನ ಬಟ್ಟೆಗಳೆಲ್ಲ ಯುದ್ಧಭೂಮಿಯಲ್ಲಿ ಸತ್ತುಬಿದ್ದ ಸೈನಿಕರಂತೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಒಳಗಿನಿಂದ ಹತ್ತು ಡಾಲರಿನ ನೋಟೊಂದು ಮಾಯವಾಗಿತ್ತು. ಅಂದು ಸಂಜೆ ನನ್ನ ಇನ್ನಿಬ್ಬರ ಸಹಪಾಠಿಗಳು ಮನೆಯಲ್ಲಿ ಇದ್ದರು. ಒಬ್ಬನು ತನ್ನ ಕೋಣೆಯಲ್ಲಿ ಓದುತ್ತ ಮಲಗಿದ್ದ. ಇನ್ನೊಬ್ಬ ಬಟ್ಟೆ ತೊಳೆಯಲು ಯಂತ್ರದತ್ತ ಹೋಗಿದ್ದ. ಬಾಗಿಲಿಗೆ ಬೀಗವಿಲ್ಲದ್ದರಿಂದ ಯಾರೋ ಮೆಲ್ಲಗೆ ನನ್ನ ಕೋಣೆಗೆ ಹೋಗಿರಬೇಕು. ಲಾಂಡ್ರಿಗೆ ಹೋದವನು ಯಾವಾಗ ಬರುತ್ತಾನೆಂದು ಕಾದ ಇನ್ನೊಬ್ಬನು ಸಂಜ್ಞೆ ಕೊಡಲು ಹೊರಗೆ ಕಾದಿದ್ದನೆಂದು ತೋರುತ್ತದೆ. ಸಾಬೂನು ಮರೆತದ್ದರಿಂದ ಸಹಪಾಠಿ ಬೇಗನೇ ಮನೆಗೆ ಬಂದ. ಅನಿರೀಕ್ಷಿತವಾಗಿ ಆತ ಬಂದದ್ದರಿಂದ ಹೆಚ್ಚಿನದನ್ನು ದೋಚಿಕೊಂಡು ಹೋಗಲಿಕ್ಕೆ ಕಳ್ಳರಿಗೆ ಅವಕಾಶ ದೊರೆಯಲಿಲ್ಲ. ಪೋಲಿಸರ ಕಾಟವೇ ಬೇಡವೆಂದು ಅವರಿಗೆ ತಿಳಿಸುವ ಗೋಜಿಗೇ ಹೋಗಲಿಲ್ಲ.

ಅಂದು ರವಿವಾರ, ಸಹಪಾಠಿಗಳು ಸಿನೇಮಕ್ಕೆ ಹೋಗಿದ್ದರು. ಹೊಟ್ಟೆತುಂಬ ಊಟ ಮಾಡಿದ ನನಗೆ ಕೂತಲ್ಲಿಯೇ ಸ್ವಲ್ಪ ಜೊಂಪುಹತ್ತಿತ್ತು. ಯಾರೋ ಬಾಗಿಲ ಮೇಲೆ ಟಕ್ ಟಕ್ ಎಂದು ಬಡಿದರು. ಕೂಡಲೇ ಏಳದೇ ಮತ್ತೆ ಕಣ್ಣು ಮುಚ್ಚಿದೆ. ಬಡಿತ ಜೋರಾಗುತ್ತ ನಡೆಯಿತು. ಓಡಿ ಹೋಗಿ ಬಾಗಿಲು ತೆರೆದೆ. ಪರಿಚಯದ ಭಾರತೀಯ ವಿದ್ಯಾರ್ಥಿನಿಯೊಬ್ಬಳು ಮಾತಾಡಲೂ ಬಾರದಷ್ಟು ಜೋರಾಗಿ ತೇಕುತ್ತ ಬಾಗಿಲಲ್ಲಿ ಬಂದು ನಿಂತಿದ್ದಳು. ಬಾಗಿಲು ತೆರೆಯುತ್ತಲೇ ಓಡಿ ಬಂದು ಸೋಫಾದಲ್ಲಿ ಕುಸಿಬಿದ್ದಳು. ಏನೋ ವಿಶೇಷ ಘಟನೆ ಸಂಭವಿಸಿರಬೇಕೆಂದು ಅವಳಿಗೆ ವಿಶ್ರಮಿಸಹೇಳಿ ಕಾಫಿ ತಯಾರಿಸಿ ತಂದು ಕೊಟ್ಟೆ. ಆಗ ಹೋದ ಜೀವ ಮರಳಿ ಬಂದಂತಾಗಿರಬೇಕು ಆಕೆಗೆ. ಸಾವಕಾಶವಾಗಿ ತನ್ನ ಅನುಭವವನ್ನು ಹೇಳಿದಳು.

ಕಾಲೇಜಿನಿಂದ ಆಕೆ ಮನೆಗೆ ಹೊರಟಿದ್ದಳಂತೆ. ದಾರಿಯಲ್ಲಿ ನಿಗ್ರೊನೊಬ್ಬ ಇವಳನ್ನು ನೋಡಿ ಹಾಡಲಾರಂಭಿಸಿದನಂತೆ.

ನಿನ್ನ ಸುಕೋಮಲ ತುಟಿಗಳು ನನಗಾಗಿವೆ ಪ್ರಿಯೆ,
ಮನದನ್ನೆ ನಿನ್ನ ಪ್ರೀತಿ ನನಗೆ ಮೀಸಲಲ್ಲವೇ?
ಎನ್ನೆದೆಯ ಅಳುಕನ್ನು ತೆಗೆದು ಹಾಕೇ
ನನ್ನ ಪ್ರೀತಿಯ ತೊರೆ ನಿನಗಾಗಿ ಇರಲಿ
ನನ್ನ ತುಟಿ, ಬಾಹುಗಳು ನಿನ್ನೊಟ್ಟಿಗಿರಲಿ
ನಾನು ಬೇಡವಾದರೆ ಜೀವವಾದರೂ ತೆಗೆ ಬಾರೆ*

ಹಾಡುತ್ತ ಎದ್ದು ಆಕೆಯನ್ನು ಹಿಂಬಾಲಿಸಿದನಂತೆ. ಈಕೆ ವೇಗವಾಗಿ ನಡೆಯ ತೊಡಗಲು ತಾನೂ ಅಷ್ಟೇ ವೇಗದಿಂದ ಹಿಂಬಾಲಿಸಿದನಂತೆ. ಈಕೆ ಓಡಲಾರಂಭಿಸಿದಾಗ ತಾನೂ ಓಡಿದನಂತೆ. ಒಬ್ಬಳೇ ಇರುವ ತನ್ನ ಕೋಣೆಗೆ ಹೋಗುವುದು ಕ್ಷೇಮವಲ್ಲವೆಂದು ದಾರಿಯಲ್ಲೇ ಇದ್ದ ನಮ್ಮ ಮನೆಗೆ ಬಂದಳಂತೆ.

ಕೊನೆಗೆ ಸಹಪಾಠಿಗಳ ಕಾವಲಿನಲ್ಲಿ ಅವಳನ್ನು ಅವಳ ಕೋಣೆಗೆ ತಲುಪಿಸಿದ್ದಾಯಿತು.

ಸಾಯರೆಕ್ಯೂಸದಲ್ಲಿ ಓದುವ ಭಾರತೀಯ ವಿದ್ಯಾರ್ಥಿನಿಯರು ಅಮೇರಿಕನ್ ವಿದ್ಯಾರ್ಥಿನಿಯರ ಮೇಲೆ ಚೆನ್ನಾಗಿ ಕಾವಲಿಡುತ್ತಾರೆಂಬ ನಂಬಿಕೆಯಿದೆ. (ಇವರು dating ಅಥವಾ ರಾತ್ರಿ ತಿರುಗಾಟ, ಕ್ಲಬ್-ಜೀವನಗಳಿಂದ ದೂರವಿರುತ್ತಾರೆ) ಹೀಗಾಗಿ ಮಹಿಳೆಯರ ವಸತಿಗೃಹಗಳಿಗೆ ಭಾರತೀಯ ವಿದ್ಯಾರ್ಥಿನಿಯರನ್ನು ಹೆಚ್ಚಾಗಿ 'ವಾರ್ಡನ್' ಎಂದು ಆರಿಸುತ್ತಾರೆ. ಈ ಕೆಲಸಕ್ಕಾಗಿ ಅವರಿಗೆ ಪುಕ್ಕಟೆ ವಸತಿಯಲ್ಲದೆ ಸ್ವಲ್ಪ ಸಂಬಳವನ್ನೂ ವಿಶ್ವವಿದ್ಯಾಲಯದವರು ಕೊಡುತ್ತಾರೆ. ರಜೆಯಲ್ಲಿ ವಿದ್ಯಾರ್ಥಿನಿಯರು ಹೊರಗಡೆ ಹೋದರೂ 'ವಾರ್ಡನ್' ಹಾಸ್ಟೇಲಿನಲ್ಲೇ ವಾಸಿಸುವ ವಾಡಿಕೆ. ಇಂತಹ ರಜೆಯಲ್ಲಿ ಭಾರತೀಯ 'ವಾರ್ಡನ್' ಒಬ್ಬಳೇ ಒಂದು ರಾತ್ರಿ ವಸತಿಗೃಹದಲ್ಲಿ ಮಲಗಿದ್ದಳು. ಮಧ್ಯರಾತ್ರಿ ಫೋನು 'ಟ್ರಿನ್' ಎಂದಿತು. ಫೋನು ಎತ್ತಿಕೊಂಡಾಗ ಆ ಕೊನೆಯಿಂದ ಪ್ರೇಮಸಲ್ಲಾಪ ಬರಲಾರಂಭಿಸಿತು. ಯಾರದೋ ಕುಚೇಷ್ಟೆ ಇದು ಎಂದು ಹಾಗೇ

* ಅಮೇರಿಕೆಯಲ್ಲಿ ಜನಪ್ರಿಯವಾದ ಪ್ರಣಯಗೀತವೊಂದು

ಫೋನು ಬಡಿದು, ತಿರುಗಿ ಬಂದು ಮಲಗಿದಳಂತೆ. ತಿರುಗಿ ಫೋನು ಕರೆ ಬಂದಿತು. ಮತ್ತೆ ಎತ್ತಿದಾಗ "ಪ್ರಿಯೆ ನನ್ನ ಮೇಲೆ ಸಿಟ್ಟಿದೆಯೇನು? ನಾನು ಎಷ್ಟು ದಿನಗಳಿಂದ ನಿನಗಾಗಿ ಕಾದಿದ್ದೇನೆ, ಈ ರಾತ್ರಿ ನಿನ್ನೊಡನೆ ಕಳೆಯಬೇಕೆಂದಿದ್ದೇನೆ. ಇನ್ನು ಅರ್ಧ ಗಂಟೆಯಲ್ಲಿ ನಿನ್ನ ಕೋಣೆಯಲ್ಲಿರುತ್ತೇನೆ. ಏನಿದ್ದರೂ ಇಂದು...." ಮಾತು ಕೇಳುತ್ತಿದ್ದಂತೆ ಆಕೆಯ ಎದೆ ಜೋರಾಗಿ ಬಡಿದುಕೊಳ್ಳಲಾರಂಭಿಸಿತಂತೆ. ಮುಂದೆ ಏನು ಮಾಡಬೇಕೆಂದು ಯೋಚಿಸುವುದರಲ್ಲಿ ಹತ್ತು ಹದಿನೈದು ನಿಮಿಷ ಕಳೆದವಂತೆ. ಅನಂತರ ಲಗುಬಗೆಯಿಂದ ಫೋನು ಮಾಡಿ ತನ್ನ ಪರಿಚಯದ ಇಬ್ಬರು ಭಾರತೀಯರನ್ನು ಕರೆಸಿಕೊಂಡಳು. ಪೋಲಿಸರಿಗೆ ದೂರು ಕೊಡಲಾಯಿತು. ಅವರು ಯಾರಾದರೂ ಸುಳಿದಾಡಿದರೆ ತಿಳಿಸುತ್ತೇವೆ ಎಂದು ಹೇಳಿ ಕಾವಲು ಇಡಿಸಿದರಂತೆ. ಒಬ್ಬರೂ ಅತ್ತ ಹಾಯಲಿಲ್ಲ. ಈ ಮಹಿಳೆ ತಿರುಗಿ ಎಂದೂ ಒಬ್ಬಂಟಿಗಳಾಗಿ ಇರುವ ಗೋಜಿಗೇ ಹೋಗಲಿಲ್ಲವಂತೆ.

ಅಮೇರಿಕನ್ನರೂ ಇಂಥ ಕಾಟದಿಂದ ಮುಕ್ತರಾಗಿಲ್ಲ. ವಿದ್ಯಾರ್ಥಿನಿಯರ ಮೇಲೆ ಆಗೀಗ ಬಲಾತ್ಕಾರಗಳೂ ಆಗುವುದುಂಟು. "ವಿದ್ಯಾರ್ಥಿ-ಕಳ್ಳರು" ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ವಿಶ್ವವಿದ್ಯಾಲಯದ ಪುಸ್ತಕಾಲಯದಲ್ಲಿ ಕಳವು ಮಾಡಿದ ವಿದ್ಯಾರ್ಥಿನಿಯರೂ ಸಿಕ್ಕುಬಿದ್ದಿದ್ದೂ ಉಂಟು. ಪೋಲಿಸರ ಕಾರಿನ ಟಾಯರ್‌ಗಳನ್ನು ಕದ್ದ ಸಾಹಸಿಗಳೂ ಇದ್ದಾರೆ. ನಿಲ್ಲಿಸಿದ ಕಾರುಗಳ ಪೆಟ್ರೋಲ್ ಮತ್ತು ಟಾಯರುಗಳನ್ನು ಕದಿಯುವುದು ಸಾಮಾನ್ಯದ ಮಾತು. ಹುಡುಗರಿಗೆ ಕುಡಿತ. ಕುಣಿತ, ಡೇಟಿಂಗ್ ಮೊದಲಾದವುಗಳಿಗೆ ಹಣ ಬೇಕಷ್ಟೇ? ನಿಲ್ಲಿಸಿದ ಕಾರು ಕಂಡರೆ ಕೀಲಿ ಮುರಿದು ಅದನ್ನು ಏರಿ ಪೆಟ್ರೋಲ್ ಮುಗಿಯುವವರೆಗೂ ಅದನ್ನು ನಡೆಸಿ ನಂತರ ರಸ್ತೆಯ ಬದಿಗೆ ನಿಲ್ಲಿಸಿ ಫರಾರಿಯಾಗುತ್ತಾರೆ. ರೊಕ್ಕ ಬೇಕಾಗಿದ್ದರೆ ಕಾರಿನಲ್ಲಿ ಹೋಗುವ ಮುದುಕಿಯನ್ನು ಹಿಡಿದು ಜಬರಿಸಿಯೋ, ಗುಂಪುಗಟ್ಟಿ ಬಂದು ಅಂಗಡಿಗಳನ್ನು ಲೂಟಿ ಮಾಡಿಯೋ ಹಣ ದೊರಕಿಸಿಕೊಳ್ಳುತ್ತಾರೆ. ಇಂತಹ ಚಟುವಟಿಕೆಗಳು ಕಾಲೇಜಿನ ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿ ಕಂಡುಬಂದರೆ, ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳೂ ಇವರಿಗೆ ಕಡಿಮೆಯಿಲ್ಲ. ಅವರ ಕೋಲಾಹಲ ಬೇರೆ ರೀತಿಯಲ್ಲೂ ಇದೆ. ಅವರಲ್ಲಿ ಅನೇಕರು ಶಿಕ್ಷಕರನ್ನು ಬಡಿದದ್ದುಂಟು. ಹದಿನೈದು ದಿನಗಳಲ್ಲಿ ಮೂವತ್ತು-ನಾಲ್ವತ್ತು ಶಿಕ್ಷಕ-ಶಿಕ್ಷಕಿಯರು ಇಂಥ ಶಿಕ್ಷೆಗೆ ಗುರಿಯಾಗಿದ್ದರು. ಹದಿನಾಲ್ಕು ವರ್ಷದ ಹುಡುಗಿಯೊಬ್ಬಳು ಶಾಲೆಗೆ ತಡವಾಗಿ ಬಂದಳಂತೆ. ವರ್ಗದ ಶಿಕ್ಷಕಿ ಪರೀಕ್ಷೆ ತೆಗೆದುಕೊಳ್ಳುತ್ತಿದ್ದಳು. ತಡಮಾಡಿ ಬಂದ ವಿದ್ಯಾರ್ಥಿನಿಯರು ಪ್ರಿನ್ಸಿಪಾಲರಿಂದ ಪರವಾನಿಗೆ ಚೀಟಿ ತರುವುದು ರೂಢಿ. ಶಿಕ್ಷಕಿ ಚೀಟಿ ಕೇಳಿದ್ದಕ್ಕೆ ವಿದ್ಯಾರ್ಥಿನಿ ಚಂಡಿಯ ಅವತಾರ ತಾಳಿ ಶಿಕ್ಷಕಿಯ ಮೇಲೆ ಏರಿ ಹೋಗಿ ಸಿಕ್ಕ ಹಾಗೆ ಬಡಿದಳಂತೆ. ಇನ್ನೊಬ್ಬ ವಿದ್ಯಾರ್ಥಿ ಶಿಕ್ಷಕನಿಗೆ ಹೊಡೆಯುತ್ತೇನೆಂದು ಖುರ್ಚಿಯನ್ನು ಎತ್ತಿಕೊಂಡು ಹೋಗಿ ಶಿಕ್ಷಕನು ಓಡಿಹೋದಲ್ಲೆಲ್ಲ ಬೆನ್ನುಹತ್ತಿದ್ದನಂತೆ. ಇನ್ನೊಬ್ಬ ವಿದ್ಯಾರ್ಥಿ ಶಿಕ್ಷಕನನ್ನು ಚಾಕುವಿನಿಂದ ಇರಿದನಂತೆ. ಪಿಸ್ತೂಲು ತಂದು ವಿದ್ಯಾರ್ಥಿಯೊಬ್ಬ ಶಿಕ್ಷಕನಿಗೆ ಬೆದರಿಕೆ ಹಾಕಿದನಂತೆ. ವಿದ್ಯಾರ್ಥಿಗಳ ಅವಿವೇಕತನ ಪ್ರತಿವರ್ಷ ಹೆಚ್ಚುತ್ತ ಹೋಗಿದೆಯಂತೆ. ಪ್ರತಿ ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಒಡೆದ ಕಾಜುಗನ್ನಡಿ, ಮುರಿದ ಖುರ್ಚಿ-ಟೇಬಲ್ಲುಗಳನ್ನು ರಿಪೇರಿ ಮಾಡಲು ಸಾವಿರಾರು ಡಾಲರು ಖರ್ಚಾಗುತ್ತದಂತೆ.

ವಿದ್ಯಾರ್ಥಿಗಳು ತಮ್ಮ ಮಿತ್ರವೃಂದವನ್ನು ಕರೆದು ಪಾರ್ಟಿಕೊಡುವುದು ವಾಡಿಕೆ. ಇಂತಹ ಪಾರ್ಟಿಗಳನ್ನು ಏರ್ಪಡಿಸಿದಾಗ ವಿರುದ್ಧ ಪಂಗಡದವರು ಅಲ್ಲಿ ಒಳನುಗ್ಗಿ ಪಾರ್ಟಿಗಳನ್ನು ಕೆಡಿಸುವುದೂ ಒಂದು ದೊಡ್ಡ ತಮಾಷೆಯೆನಿಸಿಕೊಳ್ಳುವಷ್ಟು ಇನ್ನೊಂದು ವಾಡಿಕೆಯಾಗಿದೆ. ಯಾರು ಯಾರು ಪಾರ್ಟಿ ಕೊಡುತ್ತಾರೆ? ಎಂದು ತಿಳಿದುಕೊಳ್ಳಲು ವಿರುದ್ಧ ಪಂಗಡದ ಒಂದು ಗುಪ್ತಚಾರಪಥವೇ ತಯಾರಾಗಿರುತ್ತದೆ. ಪಾರ್ಟಿ ಒಳ್ಳೇ ಜೋರಿನಲ್ಲಿದ್ದಾಗ ಈ ಪಂಗಡದವರು ಒಳನುಗ್ಗಿ ಬಂದು ಸಿಕ್ಕವರನ್ನು ಹೊಡೆಯಲಾರಂಭಿಸುತ್ತಾರೆ. ಇಷ್ಟಕ್ಕೇ ಬಿಡದೆ ಕೈಗೆ ಸಿಕ್ಕ ಸಾಮಾನೆಲ್ಲ ಮುರಿಯುವುದು, ಚೆಲ್ಲುವುದು, ತುಳಿಯುವುದು, ಜಜ್ಜುವುದು ಮಾಡುತ್ತಾರೆ. ಒಮ್ಮೆ ಹೀಗಾಯಿತಂತೆ; ಪಾಲಕರು ಊರಿಗೆ ಹೋದಾಗ ಮಕ್ಕಳು ಇಂಥ ಒಂದು ಪಾರ್ಟಿ ಏರ್ಪಡಿಸಿ, ಪಾಲಕರು ತಿರುಗಿ ಬರುವಷ್ಟರಲ್ಲಿ ಪಾಪ, ಸಾವಿರಾರು ಡಾಲರುಗಳ ಹಾನಿಗೆ ಕಾರಣವಾಗಿದ್ದರು! ಪೋಲಿಸರು ವಿಚಾರಣೆಗೆ ಬಂದಾಗ "ಎಲ್ಲರೂ ಹೀಗೆ ಮಾಡುತ್ತಾರೆ ನಾವೂ ಮಾಡಿದರೆ ತಪ್ಪೇನಿದೆ ಅದರಲ್ಲಿ?" ಎಂದು ಭಾಗವಹಿಸಿದ ಹುಡುಗರೆಲ್ಲ ಜವಾಬು ಕೊಟ್ಟರಂತೆ. ಬಹುಸಂಖ್ಯಾತ ಪಾಲಕರೂ ಕೂಡ ತಮ್ಮ ಮಕ್ಕಳು ನಿರ್ದೋಷಿಗಳೆಂದೇ ವಾದಿಸುತ್ತಾರೆ. ಅಂದಮೇಲೆ ಸರಿಯೇ ಆಯಿತಲ್ಲವೇ?

ಆದರೂ ಸುದೈವಕ್ಕೆ ಅಮೇರಿಕೆಯ ಹೆಚ್ಚಿನ ವಿದ್ಯಾರ್ಥಿಗಳು ಈಗ ಈ ಗುಂಪಿಗೆ ಸೇರಿದವರಲ್ಲ. ಆದರೆ ಇಂಥ ಪೋಲಿಗಳ ಸಂಖ್ಯೆ ವರ್ಷ ವರ್ಷ ಹೆಚ್ಚುತ್ತ ನಡೆದಿದೆಯಂತೆ. ಇದೇ ವೇಗದಲ್ಲಿ ನಡೆದರೆ ಇನ್ನೊಂದು ಮೂವತ್ತು ವರ್ಷಗಳ ನಂತರ ಅಮೇರಿಕೆಯ ಗತಿ ಏನಾದೀತೆಂಬುದನ್ನು ಊಹಿಸುವುದೂ ಕಷ್ಟ. ಹುಯ್ ಎಂದು ನಾಯಿಕೊಡೆಯಂತೆ ಬೆಳೆದು ಬಂದಿದೆ ಆಧುನಿಕ ಅಮೇರಿಕನ್ ಸಂಸ್ಕೃತಿ. ಒಮ್ಮೆ ಕುಸಿಯಲಾರಂಭಿಸಿತೆಂದರೆ ಹೇಳಹೆಸರಿಲ್ಲದೇ ಹೋಗಬಹುದು. ಬಲಾಢ್ಯ ಬಾಹ್ಯ ಶತ್ರುಗಳು ಅಮೇರಿಕೆಗೆ ಇಲ್ಲದಿದ್ದರೂ ಸಮಾಜದ, ರಾಷ್ಟ್ರದ ವೈಯಕ್ತಿಕವಾದ ಕಾಯಿದೆಗಳನ್ನು ಉಲ್ಲಂಘಿಸುವ ರೂಢಿ ಬೆಳೆಯುತ್ತ ಹೋದರೆ ಅಂತರಿಕ ಕಾರಣಗಳಿಗೇ ಅಮೇರಿಕೆ ಬಲಿಯಾಗಬಹುದು.

* * *

ಗಂಡು–ಹೆಣ್ಣು

ಒಂದು ಮಧ್ಯರಾತ್ರಿ. ದಿನದ ಕೆಲಸ ಮುಗಿಸಿ ಕಾಲೇಜಿನಿಂದ ಮನೆಗೆ ಹೊರಟಿದ್ದೆ. (ಉಚ್ಚವ್ಯಾಸಂಗ ಮಾಡುವವರಿಗೆ ಇಪ್ಪತ್ತುನಾಲ್ಕು ಗಂಟೆ ಕೆಲಸ ಮಾಡುವ ಸೌಕರ್ಯಗಳಿವೆ) ಕಟ್ಟಡದಿಂದ ಇಳಿದು ಕೆಳಗೆ ಬರುತ್ತಲೇ ವಿದ್ಯಾರ್ಥಿಗಳ ಕೋಲಾಹಲ ಕೇಳಿಸಿತು. ನಾಲ್ಕೂ ದಿಕ್ಕಿನಲ್ಲಿ ಓಡಾಡುತ್ತಿದ್ದರು. ಗದ್ದಲವೇ ಗದ್ದಲ. ನನಗೆ ಏನೊಂದೂ ತಿಳಿಯಲೇ ಇಲ್ಲ. ಯಾರಾದರೂ ಸತ್ತರೆ? ಖೂನಿಯಾಯಿತೆ? ಕಳವಾಯಿತೆ? ಏನೂ ಗೊತ್ತಾಗದು.

ಓಡುವವರ ಹಿಂದೆ ಹಿಂದೆ ನಾನೂ ಓಡಿದೆ. ಅವರೆಲ್ಲ ವಿದ್ಯಾರ್ಥಿನಿಯರ ವಸತಿಗೃಹಗಳತ್ತ ಧಾವಿಸುತ್ತಿದ್ದರು. ಸಾಯರೆಕ್ಯೂಸದಲ್ಲಿ ಇಪ್ಪತ್ತು ಸಾವಿರ ವಿದ್ಯಾರ್ಥಿಗಳು ಓದುತ್ತಾರೆ. (ಇವರಲ್ಲಿ ಅರ್ಧಕ್ಕಿಂತ ಸ್ವಲ್ಪ ಹೆಚ್ಚುಕಡಿಮೆ ವಿದ್ಯಾರ್ಥಿನಿಯರಿದ್ದಾರೆ) ಅಲ್ಲಿ ಕೂಡಿದ ವಿದ್ಯಾರ್ಥಿಗಳ ಸಂಖ್ಯೆ ನಾಲ್ಕೈದು ಸಾವಿರವಿರಬಹುದು. ಏಕೆ, ಏನು ಎಂದು ಯಾರನ್ನು ಕೇಳುವುದು? ಕೇಳಿದ್ದರೆ ಯಾರೂ ಕಿವಿಗೊಡುವ ಸ್ಥಿತಿಯಲ್ಲಿರಲಿಲ್ಲ. ಪೋಲಿಸರ ಕಾರುಗಳು ಕೆಂಪು ಹಳದಿ ದೀಪಗಳಿಂದ ಬೆಳಕು ಕಾರುತ್ತ ಬಂದು ನಿಂತಿದ್ದವು. ಹುಡುಗರೆಲ್ಲ ವಿದ್ಯಾರ್ಥಿನಿಯರ ವಸತಿಗೃಹಗಳನ್ನು ಸುತ್ತುವರಿದು ಕೈ ಎತ್ತಿ, ಕೂಗಾಡಿ ಕುಣಿಯುತ್ತಿದ್ದರು. ಹಿಂದೆ ಪ್ರೇಕ್ಷಕರಾಗಿ ನಿಂತ ವಿದ್ಯಾರ್ಥಿಗಳು 'ಈ ವರ್ಷ ಅಷ್ಟು ಉತ್ಸಾಹವಿಲ್ಲ. ಹೋದ ವರ್ಷದ ತಮಾಷೆ ನೋಡಬೇಕಿತ್ತು" ಎಂದರು. ಇದು ಪ್ರತಿವರ್ಷದ ತಮಾಷೆಯೆಂದು ಆಗ ನನಗೆ ಗೊತ್ತಾಯಿತು. ಹುಡುಗರು ಏನೇನೆಂದು ಕೂಗುತ್ತಿದ್ದರೋ ಸರಿಯಾಗಿ ಕೇಳಿಸದ್ದರಿಂದ ಹತ್ತಿರ ಹೋಗಿ ನಿಂತೆ. "ನಮಗೆ ಪೆಂಟಿ ಬೇಕು" (We want Panties) ಎಂದು ಕೂಗಾಡುತ್ತಿದ್ದರು. ಪಕ್ಕದಲ್ಲಿ ನಿಂತವನಿಗೆ "ಇದು ಏನು?" ಎಂದು ಕೇಳಿದೆ. "ಪೆಂಟಿ ಹಲ್ಲೆ" (Panty-raid) ಎಂದು ಹೇಳಿದ. ಆದರೂ ಅರ್ಥವಾಗಲಿಲ್ಲ. ಇನ್ನೂ ಸಮೀಪ ಹೋಗಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ. ಹುಡುಗಿಯರೆಲ್ಲ ತಮ್ಮ ತಮ್ಮ ವಸತಿಗೃಹಗಳ ಹೆಬ್ಬಾಗಿಲನ್ನು ಭದ್ರವಾಗಿ ಮುಚ್ಚಿ ಕಟ್ಟಡದ ಮೇಲೆ ಏರಿದ್ದಾರೆ. ಅಲ್ಲಿಂದ ಹುಡುಗರು ಕೂಗಿದಾಗೊಮ್ಮೆ ಬಣ್ಣಬಣ್ಣದ ಅರಿವೆಗಳನ್ನು ಕೆಳಗೆ ಒಗೆಯುತ್ತಿದ್ದಾರೆ. ಬಿದ್ದ ಅರಿವೆಗಳಿಗಾಗಿ ವಿದ್ಯಾರ್ಥಿಗಳು ಕಚ್ಚಾಡಿ ಕೂಗುತ್ತಿದ್ದರು. ಬಟ್ಟೆ ಪಡೆದ ಭಾಗ್ಯಶಾಲಿ ಅಲ್ಲಿಂದ ನಾಗಲೋಟ ಕೀಳುತ್ತಿದ್ದ. ಹೀಗೆ ಒಂದು ಕಟ್ಟಡ ಇನ್ನೊಂದು ಕಟ್ಟಡಕ್ಕೆ ಈ ಜನಜಂಗುಳಿ ಸಾಗುತ್ತಿತ್ತು. ಯಾರಿಗೋ ಕುಲಪತಿಗಳ ಮನೆಗೇ ಹೋಗುವ ಮನಸ್ಸಾಯಿತು. ಸರಿ, ಹುಡುಗರೆಲ್ಲ 'ಹೋ' ಎಂದು ಹೊರಟೇಬಿಟ್ಟರು. ನಾನು ಮಾತ್ರ ಅವರ ಬೆನ್ನು ಹತ್ತದೆ ಮನೆಗೆ ಬಂದು ಮಲಗಿದೆ.

ಮರುದಿನ ಸಹಪಾಠಿಯೊಬ್ಬನಿಗೆ 'Panty-raid'ದ ವಿವರಗಳನ್ನು ಕೇಳಿದೆ. 'ನೀನೆಂದೂ ಭಾಗವಹಿಸಲಿಲ್ಲವೇ? ಎಂದು ನಕ್ಕು ಕೇಳಿದ. "ಅದು ಏನೆಂದೇ ಗೊತ್ತಿಲ್ಲ. ಭಾಗವಹಿಸುವದಾದರೂ ಹೇಗೆ?" ಎಂದಾಗ ಆತ ವಿವರಿಸಿ ಹೇಳಿದ:

'Panty' ಎಂದರೆ ಸ್ತ್ರೀಯರು ಹಾಕಿಕೊಳ್ಳುವ ಒಳಚಡ್ಡಿಯಂತೆ. ಅದನ್ನು ನಾಯಲೋನ್ ಅಥವಾ ಬೇರೆ ಹಗುರಾದ ಬಟ್ಟೆಯಿಂದ ತಯಾರಿಸಿರುತ್ತಾರೆ. ಹಳೆಯ ಪೆಂಟಿಗಳನ್ನೆಲ್ಲ ವಿದ್ಯಾರ್ಥಿನಿಯರು ಕೂಡಹಾಕುತ್ತಾರಂತೆ. ವರ್ಷಕ್ಕೊಮ್ಮೆ ಹುಡುಗರು ಹಲ್ಲೆಗೆ ಬಂದಾಗ ಅವುಗಳನ್ನು ಮೇಲಿನಿಂದ ಎಸೆದು ಸಂತೋಷಪಡುತ್ತಾರಂತೆ. ಆದಷ್ಟು ಹೆಚ್ಚು ಪೆಂಟಿಗಳನ್ನು ಸಂಗ್ರಹಿಸಿದವರು 'ಶೂರ'ನೆಂದು ಪರಿಗಣಿಸಲ್ಪಡುತ್ತಾನಂತೆ! ಹುಡುಗರು ತಮ್ಮ ಕೋಣೆಯಲ್ಲಿ ಈ ಪೆಂಟಿಗಳನ್ನು ಅಭಿಮಾನದಿಂದ ಜೋಪಾನವಾಗಿಟ್ಟು ಅವುಗಳನ್ನು ತೋರಿಕೆಗೆ ತೂಗುಹಾಕುತ್ತಾರಂತೆ! ಈ ಆಟದಲ್ಲಿ ಯಾವ ಸ್ವಾರಸ್ಯವೂ ಕಂಡುಬರದ ನನಗೆ "ಎಂಥಾ ಮೂರ್ಖರಪ್ಪಾ ಇವರು! ಇಂಥವರು ಸುಧಾರಿಸಿದವರು ಬೇರೆ!" ಎನಿಸದೆ ಇರಲಿಲ್ಲ.

ಅಮೇರಿಕನ್ ಸಮಾಜದಲ್ಲಿ ಸ್ತ್ರೀ-ಪುರುಷರಿಗೆ ಸ್ವತಂತ್ರವಾಗಿ ಕಲೆಯುವ ಸ್ವಾಂತ್ರ್ಯವಿದೆ.

ಈ ಸಮಾನತೆ ನನ್ನಂತಹ ವಿದೇಶೀಯರಿಗೆ ಕೆಲಕಾಲ ತೊಂದರೆಗೆ ಇಟ್ಟುಕೊಂಡಿತು. ಈ ಸಮಾನತೆ ಬಾಹ್ಯರೂಪ ಉಡುಪುಗಳಲ್ಲಿ ಕೂಡ ತೀರ ಸಾಮಾನ್ಯಕ್ಕೆ ಬಂದು ಬಿಟ್ಟಿದೆ. ಜಡೆ ಬಿಟ್ಟು, ಸೀರೆಯುಟ್ಟವರು ಹೆಂಗಸರು, ಇವರೆಡೂ ಇಲ್ಲದೇ ಮೀಸೆ ಬಿಟ್ಟವರು ಗಂಡಸರು ಎಂದು ನಂಬಿದ ನಾನು, ಈ ಮೂರೂ ಇಲ್ಲದ ದೇಶದಲ್ಲಿ ಗಂಡಸರು-ಹೆಂಗಸರನ್ನು ಹೇಗೆ ಗುರುತಿಸಬೇಕೆಂಬುದೇ ದೊಡ್ಡ ಪ್ರಶ್ನೆಯಾಯಿತು. ಅದಕ್ಕಾಗಿ ನಾನು ಒಂದು ಸಂಶೋಧನೆಯನ್ನೇ ಕೈಕೊಳ್ಳಬೇಕಾಯಿತು. ಸಾವಿರಾರು ಅಮೇರಿಕನ್ನರನ್ನು ಹತ್ತಿರದಿಂದ ನೋಡಿದೆ. ಈ ಪರೀಕ್ಷೆಯ ಪರಿಣಾಮವಾಗಿ ಅಮೇರಿಕನ್ ಸ್ತ್ರೀ-ಪುರುಷರ ಬಗ್ಗೆ ಹಲವಾರು ಮನರಂಜಕ ಸಂಗತಿಗಳನ್ನು ಕಂಡುಕೊಂಡೆ. ಈ ನನ್ನ ಸಂಶೋಧನೆಯ ಕೆಲ ಮುದ್ದೆ (ಅಂಶ)ಗಳನ್ನು ಓದುಗರ ಮುಂದೆ ಇಡುತ್ತೇನೆ.

೧. ರಸ್ತೆಯಲ್ಲಾಗಲೀ ಕಾರಿನಲ್ಲಾಗಲೀ ಇಬ್ಬರು ಹೊರಟರೆ ಅವರಲ್ಲಿ ಒಬ್ಬರು ಹೆಂಗಸೆಂದು ತಿಳಿಯತಕ್ಕದ್ದು.
೨. ಇಬ್ಬರು ಹೊರಟಾಗ ಒಬ್ಬರೇ 'ಚುಯಿಂಗ್ ಗಮ್' (ಸಿಹಿ ಅಂಟು) ಜಗಿಯುತ್ತಿದ್ದರೆ ಅವರು ಹೆಣ್ಣು ಹುಡುಗಿ
೩. ಇಬ್ಬರಲ್ಲಿ ಒಬ್ಬರ ಹತ್ತಿರ 'ವೈನಿಟಿ-ಬ್ಯಾಗ್' ಇದ್ದರೆ ಆಕೆ ಹುಡುಗಿ.
೪. ರಸ್ತೆಯಲ್ಲಿ ಹೊರಟಾಗ ಮೃದುಮಧುರ ಸೆಂಟಿನ ಸುವಾಸನೆ ಹೊರ ಹೊಮ್ಮುತ್ತಿದ್ದರೆ ಆಕೆ ಪ್ರೌಢ ಮಹಿಳೆ.
೫. ಈ ಸುಗಂಧ ಹೆಚ್ಚಾಗುತ್ತ ನಡೆದಿದ್ದರೆ ಆಕೆಯ ಪ್ರಾಯವೂ ಹೆಚ್ಚುತ್ತ ನಡೆದಿದೆಯೆಂದು ತಿಳಿಯಬೇಕು.
೬. ಕೈ, ಮುಖ, ಕಣ್ಣುಗಳಿಗೆ ಹೆಚ್ಚಿನ ಬಣ್ಣ ಸವರಿ, ಹೆಚ್ಚಿನ ಅಲಂಕಾರ ಮಾಡಿಕೊಂಡಿದ್ದರೆ ಅವಳು ಆಗಲೇ ಮುದುಕಿಯಾಗಿದ್ದಾಳೆಂದು ತಿಳಿಯಬೇಕು.
೭. ಯಾರೊಬ್ಬರ ಬಟ್ಟೆಗಳು ಹವಾಮಾನಕ್ಕನುಸರಿಸಿ ಆಕುಂಚನ ಹೊಂದುತ್ತ ನಡೆದಿದ್ದರೆ ಆಕೆ ಸ್ತ್ರೀ ಎಂದು ತಿಳಿಯಬೇಕು.
೮. ಚಳಿಗಾಲದಲ್ಲಿ ಉಪಯೋಗಿಸಿದ ಪ್ಯಾಂಟನ್ನು ಅರ್ಧಕ್ಕೆ ಹರಿದು ವಸಂತ ಋತುವಿನಲ್ಲಿಯೂ, ಬೇಸಿಗೆಯಲ್ಲಿ ಅದನ್ನು ಇನ್ನೂ ಹರಿದು ೧/೪ಕ್ಕೆ ಇಳಿಸಿ ಧರಿಸಿದರೆ ಆಕೆ ವಿದ್ಯಾರ್ಥಿನಿಯೆಂದು ನಿರ್ಧರಿಸಬೇಕು.
೯. ಸಣ್ಣ ಕಾರಿನಲ್ಲಿ ಅರ್ಧ ಸೀಟಿನಲ್ಲಿ ಇಬ್ಬರು ಕುಳಿತಿದ್ದರೆ ಅವರು ಪ್ರೇಮದ ಭರದಲ್ಲಿದ್ದ, ಆದರೆ ಮದುವೆಯಾಗದ ಜೋಡಿಯೆಂದು ತಿಳಿಯಬೇಕು.
೧೦. ಸಣ್ಣ ಕಾರಿನಲ್ಲಿ ಒಂದು ಇಡೀ ಸೀಟಿನಲ್ಲಿ ಇಬ್ಬರು ಆರೂಢರಾಗಿದ್ದರೆ ಅವರ ವಿವಾಹ ನಿಶ್ಚಯವಾಗಿದೆಯೆನ್ನಬಹುದು.
೧೧. ದೊಡ್ಡ ಕಾರಿನಲ್ಲಿ ಇಬ್ಬರು ಎರಡು ಸೀಟಿನಲ್ಲಿ ಕುಳಿತಿದ್ದರೆ ಅವರ ಮದುವೆ ನಿಶ್ಚಯ ಆಗಿದೆ ಎಂದರ್ಥ.
೧೨. ದೊಡ್ಡ ಕಾರಿನಲ್ಲಿ ಇಬ್ಬರು ಎರಡು ಮೂಲೆಗೆ ಕುಳಿತಿದ್ದರೆ ಅವರ ವಿವಾಹವಾಗಿ ಒಂದೆರಡು ಮಕ್ಕಳಿದ್ದಾರೆ ಎಂದು ಊಹಿಸಲಡ್ಡಿಯಿಲ್ಲ.
೧೩. ದೊಡ್ಡ ಕಾರಿನಲ್ಲಿ ಗಂಡಸಾಗಲಿ, ಹೆಂಗಸಾಗಲಿ ಒಂಟಿಯಾಗಿದ್ದರೆ ಅವರ

ವಿವಾಹವಿಚ್ಛೇದವಾಗಿದೆ; ಇನ್ನೊಂದು ಮದುವೆಗಾಗಿ ಹೆಣಗುತ್ತಿದ್ದಾರೆ ಎಂದು ತಿಳಿಯಬೇಕು.

ಅಮೇರಿಕನ್ ಸಮಾಜ ತಮ್ಮ ಯುವಕ-ಯುವತಿಯರಿಗೆ ಕೊಡಮಾಡಿದ ಸ್ವಾತಂತ್ರ್ಯ ಭಾರತೀಯ ಕಣ್ಣಿಗೆ 'ವಿಪರೀತ'ವೆನಿಸದೆ ಇರಲಾರದು.

೧. ಅವರಿಗೆ ಜನಸಮೂಹದಲ್ಲಿ ಆಲಂಗಿಸುವ, ಚುಂಬಿಸುವ ಸ್ವಾತಂತ್ರ್ಯವಿದೆ. (ಆದರೆ ಅಂತರಂಗದಲ್ಲಿ ಇದನ್ನು ಮಾಡಬಾರದಂತೆ)
೨. ವಿದ್ಯಾರ್ಥಿನಿಯರು ವಾರದಂತ್ಯದಲ್ಲಿ ರಾತ್ರಿ ಒಂದು ಗಂಟೆಯ ತನಕ ತನ್ನ ಪ್ರಿಯತಮನೊಡನೆ ಇರಬಹುದು. ಆದರೆ ಒಂದರ ನಂತರ ವಸತಿಗೃಹಕ್ಕೆ ಬಂದರೆ ತೀವ್ರ ಶಿಕ್ಷೆಯಂತೆ.
೩. ವಸತಿಗೃಹದ ಅತಿಥಿಗೃಹದಲ್ಲಿ ಯುವತಿಯರು ಯುವಕರ ತೊಡೆಯನ್ನೇರಬಹುದಂತೆ. ಆದರೆ ಅವರಿಬ್ಬರ ನಡುವೆ ವರ್ತಮಾನ ಪತ್ರವಾದರೂ ಇರಬೇಕಂತೆ.
೪. ಯುವತಿಯರು ಯುವಕರು ಕೋಣೆಯಲ್ಲಿರಬಹುದು. ಆದರೆ ಕೋಣೆಯ ಬಾಗಿಲು ತೆರೆದಿರಬೇಕಂತೆ. ಇನ್ನೂ ಕೆಲ ಕಡೆ ಬಾಗಿಲು ಮುಚ್ಚಬಹುದು. ಆದರೆ ಚಿಲಕ ಹಾಕಬಾರದೆಂದು ನಿಯಮವಂತೆ.
೫. ಗಂಡು-ಹೆಣ್ಣು ವಿಶೇಷ ಸಲಿಗೆಯಿಂದ ಇರಬಹುದು ಆದರೆ ಹೆಣ್ಣು ಮದುವೆಯಾಗುವ ಮೊದಲು ತಾಯಿಯಾಗದಿದ್ದರಾಯಿತು.
೬. ಮದುವೆಯಾಗುವ ಯುವಕನೊಡನೆ ಮದುವೆಯ ಮೊದಲು ದೇಹ ಸಂಬಂಧ ಬೆಳೆಸಿದರೂ ಆಕೆ ಕುಮಾರಿಯೆಂದೇ ಪರಿಗಣಿಸಲ್ಪಡುವಳು.

ಆದರೆ ಅಮೇರಿಕನ್ ಸಮಾಜ ಯಾವ ದೃಷ್ಟಿಕೋನ ಇಟ್ಟುಕೊಂಡು ಈ ಸ್ವಾತಂತ್ರ್ಯ ಕೊಡಮಾಡಿದೆಯೋ ಅದರ ವಿಪರೀತವಾಗಿ ಸರಕಾರಕ್ಕೆ ಮತ್ತು ಸಮಾಜಕ್ಕೆ ಹೊಸ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ.

ಇಂಥ ಕೆಲ ತೊಡಕುಗಳು :

೧. ರಸ್ತೆ, ಬೀದಿ, ಕಾಲೇಜು-ಹೂದೋಟ, ಪಾರ್ಕುಗಳಲ್ಲಿ ಬಹಿರಂಗವಾಗಿ ಕಾಮಕ್ರೀಡೆ ನಡೆಯುತ್ತದೆ.
೨. ಅಮೇರಿಕನ್ ಮಕ್ಕಳು ಬುದ್ಧಿಯಿಂದ ಬೆಳೆಯುವ ಮೊದಲೇ ದೇಹದಿಂದ ಬೆಳೆದುಬಿಡುತ್ತಾರೆ. ೧೨-೧೪ ವರ್ಷದವರೂ 'dating' ಮಾಡುವುದು ಸಾಮಾನ್ಯ ವಿಷಯ.
೩. ಅಮೇರಿಕನ್ ಕುಮಾರಿಯರಲ್ಲಿ ಹೆಚ್ಚಿನ ಜನರು ಹೈಸ್ಕೂಲ ವಿದ್ಯಾಭ್ಯಾಸ ಕೂಡ ಮುಗಿಸುವುದಿಲ್ಲ. ಇದಕ್ಕೆ ಕಾರಣ ಅವರು ಮದುವೆಯಾಗುವ ಮೊದಲೇ ಗರ್ಭಿಣಿಯರಿರುತ್ತಾರೆ.
೪. ಅಮೇರಿಕೆಯ ಶೇಕಡಾ ೬೦% ಹುಡುಗಿಯರಿಗೆ ಮತ್ತು ಶೇಕಡಾ ೯೦% ಹುಡುಗರಿಗೆ ಮದುವೆಯ ಮೊದಲೇ ಕಾಮಜೀವನದ ಅನುಭವವು ಇರುತ್ತದೆ.
೫. ಗರ್ಭನಿರೋಧಕ ಸಲಕರಣೆಗಳು ಧಾರಾಳವಾಗಿ ಲಭ್ಯವಿದ್ದರೂ, ಅವುಗಳ ಉಪಯೋಗ ಸಾಕಷ್ಟು ಇದ್ದು, ಸಾಯರೆಕ್ಯೂಸದಂತಹ ವಿಶ್ವವಿದ್ಯಾಲಯದಲ್ಲಿ

ಪ್ರತಿವರ್ಷ ನೂರಕ್ಕೂ ಮಿಕ್ಕಿ ವಿದ್ಯಾರ್ಥಿನಿಯರು ಗರ್ಭವತಿಯರಾಗುತ್ತಾರೆ.

೭. ಜನ್ಮತಾಳುವ ಪ್ರತಿ (conceived) ಹದಿನೆಂಟು ಮಕ್ಕಳಲ್ಲಿ ಒಂದು ಬೆಳಕು ಕಾಣುವುದಿಲ್ಲ. (ಗರ್ಭಪಾತ ಸಾಮಾನ್ಯ)

೮. ಮದುವೆ ಕಾಲದಲ್ಲಿ ಪ್ರತಿ ಐದನೇ ಹೆಣ್ಣುಮಗಳು ಗರ್ಭಿಣಿಯಿರುತ್ತಾಳೆ.

೮. ಸಾಮಾನ್ಯವಾಗಿ ಅಮೇರಿಕನ್ ಕುಮಾರಿಯರು ತಮ್ಮ ಹದಿನೆಂಟನೇ ವಯಸ್ಸಿನಲ್ಲಿಯೂ, ಹುಡುಗರು ತಮ್ಮ ಇಪ್ಪತ್ತೊಂದನೇ ವಯಸ್ಸಿನಲ್ಲಿಯೂ ಮದುವೆಯಾಗುತ್ತಾರೆ. ೧೪-೧೫ ವರ್ಷಕ್ಕೆ ಮದುವೆಯಾಗುವ ಕುಮಾರಿಯರೂ ಇದ್ದಾರೆ.

೯. ಅಮೇರಿಕನ್ ಪತ್ನಿ ಹೆಚ್ಚಾಗಿ ತನ್ನ ಮೊದಲ ಮಗುವನ್ನು ಹತ್ತೊಂಭತ್ತನೇ ವಯಸ್ಸಿನಲ್ಲೂ, ಕೊನೆಯ ಮಗುವನ್ನು ಇಪ್ಪತ್ತಾರನೇ ವಯಸ್ಸಿನಲ್ಲೂ ಪಡೆಯುತ್ತಾಳೆ. ಆದ್ದರಿಂದ ಮೂವತ್ತಾರು ವರ್ಷದ ಮಹಿಳೆ ಅಜ್ಜಿಯಾಗಿದ್ದರೆ ಆಶ್ಚರ್ಯವಿಲ್ಲ.

೧೦. ಒಮ್ಮೊಮ್ಮೆ ಮಗುವನ್ನು ಗಾಡಿಯಲ್ಲಿ ದೂಡಿಕೊಂಡು ಹೋಗುವ ತಾಯಿ, ಇನ್ನೂ ಬುದ್ಧಿಯಿಂದ ಮಗುವಾಗಿಯೇ ಇರುತ್ತಾಳೆ.

೧೧. ಪ್ರತಿ ಐದು ಮದುವೆಗಳಲ್ಲಿ ಒಂದು ವಿವಾಹವಿಚ್ಛೇದನದಲ್ಲಿ ಕೊನೆಗೊಳ್ಳುತ್ತದೆ.

೧೨. ಒಮ್ಮೆ ವಿವಾಹವಿಚ್ಛೇದನೆಯಾದವರು, ಎರಡು-ಮೂರು ಸಲ ಮರು ಮದುವೆ ಮಾಡಿಕೊಳ್ಳುವದೂ ಉಂಟು. ಇಂಥವರಿಗೆ ಮೂರು ವಿವಾಹಗಳ ಮಕ್ಕಳು ಇರುವುದು ಸಾಮಾನ್ಯ.

೧೩. ವಿಚ್ಛೇದನೆ ಹೊಂದಿದವರ ಮಕ್ಕಳಿಗೆ ಸಾಕಷ್ಟು ಆತ್ಮೀಯತೆ ಸಿಗುವುದಿಲ್ಲ. ಬಾಲ ಅಪರಾಧಿಗಳಲ್ಲಿ ಇವರ ಸಂಖ್ಯೆಯೇ ಹೆಚ್ಚಾಗಿದೆ.

೧೪. ನವಜನಾಂಗದಲ್ಲಿ ಹಿರಿಯರ ಬಗ್ಗೆ, ಸಮಾಜದ ಬಗ್ಗೆ, ಚರ್ಚಿನ ಬಗ್ಗೆ, ಸರಕಾರದ ಬಗ್ಗೆ ಯಾವ ಆದರವೂ ಇರುವುದಿಲ್ಲ. ಹೀಗಾಗಿ ಸ್ವೇಚ್ಛಾಚಾರಿಯಾಗುತ್ತಾರೆ.

೧೫. ಪ್ರತಿ ಹನ್ನೆರಡು ಅಮೇರಿಕನ್ನರಲ್ಲಿ ಒಬ್ಬ ಮಾನಸಿಕ ರೋಗಿಯಿರುತ್ತಾನೆ.*

ಅಮೇರಿಕನ್ ಸರಕಾರ ಮತ್ತು ಸಮಾಜಗಳು ಈ ತೊಡಕುಗಳನ್ನು ಬಿಡಿಸಲು ಶಕ್ತಿಮೀರಿ ಪ್ರಯತ್ನಿಸುತ್ತಿವೆ. ಮದುವೆಯಾಗದ ತಾಯಂದಿರಿಗೆ 'ಆಶ್ರಮ'ಗಳನ್ನು ತೆರೆದಿದ್ದಾರೆ. ತಂದೆ-ತಾಯಿಗಳಿಗೆ ಬೇಡಾದ (unwanted) ಮಕ್ಕಳನ್ನು ಸಾಕಲು ಕೊಡುವ ಏರ್ಪಾಡಿದೆ. ಅಲಕ್ಷಿತ (neglected) ಮಕ್ಕಳಿಗಾಗಿ ಮಿತ್ರಗೃಹ (friendship homes) ಗಳಿವೆ. ಇವೆಲ್ಲ ವ್ಯವಸ್ಥೆ ಇದ್ದರೂ ಸಮಸ್ಯೆಗಳು ಹೆಚ್ಚುತ್ತಲೆ ಇವೆ. ಆದರೆ ಸಮಸ್ಯೆಗಳ ಮೂಲ ಕಾರಣವನ್ನು ಹುಡುಕಿ ತೆಗೆದು ಅದಕ್ಕೆ ಕೊಡಲಿಯೇಟು ಹಾಕುವ ಧೀರಪ್ರಯತ್ನವನ್ನು ಸಮಾಜ, ಸರಕಾರಗಳೆರಡೂ ಮಾಡುತ್ತಿಲ್ಲ. ಅಮೇರಿಕನ್ ಜನಜೀವನವನ್ನು ಪರಿಶೀಲಿಸಿದರೆ ಅವರ ಸಮಸ್ಯೆಗಳ ಕಾರಣಗಳು ತಾನಾಗಿ ಹೊಳೆಯುವವು.

---

* 'ನ್ಯೂಯಾರ್ಕ್ ಟೈಮ್ಸ್' ಮತ್ತು 'ಸಾಯರೆಕ್ಯೂಸ್ ಓರೆಂಜ್' ಪತ್ರಿಕೆಗಳಲ್ಲಿಯ ಅಂಕೆ-ಸಂಖ್ಯೆಗಳಿವು.

೧. ಅಮೇರಿಕನ್ ಕೌಟುಂಬಿಕ ಜೀವನದ ಅಡಿಗಲ್ಲೆಂದರೆ ವೈಯಕ್ತಿಕ ಸ್ವಾತಂತ್ರ್ಯ ಸಮಾನತೆ, ಇಂತಹದರಲ್ಲಿ ತಂದೆ-ತಾಯಿಗಳಿಗೆ ಮಕ್ಕಳ ಮೇಲೆ ಅಧಿಕಾರವೂ ಇಲ್ಲ.

೨. ಮಕ್ಕಳಿಗೆ ದುಡಿದು ಹಣ ಸಂಪಾದಿಸುವ ಸೌಲಭ್ಯಗಳಿದ್ದುದರಿಂದ ಅವರು ಪಾಲಕರ ಮೇಲೆ ಅಷ್ಟೊಂದು ಅವಲಂಬಿಸುವುದಿಲ್ಲ.

೩. ಗಂಡು-ಹೆಣ್ಣಿನ ಮಿಲನ ಸಾಮೂಹಿಕ ಚಟುವಟಿಕೆಂಯೆಂದು ಪರಿಗಣಿಸಲ್ಪಟ್ಟಿರುವದರಿಂದ ಅದಕ್ಕೆ ಯಾವ ನಿರ್ಬಂಧವೂ ಇಲ್ಲ.

೪. ಸಿಗರೇಟುಗಳನ್ನು ಯಂತ್ರಗಳು ಮಾರುವುದರಿಂದ ಅಮೇರಿಕನ್ ಮಕ್ಕಳು ಯಾವ ನಿರ್ಬಂಧವೂ ಇಲ್ಲದೇ ತೀರ ಚಿಕ್ಕ ವಯಸ್ಸಿನಿಂದಲೇ ಸೇದುವುದನ್ನು ಪ್ರಾರಂಭಿಸುತ್ತಾರೆ.

೫. ಬಿಯರ್, ಸೆರೆ ಸೇವಿಸುವುದು ಸಾಮಾಜಿಕ-ಪದ್ಧತಿಯೆನಿಸುವದರಿಂದ ಮಕ್ಕಳು ಸಮಾಜದಲ್ಲಿ ಅಷ್ಟೇಕೆ ಮನೆಯಲ್ಲೇ ಇವುಗಳ ರುಚಿ ನೋಡುತ್ತಾರೆ. 'ಸಾಮಾಜಿಕ ಪದ್ಧತಿ' ಬರಬರುತ್ತ ರೂಢಿಯಾಗಿಬಿಡುತ್ತದೆ.

೬. ಎಷ್ಟೋ ಮಕ್ಕಳಿಗೆ ತಂದೆ-ತಾಯಂದಿರ ಕಾರು ನಾಲ್ಕು ಗಾಲಿಯ ಪ್ರಣಯಮಂದಿರವಾಗಿಬಿಡುತ್ತದೆ.

* * *

ಗೃಹ ವಿಜ್ಞಾನ

ಗೃಹವಿಜ್ಞಾನ ಮಹಿಳೆಯರಿಗೆ ಮೀಸಲು! ಎಂಬ ನಂಬಿಕೆಯುಳ್ಳ ದೇಶದಿಂದ ಬಂದವನಿಗೆ ಅಮೇರಿಕೆಯಲ್ಲಿ ಬಹಳ ತೊಂದರೆಗೆ ಇಟ್ಟುಕೊಳ್ಳುತ್ತದೆ. ಗೃಹಸ್ಥನೂ ಗೃಹಿಣಿಯಾಗಲು ಕಲಿಯಬೇಕು. ಈ ದೇಶದಲ್ಲಿ ಮೊದಲು 'ಅಡಿಗೆ-ಭಟ್ಟ'ನಾಗಬೇಕು. ಇಲ್ಲವೇ ಅರೆಹೊಟ್ಟೆಯಿಂದ ಇರಲು ಕಲಿಯಬೇಕು. ಅಥವಾ ಅಮೇರಿಕನ್ನರ ರುಚಿ, ವಾಸನೆ ಎರಡೂ ಇಲ್ಲದ ಊಟ ಮಾಡಲು ಕಲಿಯಬೇಕು. ಹೋಟೆಲ್ ಊಟವಾದರೋ ಹೊಟ್ಟೆ ತುಂಬುವುದಿಲ್ಲ. ನಾಲಿಗೆಗೆ ರುಚಿಯಾಗುವುದಿಲ್ಲ. ಮೇಲಾಗಿ ಒಂದಕ್ಕೆ ಹತ್ತು ಖರ್ಚು. ನಾನು ಅಮೇರಿಕೆಯಲ್ಲಿ ವಿದ್ಯಾಭ್ಯಾಸಕ್ಕೂ ಮುಂಚಿತವಾಗಿ ಅಡಿಗೆಯ ಕೆಲಸಕ್ಕೆ ಪ್ರಾರಂಭಿಸಿದೆ. ಒಳ್ಳೆ ಅಡಿಗೆ ಉಂಡು ನಾಲಿಗೆಗೆ ರುಚಿ ಇದ್ದರೂ ಆ ರುಚಿ ಕೈಗೆ ಇಳಿದು ಬರುವುದು ಸಾಧ್ಯವಿರಲಿಲ್ಲ. ಅಡಿಗೆಯ ಯಾವ ಯಾವ ಸಾಮಾನು ಬೇಕೆಂದು ನನಗೆ ಗೊತ್ತಿರಲಿಲ್ಲ. ಅಂಗಡಿಗೆ ಹೋಗಿ ಮನಸ್ಸಿಗೆ ತೋಚಿದ್ದನ್ನು ಕೊಂಡು ತಂದೆ. ಮೊದಲನೇ ದಿನ ಅನ್ನ ಸಾರು ಸಾಕೆಂದು ಅಕ್ಕಿ-ಬೇಳೆಗಳನ್ನು ಹೆಚ್ಚಿನ ಜಾಗ್ರತೆಯಿಂದ ಬೇಯಲು ಇಟ್ಟೆ. ಎರಡು ತಾಸಿನಲ್ಲಿ ಊಟ ಸಿದ್ಧವಾಗಿತ್ತು. ಮೊದಲನೆಯದು ಕಲ್ಲನ್ನ, ಗಟ್ಟಿಮುಟ್ಟಾದ ಹಲ್ಲುಳ್ಳ ಯುವಕರು ಉಣ್ಣುವಂತಹದು ಮಧ್ಯದಲ್ಲಿಯದು ವಯಸ್ಕರು

ಉಣ್ಣುವಂತಹ ಮೆತ್ತಗಿನ ಅನ್ನ ಮತ್ತು ತೀರ ಕೆಳಗಿನದು ಹಂದಿಯೂ ತಿನ್ನಲಾಗದ ಕರಿಯನ್ನವಾಗಿತ್ತು. ಹೀಗಾಗಿ ಗಂಟಲ ಕೆಳಕ್ಕೆ ಅದು ಇಳಿಯಲು ನಿರಾಕರಿಸಿತು. ಊಟ ಮುಗಿದರೂ ಹಸಿದ ಹೊಟ್ಟೆ ಹಸಿದಂತೆ ಇತ್ತು.

ಮರುದಿನ ಮೊದಲ ದಿನದ ಅಪಯಶಸ್ಸನ್ನು ಕುರಿತು ಆಲೋಚಿಸಲೇ ಬೇಕಾಯಿತು. ತಿರುಗಿ ಹೊಟ್ಟೆ ಹಸಿದಾಗ, ನನ್ನ ಕೀಟಶಾಸ್ತ್ರ-ಸಂಶೋಧನೆಯ ಜೊತೆಗೆ ಪಾಕಶಾಸ್ತ್ರ-ಸಂಶೋಧನೆಯೂ ಸೇರಿತು. ಉರಿಯುವ ಬೆಂಕಿ ಹದವಾಗಿ ಕಡಿಮೆಯಾದರೆ ಮಲ್ಲಿಗೆ-ಹೂವಿನಂತೆ ಅನ್ನವಾಗುವದೆಂದು ಕಂಡುಕೊಂಡೆ. ಸಾವಕಾಶವಾಗಿ ಅನ್ನ-ಸಾರಿನ ಸಂಗಡ ಪಲ್ಯವೂ ಸೇರಿಕೊಂಡಿತು. ನಿಂಬೆಹಣ್ಣು, ಉಪ್ಪಿನಲ್ಲಿ ಸೇರಿ ಉಪ್ಪಿನಕಾಯಿಯಾಗಲು ಪ್ರಾರಂಭಿಸಿತು. ನೋಡಿದ್ದೇ ನೋಡಿದರೆ ನೋಟಕ್ಕೆ ರಮ್ಯತೆಯಿಲ್ಲ. ತಿಂದದ್ದೇ ತಿಂದರೆ ತಿಂಡಿಗೆ ರುಚಿಯಿಲ್ಲ. ಅಂತೆಯೇ ಊಟಕ್ಕೊಮ್ಮೆ ಹೊಸ ತರದ ಅಡಿಗೆ ಮಾಡುವ ಹುಮ್ಮಸ್ಸು ಪ್ರಾರಂಭವಾಯಿತು. ಆದರೆ ಭಾರತೀಯರಿಗೆ ಬೇಕಾಗುವ ಸಾಮಾನುಗಳು ಅಮೇರಿಕೆಯಲ್ಲಿ ಸುಲಭವಾಗಿ ಸಿಗುವಂತಿಲ್ಲ. ಅಲ್ಲದೇ ಅಮೇರಿಕನ್ನರು ನಮ್ಮ ಇಂಗ್ಲೀಷ ಬಳಸದ್ದರಿಂದ ನಮಗೆ ಬೇಕಾದ ಸಾಮಾನಿಗೆ ಅವರು ಏನೆಂದು ಕರೆಯುತ್ತಾರೆಂದು ಪತ್ತೆ ಹಚ್ಚಬೇಕಾಯಿತು. ಅವರು 'ladies-finger'ಗೆ (ನಾರೀ-ಬೆರಳು-ಬೆಂಡೆಕಾಯಿ), 'baby-okra' (ಮಗು-ಓಕ್ರಾ)ಎಂದೂ, 'brinjal' (ಬದನೆಕಾಯಿ) 'egg-plant' (ತತ್ತಿಗಿಡ) ಎಂದೂ ಕರೆಯುತ್ತಾರೆ. ಕಡಲೆಗೆ 'ಕೋಳಿ-ವಟಾಣೆ' (chick-pea) ಎಂದೂ ಮೊಸರಿಗೆ 'ಯೋಗರ್ಟ' (yogert) ಎಂದು ಅನ್ನುತ್ತಾರೆ. ಬರಬರುತ್ತ ಅಮೇರಿಕನ್ ಜೀನಸುಗಳಿಗೆ ಭಾರತೀಯ ರುಚಿ ಬರಲಾರಂಭಿಸಿತು. ಕಢಿ, ಕೋಸಂಬ್ರಿ, ಭಜ್ಜಿ-ಹುಳಿ, ಸಾಂಬಾರು, ದೋಸೆ- ಚಟ್ನಿ, ಬಾಸುಂದಿ-ಪುರಿ, ಶ್ರೀಖಂಡಗಳು ಊಟದ ಟೇಬಲ್ಲಿನ ಮೇಲೆ ಬರಲಾರಂಭಿಸಿದವು.

ನಾನು ಮೊದಲು ಮಾಂಸಾಹಾರಿಯಲ್ಲದಿದ್ದರೂ ಪೂರ್ಣ ಶಾಕಾಹಾರಿಯಾಗಿರಲಿಲ್ಲ. ಕಾರವಾರಿಯಾದ ನಾನು ಮೀನು ತಿನ್ನುವ ಶಾಕಾಹಾರಿಯಾಗಿದ್ದೆ. (ಅಮೇರಿಕೆಯಲ್ಲಿ ಮೀನು ಶಾಖಾಹಾರದಲ್ಲಿ ಬರುತ್ತದೆ. ಅದನ್ನು 'sea-food' ಎಂದು ಕರೆಯುತ್ತಾರೆ). ಅಮೇರಿಕೆಯಲ್ಲಿ ಶಾಕಾಹಾರಿಯಾಗಿರುವುದು ಅಸಾಧ್ಯವಲ್ಲದಿದ್ದರೂ ಅಷ್ಟೇನು ಸುಲಭವಾಗಿರಲಿಲ್ಲ. ನನ್ನ ಸಹವಾಸಿ ಆನಂದಮೋಹನನೆಂಬ ಬಿಹಾರಿ ಶಾಕಾಹಾರವನ್ನೇ ಸೇವಿಸಬೇಕೆಂಬ ಹಟದವನು. ತಿನ್ನುವ ಪ್ರತಿಯೊಂದು ಸಾಮಾನನ್ನೂ ಮೂಸಿ ನೋಡಿ, ಪರೀಕ್ಷಿಸುತ್ತ ಸಂಶಯದಿಂದಲೇ ತಿನ್ನುತ್ತ ತೇಗುವನು. ನಾವು ಕೂಡಿಯೇ ಕೆಲ ದಿನ ಅಡಿಗೆ ಮಾಡುತ್ತಿದ್ದೆವು. ಒಂದು ದಿನ ಅಡಿಗೆ ಮಾಡುವುದು ಬೇಜಾರೆನಿಸಿ ಕಾಲೇಜಿನ ಕೆಫೆಟೇರಿಯದಲ್ಲೆ ರೊಕ್ಕ ಹಾಕಿ ಏನಾದರೂ ಕೊಂಡು ತಿನ್ನುವುದೆಂದು ನಿರ್ಧರಿಸಿದೆವು. ಆತ ಏನು ತಿನ್ನುವುದೆಂದು ಯೋಚಿಸಿ, ಯಂತ್ರಗಳ ಮೇಲೆ ಬರೆದದ್ದನ್ನೆಲ್ಲ ಮತ್ತೆ ಮತ್ತೆ ಓದಿ ಪರೀಕ್ಷಿಸಿ ಕೊನೆಗೊಮ್ಮೆ ತರಕಾರಿ-ರಸಂ! 'ಸಾರು' (vegetable soup) ಎಂದು ಬರೆದಿದ್ದ ಯಂತ್ರದಿಂದ ಟಿನ್ ಒಂದನ್ನು ಕೊಂಡು, ತೆರೆದು ಎರಡು ಬಾರಿ ಮೂಸಿ ನೋಡಿ ಸೇವಿಸಿದ 'ಚೆನ್ನಾಗಿದೆ' ಎಂದು ಬಾಯಿ ಚಪ್ಪರಿಸಿದ. ಮರುದಿನವೂ ಅದನ್ನೇ ಕೊಂಡು ಸೇವಿಸಿದ ಅಮೇರಿಕೆಯ ಕಾನೂನಿನ ಪ್ರಕಾರ ಸಿದ್ಧ ಆಹಾರದ ಪ್ರತಿಟಿನ್, ಬಾಟ್ಲಿ, ಪೊಟ್ಟಣಗಳ ಮೇಲೆ ಆಯಾ ಪದಾರ್ಥಕ್ಕೆ ಉಪಯೋಗಿಸಿದ ಜೀನಸುಗಳನ್ನು

ತಪ್ಪದೇ ಕಾಣಿಸಬೇಕಾಗುತ್ತದೆ. ನನ್ನ ಗೆಳೆಯ ಸಹಜವಾಗಿ ತಿಂದು ಖಾಲಿಯಾದ ಟಿನ್ನಿನ ಮೇಲಿನ ಬರಹವನ್ನು ಓದಲಾರಂಭಿಸಿದ. ಎಲ್ಲ ಸಾಮಾನುಗಳ ಕೊನೆಯಲ್ಲಿ 'ಸೂಪ್'ದಲ್ಲಿ 'ಬೀಫ್ ಬ್ರೊತ್' (broth) 'ದನದ ಮಾಂಸದ ರಸ' ಸೇರಿಸಿದೆ ಎಂದು ಬರೆಯಲಾಗಿತ್ತು! ಆತನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಪ್ರಯತ್ನಪಟ್ಟು ಸೇವಿಸಿದ 'ಸೂಪ್' ಎಲ್ಲ ವಾಂತಿಮಾಡಿದ. ಆದರೆ ಈ ಮೊದಲು ತಿಂದಾಗಿದ್ದಕ್ಕೆ ಉಪಾಯವಿರಲಿಲ್ಲ. ಇಂತಹವರ ಜಾತಿಗೆ ಸೇರಲು ನಾನು ಒಪ್ಪದ್ದರಿಂದ ಮೊದಲಿನಿಂದಲೂ ಮಾಂಸಾಹಾರಕ್ಕೆ ನನ್ನ ಆಕ್ಷೇಪ ತೆಗೆದುಹಾಕಿದೆ. ಬರಬರುತ್ತ ರೂಢಿಯಾಯಿತು. ಅಮೇರಿಕೆಯಲ್ಲಿ ಒಳ್ಳೆಯ ಮಾಂಸ ಅಗ್ಗದಲ್ಲಿ ದೊರೆಯುವದರಿಂದ ಶಾಕಾಹಾರಕ್ಕಿಂತ ಅದೇ ಕಡಿಮೆ ವೆಚ್ಚದಲ್ಲಿ ಹೆಚ್ಚು ಪೌಷ್ಟಿಕವಾಗಿರುತ್ತದೆಂದು ಕಂಡುಕೊಂಡೆ.

ನನ್ನ ಸಹಪಾಠಿ ಜಿಮ್ ಮತ್ತು ಆತನ ಪತ್ನಿ ಕೆರಲ್‌ಳಿಗೆ ಅನ್ನದ ಮೇಲೆ ಬಹಳ ಪ್ರೀತಿಯಂತೆ. ಆದರೆ ಮಾಡಿದ ಅನ್ನವೆಲ್ಲ ಗಂಜಿಯಾಗುತ್ತಿತ್ತಂತೆ. ಒಮ್ಮೆ ನನ್ನನ್ನು ತನ್ನ ಕಾರಿನಲ್ಲಿ ಮನೆಯ ತನಕ ಮುಟ್ಟಿಸ ಬಂದ ಜಿಮ್‌ನಿಗೆ 'ಸ್ವಲ್ಪ ಕಾಫಿ ಸೇವಿಸಿ ಹೋಗು' ಎಂದೆ. ಭಾರತೀಯ ಅತಿಥ್ಯದ ಪರಿಚಯ ಅವನಿಗೆ ಈಗಾಗಲೇ ಆಗಿತ್ತು. ಆದ್ದರಿಂದ ಒಲ್ಲೆ ಎನ್ನಲಾರದೇ ಮನೆಯೊಳಗೆ ಬಂದ. ನನ್ನ ಅಡಿಗೆ ತಯಾರಾಗುತ್ತ ಇತ್ತು. ಗಮಗಮ ವಾಸನೆಗೆ ಆತನ ಬಾಯಲ್ಲಿ ನೀರೂರಿಬೇಕು. ಸೊಂಟದ ಮೇಲೆ ಕೈಯಿಟ್ಟುಕೊಂಡು, ನಾನು ಹೇಗೆ ಮಾಡುತ್ತೇನೆಂದು ನೋಡುತ್ತ ನಿಂತ. "ನಿಮ್ಮ ಅಡಿಗೆ ಮೋಜಿನದಾಗಿದೆ!" ಎಂದು ಉದ್ಗರಿಸಿದ. ಸಣ್ಣಕ್ಕಿಯ ಅರಳಿದ ಅನ್ನವನ್ನು ನೋಡಿದಾಗಲಂತೂ ಆತನಿಗೆ ಬಹಳ ಆಶ್ಚರ್ಯವಾಯಿತು. ಊಟ ಮಾಡಿಯೇ ಹೋಗೆಂದು ಆತನಿಗೆ ಹೇಳಿದೆ. ಅರೆಮನಸ್ಸಿನಿಂದ ಗೊಂಯ್‌ಗೊಂಯ್ ಮಾಡುತ್ತ "ನನ್ನ ಹೆಂಡತಿ ನನ್ನನ್ನು ಕೊಂದುಬಿಟ್ಟಾಳು, ಕೇಳಿ ನೋಡುತ್ತೇನೆ" ಎಂದು ಅಧೈರ್ಯದಿಂದಲೇ ಫೋನು ಎತ್ತಿದ. "ನನ್ನನ್ನು ಬಿಟ್ಟು ನೀನೊಬ್ಬನೇ ಊಟ ಮಾಡುತ್ತೀಯಾ?" ಎಂದು ಹೆಂಡತಿ ಆಕ್ಷೇಪಿಸಿರಬೇಕು. ಆದರೆ ಈಗಾಗಲೇ ಅಡಿಗೆಯ ಸುವಾಸನೆ ಆತನ ಮೂಗು ಸವಿದಿತ್ತಾದ್ದರಿಂದ ಊಟವನ್ನು ಮಾಡದೇ ಹೋಗುವದೂ ಅವನ ಮನಸ್ಸಿರಲಿಲ್ಲ. ಅಂತೆಯೇ "ಡಾರ್ಲಿಂಗ್, ಭಾರತೀಯ ಶಿಷ್ಟಾಚಾರದ ಪ್ರಕಾರ ಅವರ ಆತ್ಮೀಯ ಆಮಂತ್ರಣವನ್ನು ಒಪ್ಪಿಕೊಳ್ಳದಿದ್ದರೆ ಕರೆದವರಿಗೆ ಅಪಮಾನ ಮಾಡಿದಂತೆ ಎಂದು ತಿಳಿಯಲಾಗುತ್ತದಂತೆ. ಸಾಧ್ಯವಾದರೆ ನೀನು ಬಂದುಬಿಡಲ್ಲ" ಎಂದು ಮನ ಒಲಿಸಿದ. ಈ ಮಾತಿನಿಂದ ಅವಳಿಗೆ ಸಮಾಧಾನ ವಾಗಿರಬೇಕು. ಆದರೆ ಪಾರ್ಟಿಗೆ ಹೋಗುವ ಅಲಂಕಾರದಲ್ಲಿ ಆಕೆ ಇಲ್ಲದ್ದರಿಂದ ತಾನು ಬರದೇ ಗಂಡನಿಗೆ ಊಟ ಮಾಡಿ ಬರಲು ಒಪ್ಪಿಗೆಯಿತ್ತಳು. ಅಂದು ಜಿಮ್ ತುಂಬಾ ಊಟ ಮಾಡಿದ, "ನನಗೆ ಖಾರ ಬಹಳ ಸೇರುತ್ತದೆ. ಆದರೆ ಕೆರಲ್ ಕರುಳಿನ ಅಲ್‌ಸರ್ ಅದೀತೆಂದು ಹೆದರಿ ಯಾವಾಗಲೂ ಸಪ್ಪಗಿನ ಊಟವನ್ನೇ ಹಾಕುತ್ತಾಳೆ. ನಾನು ಅಡಿಗೆ ಮಾಡಿದರೆ ಖಾರ ಹಾಕುತ್ತೇನೆಂದು ನನಗೂ ಅಡಿಗೆ ಮಾಡಲು ಬಿಡುವುದಿಲ್ಲ. ನಾನು ಅಮೇರಿಕನ್ ಆದರೂ ಈ ವಿಷಯದಲ್ಲಿ ಭಾರತೀಯ ರುಚಿಯುಳ್ಳವನು. ನಿನ್ನ ಅಡಿಗೆಗೆ ಖಾರ ಹೆಚ್ಚಾದರೂ ಬಹು-ಸ್ವಾದಿಷ್ಟವಾಗಿದೆ!" ಎಂದು ಬಾಯಿ ಚಪ್ಪರಿಸುತ್ತ ಚೆನ್ನಾಗಿ ಹೊಡೆದ. ಊಟ ಹೊಟ್ಟೆಯಲ್ಲಿ ಇಳಿದಾಗ ಖಾರ ತನ್ನ ಪ್ರಭಾವ ಬೀರಲಾರಂಭಿಸಿತು. ಒಂದೇ ಸವನೇ ನೀರು ಕುಡಿಯಲಾರಂಭಿಸಿದ. ಕುಡಿದ

ನೀರು ಕಣ್ಣುಗಳಿಂದ ಹೊರಬರಲಾರಂಭಿಸಿತು. ಆತನಿಗೆ ಹೊಟ್ಟೆಯಲ್ಲಿ ಏನೇನೂ ಸ್ಥಳವಿಲ್ಲದಿದ್ದರೂ ತಂಪಾಗಲೆಂದು ಇಷ್ಟು ಹಾಲನ್ನು ಬಲತ್ಕಾರದಿಂದ ಕುಡಿಸಿದೆ. ಅವನು ಸುಧಾರಿಸಿಕೊಂಡು ಮನೆಗೆ ಹೋಗುವಂತಾಗಬೇಕಾದರೆ ನನಗೆ ಸಾಕು ಸಾಕಾಯಿತು. ಅಂದಿನಿಂದ ಎಂದೂ ಅಮೇರಿಕನ್ನರಿಗೆ ಖಾರ ತಿನ್ನಿಸುವ ಹವ್ಯಾಸಕ್ಕೆ ಹೋಗಲಿಲ್ಲ. ಜಿಮ್ ಅಂದಿನ ಊಟದ ವರ್ಣನೆಯನ್ನು ಹೆಂಡತಿಯೆದುರು ಮಾಡಿರಬೇಕು. ಕೆರಲ್ ನನ್ನ ಮನೆಗೆ ಎಂದೂ ಊಟಕ್ಕೆ ಬರಲಿಲ್ಲ. ಜಿಮ್ ಮಾತ್ರ ಮಸಾಲೆಯ ಅಡಿಗೆ ಊಟ ಮಾಡುವ ಚಪಲವಾದರೆ ತಪ್ಪದೇ ಬರುತ್ತಿದ್ದ.

ಭಾರತೀಯ ಸೀರೆ, ಭಾರತೀಯ ಮಾಯಾಜಾಲ, ಅದರಂತೆ ಭಾರತೀಯ ಅಡಿಗೆಯ ಪರಿಚಯವನ್ನು ಅಮೇರಿಕನ್ನರು ಚೆನ್ನಾಗಿ ಮಾಡಿಕೊಂಡಿದ್ದಾರೆ. ಅಂತೆಯೇ ಭಾರತೀಯ ಊಟವಿದೆಯೆಂದರೆ ತಪ್ಪದೇ ಓಡಿ ಬರುತ್ತಾರೆ. ಬಹಳ ಸಾರೆ ನಾನು ಕರೆಯುವದಕ್ಕಿಂತ ತಾವೇ ಕರೆಸಿಕೊಂಡಿದ್ದಾರೆ. ಅಮೇರಿಕೆಯಲ್ಲಿ ಕಲಿತ ಭಾರತೀಯ ಪಾಕಶಾಸ್ತ್ರದ ಪ್ರಯೋಗಗಳು ಉಪಯೋಗಕ್ಕೆ ಬಂದವು. ಆಗಾಗ್ಗೆ ಅಡಿಗೆ ಮಾಡಿ ಅವರನ್ನು ಊಟಕ್ಕೆ ಕರೆಯುತ್ತಿದ್ದೆ. ಒಣ ಶಾಭಾಷ್‌ಗಿರಿ ಕೊಡುವುದರಲ್ಲಿ ಅಮೇರಿಕನ್ನರನ್ನು ಹಿಂದೆ ಹಾಕುವ ಜನಾಂಗ ಇನ್ನೆಂದೂ ಇರಲಿಕ್ಕಿಲ್ಲ. ತುಂಬ ಪ್ರಶಂಸೆ ಮಾಡುವುದು ಸೌಜನ್ಯ ಮತ್ತು ಸಂಸ್ಕೃತಿಯ ಲಕ್ಷಣವೆಂದು ಅವರು ನಂಬುತ್ತಾರೆ. ಅಂತೆಯೇ ಊಟಕ್ಕೆ ಆಮಂತ್ರಿತವಾಗಿ ಬಂದವರು "ಕ್ರಿಸ್ ನಮಗೆ ಬರುವಾಗ ಹಾದಿ ತಪ್ಪಿಬಿಟ್ಟಿತು. ಆದರೆ ಯಾರನ್ನೂ ಕೇಳುವ ಗೋಜಿಗೆ ಹೋಗದೇ ನಿನ್ನ ಅಡಿಗೆಯ ಸುವಾಸನೆಯ ಜಾಡನ್ನೇ ಹಿಡಿದು ತಪ್ಪದೇ ಇಲ್ಲಿ ಬಂದೆವು" ಎನ್ನುವರು. ಅಧಿಕ–ಬಟ್ಟೆ (over-coat) ಮುಂತಾದವುಗಳನ್ನು ಕೂಡ ತೆಗೆದಿಡುವ ಮೊದಲು "ಏನೇನು ಅಡಿಗೆ ಮಾಡಿದ್ದೀ?" ಎಂದು ಅಡಿಗೆ ಮನೆಗೇ ಧುಮುಕುವರು. "ಎಷ್ಟೊಂದು ಸೌಂದರ್ಯಪೂರ್ಣವಾಗಿದೆ ನಿನ್ನ ಅಡಿಗೆ! ನೋಡಿಯೇ ಬಾಯಲ್ಲಿ ನೀರೂರಲಾರಂಭಿಸಿದೆ. ಏನೇನು ಮಸಾಲೆ ಹಾಕಿದ್ದೀ? ಘೀ (ತುಪ್ಪ) ಹಾಕಿದ್ದೀಯಾ? ಎಂದು ಕೇಳುವರು. ಬಹುಸಂಖ್ಯಾತ ಅಮೇರಿಕನ್ನರಿಗೆ ತುಪ್ಪದ ಬಗ್ಗೆ ಬಹಳ ಉತ್ಸುಕತೆ. ಅವರು ಚಿಕ್ಕ ಮಗುವಿದ್ದಾಗ ಭಾರತೀಯ ಆನೆ, ಹುಲಿ, ಸಿಂಹಗಳ ಜೊತೆಗೆ ತುಪ್ಪದ ಕತೆಯನ್ನೂ ಕೇಳಿದ್ದಾರಂತೆ. ಒಬ್ಬ ಚತುರ ಭಾರತೀಯ ಹುಡುಗನು ಬುತ್ತಿಯನ್ನು ಕಟ್ಟಿಕೊಂಡು ಒಂದು ಊರಿನಿಂದ ಇನ್ನೊಂದು ಊರಿಗೆ ಹೊರಟಿದ್ದನಂತೆ. ದಾರಿಯಲ್ಲಿ ಒಂದು ಹುಲಿ ಅಡ್ಡಗಟ್ಟಿ ಆತನ ಊಟವನ್ನು ಕೇಳಿತಂತೆ. ಅದಕ್ಕೆ ಹುಡುಗ "ಒಂದು ಹುಲಿ ಈಗಾಗಲೇ ನನ್ನ ಬೆನ್ನಟ್ಟಿ ಬಂದಿದೆ. ಅದನ್ನು ತಪ್ಪಿಸಿಕೊಂಡು ಬಂದಿದ್ದೇನೆ" ಎಂದು ಹಿಂದೆ ಹಿಂದೆ ನೋಡುತ್ತ ಓಡಲಾರಂಭಿಸಿದನಂತೆ. ಹುಲಿಯೂ ಅವನನ್ನು ಹಿಂಬಾಲಿಸಿತಂತೆ. ಅಷ್ಟರಲ್ಲಿ ಇನ್ನೊಂದು ಹುಲಿ ಅಡ್ಡಗಟ್ಟಿತಂತೆ. ಅದಕ್ಕೂ ಮೊದಲಿನ ಉತ್ತರವನ್ನೇ ಕೊಟ್ಟನಂತೆ. ಹೀಗೆ ಒಂದರ ಹಿಂದೆ ಒಂದು ಆರು ಹುಲಿಗಳು ಬೆನ್ನಟ್ಟಿದವಂತೆ. ಹುಡುಗನು ಓಡಿ ಸೋತಾಗ, ಅರಣ್ಯದ ಮಧ್ಯದಲ್ಲಿ ಕುಳಿತುಬಿಟ್ಟನಂತೆ. ಆರೂ ಹುಲಿಗಳು ಯಾರು ಮೊದಲು ಊಟ ಮಾಡಬೇಕೆಂದು ತಮ್ಮ ತಮ್ಮಲ್ಲಿ ಜಗಳವಾಡಿದವಂತೆ. ಒಂದೂ ಸೋಲೊಪ್ಪಿಕೊಳ್ಳದೆ ತಿರುಗಿ ಹುಡುಗನನ್ನು ಸುತ್ತುಗಟ್ಟಿ–ಅವನು ಓಡಿದಾಗ ತಾವೂ ಓಡಿದವಂತೆ. ದಿನವೆಲ್ಲ ಅವು ಹಾಗೆ ಓಡಿದ್ದರಿಂದ ಒಂದೊಂದೇ ಹುಲಿ ಕರಗಿ ತುಪ್ಪವಾಗಲಾರಂಭಿಸಿದವಂತೆ. ಹುಡುಗ ತನ್ನ ಬಟ್ಟೆಗಳಲ್ಲಿ ಆ ತುಪ್ಪವನ್ನು ತುಂಬಿ ತುಂಬಿ ತಂದು ಜೀವನದುದ್ದಕ್ಕೂ ತಿಂದನಂತೆ!

ಇಲ್ಲಿ ಎಲ್ಲರೂ-ಅತಿಥಿಗಳು ಮತ್ತು ಮನೆಯವರು-ಒಟ್ಟು ಕೂಡಿಯೇ ಊಟಕ್ಕೆ ಕೂಡುವುದು ಪದ್ಧತಿ. ಆದ್ದರಿಂದ ಬಡಿಸುವ ಪ್ರಶ್ನೆಯಿಲ್ಲ. ಊಟದಲ್ಲಿ 'ಭಿಡೆ' ಎಂಬ ಶಬ್ದ ಅಮೇರಿಕನ್ನರಿಗೆ ಅಪರಿಚಿತವಾದದ್ದು. ಹೀಗಾಗಿ ತಮಗೆ ಬೇಕಾದ ರುಚಿಯೆನಿಸಿದ ಪದಾರ್ಥವನ್ನು ಬೇಕಾದಷ್ಟು ಸಲ ತಾವೇ ಬಡಿಸಿಕೊಳ್ಳುತ್ತಾರೆ. ಬರಬರುತ್ತ ಅಮೇರಿಕನ್ನರು ಸಾಮಾನ್ಯವಾಗಿ ಮೆಚ್ಚಿಕೊಳ್ಳುವ ತಿಂಡಿಗಳು ಯಾವವೆಂದು ಕಂಡುಕೊಂಡೆ. ಅವಕಾಶ ಸಿಕ್ಕಾಗಲೆಲ್ಲಾ ಅವನ್ನು ಮಾಡಿ ಅವರಿಗೆ ಬಡಿಸುತ್ತಿದ್ದೆ.

ಅಮೇರಿಕೆಯಲ್ಲಿ ಸಿಗುತ್ತಿದ್ದ ಸಾಮಾನುಗಳಿಂದಲೇ ಉತ್ತಮ ಭಾರತೀಯ ಅಡಿಗೆ ಮಾಡಲು ಸಾಧ್ಯವಿದೆಯೆಂದು ಬೇಗ ತಿಳಿದುಕೊಂಡೆ. ಅವರಲ್ಲಿ ಸಿಗುತ್ತಿದ್ದ ಸಾಮಾನುಗಳಿಂದ ಯಾವ ಯಾವ ತಿಂಡಿಗಳು ಆಗಬಹುದೆಂಬುದನ್ನು ಕಾಣಿಸಬಹುದು:

Cream of Wheat (ಗೋದಿಯ ಸಜ್ಜಿಗೆ)	: ಇದರಿಂದ ಉಪ್ಪಿಟ್ಟು, ಶಿರಾ, ರವೆಯ ಉಂಡಿಗಳನ್ನು ತಯಾರಿಸಬಹುದು.
Heavy-Cream (ಹಾಲಿನ ದಪ್ಪ ಕೆನೆ)	: ಇದರಿಂದ ಬಾಸುಂದಿ ಮಾಡಬಹುದು
Light-Cream (ತೆಳುವಾದ ಕೆನೆ)	: ಇದನ್ನು ಹಣ್ಣಿನ ಸೀಕರಣೆ, 'ಫ್ರುಟ್ ಸೆಲಡ್'ಗಳಿಗೆ ಬಳಸಬಹುದು
All purpose Flour	: ಇದು ನಮ್ಮ ಮೈದಾ ಇದ್ದ ಹಾಗಿರುತ್ತದೆ. ಎಲ್ಲ ಕರಿದ ತಿಂಡಿಗಳನ್ನು ಮಾಡಬಹುದು.
Whole-Wheat-Flour (ಇಡಿ ಗೋದಿಯಹಿಟ್ಟು)	: ಚಪಾತಿ, ಪುರಿಗಳನ್ನು ಇದರಿಂದ ತಯಾರಿಸಬಹುದು.
Pancake mix-Flour	: ಇದರಿಂದ ದೋಸೆಗಳನ್ನು ಮಾಡಬಹುದು.
Uncle-Ben's Rice	: ಬೇರೆ ಬೇರೆ ತರದ ಭಾತ್, ಬಿರಿಯಾನಿಗಳನ್ನು ತಯಾರಿಸಬಹುದು.
Lentis-Tomatoes : Onion-Soup	: ಇವುಗಳಿಂದ ಸಾರು, ಹುಳಿ, ಸಾಂಬಾರುಗಳನ್ನು ಮಾಡಬಹುದು.
Butter-Milk (ಮಜ್ಜಿಗೆ)	: ಕಡಲೆಹಿಟ್ಟು ಬೆರೆಸಿ ಕಡಿ, ಪಳದ್ಯಗಳನ್ನು ಮಾಡಬಹುದು
Yogurt (ಮೊಸರು)	: ಮೊಸರನ್ನ, ಮೊಸರೊಡೆ ಮಾಡಬಹುದು.

Sour-Cream (ಹುಳಿ ಕೆನೆ) : ಶ್ರೀಖಂಡಕ್ಕೆ ಉತ್ತಮವಾಗಿದೆ.
Milk-Powder (ಹಾಲಿನ ಪುಡಿ) : ಇವುಗಳಿಂದ ಗುಲಾಬಜಾಮೂನು
Heavy-Cream (ಗಟ್ಟಿ ಕೆನೆ) : ಮಾಡಬಹುದು.
Ground-Meat (ಕುಟ್ಟಿದ ಮಾಂಸ) : ಖೀಮು, ಸಾಮೋಸಗಳನ್ನು ತಯಾರಿಸಬಹುದು.

ಇದಲ್ಲದೇ Red-pepper (ಮೆಣಸಿನಕಾಯಿ) Turmeric (ಅರಿಸಿನ) peprica (ಮೆಣಸಿನಪುಡಿ) Bay leaves (ಕರಿಬೇವು) ಇವುಗಳೂ ಯಾಲಕ್ಕಿ, ಗೋಡಂಬಿ, ಕೇಸರಿ ಮತ್ತು ಮಸಾಲೆಯ ಇತರ ಸಾಮಾನುಗಳೂ ಸಿಗುವುದರಿಂದ ಬೇಕಾದ ಅಡಿಗೆಯನ್ನು ತಯಾರಿಸಬಹುದು.

ನನ್ನ ಮೂರು ವರ್ಷದ ಪಾಕಶಾಸ್ತ್ರದ ಅನುಭವ ಅಮೇರಿಕ ಬಿಡುವ ಮೊದಲು ಕೈಕೊಂಡ ದೀರ್ಘ ಪ್ರವಾಸದಲ್ಲಿ ತುಂಬ ಪ್ರಯೋಜನಕಾರಿಯಾಯಿತು. ಆಗ ಅಲ್ಲಲ್ಲಿ ನನ್ನ ಪರಿಚಿತರಲ್ಲಿ ಇಳಿದುಕೊಳ್ಳುತ್ತಿದ್ದೆ. (ಸಾಮಾನ್ಯವಾಗಿ ಇಂಥ ಆತಿಥ್ಯ ಅಮೇರಿಕೆಯಲ್ಲಿ ಇಲ್ಲ) ಸಲಿಗೆಯಿದ್ದ ಮನೆಗಳಲ್ಲಿ ನೇರ ಅಡಿಗೆಮನೆಗೇ ಇಳಿಯುತ್ತಿದ್ದೆ. ಇದರಲ್ಲಿ ಪರಾರ್ಥಕ್ಕಿಂತ ತನ್ನ ಸ್ವಾರ್ಥವೇ ಹೆಚ್ಚು ಇತ್ತು ಎನ್ನಿ. ಅಮೇರಿಕನ್ನರಿಗೆ ಅತಿ ಪ್ರಿಯವಾದ ಭಾರತೀಯ ಊಟ ಸಿಗುತ್ತಿತ್ತಲ್ಲದೆ ನನ್ನ ನಾಲಗೆಗೂ ತೃಪ್ತಿಯಾಗುತ್ತಿತ್ತು. ಅಂದು ಮನೆಯಲ್ಲಿ ಹಬ್ಬದ ವಾತಾವರಣ. ಅಕ್ಕಪಕ್ಕದ ಕೆಲ ಗುರುತಿನವರೂ ಊಟಕ್ಕೆ ಬರುವರು. ಮನೆಯ ಯಜಮಾನಿಗಾದರೊ-ವಿಶಿಷ್ಟ ಅಡಿಗೆ ಸಿಗುವುದರ ಜೊತೆಗೆ ತನಗೆ ಅಡಿಗೆಯ ಜವಾಬ್ದಾರಿ ತಪ್ಪಿತೆಂಬ ಉಬ್ಬು, ನಾನು ಇಳಿದುಕೊಂಡ ಎಂಟ್ಹತ್ತು ಬೇರೆ ಬೇರೆ ಮನೆಗಳಲ್ಲಿ ಕಂಡುಬಂದ ಸಡಗರ-ಸಂಭ್ರಮಗಳು ಒಂದೇ ವಿಧವಾಗಿದ್ದವು. ಅವನ್ನಿಲ್ಲಿ ಸಂಗ್ರಹಿಸಿದ್ದೇನೆ.

ಮುಂಜಾನೆ ಇಂದಿನ ಅಡಿಗೆ ನನ್ನದು! ಎಂದು ಯಜಮಾನಿಗೆ ಹೇಳುವದೇ ತಡ, ಮನೆಯಲ್ಲಿದ್ದ ಎಲ್ಲಾ ಸಾಮಾನುಗಳನ್ನು ತೋರಿಸಿ. ಇನ್ನೇನೇನು ಬೇಕಾಗುವದೆಂದು ಕೇಳಿ ಬರೆದುಕೊಂಡು ತನ್ನೊಂದಿಗೆ ಸೂಪರ್ ಮಾರ್ಕೆಟ್ಟಿಗೆ ನನ್ನನ್ನೂ ಕರೆದುಕೊಂಡು ಹೋಗಿ ಬೇಕಾದ ಸಾಮಾನುಗಳನ್ನು ಕೊಳ್ಳುವಳು. ಬಿಲ್ ಅರೇಳು ಡಾಲರುಗಳಾದಾಗ ಇಷ್ಟು ಕಡಿಮೆಯಲ್ಲಿ ಆಗುವುದೇ ಎಂದು ವಿಸ್ಮಯಗೊಳ್ಳುವಳು. ಸರಿ, ಮನೆಗೆ ಬಂದು ತೋಳೇರಿಸಿ ನಾನು ಬಾಣಸಿಗನ ಅವತಾರ ತಾಳುವೆ. ಮನೆಯವರೆಲ್ಲ ಕುತೂಹಲದಿಂದ ಸುತ್ತುವರೆದು ನಿಲ್ಲುವರು. ಮುದುಕಿಯೊಬ್ಬಳು ಕಾಗದ, ಪೆನ್ಸಿಲ್ ತೆಗೆದುಕೊಂಡೇ ಬರುವಳು. ನನಗೆ ಬೇಕಾದ ಪಾತೇಲಿ, ಪಾತ್ರೆಗಳನ್ನು ತೆಗೆಯುತ್ತಿದ್ದಂತೆ ಹುಡುಗನೊಬ್ಬ 'ಮೊಮ್' ಅವನು ಸಾಂಟಾಕ್ಲೊಸನೆ? ಎಂದು ದಿಙ್ಮೂಢನಾಗಿ ಕೇಳಿದ. "ಅಕೋ, ಅದು ನೋಡು, ಭಾರತೀಯ ಜಾದೂಗಾರನಂತೆ ಅಲ್ಲಿಂದಿಷ್ಟು ಇಲ್ಲಿಂದಿಷ್ಟು ಸಾಮಾನು ಹಾಕಿ ಏನೇನೋ ಮಾಡುತ್ತಿದ್ದಾನೆ' ಎಂದು ಮಧ್ಯ ವಯಸ್ಕಳೊಬ್ಬಳು ಅಂದರೆ "ನೀನು ತಕ್ಕಡಿ, ಚಮಚ, ಏನನ್ನೂ ಬಳಸದೇ ಸಾಮಾನುಗಳನ್ನು ಹಾಕುತ್ತೀಯಲ್ಲ ಕ್ರಿಶ್? ಅಂದಾಜಿನಿಂದ ಹಾಕಿದರೆ ಪ್ರಮಾಣ ತಪ್ಪುವದಿಲ್ಲವೇ?" ಎಂದು ತರುಣಿಯೊಬ್ಬಳು

ಕೇಳಿದಳು. "ಭಾರತೀಯ ಮಹಿಳೆಯರೆಲ್ಲ ಇವನ್ನು ಉಪಯೋಗಿಸುವುದಿಲ್ಲ. ಎಲ್ಲ ಕಣ್ಣಿನ ಅಂದಾಜಿನಿಂದಲೇ ಮಾಡುತ್ತಾರೆ." ಎಂದಾಗ ಅವರಿಗೆ ಅಚ್ಚರಿ.

ಪುರಿಗಳ ಹಿಟ್ಟನ್ನು ನಾದುತ್ತಿದ್ದಂತೆ ಪ್ರೌಢೆಯೊಬ್ಬಳು ತಯಾರಿಸಿದ ಅಡುಗೆಯ ಒಂದೊಂದೇ ಹೆಸರುಗಳನ್ನು ಬರೆದುಕೊಳ್ಳಲಾರಂಭಿಸಿದಳು. ಪೂರಿಗಳು ಒಂದೊಂದಾಗಿ ಎಣ್ಣೆಯಲ್ಲಿ ಉಬ್ಬತೊಡಗಿದಾಗ 'ಹೇ ಮೊಮ್, ಮೊಮ್! ನೋಡಿಲ್ಲಿ ಹಿಟ್ಟನ್ನು ಚೆಂಡಿನಂತೆ ಉಬ್ಬಿಸಿಬಿಟ್ಟಿದ್ದಾನೆ ಕ್ರಿಶ್!" ಎಂದು ಮಕ್ಕಳು ಕೂಗಿಕೊಂಡವು. ಯಜಮಾನಿ ಓಡಿ ಬಂದು ನೋಡಿ. ಅಚ್ಚರಿಯಿಂದ "ಅದರಲ್ಲಿ ಹವೆ ಹೇಗೆ ತುಂಬಿದೆ ಕ್ರಿಶ್?" ಎಂದು ಕೇಳಿದಳು. ಇದನ್ನು ಕೇಳಿ ಅಮೇರಿಕನ್ ಮಹಿಳೆಯೊಬ್ಬಳು 'ಜಿಲೇಬಿಯಲ್ಲಿ ಸಕ್ಕರೆಯ ಪಾಕವನ್ನು ಪಂಪಿನಿಂದ ತುಂಬುತ್ತಾರೆಯೇ?" ಎಂದು ಉದ್ಗರಿಸಿದ್ದು ನೆನಪಿಗೆ ಬಂದಿತು. ಸೋಡಾ ವಗೈರೆ ಹಾಕದೇ ಪೂರಿ ಉಬ್ಬುತ್ತದೆ ಎಂದಾಗ ಆಕೆ ನಂಬಲಿಲ್ಲ. ಕೊನೆಗೆ ಅವಳಿಂದಲೇ ಒಂದು ಪುರಿ ಲಟ್ಟಿಸಿ ಕರಿಯಲು ಹಚ್ಚಿದೆ. ಅದು ಉಬ್ಬಿದಾಗ ಅವಳು ನಂಬಲೇ ಬೇಕಾಯಿತು.

ಹೊತ್ತಿಗೆ ಸರಿಯಾಗಿ ಮಸಾಲೆ-ಅನ್ನ, ಬಟಾಟೆಯ ಪಲ್ಯೆ, ಪುರಿ, ಸೀಕರಣೆ, ಟೊಮೆಟೊ ಭಜ್ಜಿ ಮುಂತಾದವುಗಳು ತಯಾರಾದವು. "ನಿನ್ನ ಗಮಗಮಿಸುವ ಅಡಿಗೆ ನಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಿದೆ ಕ್ರಿಶ್! ಬೇಗನೇ ಊಟ ಮಾಡೋಣ" ಎಂದು ಎಲ್ಲರೂ ಅವಸರ ಮಾಡುತ್ತಿದ್ದರು. ಇಷ್ಟರಲ್ಲಿ ಕೆಲವರು ಬಂದು ಪುರಿ, ಭಾಜಿಗಳ ರುಚಿ ನೋಡಿಯೂ ಆಗಿತ್ತು. ಊಟಕ್ಕೆ ಅಣಿಮಾಡುತ್ತಿದ್ದಂತೆ ಯಜಮಾನಿಗೆ ತಟ್ಟನೇ ಏನೋ ವಿಚಾರ ಬಂದಿತು. "ಕ್ರಿಶ್, ನಿಮ್ಮಲ್ಲಿ ಊಟ ಮಾಡುವ ಪದ್ಧತಿ ಎಂತಹದು?" ಎಂದು ಕೇಳಿದಳು. "ಪಟ್ಟಣಗಳಲ್ಲಿ ಟೇಬಲ್ ಮೇಲೆ, ಚಾಕು, ಮುಳ್ಳು-ಚಮಚಗಳಿಂದ ಊಟ ಮಾಡಿದರೂ ಹಳ್ಳಿಗಳಲ್ಲಿ, ದೊಡ್ಡೂರುಗಳಲ್ಲಿ ನೆಲದ ಮೇಲೆಯೇ ಕುಳಿತು ಕೈಬೆರಳುಗಳಿಂದ ಊಟ ಮಾಡುತ್ತಾರೆ" ಎಂದೆ. ಸರಿ ನೆರೆದವರಿಗೆಲ್ಲ ದೊಡ್ಡ ಕಾರ್ಪೆಟ್ ಒಂದನ್ನು ತಂದಳು. ಅದರ ಮೇಲೆ ಅಡಿಗೆಯನ್ನು-ಪ್ಲೇಟುಗಳನ್ನು ಜೋಡಿಸಲಾಯಿತು. ಆದರೆ ಅವರು ಎಣಿಸಿದಷ್ಟು ಸುಲಭವಾಗಿ ಕೆಳಗೆ ಕುಳಿತು ಊಟ ಮಾಡುವುದು ಶಕ್ಯವಿರಲಿಲ್ಲ. ಪದ್ಮಾಸನ ಹಾಕಿ ಕುಳಿತ ನನ್ನನ್ನು ಅನುಕರಿಸಲು ಹೋಗಿ ಸ್ಥೂಲಕಾಯ ದವನೊಬ್ಬ ಬೋರಲು ಬಿದ್ದು ನಗಿಸಿಕೊಂಡ. ಇನ್ನೊಬ್ಬ ನಮಾಜು ಮಾಡಲು ಕೂಡ್ರುವಂತೆ ಕುಳಿತ. ಮೊಣಕಾಲ ಮೇಲೆ ಲಂಗ ತೊಟ್ಟ ಮಹಿಳೆಯೊಬ್ಬಳು ಹೇಗೆ ಕೂಡಬೇಕೆಂದು ತಿಳಿಯದೇ ಬಸುರಿಯಂತೆ ಎರಡೂ ಕಾಲು ಬಿಟ್ಟು ಕುಳಿತಳು. ಮಗುದೊಬ್ಬ ಯಾವ ಆಸನವೂ ಬಗೆಹರಿಯದೇ ಕಪ್ಪೆಯ ಆಸನವನ್ನು ಕೈಕೊಂಡ. ಅಂತೂ ಊಟಕ್ಕೆ ಕುಳಿತವರ ಭಂಗಿಗಳು ನಾನಾವಿಧವಾಗಿದ್ದವು.

ಅಮೇರಿಕನ್ನರಿಗೆ ಬೇರಾವ ಧಾರ್ಮಿಕತೆಯಿಲ್ಲದಿದ್ದರೂ ಅಂದಿನ ಬ್ರೆಡ್-ಬೆಣ್ಣೆಗಳನ್ನು ಕೊಡಮಾಡಿದ್ದಕ್ಕಾಗಿ ದೇವರಿಗೆ. ಧನ್ಯವಾದ ಅರ್ಪಿಸದೇ ಯಾರೂ ಊಟಕ್ಕೆ ಕೂಡುವದಿಲ್ಲ. ಅಂದು ಭಾರತೀಯ ಪ್ರಾರ್ಥನೆಯಾಗಬೇಕು ಎಂದು ಯಾರ ತಲೆಯಲ್ಲೊ ವಿಚಾರ ಬಂದಿತು. ಸರಿ ನನಗೆ ಪ್ರಾರ್ಥನೆ ಹೇಳೆಂದರು. ನಮ್ಮಲ್ಲಿ ಬ್ರೆಡ್-ಬೆಣ್ಣೆಯ ಪ್ರಾರ್ಥನೆ ಇಲ್ಲದ್ದರಿಂದ "ಸಹನಾವವತು, ಸಹನೌ ಭುನಕ್ತು...." ಹೇಳಿದೆ. ಅದರ ಭಾಷೆ-ಅರ್ಥಗಳನ್ನು ಕೇಳಿ ತಿಳಿದುಕೊಂಡರು. ನಾನಿನ್ನೂ ಅರ್ಥ ಹೇಳುತ್ತಿರುವಾಗಲೇ ಯಜಮಾನಿ ಊಟ

ಪ್ರಾರಂಭಿಸಿ ತನ್ನ ಹೊಸ ಬಟ್ಟೆಯ ಮೇಲೆ ಮಸಾಲೆ-ಅನ್ನ ಕೆಡವಿಕೊಂಡಿದ್ದಳು. ಇನ್ನೊಬ್ಬನು ಅವಳ ಫಜೀತಿಗೆ ನಗುತ್ತಿದ್ದಂತೆ ಬೆರಳುಗಳಿಂದ ಎತ್ತಿದ ಭಜ್ಜಿಯನ್ನು ಮೊಳಕೈ ತನಕ ಬರುವಂತೆ ಇಳಿಬಿಟ್ಟಿದ್ದ. ಅತಿಥಿ-ಮಹಿಳೆಯೊಬ್ಬಳು ಸ್ವಲ್ಪ ಹೊತ್ತು ಯೋಚಿಸಿ ತಾನು ಭಾರತೀಯ ಅಡಿಗೆಯ ರುಚಿ ನೋಡಲು ಬಂದಿದ್ದೇನೆಯೇ ಹೊರತು ಬಟ್ಟೆ ಕೆಡಿಸಿಕೊಳ್ಳಲಿಕ್ಕಲ್ಲ. ಅಲ್ಲದೇ ಕೈಯಿಂದ ಊಟ ಮಾಡಿದರೆ ಅಡಿಗೆಯ ರುಚಿಯೂ ತಿಳಿಯಲಿಕ್ಕಿಲ್ಲ! ಎಂದು ಸ್ಪಷ್ಟವಾಗಿ ಹೇಳಿ, ಎದ್ದು ಹೋಗಿ ಚಮಚ, ಮುಳ್ಳು-ಚಮಚಗಳನ್ನು ತಂದಳು. ಸರಿ ಎಲ್ಲರೂ, ಎದ್ದು ಹೋಗಿ ತಾವೂ ತಂದರು. 'ನಮಾಜಾಸನ', 'ಮಂಡೂಕಾಸನ'ಗಳಲ್ಲಿ ಕುಳಿತವರು ತಮಗೂ ತರುವಂತೆ ಕೂಗಿ ಕೇಳಿಕೊಂಡರು.

ಮಾತಾಡುತ್ತಾಡುತ್ತ ಊಟ ಮಾಡುವ ರೂಢಿಯುಳ್ಳ ಅಮೇರಿಕನ್ನರು ಅಂದೇಕೋ ಮೌನವಾಗಿಯೇ ಊಟ ಮಾಡಹತ್ತಿದರು. ಅರ್ಧ ಊಟವಾದಾಗ ಮೊದಲಿಗೆ ಮಾತನಾಡಿದವ ಐದು ವರ್ಷದ ಹುಡುಗ. "ಕ್ರಿಶ್, ನೀನು ಚೆಫ್‌ನೇ? (Chef ಎಂದರೆ ಅಮೇರಿಕೆಯಲ್ಲಿ ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಕೆಲಸ ಮಾಡುವ ಪಾಕ-ಪ್ರಮುಖ. ಈತನಿಗೆ ಅಲ್ಲಿ ತುಂಬ ಗೌರವವಿದೆ) ಇರಲೇಬೇಕು. ನನ್ನ ಮೊಮ್ ಎಷ್ಟೋ ವರ್ಷಗಳಿಂದ ಅಡಿಗೆ ಮಾಡುತ್ತಿದ್ದರೂ 'ಹೆಂಬರಗರ್' ಮತ್ತು 'ಸ್ಟೇಕ'ಗಳನ್ನೇ ಹೆಚ್ಚಾಗಿ ಮಾಡುತ್ತಾಳೆ..... ಮೊಮ್, ನೀನೇಕೆ ಕ್ರಿಶ್‌ನಿಂದ ಈ ಅಡಿಗೆ ಕಲಿಯಬಾರದು? ನನಗೆ ಇದು ಬಹಳ ಸೇರುತ್ತದೆ" ಎಂದ. ಮಗನ ಮಾತಿನಿಂದ ತಾಯಿಗೆ ಬಹಳ ಸಂಕೋಚವೆನಿಸಿತು. ಸ್ವರ ತಗ್ಗಿಸಿ ಆಕೆ "ಹಾಗೆಲ್ಲ ಅನ್ನಬಾರದು ಮಗು. ಕ್ರಿಶ್ ನಮ್ಮ ದೇಶಕ್ಕೆ ಬೇರೆ ವಿಷಯ ಕಲಿಯಲು ಬಂದಿದ್ದಾನೆ. ಅವನು ಡಾಕ್ಟರ್ ಪದವಿ ಪಡೆಯಲಿದ್ದಾನೆ. ನಮ್ಮ ದೇಶದಲ್ಲಿ 'ಚೆಫ್'ಗೆ ಬಹಳ ಮನ್ನಣೆ ಇದೆ. ಆದರೆ ಅವರ ದೇಶದಲ್ಲಿ ಈ ಬಿರುದು ಅಪಮಾನ ಮಾಡಿದಂತೆ ಆಗುವದಂತೆ. ಕ್ರಿಶ್‌ನು ಕಲಿಯಲು ಜಾಣನಿದ್ದಂತೆ, ಅಡಿಗೆಯಲ್ಲೂ ಜಾಣನಿದ್ದಾನೆ. ಜಾಣರಿದ್ದವರಿಗೆ ಎಲ್ಲ ವಿದ್ಯೆಯೂ ಬಲು ಬೇಗ ಬಂದುಬಿಡುತ್ತದೆ. ನೀನೂ ಕಲಿತು ಜಾಣನಾಗು..... ಅಂದರೆ ನಿನಗೂ ಎಲ್ಲ ಬರುತ್ತದೆ" ಎಂದು ಹೇಳಿದಳು. ತಾಯಿಯ ಮಾತಿಗೆ ಹುಡುಗನ ಪೂರ್ಣ ಸಮ್ಮತಿಯಿಲ್ಲದಿದ್ದರೂ, ಅತಿಥಿಗಳ ಎದುರು ತಾನು ಹಾಗೆ ಮಾತನಾಡಿದ್ದು ತಾಯಿಗೆ ಸರಿಬರಲಿಲ್ಲವೆಂದು ತಿಳಿದು ಸುಮ್ಮನಾದ.

ಮನೆಯ ಯಜಮಾನ, ಯಜಮಾನಿಯನ್ನು ಕುರಿತು "ನನಗೆ ಬಟಾಟಿ ಬಹಳ ಸೇರುತ್ತದೆ. ಆದರೆ ನಿನ್ನ ಬಟಾಟೆ-ಹಿಟ್ಟು (mashed-potato) ತಿಂದು ಸಾಕಾಗಿ ಹೋಗಿದೆ. ನೀನು ಈ ತರದ ಪಲ್ಯ ಮಾಡಲು ಕಲಿಯಲ್ಲ?" ಎಂದು ಒಲಿಸುವ ಧ್ವನಿಯಲ್ಲಿ ಹೇಳಿದ. ಅತಿಥಿಯೊಬ್ಬ 'ನನಗೆ ಅನ್ನ ಬಹಳ ಸೇರುತ್ತದೆ. ಆದರೆ ಅದು ಇಷ್ಟು ಮಧುರವಾಗಿ ಬಿಡಿಬಿಡಿಯಾಗಿ ಬೇಯಲು ಸಾಧ್ಯವಿದೆಯೆಂದು ಎಂದೂ ಅನಿಸಿರಲಿಲ್ಲ.' ಎಂದು ನಾಲಿಗೆ ಚಪ್ಪರಿಸುತ್ತ ಹೇಳಿದ. ಮನೆಯ ಯಜಮಾನಿ 'ಕ್ರಿಶ್' ನೀನು ನಮ್ಮವೇ ಪಾತ್ರೆ ನಮ್ಮವೇ ಸಾಮಾನು, ಮಸಾಲೆಗಳನ್ನು ಹಾಕಿ ಇಷ್ಟು ಸ್ವಾದಿಷ್ಟ ಅಡಿಗೆ ತಯಾರಿಸಿದ್ದಿ. ಅಲ್ಲದೆ ೨-೩ ಅಡಿಗೆಗೆ ಒಂದೇ ಮಸಾಲೆ ಹಾಕಿದರೂ ಅವುಗಳ ರುಚಿ ಭಿನ್ನವಾಗಿದೆಯಲ್ಲ? ನಿನಗೆ ಯಕ್ಷಿಣೀ ವಿದ್ಯೆ ಬರುತ್ತಿರಬೇಕು. ಇಲ್ಲವೇ ನೀನು ಹುಟ್ಟಾ ಕಲಾಕಾರನಿರಬೇಕು" ಎಂದು ಬಾಯ್ತುಂಬ ಹೊಗಳಿದಳು. ಮುದುಕಿ "ನೀನು ಕಲಿತು ಡಿಗ್ರಿ ಪಡೆದು ಗಳಿಸುವ

ಹಣಕ್ಕಿಂತ ನಮ್ಮ ದೇಶದಲ್ಲಿ ಒಂದು ಹೋಟೆಲ್ ತೆಗೆದರೆ ಹೆಚ್ಚು ಹಣಗಳಿಸುವಿ. ನಮ್ಮ ಜನರಿಗೆ ತಿನ್ನುವ ಚಪಲ ಬಹಳ; ತಿಂಡಿಗೆ ರೊಕ್ಕ ಸುರಿಯುತ್ತಾರೆ..... ಮೊನ್ನೆ ಒಂದು ಹೋಟೆಲಿಗೆ ಹೋಗಿದ್ದೆವು. ಮೂರು ನಾಲ್ಕು ಪಕ್ವಾನ್ನಗಳಿಗೆ 'ಆರ್ಡರ್' ಕೊಟ್ಟೆವು. ಎಲ್ಲದಕ್ಕೂ ಒಂದೇ ರುಚಿ ಇರಬೇಕೆ? ನೀನೊಂದು ಭೋಜನಾಲಯ ತೆರೆದರೆ ಇಂತಹ ಹೋಟೆಲ್‌ಗಳೆಲ್ಲ ದಿವಾಳಿ ತೆಗೆಯುವುದು ಖಂಡಿತ" ಎಂದಳು. ಎಲ್ಲರೂ ಆಕೆಯ ಮಾತನ್ನು ಅನುಮೋದಿಸಿದರು.

ಭಾರತೀಯ ದೃಷ್ಟಿಯಿಂದ ಒಂದು ಊಟದ ಹೊತ್ತಿಗೆ ಅಮೇರಿಕನ್ನರು ಬಹಳ ಕಡಿಮೆ ಊಟ ಮಾಡುತ್ತಾರೆ. ಆದರೆ ಅಡಿಗೆ ರುಚಿಯಾದರೆ ಅವರೂ ಭಾರತೀಯರನ್ನು ಹಿಂದೆ ಹಾಕುತ್ತಾರೆಂದು ಮೊದಲನೇ ಬಾರಿ ಕಂಡುಕೊಂಡೆ. ಕಂಠಮಟ ಊಟ ಮಾಡಿದ್ದರಿಂದ ಊಟ ಮುಗಿದರೂ ಏಳಲಿಕ್ಕಾಗದೇ ಕುಳಿತಲ್ಲಿಯೇ ಕುಳಿತಿದ್ದರು. ಮೆಲ್ಲನೆ ಎದ್ದು ಹೋಗಿ 'ರಿಫ್ರಿಜಿರೇಟರ್'ನೊಳಗಿಂದ 'ಸೀಕರಣಿ' (ಫ್ರುಟ್‌ಸೆಲೆಡ್) ತಂದೆ. ಎಲ್ಲರೂ "ನಿನ್ನ ಊಟ ಮುಗಿದಿಲ್ಲವೇ?" ಎಂದು ಪರಮಾಶ್ಚರ್ಯ ಸೂಚಿಸಿ ತಮಗೇನು ಈ ತಿಂಡಿಯಲ್ಲಿ ಆಸಕ್ತಿಯಿಲ್ಲವೆಂದು ತೋರಿಸಿದರು.

"ಅಯ್ಯೋ! ಇಷ್ಟೊಂದು 'ಫ್ರುಟ್‌ಸೆಲೆಡ್' ತಯಾರಿಸಿಬಿಟ್ಟೆನಲ್ಲ" ಎಂದು ಒಂದು ಕ್ಷಣ ನೊಂದುಕೊಂಡೆ. ಆದರೂ ರುಚಿ ನೋಡಿರೆಂದು ಬಲತ್ಕಾರದಿಂದ ಎಲ್ಲರಿಗೂ ಸ್ವಲ್ಪಸ್ವಲ್ಪ ಹಾಕಿದೆ. ಕೆನೆ, ಹಣ್ಣು-ಹಂಪಲು, ಬಾದಾಮು, ಗೋಡಂಬಿ, ಕೇಶರ, ಯಾಲಕ್ಕಿಗಳನ್ನು ಹಾಕಿದ ಪದಾರ್ಥ ಯಾರಿಗೆ ತಾನೇ ಸೇರದು? ಐದೇ ನಿಮಿಷಗಳಲ್ಲಿ ಇನ್ನೊಂದಿಷ್ಟು ಮಾಡಬೇಕಿತ್ತು ಎನಿಸುವಂತಾಯಿತು. "ಇಂಥ ಫ್ರುಟ್‌ಸೆಲೆಡ್ ನಾವು ಹೆಚ್ಚು ತಿನ್ನದಿರಲಿ ಎಂದು ಇತರ ಪದಾರ್ಥಗಳಿಂದಲೇ ಹೊಟ್ಟೆ ತುಂಬಿಸಿಕೊಳ್ಳುವಂತೆ ಮಾಡಿದಿಯಾ?" ಎಂದು ಮನೆಯೊಡತಿಯನ್ನು ಆಕ್ಷೇಪಿಸಿದರು. "ಕ್ರಿಶ್, ಯಾವಾಗ ಅದನ್ನು ತಯಾರಿಸಿ 'ಫ್ರಿಜ್'ದಲ್ಲಿ ಇಟ್ಟಿದ್ದನೊ ಏನೊ! ನಾನು ಎಲ್ಲ ಅಡಿಗೆಯ ರುಚಿ ನೋಡಿದೆ. ಆದರೆ ಇದು ಮಾಡಿದ್ದು ಗೊತ್ತೇ ಇರಲಿಲ್ಲ." ಎಂದು ಆಕೆ ತನ್ನನ್ನು ಸಮರ್ಥಿಸಿ ಕೊಂಡಳು. ಯಾರಿಗೂ ಎದ್ದು ಹೊರಮನೆಯಲ್ಲಿ ಬಂದು ಕೂಡುವ ಧೈರ್ಯವಿರಲಿಲ್ಲ. ಎಲ್ಲರೂ ತೇಗುತ್ತ ಕುಳಿತಲ್ಲಿಯೇ ಕುಳಿತುಬಿಟ್ಟಿದ್ದರು. ಆದರೂ ಅಜೀರ್ಣವಾಗಬಹುದೆಂದು ಹೆದರಿದ ವಯಸ್ಕರಿಬ್ಬರು ಈಗಾಗಲೇ ಮನೆಯ ಯಜಮಾನಿಯ ಹತ್ತಿರ 'ಫ್ರುಟ್‌ಸಾಲ್ಟ್' ಕೇಳಿ ತೆಗೆದುಕೊಂಡು ಬಿಟ್ಟಿದ್ದರು! "ಸೆರೆ ಕುಡಿದ ಅಮಲು ಊಟದಲ್ಲಿಯೂ ಬರುತ್ತದಲ್ಲ!" ಎಂದು ರಸಿಕ ಅತಿಥಿಯೊಬ್ಬ ನುಡಿದ. ಮನೆಯೊಡತಿ ತನ್ನ ಪಾಕ ಮಾಹಿತಿಯ ಪುಸ್ತಕ ತಂದು ಅಡಿಗೆ, ಅವುಗಳ ವಿಧಾನ ಒಂದೊಂದಾಗಿ ಬರೆದುಕೊಂಡಳು. 'ಚಪಾಟಿ' (ಚಪಾತಿ) 'ಭರಟ್' (ಭರತ) ಮುಂತಾದವೆಲ್ಲ ಆಕೆಯ ಟಿಪ್ಪಣಿ-ಪುಸ್ತಕದಲ್ಲಿ ಬರಹರೂಪದಲ್ಲಿ ನಿಂತವು.

ಮಾತನಾಡುತ್ತ ಊಟ ಸ್ವಲ್ಪ 'ತಗ್ಗುತ್ತಲೇ' ಅತಿಥಿಗಳು ಹೊರಟು ನಿಂತರು. "ಕ್ರಿಶ್ ನಾವು ಊಟಕ್ಕೆಂದೇ ಬಂದರೂ ಇಷ್ಟು ಉತ್ಕೃಷ್ಟ ಭೋಜನ ನಮಗೆ ದೊರೆಯುತ್ತದೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ" ಎಂದರು. ಧನ್ಯವಾದಗಳು ಹೊರೆಹೊರೆಯಾಗಿ ಬಂದವು. ಮನೆಯೊಡತಿ "ನೀನು ಅಡಿಗೆಯಲ್ಲಿ ಇಷ್ಟು ನಿಪುಣನೆಂದು ಗೊತ್ತಿದ್ದರೆ ನನ್ನ ಇನ್ನು ಕೆಲವು ಆತ್ಮೀಯರನ್ನು ಬರಮಾಡಿಕೊಳ್ಳುತ್ತಿದ್ದೆನಲ್ಲ" ಎಂದು ಹಳಹಳಿಸಿದಳು. "ನೀನು ಇನ್ನೊಮ್ಮೆ ನಿನ್ನ ಪತ್ನಿಯೊಂದಿಗೆ ನಮ್ಮ ದೇಶಕ್ಕೆ ಬಂದಾಗ

ಅರ್ಧ ಊರನ್ನೇ ಊಟಕ್ಕೆ ಕರೆಯುತ್ತೇನಂತೆ" ಎಂದು ಮುಗುಳು ನಕ್ಕಳು. ಚೂರು ಚಾರು ಉಳಿದ ಅಡಿಗೆಯನ್ನು ಜಾಗತ್ರೆಯಾಗಿ 'ಫ್ರಿಜ್'ನಲ್ಲಿ ತೆಗೆದಿಟ್ಟಳು. ಸಾಮಾನ್ಯವಾಗಿ ಅಮೇರಿಕನ್ನರು ರವಿವಾರ ರಾತ್ರಿ ಊಟ ಮಾಡುವುದಿಲ್ಲ. ಆದರೂ ಅಂದು ರಾತ್ರಿ ಇನ್ನೊಮ್ಮೆ ಕುಳಿತು ಉಳಿದದ್ದೆಲ್ಲ ಮುಗಿಸಿದರು.

ಬೇರೆ ಬೇರೆ ಪಟ್ಟಣಗಳಲ್ಲಿ ಅನೇಕ ಅಮೇರಿಕನ್ ಕುಟುಂಬಗಳೊಡನೆ ಉಳಿದು ಕೊಳ್ಳುವ ಸಂದರ್ಭ ಬಂದಿತ್ತಷ್ಟೆ. ಅಲ್ಲಲ್ಲಿ ಅವರಿಗೆ ಪ್ರಿಯವಾದ ವಸ್ತುವನ್ನು ಭಾರತೀಯ ಪದ್ಧತಿಯಂತೆ ಮಾಡಿ ಬಡಿಸುತ್ತಿದ್ದೆ. ಹೆಮಲಿನ್ ಕುಟುಂಬದವರಿಗೆ ಮೀನು ಎಂದರೆ ಪಂಚಪ್ರಾಣವಂತೆ. ಆದರೆ ಹೆಲನ್‌ಳಿಗೆ ಅದನ್ನು ಮಾಡಲು ಬಾರದ್ದರಿಂದ ಸಿದ್ಧವಾದ ಡಬ್ಬಿಯ (canned) ಮೀನು ತಂದು ತಿನ್ನುತ್ತಿದ್ದರಂತೆ. ಅಂದು ಡಿಕ್‌ರ ಸಂಗಡ ಮೀನಿನ ಮಾರ್ಕೇಟ್‌ಗೆ ಹೋಗಿ ಒಳ್ಳೆಯ ಮೀನು ತಂದು ಹುರಿದು (fish-fry) ಬಡಿಸಿದೆ. ನಾವು ಊಟಕ್ಕೆ ಕುಳಿತಾಗ ತಿನ್ನುವ ಆತುರದಲ್ಲಿ ಹೆಮಲಿನ್ನರ ಹಿರಿಯ ಮಗಳಿಗೆ ಮೀನಿನ ಮುಳ್ಳೊಂದು ಗಂಟಲಲ್ಲಿ ಸಿಕ್ಕಿಕೊಂಡಿತು. ಮೀನಿನ ಚಿರಪರಿಚಿತನಾದ ನಾನು ಅವಳಿಗೆ ಬಾಯಿ ತೆರೆಯುವಂತೆ ಹೇಳಿ ಬೆರಳು ಹಾಕಿ ಮುಳ್ಳನ್ನು ಅನಾಯಸವಾಗಿ ಹೊರತೆಗೆದೆ. ವಿಸ್ಮಯಪಡುತ್ತ ಹೆಮಲಿನ್ನರು 'ಕ್ರಿಶ್, ನೀನಿಲ್ಲದಿದ್ದರೆ ನಾವು ಡಾಕ್ಟರರ ಹತ್ತಿರ ಹೋಗುವಂತಾಗಿ ದೊಡ್ಡ ಪ್ರಕರಣವೇ ಆಗುತ್ತಿತ್ತು" ಎಂದರು. ಮಾಂಸಪ್ರಿಯ ಅಮೇರಿಕನ್ನರಿಗೆ ಬಿರಿಯಾನಿ, ಖೀಮಾ, ಬೀಫ್ ಸಮೋಸಾ ಮಾಡಿ ಬಡಿಸುತ್ತಿದ್ದೆ.

ತಿರುಗಿ ಬಂದ ಮೇಲೂ ಇವರೊಂದಿಗೆ ಪತ್ರವ್ಯವಹಾರ ನಡೆದೇ ಇತ್ತು. ಬರೆದಾಗೊಮ್ಮೆ ಭಾರತೀಯ ಭೋಜನ ಸ್ಮರಣೆಯಿರುತ್ತಿತ್ತು. ಒಬ್ಬ ಮಹಿಳೆ "ಮಕ್ಕಳೆಲ್ಲ ಚಪಾತಿ ಮಾಡೆಂದು ಪೀಡಿಸುತ್ತಾರೆ. ಒಂದೆರಡು ಸಲ ಮಾಡಿಯೂ ಇದ್ದೆ. ಆದರೆ ಅವು ನಾನು ಮಾಡಿದ ಚಪಾತಿಯನ್ನು ಸ್ವೀಕರಿಸಲು ನಿರಾಕರಿಸಿದವು. ನನ್ನ ಭಾರತೀಯ ಅಡಿಗೆಯಿಂದ ನನಗೇ ನಿರಾಶೆಯಾಗಿದೆ" ಎಂದು ಬರೆದಿದ್ದಳು. ಅಮೇರಿಕೆಯಲ್ಲಿ ಭಾರತೀಯ ಅಡಿಗೆಯ ನೈಪುಣ್ಯ ಪಡೆದಿದ್ದರೂ ಅದನ್ನೆಲ್ಲ ಬರುವಾಗ ಸಾಗರದಾಚೆಯೇ ಬಿಟ್ಟುಬರಲು ಮರೆಯಲಿಲ್ಲ.

* * *

ಅಮೇರಿಕನ್ ಕುಟುಂಬದೊಡನೆ

"ಈ ವಾರಾಂತ್ಯದಲ್ಲಿ ಅಮೇರಿಕನ್ ಕುಟುಂಬದೊಡನೆ ಕಳೆಯಬೇಕೆಂದಿದ್ದರೆ ಈ ಕಾರ್ಡನ್ನು ನಮ್ಮ ಆಫೀಸಿಗೆ ಗುರುವಾರದೊಳಗೆ ತರಬೇಕು" ಎಂದು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಕೇಂದ್ರದಿಂದ ಸಂದೇಶ ಒಂದು ಬಂದಿತ್ತು. ಅಮೇರಿಕನ್ನರನ್ನು ಅರಿಯಲು ಪ್ರಯತ್ನಿಸುತ್ತಿದ್ದವ, ಅವರೊಡನೆ ಬೆರೆಯುವ ಈ ಸುಸಂಧಿ ದೊರಕಿದರೆ ಬಿಟ್ಟಾನೆಯೇ? ಒಪ್ಪಿಗೆಯ ಕಾರ್ಡು ಆಫೀಸಿಗೆ ತಲುಪಿದ ಮರುದಿನ ಕುಟುಂಬದ ಯಜಮಾನಿ ನನಗೆ ಫೋನ ಮಾಡಿದಳು. "ಹಾಯ್ ಹಾಯ್"ಗಳು ಮುಗಿದ ನಂತರ ತಾನು ಯಾರು, ತನ್ನ ಪತಿ ಏನು ಮಾಡುತ್ತಾರೆ ಎಲ್ಲವನ್ನೂ ವಿವರಿಸಿದಳು. "ಈ ರವಿವಾರ ನಮ್ಮ ಮನೆಗೆ ಅತಿಥಿಯಾಗಿ ದಯಮಾಡಿಸಲು ಒಪ್ಪಿದ್ದಕ್ಕೆ ಬಹಳ ಧನ್ಯವಾದಗಳು. ಆದ್ದರಿಂದ ನಿಮ್ಮ ಮನೆಯ ವಿಳಾಸ ಸರಿಯಾಗಿ ತಿಳಿಸುವಿರಾ?" ಎಂದಳು. ಮನೆಯನ್ನು ಮುಟ್ಟುವ ದಾರಿ ವಿವರಿಸಿ, ಹತ್ತು ನಿಮಿಷ ಮುಂಚಿತವಾಗಿ ಹೊರಗೆ ಬಂದು ನಿಲ್ಲುವೆನೆಂದು ನಿವೇದಿಸಿದೆ.

ಅಮೇರಿಕೆಯಲ್ಲಿ ಮನೆ ಹುಡುಕುವಷ್ಟು ಸುಲಭವಾಗಿ ಭಾರತದಲ್ಲಿ ಹುಡುಕಲಾಗಲಿಕ್ಕಿಲ್ಲ. ಅಲ್ಲಿಯ ಪಟ್ಟಣಗಳಲ್ಲಿ ಉದ್ದಕ್ಕೆ ಚಾಚಿದ ರಾಜಮಾರ್ಗಗಳನ್ನು 'ಎವ್ಹೆನ್ಯೂ' ಎಂದೂ ಅದಕ್ಕೆ ಕೂಡುವ ಚಿಕ್ಕ ಮಾರ್ಗಗಳನ್ನು 'ಸ್ಟ್ರೀಟ್' ಎಂದೂ ಸ್ಟ್ರೀಟ್‌ಗಳನ್ನು ಜೋಡಿಸುವ ರಸ್ತೆಗಳಿಗೆ 'ಪ್ಲೇಸ್'ಗಳೆಂದೂ ಕರೆಯುವದು ವಾಡಿಕೆ. ಎರಡು ರಸ್ತೆಗಳ ನಡುವೆ ಇರುವ ಕಟ್ಟಡಗಳ ಗುಂಪಿಗೆ 'ಬ್ಲಾಕ್' ಎನ್ನುವರು. ಪ್ರತಿಯೊಂದು ಬ್ಲಾಕನಿಂದ ಇನ್ನೊಂದು ಬ್ಲಾಕ್‌ಗೆ ಹೋದರೆ ಮನೆಯ ನಂಬರುಗಳಲ್ಲಿ ನೂರು ಅಂಕಿಗಳ ಅಂತರವಿರುತ್ತದೆ. ಮತ್ತು ರಸ್ತೆಯ ಒಂದು ದಿಕ್ಕಿನ ಮನೆಗಳಿಗೆ 'ಸರಿ' ನಂಬರುಗಳಿದ್ದರೆ ಇನ್ನೊಂದು ದಿಕ್ಕಿನವಕ್ಕೆ 'ಬೆಸ' ನಂಬರುಗಳಿರುತ್ತವೆ. ಆದ್ದರಿಂದ '೪೯೬, 'ವೆಸ್ಟ್-ಕಾಟ್-ಸ್ಟ್ರೀಟ್' ಅಂದರೆ ರಸ್ತೆಯ ಮೇಲಿನ ನಾಲ್ಕನೇ 'ಬ್ಲಾಕ್'ನಲ್ಲಿ ಎಡಕ್ಕೆ ಇರುವ ಮನೆಯೆಂದು ಯಾರಿಗೂ ಹುಡುಕುವ ಮೊದಲೇ ತಿಳಿದುಹೋಗುತ್ತದೆ.

ಅಂದು ಮುಂಜಾವಿನಿಂದ ಒಳ್ಳೇ ಸಡಗರದಲ್ಲಿದ್ದೆ. ಅಮೇರಿಕನ್ ಕುಮಾರಿ ಮೊದಲನೇ ಸಲ 'ಡೇಟಿಂಗ್'ಗೆ ಹೋಗುವ ಸಂಭ್ರಮ, ಉತ್ಸಾಹ ನನ್ನಲ್ಲಿ ತುಂಬಿದ್ದವು. ಮೊದಲ ಸಲ ಕೌಟುಂಬಿಕ ಅಮೇರಿಕನ್ನರನ್ನು ಭೆಟ್ಟಿಯಾದಾಗ ಕೈಜೋಡಿಸಿ ನಮಸ್ಕಾರ ಮಾಡಬೇಕೆ, ಏನು ಕೈ ಕುಲಕಬೇಕೆ ಎಂಬ ಒಂದು ಅನುಮಾನ ಬಂದು ಎರಡನ್ನೂ ಕನ್ನಡಿಯಲ್ಲಿ ಅಭಿನಯಿಸಿ ನೋಡಿದೆ. ಕೈ ಕುಲುಕುವುದು ಸಾಮಾನ್ಯವಾಗಿದ್ದರೂ ನಮ್ಮ ಪದ್ಧತಿಯನ್ನು ಏಕೆ ಬಿಡಬೇಕು ಎಂಬ ಸ್ವಾಭಿಮಾನ ಒಳಗೇ ಕುಮ್ಮಕ್ ನಡೆಸಿತ್ತು. ಆದ್ದರಿಂದ ಮನೆಯೊಳಗೆ ಕಾಲಿಡುತ್ತಲೇ ಮೊದಲು ನಮಸ್ಕಾರ ಮಾಡುವದೆಂದೂ ಅಮೇಲೆ ಬೇಕೆನಿಸಿದರೆ ಕೈಕುಲುಕುವದೆಂದೂ ನಿರ್ಧರಿಸಿಕೊಂಡೆ. ಹೇಗೆ ಕೂಡ್ರುವುದು, ಹೇಗೆ ತಿನ್ನುವುದು,

ಎಲ್ಲದರ ಬಗ್ಗೆಯೂ ಮನಸ್ಸಿನಲ್ಲಿ ಚಿತ್ರಿಸಿಕೊಂಡೆ. ಎರಡು ಗಂಟೆಯಿಂದಲೇ ಹೊರಡುವ ತಯಾರಿ ನಡೆಸಿದೆ. ಮೂರು ಗಂಟೆಗೆ ಸಿದ್ಧತೆ ಮುಗಿದಿತ್ತು. ವೇಳೆ ಹೋಗದಂತಾಯಿತು. 'ಟಿ.ವ್ಹಿ.' ಹಚ್ಚಿ ನೋಡಿದೆ, ಕೇಳಿದೆ. ಅದೂ ಬೇಸರ ಬಂತು. ಪುಸ್ತಕವೊಂದನ್ನು ತೆರೆದು ಪುಟಗಳ ಮೇಲೆ ಸುಮ್ಮನೆ ಕಣ್ಣಾಡಿಸಿದೆ. ಅದೂ ಬೇಡವಾಯಿತು. ಮೂರೂವರೆಯ ಸುಮಾರಿಗೆ ಮನೆಯಿಂದ ಹೊರಗೆ ಬಂದು, ಕಾರಿಗಾಗಿ (ಅಪರಿಚಿತ) ಕಾದೆ. ಎಂದೂ ಕಾಣದ ವ್ಯಕ್ತಿಗಾಗಿ, ಎಂದೂ ನೋಡದ ಕಾರಿಗಾಗಿ ಕಾಯುತ್ತ ನಿಂತೇ ನಿಂತೆ. ಮೈ ಕೊರೆಯುವ ಚಳಿ, ತೊಟ್ಟ ದಪ್ಪ ಉಣ್ಣೆಯ ಬಟ್ಟೆಯೊಳಗಿಂದಲೂ ಒಳಬಂದು ಚುಚ್ಚುತ್ತಿತ್ತು- ಅಲ್ಲ, ಮೈದಡವುತ್ತಿತ್ತು. ಅದಕ್ಕೆ ಮೈ ನವಿರಿಗೊಳಗಾಯಿತು; ಕಿವಿ ಕೆಂಪಡರಿದವು; ಮೂಗು ನೀರು ಸುರಿಸಲಾರಂಭಿಸಿತು; ಕೈ ಕಾಲು ನಡುಗಲಾರಂಭಿಸಿದವು. ಆದರೂ ನಿಂತಿದ್ದೆ, ನೋಡುತ್ತಿದ್ದೆ. ಎದುರಿಗೆ ಹೊರಟಿತ್ತು ಕಾರುಗಳ ಇರಿವೆ-ಸಾಲು. ಎಲ್ಲಿಗೋ? ಎತ್ತೋ? ಏನೋ! ಕಾರಿನಲ್ಲಿ ಹೊರಟವರಿಗೂ ತಿಳಿದಂತಿರಲಿಲ್ಲ. ತಾವು ಎತ್ತ ಹೋಗಲಿದ್ದೇವೆಂಬುದು. ತಮ್ಮ ದೇಶದಲ್ಲಿ ಹೇರಳವಾಗಿ ಲಭ್ಯವಿದ್ದ ಪೆಟ್ರೋಲನ್ನು ಸುಡಲು ಹೊರಟಂತೆ ಇತ್ತು. ಕುದುರೆಯಂತೆ ಓಡುವ ಕಾರು, ಬಾರಕೋಲೇಟು ತಿಂದು ಬಾಲ ಮುರಿದುಕೊಂಡ ಎತ್ತಿನಂತೆ ಓಡುವ ಕಾರು, ಕತ್ತೆಯಂತೆ ನಿಂತು ನಿಂತು ಮಾಲೀಕನಿಂದ ಏಟು ತಿಂದ ಮೇಲೇ ಮುಂದುವರಿವ ಕಾರು, ಒಂಟೆಯಂತೆ ಎತ್ತರವಾದ, ಆಡಿನಂತೆ ಕುಳ್ಳಾದ, ಹಾವಿನಂತೆ ರ್‍ಯಾವಿಕೊಂಡು ಹೋಗುವ, ಕಾಗೆ-ಕಪ್ಪಿನ, ಗಿಳಿ-ಹಸರಿನ ನಾನಾ ಬಣ್ಣದ ಕಾರುಗಳು ನಾನಾ ಸ್ವರಗೈಯುತ್ತ ಮೆರವಣಿಗೆ ಹೊರಟಿದ್ದವು. ಅವುಗಳಲ್ಲಿ ಪ್ರತಿಯೊಂದು ಕಾರೂ ನನಗಾಗಿ ಬರುತ್ತಿದ್ದಂತೆ, ಅವುಗಳ ಒಳಗಿದ್ದ ಪ್ರತಿ ಅಪರಿಚಿತ ಕಣ್ಣುಗಳೆರಡು ನನ್ನನ್ನೇ ಅರಸುತ್ತಿದ್ದಂತೆ, ಕಾರು ತಟ್ಟನೆ ನನ್ನ ಹತ್ತಿರ ಬಂದು ನಿಂತಂತೆ ಭಾಸವಾಗುತ್ತಿತ್ತು. ನಾಲ್ಕು ಹೊಡೆದು ಹತ್ತು ನಿಮಿಷಗಳಾಗಿರಬೇಕು, ನನ್ನ ತಾಳ್ಮೆಯ ಮೇರೆ ಮೀರಿತು. ಜಗತ್ತಿನಲ್ಲಿ ಮುಂದುವರಿದ ರಾಷ್ಟ್ರದ ಪ್ರಜೆಯೇ ಹೀಗೆ ಮಾಡಿದರೆ ಭಾರತೀಯರು ತಮ್ಮದೇ ಆದ ಪದ್ಧತಿಯಲ್ಲಿ ತಡಮಾಡಿ ಹೋಗುತ್ತಿದ್ದರೆ ಅದರಲ್ಲಿ ತಪ್ಪೇನಿದೆ? ಎಂದು ನನಗೆ ನಾನೇ ತರ್ಕಹೂಡಿ ಸಂತೈಸಿಕೊಂಡೆ. ಒಂದೇ ನಿಮಿಷದಲ್ಲಿ ಅಮೇರಿಕನ್ನರ ಬಗ್ಗೆ ಆದರ-ಗೌರವಗಳೆಲ್ಲ ಹಾರಿಹೋದವು. ಅಷ್ಟರಲ್ಲಿ ರಕ್ತವರ್ಣದ ದೆವ್ವನಂತಹ ಕಾರೊಂದು ಹೊಗೆ ಉಗುಳುತ್ತ ಧಾವಿಸಿ ಬಂದು "ತಡಮಾಡಿದ್ದಕ್ಕೆ ಕ್ಷಮಿಸಬೇಕು" ಎನ್ನುವ ರೀತಿಯಲ್ಲಿ ನನ್ನೆದುರು ಬಂದು ಸ್ತಬ್ಧವಾಗಿ ನಿಂತಿತು. ಕಾರಿನ ಒಡೆಯನು "ಬಹಳ ಹೊತ್ತಿನಿಂದಾ ಕಾಯುತ್ತಿದ್ದೀರಾ?" ಎಂದು ಸೌಜನ್ಯದಿಂದ ವಿಚಾರಿಸಿ, ಕಾರಿನ ಬಾಗಿಲನ್ನು ಹೊರದೂಡಿದನು. ಕೊರೆಯುವ ಆ ಚಳಿಯಿಂದ ಹೇಗೆ ಪಾರಾಗಬೇಕು ಎಂದು ಯೋಚಿಸುತ್ತಿದ್ದ ನನಗೆ, ಕಾರಿನ ಒಳಗಿನ ಆ ಬೆಚ್ಚಗಿನ ಹವೆ ಆಕರ್ಷಿಸತಲ್ಲದೆ, ಕಾರಿನ ಒಳಗಿಂದ ಬಂದ ಆ ಪ್ರಶ್ನೆಯಲ್ಲ. ಸರಿ, ಕಾರು ಮುಂದೆ ನಡೆಯಿತು. ನಮ್ಮ ಮಾತಿಗೆ ಪ್ರಾರಂಭವಾಯಿತು.

"ನೀವು ಆಫ್ರಿಕದಿಂದ ಈ ದೇಶಕ್ಕೆ ಎಂದು ಬಂದಿರಿ?"

"ಬಂದದ್ದು ಭಾರತದಿಂದ. ಭಾರತ ಆಫ್ರಿಕದಲ್ಲಿಲ್ಲ. ಏಶ್ಯದಲ್ಲಿದೆ." ಮುಂದೆ ಮಾತನಾಡವ ಬದಲು ಆತ ಕಾರಿಗೆ ಬ್ರೆಕ್ ಹಾಕಿದ. ನನ್ನ ಉತ್ತರದಿಂದ ಆತ ಅಸಂತುಷ್ಟನಾದನೇ ಎಂದು ಸ್ವಲ್ಪ ಗಲಿಬಿಲಿಯಾಯಿತು ಮನಸ್ಸು. ನನ್ನ ಹೆಸರನ್ನು

ಎರಡೆರಡು ಬಾರಿ ಕೇಳಿ ತಿಳಿದುಕೊಂಡು ಕಾರನ್ನು ನಮ್ಮ ಮನೆಯ ಕಡೆಗೇ ಹೊರಳಿಸಿದ. ಕೂಡಲೇ ನನ್ನ ಉತ್ತರಕ್ಕಾಗಿ ಕ್ಷಮೆ ಕೇಳಬೇಕೆಂದಿದ್ದೆ. ಆದರೆ ಅವನೇ ಮೊದಲು ಮಾಡಿದ;

"ಕ್ಷಮಿಸಬೇಕು, ನಾನು ಕರೆದುಕೊಂಡು ಹೋಗಲು ಬಂದವರು ನೀವಲ್ಲ."

ನನಗೆ ಇದಾವ ತರದ ಆತಿಥ್ಯವೆಂದು ತಿಳಿಯದೇ, ಮರುಮಾತನಾಡದೇ, ಒಳಗೆ ಮನಸ್ಸು ಮುರುಟಿಗೊಂಡು ಲಗುಬಗೆಯಿಂದ ನನ್ನ ಮನೆಯೊಳಕ್ಕೆ ಸೇರಿದೆ. ಬಟ್ಟೆ ಬದಲಿಸಿ, ರೇಡಿಯೋ ಹಚ್ಚಿ, ಕಣ್ಣುಮುಚ್ಚಿ ಬಿದ್ದುಕೊಂಡೆ. ಯಾವನೋ ನಿಗ್ರೊ ಸಂಗೀತಗಾರ ಕಿರುಚಿಕೊಳ್ಳುತ್ತಲೇ (ನನಗೆ ಹಾಗೆ ಅನಿಸಿತು; ಬಹುತೇಕ ಸಂಗೀತ ವಿಷಯದಲ್ಲಿ, ಭಾಷೆಯ ವಿಷಯದಲ್ಲಿ ಅಪರಿಚಿತನಾದವನಿಗೆ ಮೊಟ್ಟಮೊದಲು ಹೀಗೆ ಅನಿಸುತ್ತಿರಬೇಕು) ಇದ್ದ. ನಂತರ ಮೃದುವಾದ ಹೆಣ್ಣುದನಿಯೊಂದು "ಈಗ ಸಮಯ ಮೂರುವರೆ ಗಂಟೆ. ಇನ್ನು ಅಂತರ್‌ರಾಷ್ಟ್ರೀಯ ವಾರ್ತೆ ಕೇಳಿ." ಎಂದಿತು. ಏನು ಮೂರುವರೆ ಗಂಟೆಯೇ! ದಿಗ್ಗನೆದ್ದು ನನ್ನ ಗಡಿಯಾರವನ್ನು ನೋಡಿಕೊಂಡೆ. ಅದು ನಾಲ್ಕುವರೆ ತೋರಿಸಿತು! ಮತ್ತು ನೋಡುತ್ತಿರುವ ನನ್ನ ಗಡಿಯಾರ ಹಾಗೆ ನನಗೆ ಮೋಸ ಮಾಡಲಿಕ್ಕಿಲ್ಲೆಂಬ ವಿಶ್ವಾಸ ಇದ್ದರೂ ಇಂದು ತಪ್ಪಿದ್ದರೆ? ಅನಿಸಿತು. ಹೆಚ್ಚಚ್ಚು ವಿಚಾರಮಾಡಿದಂತೆ ಹೆಚ್ಚೆಚ್ಚು ಅಧೈರ್ಯ ಮೂಡಿತು. ಮತ್ತೆ ಬಟ್ಟೆಗಳನ್ನು ಧರಿಸಿದೆ. ಎರಡು ಕಿವಿ ನೂರು ಮಾಡಿಕೊಂಡು ರೇಡಿಯೋ ಕೇಳಲಾರಂಭಿಸಿದೆ. ಹೆಣ್ಣು ದನಿ "ಈಗ ನಾಲ್ಕು ಗಂಟೆ" ಎಂದಾಗ ತಿರುಗಿ ಉತ್ಸಾಹದ ಕಾರಂಜಿ ನನ್ನಲ್ಲಿ ಪುಟಿಯಲಾರಂಭಿಸಿತು. ಚಟ್‌ನೇ ಎದ್ದು ರಸ್ತೆಯತ್ತ ಧಾವಿಸಿದೆ. ಅಮೇರಿಕನ್ ಆಗಂತಕನೊಬ್ಬ ನನಗಾಗಿ ಅಲ್ಲಿ ಇಲ್ಲಿ ವಿಚಾರಿಸುತ್ತಿದ್ದ. ನನ್ನನ್ನು ನೋಡಿ "ತಾವು ಮಿ। ಕ್ಯಾಮೆಟರೇ?" ಎಂದು ಕೇಳಿದ. ಹೌದೆಂದು ಕೈ ಕುಲುಕಿದೆ. "ನಾನು ತಡಮಾಡಿ ಬಂದಿಲ್ಲವಷ್ಟೆ?" ಎಂದು ಅವನು ಕೇಳಿದಾಗ "ನಾನೇ ಎರಡು ನಿಮಿಷ ತಡಮಾಡಿದ್ದೇನೆ, ಕ್ಷಮಿಸಬೇಕು" ಎಂದೆ. ಔಪಚಾರಿಕ ಮಾತುಗಳನ್ನು ಮುಗಿಸುವುದರಲ್ಲಿ ಅವರ ಮನೆ ಮುಟ್ಟಿದೆವು. ಮನೆಯೊಡತಿ ಬಾಗಿಲು ತೆಗೆದು ಸುಸ್ವಾಗತ ಬಯಸಿದಳು. ಯಜಮಾನನು ಪತ್ನಿಯ, ಮಗಳ ಪರಿಚಯ ಮಾಡಿಕೊಟ್ಟ. ಒಳಗೆ ಇನ್ನೂ ಬಹಳಷ್ಟು ಅತಿಥಿಗಳು ಆಗಮಿಸಿದ್ದರು. ಅವರೆಲ್ಲರ ಪರಿಚಯವಾಯಿತು. ಎಲ್ಲರಂತೆ ನನಗೂ ಕೈದಿಯ ನಂಬರಿನ ಚೀಟಿಯಂತೆ (ನಂಬರಿನ ಬದಲಾಗಿ ಹೆಸರಿದ್ದ) ಚೀಟಿಯೊಂದು ಬಂದಿತು. ಅದನ್ನು ನನ್ನ ಕೋಟಿಗೆ ಅಂಟಿಸಿದಳು ಯಜಮಾನಿ ತನ್ನ ಕೈಯಿಂದಲೇ. ಅತಿಥಿಗಳು ಇನ್ನೂ ಬರುತ್ತಲೇ ಇದ್ದರು. ಪ್ರತಿಯೊಬ್ಬರು ಬಂದಾಗಲೂ ಎದ್ದು ನಿಂತು, ಪರಿಚಯ ಮಾಡಿಕೊಳ್ಳುವುದು ಪದ್ಧತಿ. ಬಂದವರೆಲ್ಲ 'ಹಾಯ್' ಕ್ರಿಶ್, ನೀನು ಭಾರತೀಯನೇ?" ಎಂದು ಕೇಳುತ್ತಿದ್ದರು. ಯಜಮಾನಿ "ಕ್ರಿಶ್, ನಿನಗೆ 'ಶೆರಿ' ಕೊಡಲೋ, 'ಒಡ್ಕ' ನಡೆಯುವದೊ?" ಎಂದು ನನ್ನನ್ನು ಕೇಳಿದಾಗ "ಹಾಗೆಂದರೇನು?" ಎಂದು ಕೇಳಿದೆ. "ಇವುಗಳೆಲ್ಲ ಪಾನೀಯ (drinks)ಗಳೆಂದು ನಿನಗೆ ಗೊತ್ತಿಲ್ಲವೇ?" ಎಂದು ಆಶ್ಚರ್ಯದ ನೋಟ ನನ್ನತ್ತ ಬೀರಿದರು. "ಸೆರೆಯ ಸೇವನೆ ನಾನು ಮಾಡುವುದಿಲ್ಲ" ಎಂದಾಗ "ಹಾಗಾದರೆ ಯಾವ ಬಿಯರ್ ಕೊಡಲಿ?" ಎಂದಳು. "ಬಿಯರನ್ನೂ ಕುಡಿಯುವದಿಲ್ಲ" ಎಂದಾಗ ದಿಗ್ಭ್ರಾಂತಳಾದಳು. ಕಣ್ಣುಗಳನ್ನು ಇಷ್ಟು ಅಗಲ ಮಾಡಿ ನೋಡಹತ್ತಿದಳು. "ಬಿಯರಿನಲ್ಲೇನಿದೆ, ಬರೀ ನೀರು ಕುಡಿದ ಹಾಗೆ?" ಎಂದು ಮತ್ತೆ ಕೇಳಿದಳು. ಭಾರತದಲ್ಲಿ ಪಾನೀಯದ (ಈ ತರಹದ್ದು) ಪದ್ಧತಿ ಸಾಮಾನ್ಯವಾಗಿ ಇಲ್ಲವೆಂದೂ ನನ್ನ ಪ್ರದೇಶದಲ್ಲಿ ಪಾನಪ್ರತಿಬಂಧವಿದೆಯೆಂದು ತಿಳಿಸಿದೆ "ಹಾಗಾದರೆ ಮನಸ್ಸು ಸುಸ್ಥಿತಿಯಲ್ಲಿ

ಇಲ್ಲದಿದ್ದರೆ ಭಾರತೀಯರು ಏನು ಮಾಡುತ್ತಾರೆ?" ಎಂದು ಕೇಳಿದಳು. "ಭಾರತೀಯರು ಯಾವಾಗಲೂ ಪ್ರಸನ್ನಸ್ಥಿತಿಯಲ್ಲಿರುತ್ತಾರೆಂದು ನಮ್ಮ ಸರಕಾರ ನಂಬಿದೆ. ಆದ್ದರಿಂದ ಈ ನಿರ್ಬಂಧ ಹೇರಿದ್ದಾರೆ." ಎಂದು ನಾನು ಉತ್ತರಿಸಿದಾಗ ಅವರೆಲ್ಲ ನಗದೇ ಇರಲಿಲ್ಲ. ಆ ಕಾಲಕ್ಕೆ ಕಾಮತರು ಹುಟ್ಟಿಬೆಳೆದ ಬೊಂಬಾಯಿ ಪ್ರಾಂತದಲ್ಲಿ ಮದ್ಯಪಾನ ನಿಷೇಧ ಜಾರಿಯಲ್ಲಿತ್ತು. ಚಳಿಯಲ್ಲಿ ನಡುಗುತ್ತಿದ್ದವನಿಗೆ ಬಿಸಿಬಿಸಿ ಚಹಾ ಆಗಲಿ, ಕಾಫಿಯಾಗಲಿ ಬೇಕಾಗಿತ್ತು. ಆದರೆ ಪಾನವಿರೋಧಿಯಾದ ನನಗೆ "ಸೋಡಾ ಕೊಡಲೇ?" ಎಂದಾಗ ಒಳಗೆ ಕಿವುಚಿಕೊಳ್ಳುವಂತಾದರೂ ಬೇಡ ಎನ್ನುವದಾಗಲಿಲ್ಲ. 'ರೆಫ್ರಿಜಿರೇಟರ್'ದೊಳಗಿಂದ ಸೋಡಾದ ಬಾಟ್ಲಿ ತೆಗೆದಾಗ "ಅಯ್ಯಪ್ಪ! ಇದನ್ನು ಹೇಗೆ ಕುಡಿಯುವುದು?" ಎಂದು ಯೋಚಿಸುತ್ತಿದ್ದಂತೆಯೇ ಬರ್ಫದ ತುಂಡುಗಳಿಂದ ಅರ್ಧ ತುಂಬಿದ ಗ್ಲಾಸಿನಲ್ಲಿ ಸೋಡಾ ಸುರಿದು ನನ್ನ ಕೈಗಿತ್ತಳು. ಅದನ್ನು ನೋಡಿಯೇ ಕರಳು ಕಿತ್ತಹಾಗಾಯಿತು. ಇನ್ನು ಕುಡಿಯುವದೆಂತು? ಒಂದು ಗುಟುಕೂ ಅದರೊಳಗಿಂದ ಕುಡಿಯಲಾಗಲಿಲ್ಲ.

ಮಾತಿನಲ್ಲಿ ಅಮೇರಿಕನ್ನರನ್ನು ಸೋಲಿಸುವ ದೇಶ ಇನ್ನೊಂದಿಲ್ಲವೆಂದು ತೋರುತ್ತದೆ. ನಾಲ್ಕು ಜನ ಒಟ್ಟಿಗೆ ಸೇರಿದ ಕೂಡಲೇ ಮುಕ್ಕಾಲು ಪಾಲು ಮಾತಿನಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಆ ಮಾತು ಈ ಮಾತು ಆಡುತ್ತ ಯಜಮಾನಿ, "ನೀನು ಸಾಯರೆಕ್ಯೂಸ್ ವಿಶ್ವವಿದ್ಯಾಲಯದಲ್ಲಿ ರಾಜಕಾರಣಶಾಸ್ತ್ರ ಓದುತ್ತೀಯಾ?" ಎಂದು ಕೇಳಿದಳು. "ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ 'ಅರಣ್ಯಶಾಸ್ತ್ರ' ಅಭ್ಯಸಿಸುತ್ತಿದ್ದೇನೆ" ಎಂದು ನಾನು ಉತ್ತರಿಸಿದಾಗ ಅಲ್ಲಿ ಕುಳಿತವರಲ್ಲಿ ಹಲವರು ನನ್ನನ್ನು ಕುತೂಹಲದಿಂದ ನೋಡಹತ್ತಿದರು. ಯಜಮಾನಿ ಕಣ್ಣರಳಿಸಿ, ಖುರ್ಚಿಯನ್ನು ನನ್ನತ್ತ ಸರಿಸಿಕೊಂಡು "ಹಾಗಾದರೆ ನೀನು ಬಹಳ ಶಾಣ್ಯಾ ಇರಬೇಕು. ಅಂಥಿಂಥವರಿಗೆ ಅಲ್ಲಿ ಪ್ರವೇಶ ಸಿಗುವುದಿಲ್ಲ, ನೂರು ಸ್ಥಳಗಳಿದ್ದಲ್ಲಿ ಸಾವಿರಾರು ವಿದ್ಯಾರ್ಥಿಗಳು ಸ್ಪರ್ಧಿಸುತ್ತಾರೆ. ನನ್ನ ಮಗನಿಗೆ ಅಲ್ಲಿ ಪ್ರವೇಶ ಸಿಗದ್ದರಿಂದ ವಾಶಿಂಗ್‌ಟನ್ನಿಗೆ ಕಳಿಸಬೇಕಾಯಿತು!" ಎಂದು ಹಚ್ಚಿಕೊಂಡು ಮಾತಾಡಿ "ನೀನು ಅಲ್ಲಿ 'ಬಿಎಸ್'ಗೆ (ಬಿ.ಎಸ್‌ಸಿ) ಓದುತ್ತೀಯಾ?" ಎಂದು ಕೇಳಿದ್ದಕ್ಕೆ ನಾನು ಇಲ್ಲವೆಂದು 'ಎಂ.ಎಸ್' ಇರಬೇಕೆಂದುಕೊಂಡು ಸುಮ್ಮನಾದಳು. ನಾನು 'ಪಿಎಚ್.ಡಿ'ಗಾಗಿ ಓದುತ್ತಿದ್ದೇನೆಂದಾಗ ಆಕೆಗೆ ಇನ್ನೂ ಆಶ್ಚರ್ಯವಾಯಿತು. ಅನಂತರ ನನ್ನನ್ನು 'ಡಾಕ್ಟರ್' ಅಥವಾ 'Doe' ಸಂಬೋಧಿಸಹತ್ತಿದಳು. "ನಮ್ಮ ದೇಶದಲ್ಲಿ ಬಂದ ಕೂಡಲೇ ನಿನಗಾದ ಮೊದಲ ಅನುಭವಗಳನ್ನು ವಿವರಿಸುವಿಯಾ?" ಎಂದು ಮಾಮೂಲಿ, ಆದರೆ ಪ್ರತಿಯೊಬ್ಬರೂ ಕೇಳುವ ಪ್ರಶ್ನೆಯನ್ನೇ ಕೇಳಿದಳು. ನಾನು ಅಂದು ಸಂಜೆ ನಡೆದ ಘಟನೆಯನ್ನು ಒಂದಿಷ್ಟು ಬಣ್ಣ ಹಚ್ಚಿ, ರಸವತ್ತಾಗಿ ಮಾಡಿ ವಿವರಿಸಿದೆ. ಎಲ್ಲರೂ ಬಿದ್ದು ಬಿದ್ದು ನಕ್ಕರು. "ಕ್ರಿಶ್ ನಿನ್ನ ಈ ಫಜೀತಿಗೆ ನಾವೇ ಕಾರಣರು. ಚಳಿಗಾಲದಲ್ಲಿ ಈ ದೇಶದಲ್ಲಿ ಗಡಿಯಾರಗಳನ್ನು ಒಂದು ಗಂಟೆ ಹಿಂದೆಯೂ, ಬೇಸಿಗೆಯಲ್ಲಿ ಒಂದು ಗಂಟೆ ಮುಂದೆಯೂ ಇಡುವರು. ದುರ್ದೈವಕ್ಕೆ ನಿನ್ನೆ ಮಧ್ಯರಾತ್ರಿಯಿಂದ ಈ ಬದಲಾವಣೆ ಜಾರಿಗೆ ಬಂದಿದೆ. ಹೊಸದಾಗಿ ಬಂದ ನಿನಗೆ ಈ ವಿಚಾರವನ್ನು ನಾವು ಮೊದಲೇ ತಿಳಿಸಬೇಕಾಗಿತ್ತು." ಎಂದು ಕೊನೆಗಳಿಗೆಯಲ್ಲಿ ಪಾದ್ರಿಯ ಎದುರಿಗೆ ತಪ್ಪೊಪ್ಪಿಕೊಳ್ಳುವ ಧಾಟಿಯಲ್ಲಿ ಮರುಗಿ ಯಜಮಾನಿ ಸತ್ಯವಿವರಣೆ ಕೊಟ್ಟಳು.

ಭಾರತದ ಬಗ್ಗೆ ಭಾರತೀಯರ ಬಗ್ಗೆ ಉತ್ಸುಕತೆಯುಳ್ಳ ಈ ಜನ ಒಂದೇ ಸವನೇ ಪ್ರಶ್ನೆ ಕೇಳಹತ್ತಿದರು. ಸಾಮಾನ್ಯವಾಗಿ ನಮ್ಮ ಮಾತುಕತೆ ಈ ಧಾಟಿಯಲ್ಲಿ ಸಾಗಿತ್ತು:

"ಕ್ರಿಶ್ ನೀನು ಅಮೇರಿಕೆಗೆ ಯಾವಾಗ ಬಂದೆ? ನಮ್ಮ ದೇಶ ನಿನ್ನ ಮನಸ್ಸಿಗೆ ಬಂತೆ?"

"ನಾನಿಲ್ಲಿಗೆ ಬಂದು ಕೇವಲ ಎರಡು ತಿಂಗಳಾದವು. ಈ ಅವಧಿಯಲ್ಲಿ ನಿಮ್ಮ ದೇಶ ತೂಗಿ ಅಳೆಯಲಾರೆ. ಇನ್ನೂ ಬಹಳ ಸಂಚರಿಸಬೇಕು; ಬಹಳ ಜನರನ್ನು ಭೆಟ್ಟಿಯಾಗಬೇಕು. ಭಾರತಕ್ಕೆ ನಾನು ಇಲ್ಲಿಯ ವಾಸ್ತವ್ಯ ಮುಗಿಸಿಕೊಂಡು ಮರಳುವ ಮುಂಚೆ ನೀವು ಈ ಪ್ರಶ್ನೆ ಕೇಳಿದ್ದರೆ, ಅದೂ ಕೆಲಮಟ್ಟಿಗೆ ಮಾತ್ರ ಸಮರ್ಪಕ ಉತ್ತರ ಕೊಡಬಹುದೋ ಏನೋ.... ಈಗಿನ ಮಟ್ಟಕ್ಕೆ ಹೇಳುವದಾದರೆ, ನಾವು ಓದಿ, ಕೇಳಿ ತಿಳಿದಷ್ಟು ನಿಮ್ಮ ದೇಶ ಆಕರ್ಷಣೀಯವಾಗಿಲ್ಲ; ಜ್ಞಾನಸಮೃದ್ಧವಾಗಿಲ್ಲ. ನಾವು ಭಾರತದಲ್ಲಿದ್ದಾಗ ನಿಮ್ಮ ದೇಶದ ಪ್ರಚಾರಜನ್ಯ-ಕಾಲ್ಪನಿಕ-ಚಿತ್ರವೇ ನಮ್ಮಲ್ಲಿ ಮುಖ್ಯವಾಗಿ ತುಂಬಿರುವುದರಿಂದ, ಇಲ್ಲಿ ಬಂದ ಕೂಡಲೇ ಅದು ಅಳಿಸಿ ಹೋಗಿ, ಮಖಾಳಾಗಿ-ಒಮ್ಮೊಮ್ಮೆ ವಿದ್ರೂಪವಾಗಿ ಕಂಡು-ನಮಗೆ ನಿರಾಶೆಯಾಗುವದು ಸಹಜವಿದೆ."

"ನೀನೊಬ್ಬನೇ ಇಲ್ಲಿಗೆ ಬಂದಂತಿದೆ? ಭಾರತದಲ್ಲಿ ನಿನಗೊಂದು ಕುಟುಂಬವಿದೆಯೇ? (Do you have family back at home?)

"ಹೌದು, ನಮ್ಮದು ಸ್ವಲ್ಪ ದೊಡ್ಡ ಕುಟುಂಬ."

"ನಿನಗೆ ಎಷ್ಟು ಮಕ್ಕಳೆಂದು ಕೇಳಬಹುದೇ?"

"ನನಗಿನ್ನೂ ಮದುವೆಯಾಗಿಲ್ಲ."

"ಇದೇ ಈಗ ನಿನಗೊಂದು ಕುಟುಂಬವಿದೆಯೆಂದು ಹೇಳಲಿಲ್ಲವೇ ಕ್ರೀಶ್?"

"ನಮ್ಮ ದೇಶದಲ್ಲಿ ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೆಲ್ಲ ನಿಕಟ ಕುಟುಂಬದಲ್ಲಿ ಬರುತ್ತಾರೆ."

ಈ ನಮ್ಮ ಕುಟುಂಬದ ವ್ಯಾಖ್ಯೆಯನ್ನು ನಾನು ಕೊಟ್ಟಾಗ, ಹೆಂಡತಿ, ಮಕ್ಕಳಷ್ಟೇ ಕುಟುಂಬವೆಂದು ನಂಬಿದ್ದ ಅಮೇರಿಕನ್‌ರು ಆಶ್ಚರ್ಯದಿಂದ ನಕ್ಕರು.

"ದನ-ಕರು ಬರುದಿಲ್ಲವೇ ನಿಮ್ಮ ಕುಟುಂಬದಲ್ಲಿ?" ಒಬ್ಬ ಕೊಂಕಾಡಿದ.

"ದೃಷ್ಟಿಯನ್ನು ಬೆಳೆಸಿದರೆ ಬರುತ್ತದೆ. ದೃಷ್ಟಿಹೀನರಿಗೆ ತಮ್ಮ ಕೈಕಾಲೂ ಪರಕೀಯವೆ." ಎಂದು ಉಕ್ಕಿಬರುತ್ತಿದ್ದ ಸಿಟ್ಟನ್ನು ಒತ್ತಿ ಉತ್ತರಿಸಿದೆ. ಆತ ಮರ್ಮಸ್ಪರ್ಶವಾಗಿಯೂ ಬೇಕೆಂದೇ ಬೇರೆ ಪ್ರಶ್ನೆ ಕೇಳಿದ:

"ನಿನಗೊಬ್ಬ ಗೆಳತಿ (ಗೆಣತಿ:girl-friend) ಇದ್ದಾಳೆಯೇ?"

"ಐದಾರು ಗೆಳತಿಯರಿದ್ದರೂ ಇಬ್ಬರು ಮೂವರು ಉತ್ತಮ ಗೆಳೆಯರಿದ್ದಾರೆ."

ಭಾರತೀಯರಿಗೆ ಈ ರೀತಿಯ ಸ್ನೇಹಿತರಿರುವದು ಅಸಾಧ್ಯದ ಮಾತು! ಎನ್ನುವ ಧಾಟಿಯಲ್ಲೇ ಹೇಳಿದೆ. ನನ್ನ ಈ ಉತ್ತರವನ್ನು ಕೇಳಿ ಇನ್ನೊಮ್ಮೆ ಅವರೆಲ್ಲ ನಗೆಯಲ್ಲಿ ಮುಳುಗಿದರು.

ಅರ್ಥವಾಗದ ನನ್ನ ಪೆಚ್ಚು ಮುಖ ನೋಡಿ, "ಅಸಂತೋಷವಾಯಿತೇ? ಕ್ಷಮಿಸು. ಈ ದೇಶದಲ್ಲಿ ಮದಿವೆಯಾಗದ ಯುವಕನಿಗೆ ಗೆಳತಿಯೊಬ್ಬಳು, ಮತ್ತು ಯುವತಿಗೆ ಒಬ್ಬ ಗೆಳೆಯನಿರುತ್ತಾನೆ. ಇವರು ತೀರ ಅನ್ಯೋನ್ಯರಾಗಿರುತ್ತಾರೆ. ಕೊನೆಗೆ ಮದುವೆಯಾಗುತ್ತಾರೆ.

ಆದ್ದರಿಂದ ಒಬ್ಬನಿಗೆ ಒಬ್ಬಳೇ 'ಗೆಳತಿ' ಇರುತ್ತಾಳೆ. ನೀನು ಹೇಳುವ ಗೆಳತಿಯರು ಈ ವರ್ಗಕ್ಕೆ ಸೇರಿದವರಲ್ಲ. ಎಂದು ಒಬ್ಬರು ವಿವರಿಸಿದರು.

"ಹಾಗಿದ್ದರೆ ನೀನು ನಿನ್ನ ಜೀವನದ ಸಂಗಾತಿಯನ್ನು ಹೇಗೆ ತಿಳಿದುಕೊಳ್ಳುವಿಯಾ?"

"ನನ್ನ ಹಿರಿಯರು ನನಗಾಗಿ ಈ ಕೆಲಸ ಮಾಡುತ್ತಾರೆ."

"ಆಂ! ನೀನು ಮದಿವೆಯಾಗುವವಳನ್ನು ನಿನ್ನ ಹಿರಿಯರು ನಿನಗಾಗಿ ಆರಿಸುತ್ತಾರೆಯೇ?"

"ಹೌದು."

"ಅಂದರೆ ನಿಮ್ಮ ದೇಶದಲ್ಲಿ ಚಿಕ್ಕವರ ಬದಲಾಗಿ ಹಿರಿಯರೇ 'ಡೇಟಿಂಗ್' ಮಾಡುತ್ತಾರೆ ಎಂದ ಹಾಗಾಯಿತು!"

ಎಲ್ಲರೂ ನಕ್ಕರು. ನನಗೆ ಅಸಮಾಧಾನವಾದರೂ ತೋರಗೊಡಲಿಲ್ಲ.

"ನನ್ನ ಕಿರಿಮಗನೂ ಕೂಡ ತನಗೆ ಬೇಕಾದ ಬಟ್ಟೆ-ಬರೆ, ಬೂಟುಗಳನ್ನು ತಾನೇ ಆರಿಸಿಕೊಳ್ಳುತ್ತಾನೆ. ಅಷ್ಟೊಂದು ಸ್ವಾತಂತ್ರ್ಯವಿದೆ ಇಲ್ಲಿ. ನಿನ್ನ ಪ್ರಿಯೆಯನ್ನು ಕೂಡ ಆರಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲವೇ ನಿನ್ನ ದೇಶದಲ್ಲಿ? ನಿನಗೆ ಏನೂ ಗುರುತು-ಪರಿಚಯವಿಲ್ಲದ, ನಿನ್ನ ಹಿರಿಯರು ಆರಿಸಿದ ಯಾವಳನ್ನೊ ಮದಿವೆಯಾಗುವೆಯಾ?"

"ಅದರಲ್ಲಿ ತಪ್ಪೇನಿದೆ? ಹಿರಿಯರಿಗೆ ಹತ್ತಾರು ಕನ್ಯಾಪಾಲಕರು ಬಂದು ತಮ್ಮ ಕನ್ಯೆಯ ರೂಪ-ವಿದ್ಯೆಗಳ ಬಗ್ಗೆ ನಿವೇದಿಸುತ್ತಾರೆ. ನಂತರ ವರನ ಪಾಲಕರು ತಮ್ಮ ಅಂತಸ್ತು, ಬೇಡಿಕೆಗಳನ್ವಯ ಯೋಗ್ಯ ಕನ್ಯೆಯನ್ನು ಆರಿಸುತ್ತಾರೆ...."

"ಅಂಗಡಿಯಲ್ಲಿ ಹತ್ತು ಸೀರೆಗಳನ್ನು ನೋಡಿ ಒಂದನ್ನು ಆರಿಸುವ ಪದ್ಧತಿ ಎಳ್ಳಷ್ಟು ನನ್ನ ಮನಸ್ಸಿಗೆ ಬಂದಿಲ್ಲ." ಎಂದು ತೀರ್ಮಾನ ಕೊಟ್ಟ. ಸೀರೆ ಮತ್ತು ಕನ್ಯೆಗಳನ್ನು ಒಂದೇ ತೆರನಾಗಿ ಕಂಡ ಈ ಪೆಚ್ಚು ಅಮೇರಿಕನ್ನರ ಬಗ್ಗೆ ನನಗೆ ತಿರಸ್ಕಾರ ವೆನಿಸದೇ ಇರಲಿಲ್ಲ. ಅಂತೆಯೇ ಸ್ವಲ್ಪ ಗಡಸುದನಿಯಲ್ಲಿ,

"ಕ್ಷಮಿಸಿ, ನೀವು ಅಮೇರಿಕನ್ನರು ಎಲ್ಲ ಜಗತ್ತನ್ನು ಒಂದೇ ಕಾಜಿನಿಂದ ನೋಡುವ ಪರಿಪಾಠ ಇಟ್ಟುಕೊಂಡಂತೆ ತೋರುತ್ತದೆ. ನಿಮಗೆ ಇನ್ನೊಬ್ಬರ ಸಾಮಾಜಿಕ-ಪದ್ಧತಿಗಳನ್ನು ತಿಳಿದುಕೊಳ್ಳುವ ಆಸ್ಥೆಯೂ ಇದ್ದಂತಿಲ್ಲ. ನಮ್ಮ ವಿವಾಹ-ಪದ್ಧತಿ ಸಾವಿರಾರು ವರ್ಷಗಳ ವರೆಗೆ ಒರೆಗಲ್ಲಿಗೆ ತಿಕ್ಕಿ ಎಲ್ಲ ರೀತಿಯಿಂದಲೂ ಯೋಗ್ಯವೆಂದು ತೀರ್ಮಾನ ಮಾಡಿದ ಪದ್ಧತಿ. ಪಾಲಕರು ಕನ್ಯೆಯ ಮನೆತನ, ಬೆಳೆದು ಬಂದ ರೀತಿ, ವಿದ್ಯೆ, ಕಲೆ, ನಡತೆ ಮೊದಲಾದವುಗಳ ಬಗ್ಗೆ ಕೂಲಂಕಷವಾಗಿ ವಿಚಾರಿಸಿ ನಂತರ ತಾವೇ ನೋಡಿ, ಬಳಿಕ ಮಗನ ಒಪ್ಪಿಗೆ ಪಡೆಯುವುದು ರೂಢಿ. ಮಗನ ಒಪ್ಪಿಗೆಯಾಗದಿದ್ದರೆ ಇನ್ನೊಂದು ಕನ್ಯೆಯ ಶೋಧನೆ. ಕನ್ಯೆಯ ಪಾಲಕರೂ ಅವಳ ಒಪ್ಪಿಗೆ ಪಡೆಯುತ್ತಾರೆ. ನಮ್ಮ ಮದಿವೆಗಳಲ್ಲಿ ನಿಮ್ಮ ಮದಿವೆಗಳಿಗಿಂತ ಪರಸ್ಪರರ ಅನುಮತಿಗೆ ಹೆಚ್ಚಿನ ಅವಕಾಶವಿದೆ. ಅಲ್ಲದೇ ಹಿರಿಯರ ಅನುಭವ, ಸಂಸಾರದ ತಿಳವಳಿಕೆಯ ಲಾಭವೂ ನಮಗೆ ದೊರೆಯುತ್ತದೆ. ಇಂತಹ ಮದಿವೆ ಸಂಪೂರ್ಣವಾಗದೇ ಏನು?"

"ಮದಿವೆಯಾಗಲಿದ್ದ ಇಬ್ಬರು ಮುಖ್ಯ ವ್ಯಕ್ತಿಗಳು ಒಬ್ಬರನ್ನು ಇನ್ನೊಬ್ಬರು ಅರಿಯದ್ದರಿಂದ ಅವರ ಜೀವನ ಸುಗಮವಾಗಿ ನಡೆಯುವದೋ ಇಲ್ಲವೋ ಹೇಗೆ ತಿಳಿಯಬೇಕು? ಅವರಲ್ಲಿ ಸರಿಯಾಗಿ ಹೊಂದಿಕೆಯಾಗದಿದ್ದರೇ?"

"ಹಾಗಾದರೆ ನಿಮ್ಮ ವಿವಾಹ-ಪದ್ಧತಿಯನ್ನೇ ತೆಗೆದುಕೊಳ್ಳಿ. ಯುವಕನೊಬ್ಬ ಹತ್ತಾರು ಯುವತಿಯರೊಡನೆ 'ಡೇಟ್' (date) ಮಾಡಿ, ತನಗೆ ಯಾರು ಸರಿಯಾಗಿ ಹೊಂದಿಕೊಳ್ಳುತ್ತಾಳೆ (ಇದರಲ್ಲಿ ದೈಹಿಕ ಘಟಕವೇ ಮುಖ್ಯವಾಗಿರುತ್ತದೆ.) ಎಂದು ಪರೀಕ್ಷಿಸಿ ನೋಡುತ್ತಾನೆ. ಆತನು ಒಪ್ಪಿಕೊಂಡವಳನ್ನೆ ಮದಿವೆಯಾಗುತ್ತಾನೆ. ಇಷ್ಟು ಪರಿಶೀಲನೆಯ ತರುವಾಯವೂ ನಿಮ್ಮಲ್ಲಿ ಪ್ರತಿ ಐದು ಮದಿವೆಗಳಲ್ಲಿ ಒಂದು ವಿಚ್ಛೇದನೆಯಲ್ಲಿ ಕೊನೆಗೊಳ್ಳುತ್ತದೆ. ಏಕೆ? ದೈಹಿಕ ಆಕರ್ಷಣೆಯೇ ನಿಮ್ಮ ವಿವಾಹಗಳ ತಳಹದಿಯಾಗಿದೆ. ದೈಹಿಕ ಆಕರ್ಷಣೆ ಕಡಿಮೆಯಾದಾಗ ಇಲ್ಲವೇ ಬೌದ್ಧಿಕ ತಾಕಲಾಟ ಬಂದಾಗ ವಿವಾಹ-ವಿಚ್ಛೇದನೆಯೇ ಮಾರ್ಗವೆಂಬ ತೀರ್ಮಾನಕ್ಕೆ ಬರುತ್ತಾರೆ. ನಮ್ಮ ಮದಿವೆಗಳಲ್ಲಿ ಸಂಸ್ಕಾರಕ್ಕೆ ಹೆಚ್ಚು ಮಹತ್ವ ಕೊಡುವುದರಿಂದ, ದೈಹಿಕ ಆಕರ್ಷಣೆ ಕಡಿಮೆಯಾದರೂ ಪರಸ್ಪರ ತಿಳವಳಿಕೆ ಬೆಳೆಯುತ್ತದೆ. ನಮ್ಮಲ್ಲಿ ಒಬ್ಬರಿಗಾಗಿ ಇನ್ನೊಬ್ಬರು ಎಂಬ ಧೋರಣೆ ಇರುವುದರಿಂದ ತಮ್ಮ ಒಡನಾಡಿಯ ಸುಖಕ್ಕಾಗಿ ಇಬ್ಬರೂ ಪರಸ್ಪರ ಹೆಣಗಾಡುತ್ತಾರೆ. ಅದರಿಂದ ಪ್ರೀತಿ ಬೆಳೆಯುತ್ತದೆ; ತಾಳುತ್ತದೆ. ನಮ್ಮಲ್ಲಿ 'ಹೊಲಿವುಡ್ ಸಂಸ್ಕೃತಿ'ಯನ್ನು ಅನುಸರಿಸುವ ನಟ-ನಟಿಯರನ್ನು ಬಿಟ್ಟರೆ ವಿವಾಹ-ವಿಚ್ಛೇದನೆಯ ಹೆಸರೇ ಇಲ್ಲ."

ನನ್ನ ವಾದಕ್ಕೆ ಪ್ರತಿವಾದ ಹೂಡುವುದು ಉಚಿತವಲ್ಲವೆಂದು ಆಳವಾಗಿ ವಿಚಾರಿಸಿದ ಒಬ್ಬಿಬ್ಬರು ಹೇಳಿದರು:

"ಕ್ರಿಶ್, ನೀನು ಹೇಳುವುದು ಉಚಿತವಿದೆ. ಯಾಕೊ ನಾವು ಈ ದಿಸೆಯಲ್ಲಿ ವಿಚಾರಿಸಲೇ ಇಲ್ಲ. ನೀನು ಮಂಡಿಸುವ ವಿಚಾರ-ಪ್ರತಿಪಾದನೆ, ವಾದ ಮಾಡುವ ರೀವಿ ನೋಡಿದರೆ ನೀನೊಬ್ಬ ಉತ್ತಮ ವಿವಾಹ-ಸಲಹೆಗಾರ (marriage consultant) ಆಗಬಹುದು. ಕೀಟ-ಶಾಸ್ತ್ರಜ್ಞನಾಗುವ ಬದಲು ನೀನು ಇದನ್ನೇ ಏಕೆ ಮಾಡಬಾರದು?"

"ಅಂತಹ ಉದ್ಯೋಗ ಕೈಕೊಂಡರೆ ನಮ್ಮ ದೇಶದಲ್ಲಿ ಉಪವಾಸ ಬಿದ್ದು ನರಳಬೇಕಾದೀತು!" ಎಂದ ನನ್ನ ಉತ್ತರಕ್ಕೆ ಮತ್ತೆ ಎಲ್ಲರೂ ನಕ್ಕರು.

ನಾವು ಮಾತಿನಲ್ಲಿ ಮುಳುಗಿದ್ದಾಗ, ಮನೆಯ ಯಜಮಾನಿ ಏನೋ ಅಮೂಲ್ಯ ವಸ್ತುಗಳನ್ನು ಕಳಕೊಂಡವಳಂತೆ ಬಾಡಿದ ಮುಖದಿಂದ, "ನನ್ನ ಕಾರ್ಯಕ್ರಮದ ಟಿಪ್ಪಣಿ ಸಿಗಲೊಲ್ಲದು" ಎಂದು ಗೊಣಗಿದಳು. ಬಂದ ಅತಿಥಿಗಳ ಸೈನ್ಯ, ಟಿಪ್ಪಣಿಯ ಶೋಧದಲ್ಲಿ ತೊಡಗಿತು. ಅರ್ಧತಾಸು ಹುಡುಕಿದ ನಂತರ ಪುಸ್ತಕ ಒಂದರಿಂದ ಹೊರ ಬಂದಿತು ಟಿಪ್ಪಣಿ. ಅದರಲ್ಲಿ, ಯಾರು ಎಲ್ಲಿ ಕೂಡ್ರಬೇಕು; ಯಾವ ಅಡಿಗೆ ಮೊದಲು ಬಡಿಸಬೇಕು ಮುಂತಾದವುಗಳ ವಿವರಗಳನ್ನು ನಮೂದಿಸಲಾಗಿತ್ತು. ಯಜಮಾನಿ ತಲೆ ಕೆರೆದುಕೊಳ್ಳುತ್ತ ಕೇಳಿದಳು:

"ಕ್ರಿಶ್, ನೀನು ಮಾಂಸ ತಿನ್ನುತ್ತೀಯಲ್ಲವೇ?"

"ತಿನ್ನುವ ಮನಸ್ಸಿದ್ದರೂ ತಿಂದು ರೂಢಿಯಿಲ್ಲ" ಎಂದು ಉತ್ತರಿಸಿದೆ. ಬಂದ ಅತಿಥಿಗಳಲ್ಲೊಬ್ಬ "ಹಿಂಡು(ಹಿಂದು)ಗಳು ಮಾಂಸವನ್ನೇಕೆ ತಿನ್ನುವುದಿಲ್ಲ? ನಿಮ್ಮ ಧರ್ಮ ಹಾಗೆ ಬೋಧಿಸುತ್ತದೆಯೇ?" ಅಧಿಕ ಪ್ರಶ್ನೆ ಮಾಡಿದ.

"ಹಾಗೇನೂ ಇಲ್ಲದಿದ್ದರೂ ನಮ್ಮಲ್ಲಿ ಹೆಚ್ಚಿನ ಜನ, ನಮ್ಮ ಜೀವನಕ್ಕಾಗಿ ಇನ್ನೊಂದು

ಜೀವವನ್ನು ಹಿಂಸಿಸುವುದು ಅಧರ್ಮವೆಂದು ನಂಬುತ್ತಾರೆ. ಇನ್ನೂ ಕೆಲವರಿಗೆ ಕುರಿ, ಕೋಳಿ, ದನ-ಕರುಗಳ ಮಾಂಸ ತಿನ್ನಬೇಕೆಂದರೆ ಆತ್ಮೀಯತೆಯಿಂದ ಸಾಕಿ, ಸಲಹಿ ಬೆಳೆಸುವ ಪ್ರಾಣಿಗಳು ಕಣ್ಣೀರು ಸುರಿಸುತ್ತ ಅಸಹಾಯವಾಗಿ ನಿಂತ ಸನ್ನಿವೇಶ ಕಣ್ಣಿಗೆ ಕಟ್ಟಿದಂತಾಗಿ 'ಬೇಡ' ಎನ್ನಿಸುತ್ತದೆ. ಅದೇ ನಿಮಗೆ, ಚೆನ್ನಾಗಿ ಮೇಯ್ದು ದಷ್ಟ-ಪುಷ್ಟವಾಗಿ ಬೆಳೆದ ದನ ನೋಡಿದಾಗ, ಖುರಗಳ ಮೇಲೆ ನಿಂತ ಮಾಂಸದ ಸವಿಯನ್ನು ನೆನೆಸಿಯೇ ಬಾಯಿ ನೀರೂರಬಹುದು ಇದು ಸಂಸ್ಕಾರಭೇದ. ನಮ್ಮ-ನಿಮ್ಮಲ್ಲಿ ಆಕಾಶಪಾತಾಳದಷ್ಟು ಅಂತವಿದೆ." ಎಂದು ನಾನು ಉತ್ತರಿಸಿದ ಕೂಡಲೇ ಇನ್ನೊಬ್ಬ ಅತಿಥಿ ವಿಚಾರಿಸಿದ:

"ಹಿಂಡುಗಳ (ಹಿಂದು) ಆಕಳು ಪವಿತ್ರವೆಂದು ಗೋವಮಾಂಸವನ್ನಷ್ಟೆ ತಿನ್ನುವುದಿಲ್ಲವೆಂದು ತಿಳಿದಿದ್ದೆ. ನೀನು ಹೇಳಿದ್ದು ನೋಡಿದರೆ ಎಲ್ಲ ಮಾಂಸವೂ ಹೆಚ್ಚಿನ ಜನರಿಗೆ ತ್ಯಾಜ್ಯವೆನಿಸುತ್ತದೆ. ಹೀಗಿದ್ದಾಗ ನೀವು ಶರೀರಕ್ಕೆ ಅವಶ್ಯವಾದ ಪ್ರೋಟೀನುಗಳನ್ನು ಹೇಗೆ ಪಡೆಯುತ್ತೀರಿ?"

"ಸಮತೂಕ ಆಹಾರದ ಬಗ್ಗೆ ನಿಮ್ಮಷ್ಟು ನಾವು ಕಾಳಜಿ ವಹಿಸುವುದಿಲ್ಲ. ನಮಗೆ ಬಾಯಿ-ರುಚಿ ಮುಖ್ಯ. ಅಲ್ಲದೇ ಹಾಲು-ಹೈನ, ದ್ವಿದಲಗಳನ್ನು ಸಾಕಷ್ಟು ಸೇವಿಸುವುದರಿಂದ ಪ್ರೋಟಿನ ಕೊರತೆ ತುಂಬಿಬರುತ್ತದೆ." ಎಂದು ನಾನು ರಕ್ಷಿಸಿಕೊಂಡೆ. ಯಜಮಾನಿ ನಡುವೆಯೇ ಕೇಳಿದಳು:

"ಕ್ರಿಶ್, ವಿನೋದದ ಮಾತಿರಲಿ, ನಿನಗೆ ಬೀಫ್ ಅಡಿಗೆ ಬಿಟ್ಟು ಉಳಿದದ್ದು ನಡೆಯುತ್ತದಲ್ಲವೆ?"

"ಬೀಫ್ ಕೂಡಾ ನಡೆಯುತ್ತದೆ. ಹಡಗದಲ್ಲಿ ತಿಂದು ಆಗಿದೆ." ಎಂದು ಒಪ್ಪಿಕೊಂಡೆ. ಅದಕ್ಕೆ ಯಜಮಾನ,

"ಶಾಂತಂ ಪಾಪಂ! ಅದು ಹೇಗೆ ತಿಂದೆ? ನೀನು ಹಿಂದೂ ಅಲ್ಲವೇ? ಬೀಫ್ ತಿನ್ನುವುದು ಪಾಪಕೃತ್ಯವಲ್ಲವೇ?" ಎಂದು ಕೆಣಕಿದ. ಅದಕ್ಕೆ ನಾನು,

'ನಮ್ಮ ಪುರಾಣಗಳಲ್ಲಿ ಆಕಳುಗಳು ಕುಡಿಯಲು ಹಾಲನ್ನೂ ಸಾರಿಸಲು, ಉರಿಸಲು ಸೆಗಣಿಯನ್ನು ಕೊಡುವುದರಿಂದ ಅವುಗಳನ್ನೂ ಭಕ್ಷಿಸಬಾರದೆಂದು ಹೇಳಿದೆ. ಅಮೇರಿಕನ್ ಮಾಂಸದ ದನಗಳು (beef-cattle). ಇವು ಹಿಂಡುವುದಿಲ್ಲ, ಊಳುವುದಿಲ್ಲ. ಮಾಂಸಕ್ಕಾಗಿ ಒಂದೆಡೆ ಕಟ್ಟಿ, ಮೇವು, ಕಾಳು-ಕಡಿ ಹಾಕಿ ಚೆನ್ನಾಗಿ ಮೇಯಿಸಿ, ಇವನ್ನು ಕೊಬ್ಬಿಸಿರುತ್ತಾರೆ. ಯಾವ ಕೆಲಸಕ್ಕೂ ಬಾರದವುಗಳು. ಆದ್ದರಿಂದ ನಮ್ಮ ಪುರಾಣದ ಮಾತುಗಳು ನಿಮ್ಮ ದನಗಳಿಗೆ ಅನ್ವಯಿಸುವುದಿಲ್ಲ." ಎಂದು ಸಮರ್ಥಿಸಿದೆ. ಈ ಉತ್ತರ ಕೇಳಿ ಎಲ್ಲರೂ ಬಿದ್ದು ಬಿದ್ದು ನಕ್ಕರು.

"Only Indian cows are holy" (ಕೇವಲ ಭಾರತೀಯ ಆಕಳುಗಳು ಅಷ್ಟೇ ಪವಿತ್ರ) ಅಮೇರಿಕನ ಆಕಳುಗಳು ಅಲ್ಲ-ಅಲ್ಲವೇ? ನೀನು ಬಲೇ ಹಾಸ್ಯಪ್ರಿಯನಾಗಿದ್ದೀ, ಚತುರ, ಮಾತಿನಲ್ಲಿ ನಿನ್ನನ್ನು ಯಾರು ಸೋಲಿಸಬಲ್ಲರು? ಹೋಗಲಿ, ಕಾಮಧೇನುವಲ್ಲದ ಗೋಮಾಂಸ ಭಾರತೀಯರು ತಿನ್ನುವದಾದರೆ ಗೋದಿಯ ಜೊತೆಗೆ ಅದನ್ನೂ ಭಾರತೀಯರಿಗೆ ನಾವು ಕೊಡಬಹುದಲ್ಲಾ?" ಎಂದು ಮತ್ತೊಬ್ಬರು ಮಾತು ಮುಂದೆ ಜಗ್ಗಿದರು. ಅಷ್ಟರಲ್ಲಿ ಊಟಕ್ಕೆ ಕರೆ ಬಂದಿತು. ಯಜಮಾನಿ ಒಬ್ಬೊಬ್ಬರನ್ನೇ ಕರೆದು

ಅವರೆಲ್ಲ ಎಲ್ಲೆಲ್ಲಿ ಕುಳಿತುಕೊಳ್ಳಬೇಕೆಂದು ತೋರಿಸಿದಳು. ಪ್ರತಿಯೊಂದು ಕುರ್ಚಿಯ ಮೇಲೂ ಆಯಾ ಅತಿಥಿಯ ಹೆಸರಿತ್ತು. ದೊಡ್ಡದೊಂದು ಟೇಬಲ್; ನಟ್ಟನಡುವೆ ಅಲಂಕಾರಭರಿತವಾದ ಮಿಣಮಿಣಗುವ ಮೇಣಬತ್ತಿಗಳು. ಸುಂದರವಾಗಿ ಅರಳಿದ, ಓರಣವಾಗಿ ಜೋಡಿಸಿದ ಹೂಗೊಂಚಲುಗಳು. ಪ್ರತಿಯೊಬ್ಬರ ಮುಂದೆಯೂ ಪ್ಲೇಟು, ಚಮಚ, ಮುಳ್ಳು-ಚಮಚ, ಚಾಕುಗಳು. ಒಂದೊಂದು ಕಾಗದದ ಟುವಾಲು. ಎಲ್ಲಕ್ಕೂ ಮೊದಲು 'ಪಂಚ್' (ಮಿಶ್ರಿತ ಹಣ್ಣಿನ ರಸ) ಬಂದಿತು. ಅದನ್ನು ಸೇವಿಸುತ್ತಿದ್ದಂತೆ ಯಜಮಾನಿ ಎದ್ದು ನಿಂತು ಸಣ್ಣದೊಂದು ಭಾಷಣ ಕುಟ್ಟಿದಳು. ಅಂತಾರಾಷ್ಟ್ರೀಯ ವಿದ್ಯಾರ್ಥಿಯೊಬ್ಬ ಅತಿಥಿಯಾಗಿ ಬಂದದ್ದಕ್ಕೆ ತನ್ನ ಸಂತೋಷವನ್ನು ವ್ಯಕ್ತಪಡಿಸಿದಳು. ನಂತರ ತನ್ನ ಸ್ಥಳದಲ್ಲಿ ಬಂದು, "ಇದು ದಯಪಾಲಿಸಿದ ರೊಟ್ಟಿಗಾಗಿ" ದೇವರನ್ನು ಅಭಿವಂದಿಸಿದಳು. ಅವಳು ಬಡಿಸಿಕೊಳ್ಳಲಾರಂಭಿಸಿದ ನಂತರ ಪ್ರತಿಯೊಬ್ಬರೂ ಬಡಿಸಿಕೊಳ್ಳಲಾರಂಭಿಸಿದರು. ಅಡಿಗೆ ಸಪ್ತವರ್ಣಗಳಿಂದ ರಂಜಿತವಾಗಿತ್ತು. ಅಂತೆಯೇ ಕೊಟ್ಟ ಪ್ಲೇಟಿನ ತುಂಬ ಬಡಿಸಿಕೊಂಡೆ. ಹಲವು ಹಸಿ ತರಕಾರಿಗಳ ಸಮೂಹದಂತಿದ್ದ 'ಸೆಲೆಡ್', ಬಣ್ಣಬಣ್ಣದ ಆದರೆ ಸುಗಂಧ, ರುಚಿ ಎರಡೂ ಇಲ್ಲದ ಮಾಂಸ, ಬ್ರೆಡ್, ಬೆಣ್ಣೆಗಳಿದ್ದವು. ಯಾವುದರ ರುಚಿಯೂ ನಾಲಿಗೆಗೆ ಹಿಡಿಸಲಿಲ್ಲ. ಎಲ್ಲರೂ ಎರಡು-ಮೂರು ಬಾರಿ ಬಡಿಸಿಕೊಂಡರೆ, ನನಗೆ ಮೊದಲು ಬಡಿಸಿಕೊಂಡದ್ದನ್ನೇ ಗಂಟಲೊಳಕ್ಕೆ ಇಳಿಸಬೇಕಾದರೆ ಸಾಕುಬೇಕಾಯಿತು. ಊಟದ ಕೊನೆಯಲ್ಲಿ ಹಾಲು, ಸಕ್ಕರೆ ಕಾಣದ ಕಹಿ ಕಾಫಿ ಬಂದಿತು. ಒಂದು ಗುಟುಕೂ ಕುಡಿಯಲಾಗಲಿಲ್ಲ. ಊಟದ ನಂತರ ಬಂದ ಐಸ್ಕ್ರೀಮ್ ಮನಸ್ಸಿಗೆ ಸ್ವಲ್ಪ ನೆಮ್ಮದಿ ಕೊಟ್ಟಿತು. ಊಟದ ನಂತರ ಇನ್ನಷ್ಟು ಹರಟೆಯಾಯಿತು. ಮನೆಗೆ ಹೊರಟು ನಿಂತಾಗ ಬೇಡಬೇಡವೆಂದೂ ಯಜಮಾನಿ ಮಾಂಸದ ಅಡಿಗೆಯ ಪೊಟ್ಟಣವನ್ನು ಕಟ್ಟಿಕೊಟ್ಟಳು. ಮನೆ ಮುಟ್ಟಿದಾಗ ಮಧ್ಯರಾತ್ರಿಯಾಗಿ ಹೋಗಿತ್ತು. ಹಸಿದ ಹೊಟ್ಟೆ ಹಸಿದಂತೇ ಇನ್ನೂ ಇತ್ತು. ಒಂದಿಷ್ಟು ಉಪ್ಪಿಟ್ಟು ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳಬೇಕಾಯಿತು. ಕೊಟ್ಟ ಮಾಂಸದ ಅಡಿಗೆ ನಾಲ್ಕೈದು ದಿನಗಳವರೆಗೆ 'ಫ್ರಿಜ್'ದಲ್ಲಿ ಹಾಗೇ ಹೊರಳಾಡುತ್ತ ಬಿದ್ದಿತ್ತು.

ಆಮೇಲಿನ ದಿನಗಳಲ್ಲಿ ಮೇಲಿಂದ ಮೇಲೆ ಇಂಥ ಆಮಂತ್ರಣಗಳು ಬರುತ್ತಿದ್ದವು. ಮತ್ತೆ-ಎರಡು ಮೂರು ಆಮಂತ್ರಣಗಳನ್ನು ಸ್ವೀಕರಿಸಿ ಹೋದಾಗ ಎಲ್ಲೆಡೆಗೂ ಒಂದೇ ತರದ ಪ್ರಶ್ನೆ, ಒಂದೇ ತೆರನ ಅಡಿಗೆ, ಒಂದೇ ರೀತಿಯ ಆತಿಥ್ಯ; ಮನೆಗೆ ಬಂದ ಮೇಲೆ ಉಪ್ಪಿಟ್ಟಿನ ಕಾರ್ಯಕ್ರಮ, ಇವುಗಳಿಂದ ಮನಸ್ಸು ಬೇಸರಕ್ಕೆ ಇಟ್ಟುಕೊಂಡಿತು. ಇವೆಲ್ಲ ಔತಣಗಳು, ಬಂದ ಹೊರನಾಡಿನವರನ್ನು ಕರೆದು ತಮ್ಮ ಪ್ರತಿಷ್ಠೆಯನ್ನು ಸಮಾಜದಲ್ಲಿ ಬೆಳೆಸುವ ಸಾಧನವಾಗಿದೆಯೆಂದು ತಿಳಿದಾಗ ಇಂತಹ ಆಮಂತ್ರಣಗಳನ್ನು ಸ್ವೀಕರಿಸುವುದನ್ನೇ ಬಿಟ್ಟು ಬಿಟ್ಟೆ.

* * *

ಯಾಂಕಿ ಗೆಳೆಯರು

ಅಮೇರಿಕೆಗೆ ಹೋದ ಭಾರತೀಯರೆಲ್ಲ ಕೂಡಿ ಅಲ್ಲೊಂದು ಚಿಕ್ಕ ಭಾರತವನ್ನೇ ನಿರ್ಮಿಸುತ್ತಾರೆ. ಹೀಗಾಗಿ ಅಮೇರಿಕನ್ ವಿದ್ಯಾರ್ಥಿಗಳೊಡನೆ ಬೆರೆಯುವದಾಗಲಿ, ಅಮೇರಿಕನ್ನರೊಡನೆ ಹೆಚ್ಚಿನ ಸಾಮಾಜಿಕ ಸಂಪರ್ಕ ಬರುವದಾಗಲಿ ಕಡಿಮೆಯೆ. ಸ್ವತಃ ತಾವೇ ಪ್ರಯತ್ನ ಮಾಡದೇ ಅಮೇರಿಕನ್ ವಿದ್ಯಾರ್ಥಿಗಳು ವಿದೇಶೀಯ ವಿದ್ಯಾರ್ಥಿಗಳೊಡನೆ ಬೆರೆಯುವುದಿಲ್ಲ ಎಂದು ಈ ವಿದ್ಯಾರ್ಥಿಗಳ ನಂಬಿಕೆ. ನಾನು ಅಮೇರಿಕನ್ ವಿದ್ಯಾರ್ಥಿಗಳೊಡನೆ ಸಹವಾಸ ಬೆಳೆಸಲು ಆತುರನಾಗಿದ್ದೆ. ತಮ್ಮ ತಮ್ಮಲ್ಲೆ ತೀರ ಔಪಚಾರಿಕವಾಗಿರುವ ಅಮೇರಿಕನ್ನರು ವಿದೇಶೀಯರೊಡನೆ ಹೇಗೆ ತಾನೆ ಸಲಿಗೆ ಬೆಳೆಸಿಯಾರು? ಮೊದಮೊದಲು ಒಂದೆರಡು ತಿಂಗಳು ಬರಿಯ 'ಹಾಯ್ ಹಾಯ್'ದಲ್ಲಿಯೆ ಕಳೆಯಿತು.

ಅಮೇರಿಕೆಯ ಶಿಕ್ಷಣಕ್ರಮದಲ್ಲಿ ಪರೀಕ್ಷೆಗಳ ಜೊತೆಗೆ ತುಂಬಿದ ಸಭೆಗಳಲ್ಲಿ ಭಾಷಣಮಾಡುವುದು, ಚರ್ಚೆಗಳಲ್ಲಿ ಭಾಗವಹಿಸುವುದು ಮುಂತಾದವುಗಳಲ್ಲಿ ತರಬೇತಿ ಕೊಡುತ್ತಾರೆ. ಒಮ್ಮೆ ಇಂತಹ ಸೆಮಿನಾರ್ ಒಂದರಲ್ಲಿ ನನ್ನ ಸಂಶೋಧನೆಯ ವಿಷಯವಾಗಿಯೇ ವಿಮರ್ಶೆಯನ್ನು ಇಟ್ಟಿದ್ದರು. ಅಮೇರಿಕನ್ ಶಿಕ್ಷಕರು ವಿದ್ಯಾರ್ಥಿಗಳಂತೆ ಹಾವಭಾವದಿಂದ ತಮ್ಮ ಅರ್ಧ ಪಾಠ ಕಲಿಸಿದರೆ ವಿದ್ಯಾರ್ಥಿಯಾದ ನಾನು ಶಿಕ್ಷಕರಂತೆ ಠೀವಿಯಿಂದ ನಿಂತುಬಿಟ್ಟಿದ್ದೆ. (ಈ ಮೊದಲು ಶಿಕ್ಷಕನಾಗಿ ಎರಡು ವರ್ಷದ ಅನುಭವ ನನ್ನಲ್ಲಿ ಸಾಂಪ್ರದಾಯಿತ 'ಶಿಕ್ಷಕತ್ವ'ವನ್ನು ಬೇರೂರಿಸಿಬಿಟ್ಟಿತ್ತು.) ನನ್ನ ಇಂಗ್ಲೀಷ ಉಚ್ಚಾರ ಅಮೇರಿಕನ್ನರ ಉಚ್ಚಾರಕ್ಕಿಂತ ಭಿನ್ನವಾಗಿದ್ದರಿಂದ ನನ್ನ ಭಾಷಣದ ವೇಗ ಹೆಚ್ಚಾಯಿತೆಂದು ಪ್ರಾಧ್ಯಾಪಕರು ನಡುನಡುವೆ ಬ್ರೇಕ್ ಹಾಕುತ್ತಿದ್ದರು. ಅಂದಿನ ನನ್ನ ವಾದಸರಣಿ, ವಿದ್ಯಾರ್ಥಿ-ಶಿಕ್ಷಕರಲ್ಲಿ ನನ್ನ ಬಗ್ಗೆ ಹೊಸ ಭಾವವನ್ನು ಹುಟ್ಟಿಸಿತೆಂದು ತೋರುತ್ತದೆ. ವರ್ಗದಲ್ಲಿ ಪೆದ್ದನಂತೆ ಕುಳಿತರೂ ಬುದ್ಧಿಯಲ್ಲಿ ಪೆದ್ದನಲ್ಲವೆಂದು ತಿಳಿದಿರಬೇಕು. ಅಂತೂ ಏನೋ ಎಂದೂ ಮಾತನಾಡಿಸದ ವಿದ್ಯಾರ್ಥಿಗಳೂ ಸಹ ಬಂದು ಬಂದು ಕೈಕುಲುಕಿ ಅಭಿನಂದಿಸಿದರು. ಒಬ್ಬ ವಿದ್ಯಾರ್ಥಿಯಂತೂ, "ಕ್ರಿಶ್, ನೀನು ಹೇಳಿದ್ದು ನಮ್ಮಲ್ಲಿಯ ಎಷ್ಟೋ ಪ್ರಾಧ್ಯಾಪಕರು ಕಲಿಸುವದಕ್ಕಿಂತ ಚೆನ್ನಾಗಿ ತಿಳಿಯಿತು. ನಮ್ಮ ಶಿಕ್ಷಕವೃಂದವೆಲ್ಲ ನಿನ್ನಂತಿದ್ದರೆ..." ಎಂದು ಮುಕ್ತಕಂಠದಿಂದ ಹೊಗಳಿದ. ಜಾನ್‌ನಿಗೆ ನನ್ನ ವಿಷಯದ ಬಗ್ಗೆ ಇನ್ನಷ್ಟು ವಿವರಣೆ ಬೇಕಾಗಿತ್ತು. ಅಂತೆಯೇ "ಕ್ರಿಶ್ ಕಾಫಿ ಕುಡಿಯಲು ನನಗೆ ಜೊತೆ ಕೊಡುವಿಯಾ? ಅಲ್ಲಿಯೇ ಕುಳಿತು ಮಾತನಾಡೋಣ." ಎಂದು ಹೇಳಿದ. ನನಗೂ ಗಂಟಲು ಒಣಗಿದ್ದರಿಂದ ಆಗಲೆಂದು ಇಬ್ಬರೂ ಕೆಫಿಟೇರಿಯದತ್ತ ಹೊರೆಟೆವು.

ಕೆಫಿಟೇರಿಯದಲ್ಲಿ ಯಂತ್ರಗಳ ಹೊರತು ಇನ್ನಾರು ಇರಲಿಲ್ಲ. ಕಾಫಿ, ಚಹ, ಹಾಲು ಐಸ್ಕ್ರೀಮಗಳನ್ನು ಕೊಡುವ ಯಂತ್ರಗಳು ಸಾಲಾಗಿ ನಿಂತಿದ್ದವು. ಕಾಫಿಯ ಯಂತ್ರದಲ್ಲಿ ಕರಿ ಕಾಫಿ, ಬಿಳಿ ಕಾಫಿ, ಸಕ್ಕರೆಯ ಕಾಫಿ, ಸ್ಟ್ರಾಂಗ್ ಕಾಫಿ ಸಿಗುತ್ತದೆ. ಕೊಟ್ಟ ಹಣವನ್ನು ಪರೀಕ್ಷಿಸಿ ಎಣಿಸುವ ಬುದ್ಧಿಯೂ ಈ ಯಂತ್ರಗಳಿಗೆ ಇದೆ! ಹೆಚ್ಚು ಹಣ ಕೊಟ್ಟರೆ ಚಿಲ್ಲರೆ ತಿರುಗಿ ಕೊಡುತ್ತದೆ. ಕಡಿಮೆ ಕೊಟ್ಟರೆ ಇನ್ನಷ್ಟು ಬೇಕೆನ್ನುತ್ತದೆ. ಖೊಟ್ಟಿ

ನಾಣ್ಯ ಕೊಟ್ಟರೆ ನಿರಾಕರಿಸುತ್ತದೆ. ಅಂತೂ ಒಬ್ಬ ಗಲ್ಲೆಯ ಮೇಲೆ ಕೂಡುವ ಭಾರತೀಯನ ಕೆಲಸ ಮಾಡುತ್ತದೆ ಈ ಯಂತ್ರ. ಚಹ, ಕಾಫಿ, ಹಾಲು, ಐಸ್ಕ್ರೀಮ್ ಇವುಗಳಲ್ಲಿ ಯಾವುದನ್ನು ತೆಗೆದುಕೊಂಡರೂ ಒಂದೇ ಬೆಲೆ! ನನ್ನ ಸಹಪಾಠಿ ಕಿಸೆಯಿಂದ ಹತ್ತು ಸೆಂಟಿನ ನಾಣ್ಯವನ್ನು ತೆಗೆದು ತನಗೊಬ್ಬನಿಗೇ ಕಾಫಿ ಕೊಂಡು, ಹೀರಲು ಪ್ರಾರಂಭಿಸಿದ. ನಾನೊಂದು ಕುರ್ಚಿ ಎಳೆದುಕೊಂಡು ಅವನ ಎದುರಿಗೇ ಕುಳಿತೆ.

"ನಿನಗೆ ಕಾಫಿ ಬೇಡವೇ?" ಎಂದು ಕೇಳಿದ.

"ನಿನ್ನಿಂದ ನಿರೀಕ್ಷಿಸಿದ್ದೆ, ಆದರೆ ನೀನೊಬ್ಬನೇ ಹೀರಲಾರಂಭಿಸಿದೆಯಲ್ಲ!" ಎಂದು ಮುಖಕ್ಕೇ ಹೇಗೆ ಹೇಳಬೇಕು ಎಂಬ ಸ್ವಾಭಾವಿಕ ಸಂಕೋಚದಿಂದ ನಾನು ಹಾಗೆ ಹೇಳಲಾರದೆ,

"ನನ್ನ ಹತ್ತಿರ ಚಿಲ್ಲರೆಯಿಲ್ಲ". ಎಂದು ಬೇರೆ ನೆವ ಹೇಳಿದೆ. ಅದಕ್ಕವನು,

"ಅಷ್ಟೇ ತಾನೆ, ನಾನು ಚಿಲ್ಲರೆ ಕೊಡುತ್ತೇನೆ. ನಾಳೆ ನನಗೆ ತಿರುಗಿ ಕೊಟ್ಟರೂ ನಡೆಯುವುದು." ಎಂದು ಹತ್ತು ಸೆಂಟು ತೆಗೆದು ನನ್ನ ಕೈಯಲ್ಲಿಟ್ಟ. ಬಹುಶಃ ನನ್ನ ಹತ್ತಿರ ಚಿಲ್ಲರೆಯೇಕೆ. ನೋಟು ಸಹ ಇಲ್ಲವೆಂದು ತಿಳಿಯುವ ಗೋಜಿಗೆ ಹೋಗಿರಲಿಕ್ಕಿಲ್ಲ ಆತ. ಅಂದು ಅಮೇರಿಕನ್ ಗೆಳೆತನದ ಪ್ರಥಮ ಪಾಠವನ್ನು ಕಲಿತೆ.

ಮರುದಿನ ಬೆಳಿಗ್ಗೆ ಕಾಲೇಜಿಗೆ ಬಂದೊಡನೆ ಅವನ ರೊಕ್ಕ ವಾಪಸ ಮಾಡಿ, ನಾನೇ ಅವನನ್ನು ಕಾಫಿ ಕುಡಿಯಲು ಕರೆದೆ ಅವನು ಬರಲು ಮನಸ್ಸಿಲ್ಲದೇ, ಒಲ್ಲೆ ಎನ್ನಲಾರದೇ ಬಂದ. ನನ್ನ ರೊಕ್ಕದಿಂದಲೇ ಎರಡು ಗ್ಲಾಸು ಕಾಫಿಯನ್ನು ಯಂತ್ರದಿಂದ ತೆಗೆದುಕೊಂಡು, ಒಂದು ಗ್ಲಾಸನ್ನು ಅವನ ಕೈಗೆ ಕೊಟ್ಟಾಗ ಅವನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಅವನು ತನ್ನ ಪಾಲಿನ ರೊಕ್ಕ ಕೊಡಲು ಬಂದಾಗ ಬೇಡವೆಂದೆ. ನನ್ನ ಈ ನಡತೆ ಅವನಿಗೆ ಹೆಚ್ಚಿನ ಆಶ್ಚರ್ಯವನ್ನುಂಟು ಮಾಡಿರಬೇಕು. ನಾನು ಅವನಿಗೆ ಭಾರತದಲ್ಲಿ ಸ್ನೇಹಿತರು ಚಹ ಕುಡಿಯುವ ಪದ್ಧತಿಯನ್ನು ವಿವರಿಸಿದೆ. ಹತ್ತೆಂಟು ಗೆಳೆಯರು ಚಹದಂಗಡಿಗೆ ಹೋದರೂ ಯಾರಾದರೂ ಒಬ್ಬರೇ ಹಣ ಕೊಡುತ್ತಾರೆ. ಎಂದಾಗ ಆತನಿಗೆ ವಿಸ್ಮಯದ ಪರಮಾವಧಿ. ಪ್ರತಿ ಸಾರೆ ಹೋದಾಗ ಬೇರೆಬೇರೆಯವರು ಕೊಡುವದರಿಂದ ಯಾರೊಬ್ಬರಿಗೂ ಭಾರವಾಗುವುದಿಲ್ಲ ಎಂದಾಗ "ಹಾಗಾದರೆ ಸೈ" ಎಂದ. ಅಂದಿನಿಂದ 'ಭಾರತೀಯ ಸ್ನೇಹಿತನ ಕಾಫಿ' (Indian-friendship-Coffee) ಕುಡಿಯಲು ಆತ ಆಗಾಗ್ಗೆ ಕರೆಯುತ್ತಿದ್ದ. ಯಂತ್ರದ ಕಾಫಿ ತುಟ್ಟಿಯಾಗುತ್ತದೆಂದು ಕೆಲ ದಿನಗಳ ನಂತರ ಕಾಲೇಜಿನ ನನ್ನ ಕೋಣೆಯಲ್ಲೆ ಕಾಫಿ ಮಾಡಲಾರಂಭಿಸಿದೆ. ಹನ್ನೆರಡು ಗಂಟೆಗೆ ಆತ ಎಲ್ಲಿದ್ದರೂ ಕಪ್ ಕೈಯಲ್ಲಿ ಹಿಡಿದುಕೊಂಡು ಕೋಣೆಯಲ್ಲಿ ಹಾಜರಾಗುತ್ತಿದ್ದ. ನಂತರ ನಮ್ಮ ಕಾಫಿ ಕ್ಲಬ್ ಸುದ್ದಿ ಉಳಿದ ಸಹಪಾಠಿಗಳಲ್ಲಿ ಹರಡಿತು. ಅವರೂ ಬಂದು ಸೇರಿದರು. ಬರಬರುತ್ತ ಅವರು ನನಗಾಗಿ ಸೆಂಡ್‌ವಿಚ್, ಸೇಬು ಅಥವಾ ಇನ್ನಾವುದಾದರೂ ತಿಂಡಿ ತರಲಾರಂಭಿಸಿದರು. ಅವರ ತಿಂಡಿ ನನ್ನ ಕಾಫಿಗಳಲ್ಲಿಯ ಭಾರತೀಯ ಆತ್ಮೀಯತೆ ಕೆಲವೇ ತಿಂಗಳಲ್ಲಿ ನಮ್ಮನ್ನು ಒಂದಾಗಿ ಬೆಸೆದುಬಿಟ್ಟಿತು.

ಕಾಫಿ-ಸೆಂಡ್‌ವಿಚ್‌ಗಳ ಸಂತರ್ಪಣೆಯಲ್ಲಿ ಆಗೀಗ ಭಾರತ-ಅಮೇರಿಕನ್ ಸಂಸ್ಕೃತಿಗಳ ಬಗ್ಗೆ ನಮನಮ್ಮಲ್ಲಿ ಒಳ್ಳೆ ಚರ್ಚೆ ನಡೆಯುತ್ತಿತ್ತು. ವಾಗ್ಯುದ್ಧಗಳೂ ನಡೆಯದೆ ಇರುತ್ತಿರಲಿಲ್ಲ. ಎರಡೂ ಸಾಮಾನ್ಯವಾಗಿದ್ದವು. ಭಾರತೀಯರ ಬಗ್ಗೆ ಅಮೇರಿಕನ್ನರಿಗೆ

ಎಂತಹ ತಪ್ಪು ಕಲ್ಪನೆಗಳಿವೆಯೆಂದು ನನಗೆ ಆಗ ಸ್ಪಷ್ಟವಾಗುತ್ತ ಬಂದಿತು. ಕೆಲವು ಬಾರಿ ನನ್ನನ್ನು ಕೆರಳಿಸಲೆಂದೇ ಏನಾದರೂ ಅಡ್ಡ ಪ್ರಶ್ನೆಗಳನ್ನು ಕೇಳುತ್ತಿದ್ದರು. ಆದರೆ ವಾದಕ್ಕೆ ನಿಂತರೆ ಅವರ ಟೊಳ್ಳುತನವೆಲ್ಲ ಹೊರಬರುತ್ತಿತ್ತು. ನಮ್ಮ ಮಾತಿನ ಹೊಳೆ ಹಲವಾರು ಮುಖವಾಗಿ ಹರಿಯುತ್ತಿತ್ತು.

ಪ್ರಶ್ನೆ : ಕ್ರಿಶ್, ವಿಶ್ವದ ನಾರಿಯರೆಲ್ಲ ತಾವು ಪುರಷರಿಗೆ ಒಂದಿಷ್ಟೂ ಕಡಿಮೆಯಲ್ಲವೆಂದು ಸಾಧಿಸಲು ಹೊರಟಾಗ, ಭಾರತೀಯ ನಾರಿಯರೇಕೆ ಇನ್ನೂ ಗಂಡಸಿನ ದಾಸ್ಯದಲ್ಲಿ ನರಳುತ್ತಿದ್ದಾರೆ?

ಉತ್ತರ : "ಭಾರತೀಯ ನಾರಿಯರು ಗಂಡಸರ ದಾಸಿಯರೆಂದು ನಿಮಗೆ ಯಾರು ಹೇಳಿದರು? ಒಂದು ದೃಷ್ಟಿಯಲ್ಲಿ ನೋಡಿದರೆ ಗಂಡಸರಿಗಿಂತ ಹೆಚ್ಚು ಗೌರವ ಸ್ತ್ರೀಯರಿಗೆ ಸಲ್ಲುತ್ತದೆ ಭಾರತದಲ್ಲಿ." (ಒಂದು ಸಂಸ್ಕೃತ ಶ್ಲೋಕವನ್ನು ಉದಾಹರಿಸಿ ಅರ್ಥ ವಿವರಿಸಿದೆ.)

ಪ್ರಶ್ನೆ : "ಹಾಗಾದರೆ ಭಾರತೀಯ ಗಂಡಸರೆಲ್ಲ ಪಾಶ್ಚಾತ್ಯ ಉಡುಪು ತೊಟ್ಟರೂ ಸ್ತ್ರೀಯರೇಕೆ ಪ್ರಾಚೀನ ಯುಗದ ಸೀರೆಯನ್ನೇ ಉಡುತ್ತಾರೆ. ಜಗತ್ತಿನ ಎಲ್ಲ ಸುಧಾರಿಸಿದ ರಾಷ್ಟ್ರಗಳಲ್ಲಿ ಸ್ತ್ರೀಯರು ಪಾಶ್ಚಾತ್ಯ ಉಡುಪನ್ನೇ ತೊಡುವುದಿಲ್ಲವೇ? ಅಲ್ಲದೇ ಭಾರತೀಯ ಸ್ತ್ರೀಯರು ಮನೆಗೆಲಸವೇ ತಮ್ಮ ಸರ್ವಸ್ವವೆಂದು, ಸರ್ವಸುಖವೆಂದು, ತಿಳಿಯುತ್ತಾರಂತೆ. ಇದು ಗುಲಾಮಗಿರಿಯ ಸಂಕೇತವಲ್ಲದೇ ಇನ್ನೇನು?"

ಉತ್ತರ : "ಅಮೇರಿಕನ್ ನಾರಿಯರು ಮೊಣಕಾಲಿನ ಕೆಳಭಾಗವನ್ನು ಸುಂದರವಾಗಿಡಲು ಎಷ್ಟೊಂದು ಕಾಳಜಿ ವಹಿಸಬೇಕಾಗುತ್ತದೆ. ಎಷ್ಟೊಂದು ಹಣ ಸೂರೆ ಮಾಡಬೇಕಾಗುತ್ತದೆ? ಇಷ್ಟಾದರೂ ಅದರಲ್ಲಿ ಸ್ವಲ್ಪ ಊನ ಕಂಡು ಬಂದರೆ ಆಕೆಗೆ ಮದಿವೆಯಾಗುವುದೇ ಇಲ್ಲ. ಅದೇ ಭಾರತೀಯ ಸ್ತ್ರೀ ಸೀರೆಯನ್ನು ಉಟ್ಟರೆ, ಇದ್ದ ಕುಂದುಕೊರತೆಗಳೂ ಮುಚ್ಚಿಹೋಗುತ್ತವೆ. ಇದೊಂದು ಅನುಕೂಲವಲ್ಲವೇ? ಅಲ್ಲದೇ ಸೀರೆಯಲ್ಲಿ 'ಹೆಣ್ಣುತನ" ಹೆಚ್ಚು ಸುಂದರವಾಗಿ ಕಾಣುತ್ತದೆ. ಅಂತೆಯೇ ಅಮೇರಿಕನ್ ಮಹಿಳೆಯರು ಸೀರೆಗೆ ಮನಸೋತು ಆಗೀಗ ಸೀರೆ ಉಡಲು ಹಾತೊರೆಯುವದಿಲ್ಲವೇ? ಇನ್ನು ಮನೆಗೆಲಸಗಳನ್ನು ಸ್ತ್ರೀಯರಲ್ಲದೇ ಇನ್ನಾರು ಮಾಡಬೇಕು? ನಿಮ್ಮಲ್ಲಿ ಸ್ತ್ರೀಯರು ತಾವು ಮನೆಯ ಹೊರಗೂ, ಗಂಡಸರು ಮನೆಯ ಒಳಗೂ ಇರಬೇಕೆಂದು ಪ್ರಯತ್ನಿಸುವುದರಿಂದ ನೀವೆಲ್ಲ ಎಷ್ಟೋ ಅನ್ಯಾಯಗಳನ್ನು ಸಹಿಸಬೇಕಾಗಿ ಬಂದಿದೆ!"

ಪ್ರಶ್ನೆ : "ನಿಮ್ಮ ದೇಶದಲ್ಲಿ ಹಿಂದುಗಳು ಎರಡು ಮೂರು ಹೆಂಡಂದಿರನ್ನೂ, ಮುಸಲ್ಮಾನರು ನಾಲ್ಕು ಹೆಂಡದಿಂರನ್ನೂ ಮದುವೆಯಾಗಿ ಸಂಸಾರ ಒಟ್ಟಿಗೆ ಮಾಡುತ್ತಾರೆಂದು ಓದಿದ ನೆನಪು. ಇದು ಸ್ತ್ರೀಯರಿಗೆ ಪುರುಷರು ಮಾಡುತ್ತಿರುವ ಅನ್ಯಾಯವಲ್ಲವೇ?"

ಉತ್ತರ : "ಅಮೇರಿಕೆಯಲ್ಲಿಯಂತೆ ಎರಡು ವರ್ಷಕ್ಕೊಂದು ಮದಿವೆಯಾಗುದಕ್ಕಿಂತ ಇದು ಎಷ್ಟೋ ವಾಸಿಯಲ್ಲವೇ? ನಮ್ಮಲ್ಲಿ ಎರಡು ಮೂರು ಹೆಂಡಂದಿರೊಡನೆ ಒಬ್ಬ ಸಂಸಾರ ಮಾಡಿದರೆ ನೀವು ಆರೆಂಟು ಹೆಂಗಸರೊಡನೆ ಸಹಜವಾಗಿ ಸಹವಾಸ ಮಾಡುತ್ತೀರಿ. ನಮ್ಮಲ್ಲಿ ಯಾವ ಹೆಂಡತಿಗೂ ಅನ್ಯಾಯವಾಗದಂತೆ ಎಲ್ಲರನ್ನೂ ಒಟ್ಟಿಗೆ ಸಾಕಿ-ಸಲುಹಿದರೆ,

ನೀವು ಪ್ರತಿಯೊಂದು ಹೊಸ ಮದಿವೆ ಮಾಡಿಕೊಂಡಾಗ ಹಿಂದಿನ ಪತ್ನಿಗೆ ಅನ್ಯಾಯ ಮಾಡಿ ವಿವಾಹವಿಚ್ಛೇದನ ಮಾಡಿಕೊಳ್ಳುತ್ತೀರಿ. ಇದಕ್ಕೆ ಉದಾರಹಣೆ, ನಿಮ್ಮಲ್ಲಿ ರಾಷ್ಟ್ರದ ಅಧ್ಯಕ್ಷಪದಕ್ಕೆ ಹವಣಿಸುವ ರಾಕ್‌ಫೆಲರ್‌ನನ್ನೆ ತೆಗೆದುಕೊಳ್ಳೋಣ. ಒಬ್ಬಳಿಗೆ ಮನಸೋತು ಮೂವತ್ತು ವರ್ಷ ಜೊತೆಗೆ ಬಾಳ್ವೆ ಮಾಡಿದವಳನ್ನು ಘಟಸ್ಫೋಟ ಮಾಡಿದ್ದಾಯಿತು. ತನ್ನ ಸ್ವಾರ್ಥಕ್ಕಾಗಿ ವಿವಾಹಿತಳೊಬ್ಬಳ ಸಂಸಾರವನ್ನು ಮುರಿದ. ಪಾಪ, ಮೂರು ಸಣ್ಣ ಸಣ್ಣ ಮಕ್ಕಳು,, ಡಾಕ್ಟರ ಗಂಡ. ಇದು ನ್ಯಾಯವೇ? ನಮ್ಮಲ್ಲಿ ಬಹುಪತ್ನಿತ್ವ ಪ್ರಚಾರದಲ್ಲಿತ್ತು ನಿಜ. ಆದರೆ ಹೆಚ್ಚಿನ ಹೆಂಡಂದಿರನ್ನು ಸಾಕುವುದು ಜನಸಾಮಾನ್ಯರಿಗೆ ಮೀರಿದ ಮಾತಾದ್ದರಿಂದ ಶೇಕಡಾ ೯೯ ಜನರಿಗೆ ಒಬ್ಬ ಹೆಂಡತಿಯೇ ಇರುತ್ತಿದ್ದಳು. (ಅದೂ ಒಂದೇ ಸಲ ಮದಿವೆಯಾದ ಹೆಂಡತಿ!) ಇದೀಗ ಒಬ್ಬಳಿಗಿಂತ ಹೆಚ್ಚು ಜನರನ್ನು ಮದಿವೆಯಾಗಬಾರದೆಂದು ಕಾನೂನು ಜಾರಿಯಲ್ಲಿ ಬಂದಿದೆ. ಕಾನೂನಿನಂತೆ ಒಬ್ಬಳನ್ನು ಬಿಟ್ಟು ಇನ್ನೊಬ್ಬಳನ್ನು ಎಷ್ಟೇ ಸಲ ಮದಿವೆಯಾಗಬಹುದಲ್ಲವೇ?"

ಈ ಉತ್ತರದಿಂದ ಸ್ವಲ್ಪ ಕೆಣಕಿದಂತಾಯಿತು ಜಿವನ್‌ನಿಗೆ. ಆದರೂ ಸೋಲನ್ನೊಪ್ಪಿಕೊಳ್ಳದೇ,

"ಮದಿವೆಯಾದ ಹೆಣ್ಣು ಸಂಸಾರ ಮಾಡಲು ಯೋಗ್ಯಳಿಲ್ಲದಿದ್ದರೆ ವಿವಾಹ ವಿಚ್ಛೇದನೆ ಹೊಂದಿ ಇನ್ನೊಂದು ಮದಿವೆಯಾದರೆ ತಪ್ಪೇನಿದೆ?" ಎಂದು ಕೇಳಿದ. ಅದಕ್ಕೆ ನಾನು,

"ನಿಮ್ಮ ಪದ್ಧತಿಯ ಪ್ರಕಾರ ಒಬ್ಬರಿಗೊಬ್ಬರು ಸರಿಹೋಗುತ್ತಾರೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ನೋಡಿ ನೋಡಿ ಮದಿವೆಯಾದರೂ ಸುಖವಾಗಿ ಸಂಸಾರವನ್ನೇಕೆ ಮಾಡಲಾಗುವುದಿಲ್ಲ? ನಿಮ್ಮ ವಿವಾಹಪದ್ಧತಿಯಲ್ಲಿ ಒಬ್ಬರಿಗಾಗಿ ಇನ್ನೊಬ್ಬರು ಎನ್ನುವುದಕ್ಕಿಂತ, ತನಗಾಗಿ ಇನ್ನೊಬ್ಬರು ಎಂಬ ಧೋರಣೆಯೇ ಬಲವಾಗಿದೆ. ಇನ್ನೊಬ್ಬರಿಗಾಗಿ ತ್ಯಾಗ ಮಾಡುವ ಬುದ್ಧಿ ನಿಮಗೆ ಎಂದೂ ಬರಲಾರದು. ನಿಮ್ಮಲ್ಲಿ ಎಂತಹ ಕ್ಷುಲ್ಲಕ ಕಾರಣಗಳಿಗಾಗಿ ವಿವಾಹ ವಿಚ್ಛೇದನಗಳು ನಡೆಯುತ್ತವೆ ಎಂಬುದನ್ನು ಕಣ್ಣು ತೆರೆದು ನೋಡಿರುವಿಯಾ? ಎಲ್ಲಕ್ಕೂ ಹೆಚ್ಚಿನ ವಿವಾಹ-ವಿಚ್ಛೇದನೆಗೆ ಕಾರಣವೆಂದರೆ ಮಾನಸಿಕ ಕ್ರೌರ್ಯ (mental cruelty) ಅಂತೆ! ಹಬ್ಬಕ್ಕೆ ಪತಿಯು ಮಗನಿಗೆ ಆಟಿಗೆ ತರದೇ ಮಗಳಿಗೆ ಮಾತ್ರ ತಂದರೆ, ಪುಟ್‌ಬಾಲ್ ಪಂದ್ಯಾಟದಲ್ಲಿ ಆತ ವಿರುದ್ಧ ಪಾರ್ಟಿಯನ್ನು ಪ್ರೋತ್ಸಾಹಿಸಿದರೆ, ತನ್ನ ಹಿಂದಿನ ಗೆಳೆಯನೊಡನೆ ಸರಸಸಲ್ಲಾಪ ನಡೆಸಿದಾಗ ತಡೆಹಾಕಿದರೆ ಪತ್ನಿಗೆ ಅದೇ ಮಾನಸಿಕ ಕ್ರೌರ್ಯದ ತೊಂದರೆಯಾಗಿ ಬಿಡುಗಡೆ ಪಡೆಯಲು ಕಾರಣವಾಗುತ್ತದಂತೆ, ನಮ್ಮ ನಿಮ್ಮ ವಿವಾಹದ ಅಂತರವೆಂದರೆ ನಿಮ್ಮಲ್ಲಿ ಪ್ರೇಮ ಮೊದಲು, ವಿವಾಹ ನಂತರ. ವಿವಾಹವಾದನಂತರ ಪ್ರೇಮ ಹೋಗಿಬಿಡುತ್ತದೆ. ವಿವಾಹವೊಂದೇ ಉಳಿಯುತ್ತದೆ. ನಮ್ಮಲ್ಲಿ ವಿವಾಹ ಮೊದಲು, ಪ್ರೇಮ ನಂತರ ಬರುವದರಿಂದ ಪ್ರೇಮ ಬೆಳೆಯಲಿಕ್ಕೆ ಅವಕಾಶವಿದೆ" ಎಂದು ಒಂದು ಸಣ್ಣ ಉಪನ್ಯಾಸವನ್ನೇ ಬಿಗಿದೆ.

ಪ್ರಶ್ನೆ : "ಬಹುಪತ್ನಿಯರು, ವಿಪುಲ ಮಕ್ಕಳು, ಸಾಲದ್ದಕ್ಕೆ ಸರಕಾರದಿಂದ ಮನ್ನಣೆ ಪಡೆದ ವೇಶ್ಯೆಯರು ಇವೆಲ್ಲ ಭಾರತೀಯರು ಕಾಮುಕರೆಂದು ಸಾರಿ ಹೇಳುವದಿಲ್ಲವೇ? ನಮ್ಮಲ್ಲಿ ಬಹುಪತ್ನಿಯರೂ ಇಲ್ಲ. ವಿಪುಲ ಮಕ್ಕಳೂ ಇಲ್ಲ. ವೇಶ್ಯೆಯರ ಹೆಸರಂತೂ ಇಲ್ಲವೇ ಇಲ್ಲ ನೋಡು."

ಉತ್ತರ : "ಓ! ತಿರುಬೊಬ್ಬೆ ಇದು! ಜಗತ್ತಿನಲ್ಲಿ ಕಾಮುಕರದೇ ದೇಶ ಯಾವುದಾದರೂ ಇದ್ದರೆ ಅದು ನಿಮ್ಮದು ನೋಡು. ನಿಮ್ಮಲ್ಲಿ ಗರ್ಭನಿರೋಧಕ ಸಾಧನಗಳು ಇಷ್ಟೊಂದು ಇದ್ದರೂ ವರ್ಷವರ್ಷ ಗರ್ಭವತಿ ಕುಮಾರಿಯರ ಸಂಖ್ಯೆ ಹೆಚ್ಚುತ್ತಿದೆ ಏಕೆ? ತಂದೆ ಗೊತ್ತಾಗದ ಮಕ್ಕಳು ಇಷ್ಟೊಂದು ಹುಟ್ಟುತ್ತಾರೆ ಏಕೆ? ನಿಮ್ಮಲ್ಲಿ ನಗ್ನಚಿತ್ರಗಳು, ವಸ್ತ್ರವಿಮೋಚನ-ನೃತ್ಯ (Strip-tease)ಗಳು 'ನಾಯಿಟ್-ಕ್ಲಬ್'ಗಳು ಭರದಿಂದ ಬೆಳೆಯುತ್ತಿವೆ; ಅತ್ಯಂತ ಜನಪ್ರಿಯವಾಗಿವೆ ಏಕೆ? ಇವೆಲ್ಲ ನಿಮ್ಮ ಕಾಮುಕತೆಯ ದ್ಯೋತಕವಲ್ಲೇನು? ನಿಮ್ಮಲ್ಲಿ ವೇಶ್ಯೆಯೆಂಬ ಅಭಿಧಾನವಿರಕ್ಕಿಲ್ಲ. ಅವರ ಆಚಾರ ಎಲ್ಲ ಇದೆ. ಆದರೂ ವೇಶ್ಯೆಯರೇ ಇಲ್ಲ ಎಂಬ ಮಾತು ನಂಬಲು ಅಸಾಧ್ಯ. ನಿಮ್ಮ 'ಪಾರ್ಟಿ-ಹುಡುಗಿಯರು' (party-girls) 'ಶೋ-ಹುಡುಗಿಯರು' (Show-girls) ಮತ್ತು 'ಕೆಳದಿಯರು' (pick-up-girls) ಇವರೆಲ್ಲ ಮಾಡುತ್ತಿರುವುದೇನು? ನಮ್ಮ ವೇಶ್ಯೆಯರನ್ನೂ ಇವರು ಮೀರಿಸುತ್ತಾರೆ. ಹೆಣ್ಣುತನವನ್ನು ರೊಕ್ಕಕ್ಕಾಗಿ ಮಾರಿಕೊಳ್ಳುವವಳು ವೇಶ್ಯೆ ಎಂದು ತೀರ ಸಾಮಾನ್ಯ ವ್ಯಾಖೆಯ (definition) ಕೊಟ್ಟರೆ ಅಮೇರಿಕೆಯ ಪ್ರತಿಯೊಬ್ಬ ಕುಮಾರಿಯೂ ಈ ವರ್ಗಕ್ಕೆ ಸೇರುತ್ತಾಳೆ! ಯಾವುಳೇ ಹುಡುಗಿ ತನ್ನ ಗೆಳೆಯನು ಚಲನಚಿತ್ರ ತೋರಿಸದಿದ್ದರೆ, ಹೊಟೇಲಿಗೆ ಕರೆದುಕೊಂಡು ಹೋಗದಿದ್ದರೆ, ಕಾಣಿಕೆ (presents) ಕೊಡದಿದ್ದರೆ 'ಡೇಟಿಂಗ್'ಗೆ ಹೋಗಲು ಒಪ್ಪುತ್ತಾಳೆಯೇ? ಶಕ್ಯವೇ ಇಲ್ಲ. ಅಲ್ಲದೇ ಒಬ್ಬ ಅಮೇರಿಕನ್ ಹುಡುಗಿ ಹಲವಾರು ತರುಣರ ಸಂಗಡ 'ಡೇಟಿಂಗ್' ಮಾಡುವಳು. ನಿಮಗೆ ವಿವಾಹಪೂರ್ವ ದೇಹ ಸಂಬಂಧವೂ ತ್ಯಾಜ್ಯವಾಗಿಲ್ಲ. ಎಷ್ಟೋ ಜನ ಐದು ಆರು ಮದಿವೆ ಮಾಡಿಕೊಳ್ಳುತ್ತಾರೆ. ನಮ್ಮ ಸಾಮಾಜಿಕ ಮಾನದಂಡದಿಂದ ನೋಡಿದರೆ ಇವರೆಲ್ಲ ವೇಶ್ಯೆಯರೇ!" ಎಂದು ರೊಚ್ಚು ತುಂಬಿ ಒಟ್ಟರಿಸಿ ಹೇಳಿದೆ.

ಈ ಅರ್ಭಟಕ್ಕೆ ಜಿಮ್ ತಯಾರಿದ್ದಿಲ್ಲವಾದ್ದರಿಂದ ಬೆಚ್ಚಿಬಿದ್ದ. ನನ್ನ ವಾದ ಸರಣಿ ಅವನಿಗೆ ಸರಿಬರದಿದ್ದರೂ ಅದನ್ನು ಅಲ್ಲಗಳೆಯುವ ಧೈರ್ಯವಿರಲಿಲ್ಲ. ಅಂತೆಯೇ,

"ನೀನು ಹೇಳುವುದರಲ್ಲಿ ಸತ್ಯಾಂಶವಿರಬಹುದು. ನೀನು ನಮ್ಮ ದೇಶದ ಪ್ರತಿಯೊಂದನ್ನೂ ಸೂಕ್ಷ್ಮವಾಗಿಯೇ ನೋಡಿರುತ್ತೀ. ಬರೇ ಕೊಳಚೆಯನ್ನಷ್ಟೇ ಎತ್ತಿ ತೋರಿಸುತ್ತೀ. ಅಂದರೆ ನಮ್ಮ ದೇಶದಲ್ಲಿ ಒಳ್ಳೆಯದು ಏನೂ ಇಲ್ಲವೇ?" ಎಂದು ಮೆತ್ತಗಾಗಿ ಕೇಳಿದ.

"ಪ್ರತಿಯೊಂದು ದೇಶದಲ್ಲಿ ಒಳ್ಳೆಯದು ಕೆಟ್ಟದ್ದು ಎರಡೂ ಇರುತ್ತದೆ. ಆದರೆ ಹೀಗಿರುತ್ತದೆ ಎನ್ನುವ ವಿವೇಕ. ಬಹುಮಟ್ಟಿಗೆ ನಿಮ್ಮಲ್ಲಿ ಇಲ್ಲ. ಅದೇ ಹೀಗೆಲ್ಲ ಕೇಳುವುದಕ್ಕೆ ಕಾರಣ. ಇರಲಿ, ನಾನು ನಿಮ್ಮ ದೇಶದ ಬಗ್ಗೆ ಕೆಟ್ಟದ್ದು ಎಂದು ಹೇಳಿದ್ದನ್ನು ಬಿಟ್ಟರೆ ಉಳಿದದ್ದೆಲ್ಲ ಉತ್ತಮವಾಗಿದೆ. ನಮ್ಮ ದೇಶದಲ್ಲೂ ಕೆಟ್ಟದಿದೆ; ನಿಮ್ಮ ದೇಶದಲ್ಲೂ ಕೆಟ್ಟದಿದೆ. ಆದರೆ ನಿಮ್ಮಲ್ಲಿಯ ಒಳ್ಳೆಯ ಅಂಶವನ್ನೇ ತೆಗೆದುಕೊಂಡು ಹೋಗಬೇಕೆಂದು ನಾನಿಲ್ಲಿಗೆ ಬಂದಿರುವೆ. ನಿಮ್ಮ ಕಾರ್ಯತತ್ಪರತೆ, ಕಷ್ಟಸಹಿಷ್ಣುತೆ, ಶ್ರಮಗೌರವ, ಸರಳತೆ, ಸಮಾನತೆ (ಒಂದು ದೃಷ್ಟಿಯಿಂದ), ಕೆಲಸ-ವಿಶ್ರಾಂತಿಗಳ ಸಮತೋಲನ ನಿಮ್ಮದು. ಎನ್ನುವ ಬಗ್ಗೆ ನಿಮಗೆ ಇರುವ ಅಭಿಮಾನ (ಪರಿಮಿತಾರ್ಥದಲ್ಲಿ) ಇವೆಲ್ಲ ನಿಜಕ್ಕೂ ಕಲಿಯತಕ್ಕ ಗುಣಗಳಾಗಿವೆ."

ಇಷ್ಟು ಹೊತ್ತಿನ ತನಕ ನಮ್ಮ ವಾದ ವಿವಾದದಲ್ಲಿ ಭಾಗವಹಿಸದ ಟೆಡ್‌ನು ಒಮ್ಮೆಲ್.

"ಕ್ರಿಶ್, ಭಾರತೀಯರ ಕೆಲವು ಅವಗುಣಗಳನ್ನು ನಾವು ತಿಳಿದುಕೊಳ್ಳಬಹುದೇ? ಎಂದು ನಡುವೆಯೆ ಬಾಯಿ ಹಾಕಿ ಕೇಳಿದ.

ಅದಕ್ಕೆ ನಾನೆಂದೆ:

"ಭಾರತೀಯರು ಇತರರಿಂದ ಒಳ್ಳೆಯ ಗುಣಗಳನ್ನು ತೆಗೆದುಕೊಳ್ಳುವದು ಕಡಿಮೆ. ಬ್ರಿಟಿಶ್‌ರ ಕಾಲದಲ್ಲಿ ಬೀಜ ಬಿದ್ದು, ಮೊಳಕೆಯೊಡೆದ ಲಂಚಗುಳಿತನ, ಕಾರ್ಯದ ಬಗ್ಗೆ ಅಲಕ್ಷ್ಯತೆ ಇವೇ ಈಗ ಹೆಮ್ಮರವಾಗಿ ಬೆಳೆದು ನಿಂತಿವೆ. ಕಾಯದೆಯನ್ನು ಪಾಲಿಸುವದಕ್ಕಿಂತ ಮುರಿಯುವದಕ್ಕೇ ಹೊಂಚು ಹಾಕುತ್ತಿರುತ್ತಾರೆ. ಭಾರತದ ಮುಖಂಡರೆನಿಸಿಕೊಂಡವರು. ಸಮಾಜದ ಅಡಿಗಲ್ಲಾದ ಪ್ರತಿಷ್ಠಿತ ನಾಗರಿಕರು–ಇಂಥವರೇ ದುಡಿಯದೆ ಹೇಗೆ ಐಶ್ವರ್ಯ ಸಂಪಾದಿಸಬೇಕೆಂಬುದಕ್ಕೆ ಯಾವ ಹೀನಕೃತ್ಯವನ್ನೂ (ರಾಜಕಾರಣ ಎಂಬ ಹೆಸರಿನಿಂದ) ಮಾಡಲು ಸಿದ್ಧರಿರುತ್ತಾರೆ. ಇದರಿಂದಾಗಿ ಅಧಿಕಾರದಲ್ಲಿರುವವರ ಒಂದು ಪರಿವಾರವೇ ಬೆಳೆದುಬರುತ್ತಿದೆ. ಎಲ್ಲೆಲ್ಲೂ ಈ ಪರಿವಾರದವರ ಕೈವಾಡ ಕಂಡುಬರುತ್ತಿದೆ. ಜನ ಇವರನ್ನೇ ಅನುಸರಿಸುತ್ತಾರೆ. ಇವರ ನೆರಳು ಎಲ್ಲವನ್ನು ಮುಸುಕಿದೆ. ಬಡವರು ಇನ್ನೂ ಬಡವರಾಗುತ್ತ ನಡೆದಿದ್ದಾರೆ. ಮಧ್ಯಮವರ್ಗ ಇವರ ದಬ್ಬಾಳಿಕೆಗೆ ಸಿಕ್ಕು ನಿರ್ನಾಮವಾಗತೊಡಗಿದೆ. ದೇಶದ ಸುಧಾರಣೆಗೆಂದು ಖರ್ಚು ಮಾಡುವ ಕೋಟಿ ಕೋಟಿಗಟ್ಟಲೆ ರೂಪಾಯಿಗಳಲ್ಲಿ ಅರ್ಧದಷ್ಟು ಸರಳವಾಗಿ ಲಂಚಖೋರರ ಲಾಭಬಡಕರ ಕಿಸೆಗೆ ಹೋಗುತ್ತದೆ. ಜನಸಾಮಾನ್ಯರು ಹೊಸ ಜೀವನ, ಹೊಸ ವಿಚಾರ, ವಿಜ್ಞಾನದ ಹೊಸ ಸಲಹೆಗಳನ್ನು ಸ್ವೀಕರಿಸುವುದಿಲ್ಲ. ಶತಮಾನಗಳಿಂದ ಬಂದ ಜಾತೀಯತೆ, ಆಚಾರವಿಚಾರಗಳನ್ನೇ ಮೂಢತೆಯಿಂದ ಬೆಳೆಸಿಕೊಂಡು ಬರುತ್ತಿದ್ದಾರೆ. ನಮ್ಮ–ನಿಮ್ಮ ಉತ್ತಮ ವಿಚಾರ–ಕೃತಿಗಳನ್ನು ಕೂಡಿಸಿದಾಗಲೇ ಆದರ್ಶ ಸಮಾಜ ಹುಟ್ಟೀತು ಎನಿಸುತ್ತದೆ. ಆದರೆ ಒಂದು ಸಂಶಯವೂ ಇದೆ ನನಗೆ. ಎಲ್ಲ ಕಡೆಯಿಂದಲೂ ಬರೇ ಉತ್ತಮತ್ವವನ್ನಷ್ಟೇ ಕಿತ್ತಿ ತಂದು ಒಂದೇ ಕಡೆಯಲ್ಲಿ ಕೂಡಿ ಹಾಕಲು ಬರುತ್ತದೋ ಇಲ್ಲವೋ? ಈ ಪ್ರಪಂಚದಲ್ಲಿ ಒಳ್ಳೆಯದು ಕೆಟ್ಟದ್ದು ಬಿಡಿಸಲಿಕ್ಕೆ ಬಾರದಂತೆ ಬೆಸಗೊಂಡು ಬಿಟ್ಟಿವೆಯೋ ಏನೋ! ಅಂತೇ ಎಷ್ಟೇ ಬದಲಾದರೂ ಅದು ಆವರಣ ಮಾತ್ರ–ಇದು ಎಲ್ಲೋ ನನ್ನ 'ಒಳಗಿನ ಒಳ ದನಿಯೊಂದು'. ಆದರೂ ನಿಮ್ಮ ಉತ್ತಮ ಅಂಶಗಳನ್ನು ಕಲಿಯಲೆಂದೇ ನಿಮ್ಮ ದೇಶಕ್ಕೆ ಧಾವಿಸಿ ಬಂದಿದ್ದೇನೆ."

ಅಮೇರಿಕನ್ನರದು ಸರಳ ಮನೋವೃತ್ತಿ. ಅವರಿಗೆಲ್ಲ ಪ್ರತ್ಯಕ್ಷ ಕಂಡದ್ದೇ ಸತ್ಯ. ಕಾಣದ್ದು ಮಿಥ್ಯ. ತಿಳಿಯಲಾಗದ್ದನ್ನು ಅರಿಯುವ ಗೋಜಿಗೆ ಹೋಗುವವರಲ್ಲ. ಹೀಗಾಗಿ ಚಿಕ್ಕಮಕ್ಕಳಿಗೆ ಹೇಳುವಂತೆ ಉದಾಹರಣೆ ಸಹಿತ ಅವರಿಗೆ ತಿಳಿಹೇಳಿ ಮನವೊಲಿಸುವುದು ಸುಲಭ. ಹೀಗೆಲ್ಲ ನಾನು ಅವರ ದೇಶದ ಗುಣಗಳನ್ನು, ಒಳ್ಳೇತನವನ್ನು ಎತ್ತಿ ಹೇಳಿದ್ದು ಅವರ ಮೇಲೆ ಪರಿಣಾಮ ಮಾಡಿದಂತೆ ತೋರುತ್ತದೆ.

"ಕ್ರಿಶ್ ಭಾರತದಲ್ಲಿ ನಿನ್ನಂತಹ ಪ್ರಗತಿಪರ–ವಿಚಾರಶೀಲರು ಎಷ್ಟು ಜನ ಇದ್ದಾರೆ? ಬೇರೆ ಬೇರೆ ಪಾರ್ಟಿಗಳಲ್ಲಿ ಎಷ್ಟೋ ಭಾರತೀಯರನ್ನು ಈ ಮೊದಲು ಭೆಟ್ಟಿಯಾಗಿದ್ದೇವೆ.

ಅವರೆಲ್ಲ ನಮ್ಮ ದೇಶವನ್ನು, ಸಂಸ್ಕೃತಿಯನ್ನು ಮುಕ್ತಕಂಠದಿಂದ ಹೊಗಳುತ್ತಾರೆ. ನಮ್ಮ ಬಗ್ಗೆ ನಿರ್ದಾಕ್ಷಿಣ್ಯ ಅಭಿಪ್ರಾಯ ಕೊಟ್ಟವನು ನೀನೊಬ್ಬನೇ ನೋಡು" ಎಂದು ಬಾಬ್ ಹೇಳಿದ.

"ಕ್ರಿಶ್, ನಿನ್ನ ವಿಚಾರಗಳನ್ನೆಲ್ಲ ಹೀಗೆ ತಿಳಿದುಕೊಳ್ಳಲೆಂದೇ ನಿನ್ನನ್ನು ಕಾಡುತ್ತೇವೆ. ಕೆರಳಿಸದೇ ನೀನು ವಾದಕ್ಕಿಳಿಯುವುದು ಕಡಿಮೆ. ನಮ್ಮಿಂದ ತೊಂದರೆಯಾದರೆ ಕ್ಷಮಿಸು" ಎಂದು ಜಿಮ್ ಹೇಳಿದ. ಟೆಡ್ ಇವನನ್ನೇ ಬೆಂಬಲಿಸಿದ.

*****

ಅಮೇರಿಕನ್ ಶಾಲೆ-ಕಾಲೇಜುಗಳು ಸೋಮವಾರದಿಂದ ಶುಕ್ರವಾರದವರೆಗೆ ನಡೆಯುತ್ತವೆ. ಹೆಚ್ಚಾಗಿ ವರ್ಗಗಳು ಬೆಳಿಗ್ಗೆ ಎಂಟರಿಂದ ಸಾಯಂಕಾಲ ಐದರ ವರೆಗೆ ನಡೆದರೂ. ರಾತ್ರಿ ಕ್ಲಾಸು ತೆಗೆದುಕೊಳ್ಳುವದೂ ವಿರಳವಲ್ಲ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಯೋಗಶಾಲೆಯ ಕೀಲಿ-ಕೈ ಕೊಟ್ಟಿರುತ್ತಾರೆ. ಆದ್ದರಿಂದ ಬೇಕೆನಿಸಿದಾಗ ಅಲ್ಲಿ ಹೋಗಿ ಓದಬಹುದು. ಕೆಲಸ ಮಾಡಬಹುದು. ಶನಿವಾರ ರವಿವಾರ, ಬಹುಸಂಖ್ಯಾತ ಅಮೇರಿಕನ್ನರಿಗೆ ರಜೆ, ಶಾಲೆ, ಕಾಲೇಜುಗಳಿಗೆ ಸಹ. ವಾರದಲ್ಲಿ ಐದು ದಿನ ಚೆನ್ನಾಗಿ ದುಡಿದು, ವಾರಾಂತ್ಯವನ್ನು ಮೋಜಿನಲ್ಲಿ ಕಳೆಯುತ್ತಾರೆ. ಅಮೇರಿಕನ್ ಅಲ್ಲದ ನಾನು ಈ ಎರಡು ದಿನಗಳಲ್ಲಿಯೂ ಕಾಲೇಜಿಗೆ ಹೋಗಿ ಏನಾದರೂ ಕೆಲಸ ಮಾಡುತ್ತಿದ್ದೆ. ಒಂದು ರವಿವಾರ ಸಹಪಾಠಿ ಟೆರಿ ತನ್ನ ಸ್ನೇಹಿತೆಯೊಂದಿಗೆ ಅದೇಕೋ ಕಾಲೇಜಿಗೆ ಬಂದ. ನನ್ನನ್ನು ನೋಡಿ ವಿಸ್ಮಯಗೊಂಡ. ತನ್ನ ಗೆಳತಿಯ ಪರಿಚಯ ಮಾಡಿಕೊಟ್ಟ. 'ಹಾಯ್ ಹಾಯ್'ಗಳು ಮುಗಿದ ನಂತರ.

"ಕ್ರಿಶ್, ಬಹಳ ದಿನಗಳಿಂದ ನಿನಗೊಂದು ಪ್ರಶ್ನೆ ಕೇಳಬೇಕೆಂದಿದ್ದೆ. ನೀನು ಮುಚ್ಚುಮರೆಯಿಲ್ಲದೆ ಉತ್ತರಿಸುವದಾದರೆ ಮಾತ್ರ ಈಗ ಕೇಳುತ್ತೇನೆ" ಎಂದ. ಅದಕ್ಕೆ ನಾನು,

"ಕೇಳಲ್ಲ, ಹೇಳಬಾರದ್ದು ನನ್ನಲ್ಲಿ ಏನೂ ಇಲ್ಲ" ಎಂದೆ. ಸುರುವಾಯಿತು ಪ್ರಶ್ನೋತ್ತರ.

"ಎಷ್ಟೊಂದು ದಿನಗಳಿಂದ ನಾನು ನೋಡುತ್ತಿದ್ದೇನೆ. ಒಮ್ಮೆ ಕೂಡ ನಿನ್ನನ್ನು ಒಬ್ಬ ಗೆಳತಿಯ ಸಂಗಡ ನೋಡಲಿಲ್ಲ. ಅದು ಹೇಗೆ? ನೀನು ಸ್ತ್ರೀ-ವೈರಿಯೇ?"

"ನಾನು ಸ್ತ್ರೀ-ವೈರಿಯಲ್ಲದಿದ್ದರೂ ಸ್ತ್ರೀ-ಭಜಕನಲ್ಲ. ಮದಿವೆಯ ಮೊದಲು ಕುಮಾರಿಯೊರಡನೆ ಕೆಲೆಯುವುದು, ತಿರುಗುವುದು ಮುಂತಾದ್ದನ್ನು ನಮ್ಮ ಸಮಾಜ ಒಪ್ಪುವುದಿಲ್ಲ. ಇಲ್ಲಿ ನಮ್ಮ ಸಮಾಜದ ಅಡ್ಡಿಗಳಿಲ್ಲದಿದ್ದರೂ ಅದರ ಕಟ್ಟು-ನಿಟ್ಟುಗಳನ್ನು ನಾನು ಮನಸಾ ಒಪ್ಪಿಕೊಂಡಿದ್ದರಿಂದ ಅವನ್ನು ಎಲ್ಲಿಯೂ ಮುರಿಯುವ ಮನಸ್ಸು ನನಗೆ ಇಲ್ಲ. ಇಲ್ಲಿಯ ಕ್ಷಣಿಕ ಆನಂದ ಬೆನ್ನುಹತ್ತಿದರೆ ಜೀವನದ ಆನಂದ ನನ್ನಿಂದ ದೂರವಾಗುವ ಸಂಭವವಿದೆ."

"ರೋಮ್‌ದಲ್ಲಿದ್ದಾಗ ರೋಮನ್ನನಂತಿರು" ಎಂದು ಬಲ್ಲವರು ಹೇಳುವದಿಲ್ಲವೇ?"

"ಹೂಂ; ದುರದೃಷ್ಟದಿಂದ ರೋಮಿಗೆ ಹೋದವರು ರೋಮನ್ನರ ಕೆಟ್ಟ ಚಾಳಿಗನ್ನಷ್ಟೇ

ಕಲಿತು ಬರುತ್ತಾರೆ. ನಾನು ಈ ಮೊದಲೇ ಹೇಳಿದಂತೆ ಅಮೇರಿಕನ್ನರ ಉತ್ತಮಾಂಶಗಳನ್ನಷ್ಟೆ ಕಲಿಯಲು ಬಂದವ."

"ಹುಡುಗಿಯರೊಡನೆ ಕೆಲೆಯುವುದರಲ್ಲಿ ತಪ್ಪೇನಿದೆ? ನೀನೇನನ್ನು ಕಳೆದುಕೊಳ್ಳುತ್ತಿದ್ದೀಯೆಂಬ ಕಲ್ಪನೆಯೇ ನಿನಗಿದ್ದಂತಿಲ್ಲ. ಇದಕ್ಕಾಗಿ ನೀನು ಮುಂದೆ ಪಶ್ಚಾತ್ತಾಪ ಪಡಬೇಕಾದಿತು. ಮೆಚ್ಚಿ ಬಂದವರೊಡನೆ ಸಮಯ ಕಳೆಯುವದರಲ್ಲಿ ಸ್ವರ್ಗಸುಖವಿದೆ, ಗೊತ್ತೆ? ನಿನಗೆ ಶ್ವೇತವರ್ಣೀಯ ಸ್ನೇಹಿತೆ ಸೇರದಿದ್ದರೆ ನಿಮ್ಮ ಜನರೂ, ಅವರಲ್ಲಿ ಅಂದಚೆಂದದ ಹುಡುಗಿಯರೂ ವಿಶ್ವವಿದ್ಯಾಲಯದಲ್ಲಿ ಸಾಕಷ್ಟಿದ್ದಾರಲ್ಲ?- ಅವರ ಸ್ನೇಹವನ್ನೇಕೆ ಬೆಳಸಬಾರದು?"

ಈ ಮಾತಿಗೆ ನಾನು ಗಹಗಹಿಸಿ ನಕ್ಕೆ; ಮತ್ತು ಹೇಳಿದೆ:

"ಟೆರಿ, ನಾನು ಏನು ಕಳೆದುಕೊಳ್ಳುತ್ತಿದ್ದೇನೆಂಬ ಕಲ್ಪನೆಯೇ ಇಲ್ಲದ್ದರಿಂದ ಅಸಂತೋಷಕ್ಕೆ ಆಸ್ಪದವೆಲ್ಲಿ? ಇಲ್ಲಿಯ ಭಾರತೀಯ ಹುಡುಗಿಯರು ಚೆಂದ ಕಂಡರೇ ನಿನಗೆ? ಬಹುಶಃ ಅವರ ಬಣ್ಣಬಣ್ಣದ ಸೀರೆಗೆ ಮರುಳಾಗಿರಬೇಕು ನೀನು! ನಿನ್ನ ಸ್ನೇಹಿತೆ ಅದೇ ಸೀರೆಯಲ್ಲಿ ದೇವಲೋಕದ ಅಪ್ಸರೆಯಂತೆ ಶೋಭಿಸಬಹುದು. (ಇದನ್ನು ಹೇಳುವಾಗ ನನ್ನ ತಲೆಯಲ್ಲಿ ಇದ್ದಕ್ಕಿದ್ದಂತೆ ಯಾಕೋ ಏನೋ ತಟ್ಟನೆ "ಮಲಯೇ ಭಿಲ್ಲ.... ಚಂದನತರಕಾಷ್ಠಮಿಂಧನಂ ಕುರುತೇ... ಅತಿಪರಿಚಯಾದವಜ್ಞ..... ಅನಾದರೋ ಭವತಿ..." ಹೀಗೆ ಎಲ್ಲಿಯದೋ ಒಂದು ಸಂಸ್ಕೃತ ಶ್ಲೋಕದ ತುಂಡು ತುಂಡು ಪಾದಗಳು ಒಡಮೂಡಿದವು... ಏನು ಸಂಬಂಧವೋ ಆಗ ತಿಳಿಯಲಿಲ್ಲ.) ಅದಕ್ಕೆ ದೃಷ್ಟಿ, ಸಂಸ್ಕಾರಬೇಕು. (ಇಷ್ಟು ಹೇಳಿದ್ದಕ್ಕೇ ಅವನ ಗೆಳತಿಯ ಮುಖ ಹಿಗ್ಗಿನಿಂದ ಇಷ್ಟಗಲವಾಯಿತು. ತನಗೊಂದು ಸೀರೆ ಬೇಕೆಂದು ಕಣ್ಣಿನಿಂದಲೇ ತನ್ನ ಗೆಳೆಯನಿಗೆ ಸೂಚಿಸಿದಳು!) ನಮ್ಮಲ್ಲಿ ಸುಂದರಿಯರಾದ ಹುಡುಗಿಯರು ಮಾಧ್ಯಮಿಕ ಶಿಕ್ಷಣ ಮುಗಿಸುವ ಮೊದಲೇ ಗೃಹಣಿಯರಾಗುತ್ತಾರೆ. ಸಾಧಾರಣ ರೂಪವತಿಯರು ಕಾಲೇಜಿನಲ್ಲಿದ್ದಾಗಲೋ ಅಥವಾ ಕಾಲೇಜ ಶಿಕ್ಷಣ ಮುಗಿದ ಮೇಲೋ ಮದಿವೆಯಾಗುತ್ತಾರೆ. ರೂಪದಲ್ಲಿ ಎಡ ಇದ್ದವರು ಮಾತ್ರ ಇನ್ನೂ ಶಿಕ್ಷಣ ಮುಂದುವರಿಸುತ್ತಾರೆ. ಇಲ್ಲಿ ಬಂದಿರುವವರು, ಬರುವವರು ಈ ಕೊನೇ ವರ್ಗಕ್ಕೆ ಸೇರಿದವರು. ಇಂತಹರೊಡನೆ ಸ್ನೇಹ ಬೆಳಸಬೇಕೆ?"

ಬಾಹ್ಯಸೌಂದರ್ಯಕ್ಕೆ ಅಗ್ರಸ್ಥಾನ ಕೊಡುವ ಅಮೇರಿಕನ್ ಜನಾಂಗಕ್ಕೆ ಸೇರಿದ ನನ್ನ ಗೆಳೆಯನಿಗೆ ಈ ಮಾತು ಒಪ್ಪಿಗೆಯಾಯಿತು. ನಾನು ಪಾರಾದೆ ಎಂದು ತಿಳಿದುಕೊಂಡಿದ್ದೆ. ಆದರೆ ಆತ ಮಾತು ಬದಲಿಸಿ,

"ಹುಡುಗಿಯರ ಸಹವಾಸವಿಲ್ಲದಿದ್ದರೆ ಹೋಗಲಿ, ನೀನು ಸಿಗರೇಟೂ ಸೇದುವುದಿಲ್ಲ, ಸೆರೆ ಕುಡಿಯುವುದಿಲ್ಲ, ಸಿನೇಮಾ ನೋಡುವುದಿಲ್ಲ, ವಾರಾಂತ್ಯದಲ್ಲಿ ವಿಶ್ರಮಿಸುವುದಿಲ್ಲ ಕೂಡ. ಇಂತಹ ನೀರಸ, ಕಷ್ಟಮಯ ಜೀವನ ನಡೆಸುವದಿದ್ದರೆ ಜೀವಿಸಿಯಾದರೂ ಫಲವೇನು? ನಿನ್ನಂತೆ ಬಾಳುವದಿದ್ದರೆ ನಾನು ಸತ್ತು ಎಷ್ಟೋ ವರ್ಷಗಳಾಗುತ್ತಿದ್ದವು!" ಎಂದು ತಾನು ವಾದದಲ್ಲಿ ಗೆದ್ದೆನೆಂಬ ಹೆಮ್ಮೆಯಿಂದ ತನ್ನ ಗೆಳತಿಯನ್ನು ಮೃದುವಾಗಿ ಚುಂಬಿಸಿದ.

ನಾನು ಸುಮ್ಮನಿರಲಾರದೇ–

"ಅಮೇರಿಕನ್ನರು ತುಂಬ ವ್ಯಾಪಾರಿ–ಮನೋವೃತ್ತಿಯುಳ್ಳವರು. ಪ್ರತಿಯೊಂದು ಕಾರ್ಯಕ್ಕೂ ತನಗೇನು ಲಾಭ ಸಿಗುತ್ತದೆ ಎಂದೇ ಪ್ರಾರಂಭಿಸುತ್ತಾರೆ. ಇನ್ನೊಬ್ಬರಿಗೆ ಒಳಿತು ಮಾಡುವುದಿರಲಿ, ತನಗೆ ಲಾಭವಿಲ್ಲದ ಯಾವ ಕೆಲಸಕ್ಕೂ ಕೈಹಾಕುವುದಿಲ್ಲ. ಮೊನ್ನೆ ನ್ಯೂಯಾರ್ಕದಲ್ಲಿ ನಾಲ್ವತ್ತು ಕುಟುಂಬಗಳು ವಾಸಿಸುವ ಕಟ್ಟಡದಲ್ಲಿ ಯುವತಿಯೋರ್ವಳನ್ನು ತಿವಿತಿವಿದು ಒಬ್ಬ ಕೊಲೆಗಡಕ ಕೊಲ್ಲಲಿಲ್ಲವೇ? ಒಬ್ಬರಾದರೂ ಅವಳನ್ನು ಬದುಕಿಸುವ ಸಾಹಸ ಮಾಡಲಿಲ್ಲ. ಪೋಲಿಸರಿಗೂ ಫೋನ ಮಾಡುವ ಬುದ್ಧಿ ಹೊಳೆಯಲಿಲ್ಲ. ಇಂತಹದರಲ್ಲಿ ಒಬ್ಬರಿಗೆ ಸಹಾಯ ಮಾಡಹೋದರೆ ಕೋರ್ಟು–ಕಚೇರಿಗಳಿಗೆ ಎಡತಾಕಬೇಕಾಗುವದೆಂದು ಅಳುಕುತ್ತಾರಂತೆ ನಿಮ್ಮ ಜನ! ಅದೇ ನಮ್ಮ ಭಾರತೀಯನನ್ನು ನೋಡು ಸಾವಿರಾರು ಮೈಲು ದೂರದ ದೇಶಕ್ಕೆ ಕಲಿಯಲೆಂದು ಬಂದ ವಿದ್ಯಾರ್ಥಿಯೊಬ್ಬ ಆರೇಳು ವರ್ಷದ ಮೂಕ, ಕಿವುಡ ಮಗುವೊಂದನ್ನು ಬದುಕಿಸ ಹೋಗಿ ತಾನೇ ಮುಳಗಲಿಲ್ಲವೆ?"* ತ್ಯಾಗದಲ್ಲಿ ಪರಮ ಸುಖವಿದೆಯೆಂದು ನಮ್ಮ ಧರ್ಮಬೋಧಿಸುತ್ತದೆ. ಮೊನ್ನೆ ನಿಮ್ಮ ಊರಿನಲ್ಲಾದ ಘಟನೆಯನ್ನು ತೆಗೆದುಕೊಳ್ಳಲ್ಲ. ಹತ್ತು ವರ್ಷದ ಮಂಕು ಹುಡುಗನೊಬ್ಬ ಎತ್ತರವಾದ ಕಟ್ಟಡದ ಮೇಲಿನಿಂದ ಕೆಳಗ ಧುಮುಕುತ್ತೇನೆಂದಾಗ ಕಟ್ಟಡದ ಕೆಳಗೆ ನಿಂತ ಜನ "ಜಿಗಿಯೋ ಹೇಡಿ!" ಎಂದು ಪ್ರೋತ್ಸಾಹಿಸಬೇಕೆ? ಅವನಿಗೆ ರಕ್ಷಣೆ ನೀಡುವುದು ದೂರವೇ ಉಳಿಯಿತು..." ಎಂದು ಇನ್ನೂ ಏನೇನೋ ಹೇಳಬೇಕು ಎಂದಿದ್ದೆ, ಆದರೆ ತನ್ನ ಪ್ರಿಯನ ಸೋಲು ಆತನ ಗೆಳತಿಗೆ ಅಸಮಾಧಾನವನ್ನುಂಟುಮಾಡಿರಬೇಕು. ಅಂತೆಯೇ ಆಕೆ ಮಾತಿನ ಧಾಟಿಯನ್ನು ಬಲು ಬೇಗ ಬದಲಿಸಿ–

"ಕ್ರಿಶ್, ನಿಮ್ಮ ದೇಶದಲ್ಲಿ ತರುಣ–ತರುಣಿಯರು ಸುಲಭವಾಗಿ ಬೆರೆಯುವಂತಿಲ್ಲ–ವೆಂದು ಹೇಳಿದಿ. ಹಾಗಾದರೆ ಅವರ ಸಾಮಾಜಿಕ–ಜೀವನವೇನು? (social life), ತರುಣರು ತರುಣರೊಡನೆ, ತರುಣಿಯರು ತರುಣಿಯರೊಡನೆ ನೃತ್ಯ ಮಾಡುವರೇನು ಮತ್ತೆ?" ಎಂದು ದಿಗಿಲುಗೊಂಡು ಕೇಳಿದರು, ಈ ಪ್ರಶ್ನೆಗೆ ಎಲ್ಲರೂ ನಕ್ಕೆವು.

ನನ್ನ ವಾದವನ್ನೆ ಮುಂದುವರಿಸುತ್ತ ಹೇಳಿದೆ.

"ನಿಮಗೆ ನಿಮ್ಮದೊಂದು ಸಮಾಜ ಬಿಟ್ಟರೆ ಉಳಿದವುಗಳ ಕಲ್ಪನೆಯಿಲ್ಲ. ಅವನ್ನು ತಿಳಿದುಕೊಳ್ಳಬೇಕೆಂಬ ಜಿಜ್ಞಾಸೆ ಕೂಡ ಇಲ್ಲ. ಇಡೀ ಜಗತ್ತೇ ನಿಮ್ಮ ನೆರಳಾಗಿ ಬಾಳಬೇಕು ಎನ್ನುತ್ತೀರಿ. ಹೆಣ್ಣನ್ನೊಂದು ಕಾರಿನಲ್ಲಿ ಹತ್ತಿಸಿಕೊಂಡು ಹೋಗಿ ಚಲನಚಿತ್ರಕ್ಕೊ, ಹೋಟೆಲಿಗೋ, ನೃತ್ಯಕೂಟಕ್ಕೊ, ಹರಟೆಗೊ ಕರೆದೊಯ್ದು ಅಲ್ಲಿ ನಿಮ್ಮಂತೆ ಬಂದ ಇನ್ನೂ ಹಲವಾರು ಸ್ನೇಹಿತರೊಂದಿಗೆ ಹಣ ಮತ್ತು ವೇಳೆಯನ್ನು ಕಳೆದರೆ (ಹಾಳು ಮಾಡಿದರೆ) ತೀರಿತು. ನಿಮಗದು ಸಾಮಾಜಿಕ–ಜೀವನ, ಬೌದ್ಧಿಕ–ಜೀವನ ಎಂದು, ಅವಿಭಾಜ್ಯವಾಗಿರಬೇಕಾದ ಜೀವನ ಬೇರೆಬೇರೆಯಾಗಿ ಪಾತ್ರಸ್ಥವಾಗಿದೆ. ನಮ್ಮಲ್ಲಿ ಜೀವನ ಒಂದದೇ. ಅದರಲ್ಲಿಯೆ ಇವೆಲ್ಲಾ ಹಾಸುಹೊಕ್ಕಾಗಿವೆ! ನಮ್ಮ ಪೂರ್ವಜರು ಧರ್ಮದಲ್ಲಿಯೇ

---

* ಲೂಯಿಸಿಯಾನಸದಲ್ಲಿ 'ಫುಲಬ್ರಾಯಿಟ್ ಸ್ಕಾಲರ್' ಆಗಿ ಇರುತ್ತಿದ್ದ ಮೈಸೂರಿನ ಶ್ರೀ ಎ.ವೆಂಕಟರಾವ್ ಅವರು.

ನೈತಿಕ, ಸಾಮಾಜಿಕ ಬೌದ್ಧಿಕ ಅಂಶಗಳನ್ನು ಸೇರಿಸಿಬಿಟ್ಟಿದ್ದಾರೆ. ಅಂತೆಯೇ ನಮಗೆ ಒಳ್ಳೆಯ ಜೀವನವೇ ಧರ್ಮವಾಗಿದೆ; ಧರ್ಮವೇ ಜೀವನವಾಗಿದೆ. ನಿಮ್ಮಂತೆ ರವಿವಾರ ಅಷ್ಟೇ ಚರ್ಚಿಗೆ ಹೋಗಿ ಎರಡು ಮೂರು ಗಂಟೆಗಳಲ್ಲಿ ಮರೆಯುವ ಧರ್ಮವಲ್ಲ ನಮ್ಮದು; ಯಾವಾಗಲೂ ಅದು ನಮ್ಮ ಹಿಂದೆ, ನಮ್ಮ ಮುಂದೆ, ನಮ್ಮ ಒಳಗೆ ಇರುವಂಥದು."

ಅಲ್ಲಿಂದ ಟೇರಿ ಕೇಳಿದ:

"ಅಂದರೆ ನಿಮ್ಮ ಧರ್ಮಶಾಸ್ತ್ರದಲ್ಲಿ ಬರೆದದ್ದನ್ನೆಲ್ಲಾ ಪಾಲಿಸಬೇಕೇ? ಅಯ್ಯಯ್ಯೊ! ಬೈಬಲ್‌ದಲ್ಲಿ ಬರೆದದ್ದೆಲ್ಲಾ ರೂಢಿಯಲ್ಲಿ ತರುವದಾಗಿದ್ದರೆ ನಾನು ಹುಟ್ಟುವ ಮೊದಲೇ ಸಾಯುತ್ತಿದ್ದೆ!"

ಕಾಲದೊಡನೆ ಸೆಣಸಾಡುವ ಅಮೇರಿಕನ್ನರಿಗೆ ಧರ್ಮದ ಬಗ್ಗೆ ಮಾತಾಡುವುದೆಲ್ಲ ವ್ಯರ್ಥ ಎನಿಸುತ್ತದೆ; ಗೊಡ್ಡು ಎನಿಸುತ್ತದೆ. ಅಂತೆಯೇ ಹೀಗೆ ಗೊಡ್ಡು ಹರಟುವದರಲ್ಲಿ ಸ್ವಾರಸ್ಯವಿಲ್ಲೆಂದು ಇಬ್ಬರೂ ಆ ಜಾಗ ಬಿಟ್ಟೇ ಎದ್ದರು. ಹೋಗುವಾಗ ಟೆರಿಯ ಗೆಳತಿ.

"ಕ್ರಿಶ್, ಜಗತ್ತಿನ ಎಲ್ಲ ಧರ್ಮಶಾಸ್ತ್ರಗಳಲ್ಲಿ ಬರೆದದ್ದೆಲ್ಲಾ ಪುಸ್ತಕದ ಬದನೇಕಾಯಿ, ಅವೆಲ್ಲ ಅಮೂರ್ತ-ತತ್ವಜ್ಞಾನದ ಜಡ-ಮುದ್ದೆಗಳು. ನಮ್ಮ ನಿಮ್ಮ ಸದ್ಯದ ಜೀವನಕ್ಕೆ ನಿರುಪಯೋಗಿಯಾದವುಗಳು ಅಲ್ಲವೆ?" ಎಂದು ಎಲ್ಲ ಧರ್ಮಗಳ ಮೇಲೂ ತನ್ನ ಕೊನೆಯ ತೀರ್ಪನ್ನು ಕೊಟ್ಟು ತನ್ನ ಪ್ರಿಯತಮನ ಸೊಂಟವನ್ನು ಬಳಸಿಕೊಂಡು ಬಳಕುತ್ತ ನಡದೇಬಿಟ್ಟಳು.

ಹೊರಟು ಹೋಗುವ ಅವರನ್ನೇ ನಾನು ನೋಡುತ್ತಿದ್ದರೂ ಮನಸ್ಸೆಲ್ಲೋ ಹೌದು ಅಲ್ಲ 'ದರ' ಬೆನ್ನುಹತ್ತಿ ಹೋಗಿತ್ತು.

ಒಮ್ಮೆ ಮಾತಿಗೆ ಮಾತು ಬಂದಾಗ, ಭಾರತೀಯರು ಎಷ್ಟು ವಯಸ್ಸಿಗೆ ಮದುವೆಯಾಗುತ್ತಾರೆ ಇತ್ಯಾದಿ ಚರ್ಚೆ ನಡೆದು ಜಿಮ್‌ನು-

"ಕ್ರಿಶ್, ಈಗ ನಿನ್ನ ವಯಸ್ಸೆಷ್ಟು?" ಎಂದು ಕೇಳಿದ ಅದಕ್ಕೆ ನಾನು,

"ನನಗೀಗ ಎಷ್ಟು ವಯಸ್ಸು ಎಂದು ಖಂಡಿತ ಹೇಳಲಾಗುವುದಿಲ್ಲ. ಎರಡು ವರ್ಷಗಳ ಹಿಂದೆ ಈ ದೇಶಕ್ಕೆ ಬಂದಿದ್ದೆ. ಈಗ ಹತ್ತು ವರ್ಷ ಮುದುಕನಾಗಿದ್ದೇನೆ." ಎಂದೆ. ಅವನಿಗೆ ಅರ್ಥವಾಗದೇ ಹುಬ್ಬೇರಿಸಿದ. ಆಗ ನಾನು,

"ನಾವು ಭಾರತೀಯರು ಆರಾಮ-ಶೂರರು; ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆಗಳಿಲ್ಲದಿದ್ದರೂ ಸುಖವಾಗಿ ಹೇಗಿರಬೇಕು ಎಂಬ ದಿವ್ಯ-ಮಂತ್ರ ಕಲಿತವರು. ನಿಮ್ಮಂತೆ ಹಗಲು-ರಾತ್ರಿ ದುಡಿದು ಸುಖವನ್ನು ಬೆನ್ನಟ್ಟಿಕೊಂಡು ಹೋಗುವವರಲ್ಲ. ಇದ್ದದ್ದರಲ್ಲಿಯೇ ಸುಖಿಯಾಗಿರಬೇಕೆನ್ನುವವರು. (Right now I am happy, why bother?) ಆದರೆ ಇಲ್ಲಿ ಬಂದ ನಂತರ ಭಾರತದಲ್ಲಿ ಹತ್ತು ವರ್ಷ ಮಾಡಲಾಗದ್ದನ್ನು ನಿಮ್ಮ ಶಿಕ್ಷಕವೃಂದ ನನ್ನಿಂದ ಎರಡು ವರ್ಷಗಳಲ್ಲಿ ಮಾಡಿಸಿಬಿಟ್ಟಿದೆ! ಅಂತೇ ಹತ್ತು ವರ್ಷ ವಯಸ್ಕನಾಗಿದ್ದೇನೆ. ಇನ್ನೂ ನನಗೆ ಮದಿವೆಯಾಗಿಲ್ಲ!" ಎಂದು ಹೇಳಿ ನಕ್ಕೆ.

ಜಿಮ್‌ನೂ ನಗುತ್ತ,

"ಕ್ರಿಶ್, ದುಡಿಯದೇ ಜೀವನದಲ್ಲಿ ಏನೂ ಸಿಗುವದಿಲ್ಲ. ಸುಖ ದೊರೆಯುವುದು ಮೈ ಮುರಿದು ದುಡಿದಾಗಲೇ. ನೀವು ಭಾರತೀಯರು ಬೇರೆಯವರ ದುಡಿತದ ಫಲವನ್ನು ತಾವು ಅನುಭವಿಸಬೇಕೆಂಬ ಮನೋವೃತ್ತಿಯುವರೆಂದು ತೋರುತ್ತದೆ. ಮೈಗಳ್ಳರು!" ಎಂದು ಕುಹುಕವಾಡಿದ. ನಾನೆಂದೆ:

"ಅಮೇರಿಕನ್ನರು ತಾವು ಸುಖವೆಂದು ತಿಳಿದದ್ದೇ ಜಗತ್ತಿನ ಸುಖವೆಂದು ನಂಬುತ್ತಾರೆ. ಸುಖವು ಮನಸ್ಸಿನ ಸ್ಥಿತಿಯೇ ಹೊರತು ಬಾಹ್ಯವಸ್ತುಗಳಲ್ಲಿ ಇರುವದಿಲ್ಲ, ಸಿಗುವುದಿಲ್ಲ ಎಂಬುದು ನಿಮ್ಮ ಬುದ್ಧಿಗೆ ತೋಚುವುದೇ ಇಲ್ಲ. ಇದರ ಬಗ್ಗೆ ಒಂದು ಸ್ವಾರಸ್ಯ ಘಟನೆಯನ್ನು ಹೇಳುತ್ತೇನೆ ಕೇಳು;

ಕೆನಡಿ ಶಾಂತಿದಲದವರು (peace corps) ಭಾರತದಲ್ಲೆಲ್ಲ ಹರಡಿದ್ದಾರೆ. ಇಂತಹ 'ಶಾಂತಿದೂತ'ನೊಬ್ಬನು ಹಳ್ಳಿಯೊಂದಕ್ಕೆ ಭೆಟ್ಟಿ ಕೊಟ್ಟ. ಅಲ್ಲಿ ಹೊಳೆಯ ದಂಡೆಯೊಂದರಲ್ಲಿ ಮರದ ಕೆಳಗೆ ದನಕಾಯುವವನೊಬ್ಬನು ಸುಖವಾಗಿ ಮಲಗಿದ್ದನ್ನು ನೋಡಿದ. ಮಾನವೀಯತೆಯ ಉದ್ಧಾರಕ್ಕಾಗಿ ಬಂದ ಆ ಶಾಂತಿದೂತನು ಅವನ ಬಳಿಗೆ ಹೋಗಿ, ರಮಿಸಿ ಅವನನ್ನು ಮಾತನಾಡಿಸಿ "ಹೀಗೆ ನೀನು ವೃಥಾ ಕಾಲಹರಣವನ್ನೇಕೆ ಮಾಡುತ್ತೀ?" ಎಂದು ಕೇಳಿದನಂತೆ. ಅದಕ್ಕೆ ದನಕಾಯುವವನು,

"ಇನ್ನೇನು ಮಾಡಲಿ?" ಎಂದು ಮಲಗಿದ್ದ ಕಡೆಯಿಂದಲೇ ಕೇಳಿದನಂತೆ.

ಅದಕ್ಕೆ ಶಾಂತಿದೂತ "ಒಳ್ಳೆ ದೃಢಕಾಯನಿದ್ದೀ: ಎಲ್ಲಾದರೂ ಹೋಗಿ ಮೈಮುರಿದು ದುಡಿಯಬಹುದಲ್ಲ?" ಎಂದದ್ದಕ್ಕೆ-"ಮೈ ಮುರಿದು ದುಡಿದರೆ ಏನು ಲಾಭ?" ಎಂದು ಕೇಳಿದನಂತೆ. ಅದಕ್ಕೆ ಶಾಂತಿದೂತ. "ಮೈ ಮುರಿದು ದುಡಿದರೆ ನಿನ್ನ ಕೈತುಂಬ ರೊಕ್ಕ ಬರುತ್ತದೆಂದು ಬೇರೆ ಹೇಳಬೇಕೆ?" ಉತ್ತರಿಸಿದನಂತೆ. ಅದಕ್ಕೆ ಮತ್ತೆ...

"ಕೈತುಂಬ ರೊಕ್ಕ ಬರುತ್ತದೆಂದು ಇಟ್ಟುಕೊಳ್ಳೋಣ, ಅದರಿಂದೇನು?" ಎಂದು ಮತ್ತೆ ಕೇಳಿದ್ದಕ್ಕೆ ಇವನು....

"ರೊಕ್ಕದಿಂದ ಏನು ಬರುತ್ತದೆ ಎಂದು ಕೇಳುತ್ತೀಯಲ್ಲವೋ? ಜಗತ್ತೇ ರೊಕ್ಕದ ಮೇಲೆ ನಿಂತಿದೆ. ಒಳ್ಳೆಯ ಮನೆ-ಮಾರು, ಬಟ್ಟೆ-ಬರೆ, ರೇಡಿಯೊ, ಕಾರು, ಒಂದೇ ಎರಡೇ ಬೇಕಾದ್ದು ಸಿಗುತ್ತದೆ ರೊಕ್ಕ ಇದ್ದರೆ. ಅಲ್ಲವೇನಪ್ಪಾ?"

"ಒಳ್ಳೇದು, ಮೈಮುರಿದು ದುಡಿದಾಗ ತುಂಬ ಹಣ ಬರುತ್ತದೆ, ತುಂಬ ಹಣ ಬಂದಾಗ ಇವೆಲ್ಲ ಸಾಮಗ್ರಿಗಳನ್ನು ಕೊಳ್ಳಲಿಕ್ಕೆ ಆಗುತ್ತದೆ ಎಂದ ಹಾಗಾಯಿತು. ಹೌದಲ್ಲೊ? ಅದರಿಂದೇನು?" ಮತ್ತೆ ಕೇಳಿದ ದನಗಾಹಿ.

"ಏನು, ಇವೆಲ್ಲ ಸುಖದ ಹೆದ್ದಾರಿಗಳೆಂದು ನಿನಗೆ ಗೊತ್ತಿಲ್ಲವೇ? ಮೂರ್ಖ.... ಅಲ್ಲ, ಅಜ್ಞಾನಿಯಿದ್ದೀ ಅಂದಹಗಾಯಿತು."

ಇದಕ್ಕೆ ದನಗಾಹಿ ಹೊಟ್ಟೆ ಬಿರಿಯುವಂತೆ ನಕ್ಕು,

"ಇದಕ್ಕೇ ಅನ್ನುವುದು, ನಿಮ್ಮನ್ನೆಲ್ಲಾ ಬೆಪ್ಪರೆಂದು. ಇವು ಯಾವವೂ ಇಲ್ಲದೆಯೇ ನಾನು ಸುಖವಾಗಿಯೇ ಇದ್ದೇನೆ. ಇನ್ನು ಅದನ್ನು ಹುಡುಕಿಕೊಂಡು ಒಂದೇ ಸವನೇ

ಬೆನ್ನು ಹತ್ತಿ. ಅಷ್ಟೊಂದು ತೊಂದರೆ ಯಾಕೆ ಪಡಬೇಕು?"

ದನಗಾಹಿ ಮರುಸವಾಲು ಹಾಕಿದನಂತೆ ಆ ಶಾಂತಿದೂತನಿಗೆ, ಅದಕ್ಕೆ ಅವನು.

"ನಾವು ಇವರಿಗೆ ಕಲಿಸುವದಕ್ಕಿಂತ ಇವರಿಂದಲೇ ನಾವು ಕಲಿಯಬೇಕಾಗಿದೆ. ಎಂತಹ ಅಶಿಕ್ಷಿತ ಭಾರತೀಯನೂ ಕೂಡ ಒಳ್ಳೇ ಮೇಧಾವಿಯಂತೆ ಮಾತನಾಡುತ್ತಾನೆ!" ಎಂದು ಗೊಣಗಿಕೊಳ್ಳುತ್ತ ಬಂದ ದಾರಿಗೆ ಸುಂಕವಿಲ್ಲವೆಂದು ತಿರುಗಿ ಹೋದನಂತೆ.

ಕಥೆಯನ್ನು ಕೇಳಿ ಜಿಮ್‌ನು ನಕ್ಕನಾದರೂ ಅದು ಅವನ ಮರ್ಮಕ್ಕೆ ಚುಚ್ಚದೆ ಇರಲಿಲ್ಲ. ಕೂಡಲೆ ಧ್ವನಿಯೇರಿಸಿ,

"ನೀನು ಹೇಳುವದೆಲ್ಲಾ ನಿಜವಾದರೆ ಭಾರತ ಸರಕಾರ ಮತ್ತು ಮಂತ್ರಿಗಳು ಪ್ರತಿ ತಿಂಗಳು ಬಂದು ಅನ್ನ, ಬಟ್ಟೆ, ಹಣಕ್ಕಾಗಿ ಏಕೆ ಒಂದೇ ಸವನೆ ಭಿಕ್ಷೆ ಬೇಡುತ್ತಿರುವರು?" ಎಂದು ಸ್ವಲ್ಪ ರೊಚ್ಚಿಗೆದ್ದೇ ಕೇಳಿದ.

"ಅಮೇರಿಕೆಯಲ್ಲಿ ಇವು ವಿಪುಲವಾಗಿವೆ. ಅವು ಇಲ್ಲಿಯೇ ಉಳಿದುಬಿಟ್ಟರೆ ಅಮೇರಿಕೆಯ ಆರ್ಥಿಕ-ಪ್ರಗತಿಗೆ ಅಡ್ಡಿ ಬರುವದೆಂದು ನಾವು ಅವುಗಳಿಗೆ ಬೇಡಿಕೆಗಳನ್ನು ಕಳಿಸುತ್ತಲೇ ಇರುತ್ತೇವೆ. ಅಮೇರಿಕನ್ನರು ಬಹಳ ಸಿರಿವಂತರಿದ್ದರೂ ಅವರಿಗೆ ಮುತ್ಸದ್ದಿತನ ಬಹಳ ಕಡಿಮೆ. ಅಂತೆಯೇ ಜಗತ್ತಿನ ಎಷ್ಟೋ ಚಿಕ್ಕಪುಟ್ಟ ರಾಷ್ಟ್ರಗಳು ಅಮೇರಿಕೆಯ ಆಹಾರ ತಿಂದು, ಹಾಲು ಕುಡಿದು, ಅವರ ಬೆಂಬಲದಿಂದಲೇ ಅಧಿಕಾರಕ್ಕೆ ಬಂದೋ, ಸ್ವಾತಂತ್ರ್ಯಗಳಿಸಿಯೋ ತಿರುಗಿ ಅಮೇರಿಕನ್ನರನ್ನೇ ಬೈಯುತ್ತವೆ. ಅಮೇರಿಕನ್ನರಿಗೆ ಕೇವಲ ಕರೆ ಇಲ್ಲವೇ ಬಿಳೀಕಾಜಿನ ಮುಖಾಂತರ ಜಗತ್ತನ್ನು ನೋಡುವುದು ರೂಢಿಯಾಗಿಬಿಟ್ಟಿದೆ. ಇವೆರಡರ ಹೊರತಾಗಿ ಬೇರೆ ಬಣ್ಣಗಳಿವೆಯೆಂದು ಅವರಿಗೆ ಹೊಳೆಯುವುದೆ ಇಲ್ಲ. ಆದ್ದರಿಂದ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಅಮೇರಿಕೆಯನ್ನು ಅನುಮೋದಿಸುವವರು ಅಮೇರಿಕೆಯ ಮಿತ್ರರೆಂದೂ ಅನುಮೋದಿಸದವರು ಶತ್ರುಗಳೆಂದೂ ಥಟ್ಟನೆ ನಿರ್ಣಯಿಸಿ ಬಿಡುತ್ತೀರಿ. ಏಶಿಯದರನ್ನು ತಿಳಿದುಕೊಳ್ಳುವುದು ಸುಲಭವಾಗಿಲ್ಲ. ಅದಕ್ಕಾಗಿ ಅವರ ಇತಿಹಾಸ, ಸಂಸ್ಕೃತಿ, ಧಾರ್ಮಿಕ ಹಿನ್ನೆಲೆ, ಅವರ ಜೀವನದ ದೃಷ್ಟಿಕೋನ ಇವುಗಳನ್ನೆಲ್ಲ ತಿಳಿದುಕೊಳ್ಳಬೇಕಾಗುತ್ತದೆ." ಎಂದು, ಒಳಗೆ ಸ್ವಲ್ಪ ಹಿಡಿದು ಬಿಟ್ಟಂತಾದರೂ, ಹುಂಬುಗುತ್ತಿಗೆಯ ಧೈರ್ಯದಿಂದ ಒಂದು ಸಣ್ಣ ಭಾಷಣವನ್ನು ಬಿಗಿದೆ. ಜಿಮ್‌ನೂ ಇದರ ಕಳೆ ಕಂಡುಹಿಡಿದು, ನಗುತ್ತ-

"ಮಹಾರಾಯಾ, ಈ ಎರಡು ಮೂರು ವರ್ಷಗಳಿಂದ ಎಷ್ಟು ತಿಣುಕುತ್ತಿದ್ದರೂ ನಮಗೆ ಒಬ್ಬ ಭಾರತೀಯನನ್ನು ಸರಿಯಾಗಿ ತಿಳಿದುಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲ ಅಸಫಲವಾಗಿರುವಾಗ, ನಮ್ಮ ಸರಕಾರ, ಅದೂ ವಾಶಿಂಗ್‌ಟನ್ನದಲ್ಲಿ ಕುಳಿತು ಕೋಟಿಗಟ್ಟಲೆ ಭಾರತೀಯರ ಸಮಸ್ಯೆ ತಿಳಿಯಲು ವಿಫಲವಾದರೆ ಆಶ್ಚರ್ಯವೇನಿದೆ?" ಎಂದು ನನ್ನ ಕಡೆಗೆ ಅರ್ಥಪೂರ್ಣವಾಗಿ ನೋಡಿ, ಅಲ್ಲಿಂದ ತನ್ನ ಕೈಯಲ್ಲಿಯ ವಾಚು ನೋಡಿಕೊಂಡು, ತನ್ನ ಹೆಂಡತಿ ತನಗಾಗಿ ಕಾದಿರುತ್ತಾಳೆಂದೂ, ಹೊತ್ತಿಗೆ ಸರಿಯಾಗಿ ಮುಟ್ಟದಿದ್ದರೆ ತನ್ನ ಅವತಾರವನ್ನೇ ಮುಗಿಸುತ್ತಾಳೆಂದೂ ಹೇಳಿ, ಅಲ್ಲಿಂದ ಓಟ ಕಿತ್ತನು.

* * *

ಹೆಮಲಿನ್ ಕುಟುಂಬದೊಂದಿಗೆ

ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಶಿಕ್ಷಣದ ಚರ್ಚಾಕೂಟವೊಂದನ್ನು ಸಾಯರೆಕ್ಯೂಸಿನಲ್ಲಿ ಕರೆಯಲಾಗಿತ್ತು. ಭಾರತೀಯ ವಿದ್ಯಾರ್ಥಿಗಳ ವತಿಯಿಂದ ನನ್ನ ಆಯ್ಕೆಯಾಗಿತ್ತು. ಅಂದಿನ ಸಮಾರಂಭದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ, ಬೇರೆ ಬೇರೆ ಅಮೇರಿಕನ್ನರ ಮನೆಯಲ್ಲಿ ಊಟಕ್ಕೆ ಆಮಂತ್ರಿಸಿ ಸತ್ಕರಿಸಲಾಗುವದೆಂದು ತಿಳಿಸಲಾಗಿತ್ತು. ಹೆಮಲಿನ್ ದಂಪತಿಗಳ ಅತಿಥಿಯಾಗಿ ಹೋಗುವ ಸಂಯೋಗ ನನಗೆ ಪ್ರಾಪ್ತವಾಯಿತು. ಇದೊಂದು ಸುಯೋಗವೆಂದು ಅಭಿಮಾನದಿಂದ ಹೇಳಬಲ್ಲೆ. ಏಕೆಂದರೆ ಅಮೇರಿಕೆಯಲ್ಲಿ ಸಾಮಾನ್ಯವಲ್ಲದ ಕುಟುಂಬವೊಂದರ ನಿಜದರ್ಶನ ನನಗಾಯಿತು. ಶ್ರೀ ಡಿಕ್ ಹೆಮಲಿನ್‌ರು ತಾರಾಗಣಗಳಲ್ಲಿ ಮಾನವ ನಿರ್ಮಿತ ವಾಹನಗಳನ್ನು ಕಳಿಸುವ ವಿಭಾಗದ ಭಾರೀ ಅಂತರಿಕ್ಷ ಎಂಜನಿಯುರರಾಗಿದ್ದಾರೆ (space-engineer). ಹುಡುಗನಂತೆ ಕಾಣುವ ಹೆಮಲಿನ್ ನನ್ನನ್ನು ಕರೆಯಲು ಬಂದಾಗ, ಇವರು ಇಷ್ಟು ದೊಡ್ಡ ನೌಕರಿಯಲ್ಲಿದ್ದಾರೆಂಬುದನ್ನು ನಂಬಲು ಸಾಧ್ಯವಾಗುವಂತಿರಲಿಲ್ಲ. ಅವರ ಅತ್ಯಾಧುನಿಕ (Sport-car) ಕಾರಿನಲ್ಲಿ ಅವರ ಮನೆಗೆ ಹೊರಟೆವು.

ದಾರಿಯಲ್ಲಿ ಆ ಮಾತು ಈ ಮಾತು ಆಡುತ್ತ, ತನಗೆ ಸಾಕುಪ್ರಾಣಿಗಳ ಮೇಲೆ ತುಂಬ ಪ್ರೇಮ; ತಾನು ಸಾಕಿದ ಕುದುರೆಗಳನ್ನು ತೋರಿಸುತ್ತೇನೆ ಎಂದು ಏನೇನೋ ಅಸಂಬದ್ಧ ಮಾತು ಹೇಳಿದ. ಮನೆ ಸಮೀಪಿಸುತ್ತಿದ್ದಂತೆ ಕಾದು ನಿಂತಿದ್ದ ಅವರ ಮನೆಯ ಹುಡುಗರು ಕಾಣಿಸಿದರು. ಮನೆಗೆ ಹೋಗುವ ಮೊದಲು, ಡಿಕ್ ತಮ್ಮ ಕುದುರೆಗಳನ್ನು ತೋರಿಸುತ್ತೇನೆಂದು ಕಾರನ್ನು ಲಾಯದತ್ತ ಹೊರಳಿಸಿದ. ಸರಿ, ಮಕ್ಕಳೂ ಹೆಚ್ಚಿನ ಹುಮ್ಮಸ್ಸದಿಂದ ಮುಂದಾಗಿ ಓಡಿದರು. ತಮ್ಮ ತಮ್ಮ ಕುದುರೆಗಳತ್ತ ಹೋಗಿ ಅವನ್ನು ಮಾತಾಡಿಸಿ, ಮೇವು ತಿನ್ನಿಸಿ ಮುದ್ದಿಸಲಾರಂಭಿಸಿದರು. ತಂದೆಯ ಕುದುರೆಯ ಮೇಲೆ ತಾವು ಸವಾರಿಮಾಡಬಹುದೇ ಎಂದು ಕೇಳಿದ ಎರಡು ಹಿರಿಯ ಮಕ್ಕಳು ಕುದುರೆಯನ್ನೇರಿಯೇ ಬಿಟ್ಟರು! ಬಹಳ ಹೊತ್ತು ನಿಂತು ನಿಂತು ಬೇಸರ ಬಂದಿರಬೇಕು ಕುದುರೆಗೆ, ಅಂತೆಯೇ ಹೊರಗೆ ಬಂದೊಡನೆ ನಾಗಲೋಟದಿಂದ ಸುತ್ತ ಓಡಲಾರಂಭಿಸಿತು. ಡಿಕ್ ಒಳ್ಳೆ ಅಭಿಮಾನದಿಂದ ತಮ್ಮ ಕುದುರೆಯನ್ನು, ತಮ್ಮ ಮಕ್ಕಳನ್ನು ನೋಡುತ್ತಿದ್ದರು.

ಭಾರತದಲ್ಲಿ ಕಾಡುಪ್ರಾಣಿಗಳು ಮತ್ತು ಸಾಕುಪ್ರಾಣಿಗಳು ಬಹಳವೆಂದು ಡಿಕ್ ಓದಿ ತಿಳಿದುಕೊಂಡಿದ್ದರಂತೆ. ಇವುಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲೆಂದು. ನನ್ನನ್ನು ಅತಿಥಿಯಾಗಿ ಬರಮಾಡಿಕೊಂಡಿದ್ದರಂತೆ.

"ನಿಮ್ಮ ದೇಶದಲ್ಲಿ ಆನೆಗಳು ಬಹಳಲ್ಲವೇ?" ಎಂದು ಪ್ರಾರಂಭಿಸಿದರು.

"ನಾನು ಮೈಸೂರಿನವನು. ಅದು ಆನೆಗಳ ತವರೂರು." ಎಂದಾಗ ಅವರ ಉತ್ಸಾಹ ಉಕ್ಕೇರಿತು. ಪ್ರಶ್ನೆಗಳ ಸುರಿಮಳೆಗೆ ಪ್ರಾರಂಭವಾಯಿತು.

"ಜನರು ಮರಿ–ಆನೆಗಳನ್ನೇ ಖರೀದಿಸುತ್ತಾರೋ ಅಥವಾ ಬೆಳೆದ ಆನೆಗಳನ್ನು ಕೊಳ್ಳುತ್ತಾರೋ?"

"ಕುದುರೆ, ಎತ್ತುಗಳಂತೆ ಆನೆಗಳನ್ನು ಮಾರುವದಾಗಲಿ, ಕೊಳ್ಳುವದಾಗಲಿ ವಿರಳ.

ಕಾಡಾನೆಗಳು ದಟ್ಟವಾದ ಅರಣ್ಯದಲ್ಲಿ ಹಿಂಡುಹಿಂಡಾಗಿ ವಾಸಿಸುತ್ತವೆ. ಹೀಗಾಗಿ ಅವನ್ನು ಹಿಡಿಯಲು ಬಲು ಕಷ್ಟದ ಕೆಲಸ. ಆಗಾಗ 'ಖೆಡ್ಡಾ' ಪದ್ಧತಿಯಿಂದ ಆನೆಗಳನ್ನು ಹಿಡಿದು ಪಳಗಿಸಿ ತರಬೇತಿ ಕೊಡುತ್ತಾರೆ."

"ಖೆಡ್ಡಾ ಪದ್ಧತಿಯೆಂದರೇನು ಕ್ರಿಶ್?" ಡಿಕ್ ಕೇಳಿದ.

"ಆನೆಗಳನ್ನು ಹಿಡಿದು ಪಳಗಿಸುವುದು ಬಹಳ ಸೂಕ್ಷ್ಮ ಮತ್ತು ಆಯಾಸದ ಕೆಲಸ. ಹತ್ತಾರು ಜನ ದಟ್ಟಾರಣ್ಯದಲ್ಲಿ ಅಡಗಿ ಕುಳಿತು, ಆನೆಗಳ ಚಲನವಲನಗಳನ್ನು ಪರಿಶೀಲಿಸುತ್ತಾ, ಅವು ಮೇಯುವ, ನೀರು ಕುಡಿಯುವ, ವಿಶ್ರಾಂತಿಸುವ ಸ್ಥಳಗಳನ್ನು ಗುರುತುಮಾಡಿಕೊಳ್ಳುತ್ತಾರೆ. ಆಮೇಲೆ ಬಲವಾದ ಸಂಘಟನೆಯೊಂದು ತಯಾರಾಗುತ್ತದೆ. ಬೇರೆ ಬೇರೆ ಸ್ಥಳಗಳಲ್ಲಿ ಆಳವಾದ ಕುಳಿಗಳನ್ನು ತೋಡುತ್ತಾರೆ. ಅರಣ್ಯದ ನಾಲ್ಕೂ ಕಡೆಯಿಂದ ಸಾವಿರಾರು ಜನರು ಢೋಲು, ನಗಾರಿ, ಕೊಂಬು, ಕಹಳೆ ಮೊದಲಾದ ವಾದ್ಯಗಳ ಹೆಚ್ಚಿನ ಗದ್ದಲ ಮಾಡುತ್ತ ಆನೆಗಳ ವಾಸಸ್ಥಳದತ್ತ ಸಾಗುತ್ತಾರೆ. ಆನೆಗಳೆಲ್ಲ ಈ ಸದ್ದಿಗೆ ಕಂಗಾಲಾಗಿ ಅರಣ್ಯದ ಮಧ್ಯ ಧಾವಿಸುತ್ತವೆ. ಹೀಗೆ ಬರುವ ಆನೆಗಳಿಗೆ ಮುಚ್ಚಿದ ಕುಳಿಗಳು ಕಣ್ಣಿಗೆ ಕಾಣದೇ ಅವುಗಳಲ್ಲಿ ಕುಸಿಬೀಳುತ್ತವೆ. ಆಳವಾದ ಕುಳಿಗಳಲ್ಲಿ ಬಿದ್ದು ಅಸಹಾಯವಾದಾಗ ಅವು ಗಂಟಲು ಬಿರಿಯುವಂತೆ ಘೀಳಿಡುತ್ತವೆ. ಕಾಡಾನೆಗಳಿಗೆ ಅದ್ಭುತ ಶಕ್ತಿಯಿರುತ್ತದೆ. ಆದ್ದರಿಂದ ಅವುಗಳ ಶಕ್ತಿಯನ್ನು ಕುಂದಿಸಲು ಹಲವಾರು ದಿನ ಅವಕ್ಕೆ ಉಪವಾಸ ಹಾಕುತ್ತಾರೆ. ನಂತರ ಸಾಕಾನೆಗಳ ಸಹಾಯದಿಂದ ಅವನ್ನು ಮೇಲಕ್ಕೆತ್ತಿಸಿ ಮೆಲ್ಲಮೆಲ್ಲಗೆ ಪಳಗಿಸುತ್ತಾರೆ. ಮಾನವನ ಅಪ್ಪಣೆಯಂತೆ ನಡೆದರೆ ಸಾಕಾನೆಗೆ ಆಹಾರ ದೊರೆಯುತ್ತದೆ. ತನಗೂ ಏಕೆ ದೊರೆಯಬಾರದು ಎಂಬ ವಿವೇಕ ಕಾಡಾನೆಗೆ ಬಂದಾಗ ಅದು ಪಳಗಿದೆ ಎಂದು ತಿಳಿಯಬೇಕು." ಎಂದೆಲ್ಲಾ ನನ್ನ ಜ್ಞಾನಭಾಂಡಾರ ಒಡೆದು ನಾನು ಡಿಕ್‌ನ ಪ್ರಶ್ನೆಗೆ ವಿವರಿಸಿ ಉತ್ತರ ಕೊಡಬೇಕಾಯಿತು.

"ಮದ್ದಾನೆಗಳನ್ನು ಹಿಡಿಯುಲು ಇಷ್ಟು ತೊಂದರೆಯಾದರೆ ಮರಿಯಾನೆ (ಚಿಟ್ಟಾನೆ)ಗಳನ್ನು ಹಿಡಿದು ಪಳಗಿಸುವ ಉಪಾಯವಿಲ್ಲವೇ?" ಡಿಕ್ ಮತ್ತೆ ಕೇಳಿದ.

"ಭಾರತೀಯ ತಾಯ್ತಂದೆಗಳಂತೆ ಆನೆಗಳೂ ಸಹ ತಮ್ಮ ಮಕ್ಕಳ (ಮೂವತ್ತು-ಮೂವತ್ತೈದು ವರ್ಷಗಳ ವರೆಗೂ) ಚಿಂತೆಯನ್ನು ಬಹಳಷ್ಟು ವಹಿಸಿಕೊಳ್ಳುತ್ತವೆ. ಹಿಂಡನ್ನಗಲಿ ಹೋಗಲು ಬಿಡುವುದಿಲ್ಲ. ಒಂದು ಮರಿಗೆ ಏನಾದರೂ ಅಪಘಾತ ಸಂಭವಿಸಿದರೆ ಇಡೀ ಹಿಂಡೇ ಸಹಾಯಕ್ಕೆ ಧಾವಿಸುತ್ತದೆ. ಒಮ್ಮೆ ಓಡುವ ಕಾರೊಂದು ಆನೆಯ ಮರಿ ಅಡ್ಡ ಬಂದದ್ದರಿಂದ ಅದಕ್ಕೆ ಬಡಿಯಿತು. ಮರಿ ಘೀಳಿಟ್ಟಿತು. ಕೂಡಲೇ ಹತ್ತಾರು ಆನೆಗಳು ಓಡಿ ಬಂದು ಕಾರಿನವನನ್ನು ಕೊಂದು, ಕಾರನ್ನು ಚೂರುಚೂರು ಮಾಡಿದವಂತೆ! ಆನೆಗೆ ಜ್ಞಾಪಕಶಕ್ತಿಯೂ ಚೆನ್ನಾಗಿರುತ್ತದಂತೆ, ಎಂದೋ ಆದ ಅನ್ಯಾಯಕ್ಕೆ ಎಷ್ಟೋ ಕಾಲದ ನಂತರವೂ ಮುಯ್ಯಿ ತೀರಿಸಿಕೊಳ್ಳುತ್ತದಂತೆ." ಎಂದು ಕೆಲವು ಘಟನೆಗಳನ್ನೂ ಹೇಳಿದೆ. ಡಿಕ್ ಇಷ್ಟಕ್ಕೆ ತೃಪ್ತನಾಗದೇ,

"ಜನರು ಆನೆಗಳನ್ನು ಸಾಕುಪ್ರಾಣಿಯನ್ನಾಗಿ ಮಾಡಿದ್ದಾರೆಯೇ? ಆನೆಗಳಿಗೆ ಮಕ್ಕಳೆಂದರೆ ಅಷ್ಟು ಪ್ರೀತಿಯಿದೆಯೇ? ವಿದ್ಯಾರ್ಥಿಗಳು ಆನೆಗಳ ಮೇಲೆ ಕುಳಿತೇ ಶಾಲೆ-ಕಾಲೇಜುಗಳಿಗೆ ಹೋಗುತ್ತಾರೆಯೇ? (ಕಾರುಗಳು ಕಡಿಮೆಯಿದ್ದ ಭಾರತದಲ್ಲಿ ಆನೆಗಳು

ಕಾರುಗಳ ಕೆಲಸ ಮಾಡುತ್ತವೆಂದು ಆತ ನಂಬಿರಬೇಕು!) ಕುದುರೆಯ ರೇಸಿನಂತೆ ಆನೆಯ ರೇಸ ನಡೆಯುವುದೇ? ಆನೆ, ಯಜಮಾನನ್ನು ಚೆನ್ನಾಗಿ ಪ್ರೀತಿಸುವದೇ? ಊರು-ಶಹರಗಳಲ್ಲಿ ಅದರ ಮುಖ್ಯ ಆಹಾರವೇನು? ಒಂದು ಆನೆ ಸಾಕಲು ತಿಂಗಳಿಗೆ ಸರಾಸರಿ ಎಷ್ಟು ಖರ್ಚು ಬರುವುದು? ಹೆಣ್ಣಾನೆ ವರ್ಷದಲ್ಲಿ ಎಷ್ಟು ಮರಿ ಕೊಡುತ್ತದೆ? ಕ್ರಿಶ್, ನೀನು ಇಲ್ಲಿಂದ ಮರಳಿದ ಮೇಲೆ ಮಹಾರಾಜನಂತೆ ಆನೆಯ ಮೇಲೆ ಸವಾರಿಮಾಡುವೆಯಾ?...." ಇತ್ಯಾದಿ ಇತ್ಯಾದಿ ಪ್ರಶ್ನೆಗಳ ಮಳೆಯನ್ನೇ ಸುರಿಸಿದನು. ಅವನ ಎಲ್ಲ ಪ್ರಶ್ನೆಗಳಿಗೆ ನನ್ನಿಂದ ಶಕ್ಯವಿದ್ದಷ್ಟು ಸಮರ್ಪಕ ಉತ್ತರಗಳನ್ನು ಕೊಡುತ್ತ...

"ಆನೆಗಳನ್ನು ಕಷ್ಟತರ ಕೆಲಸಗಳಿಗೆ ಉಪಯೋಗಿಸುವ ರೂಢಿಯಿದೆ. ಆನೆಗಳನ್ನು ಸಾಕುವವರು ತುಂಬ ವಿರಳ. ಅದರ ಡೊಳ್ಳುಹೊಟ್ಟೆ ತುಂಬುವದರಲ್ಲಿ ಯಾರೊಬ್ಬರ ಮನೆ-ಮಾರು ಎಲ್ಲಾ ದಿವಾಳಿಯಾದೀತು." ಎಂದು ನಾನು ಹೇಳಿದಾಗ ಅವನಿಗೆ ಸ್ವಲ್ಪ ನಿರಾಸೆಯೇ ಆಯಿತು.

ಸರಿ, ಮಧ್ಯಂತರ ಈ ಅವಾಂತರ ಮುಗಿಯುತ್ತಲೆ ಮನೆಯತ್ತ ಸಾಗಿದೆವು. ಮನೆ ಸಮೀಪಿಸಿದಂತೆ ಡಿಕ್‌ರ ಕಿರಿಮಗಳು ಓಡಿ ಹೋಗಿ ಒತ್ತು-ಗುಂಡಿ (push-button)ಯನ್ನು ಒತ್ತಿದಳು. ಕಾರಿನ ಗ್ಯಾರೇಜಿನ ಬಾಗಿಲು ತಂತಾನೇ ತೆಗೆದುಕೊಂಡು ಕಾರನ್ನು ಬರಮಾಡಿಕೊಂಡು ತಿರುಗಿ ಮುಚ್ಚಿಕೊಂಡಿತು. ಇದೆಲ್ಲ 'ಇಲೆಕ್ಟ್ರಾನಿಕ್' ಪದ್ಧತಿಯಿಂದ ನಡೆಯುತ್ತದೆಂದು ಡಿಕ್ ಹೇಳಿದ. ಗ್ಯಾರೇಜ ಒಂದು ಕಾರಖಾನೆಯಂತೇ ಇತ್ತು. ಕಾರಿನ ದುರಸ್ತಿಗೆ ಬೇಕಾದ ಎಲ್ಲ ಭಾಗಗಳು ಇದ್ದವು. ಕಾರು-ದುರಸ್ತಿ ಅಮೇರಿಕೆಯಲ್ಲಿ ವಿಪರೀತ ತುಟ್ಟಿಯಿರುವುದರಿಂದ ಅಮೇರಿಕನ್ನರು ಆದಷ್ಟು ರಿಪೇರಿಯನ್ನು ಸ್ವತಃ ಮಾಡುತ್ತಾರೆ.

ಡಿಕ್‌ರ ಪತ್ನಿ ಹೆಲನ್ ನಮಗಾಗಿ ಕಾದಿದ್ದಳು. ಮಕ್ಕಳು ಮುಂದಾಗಿ ಓಡಿ ಹೋಗಿ ತಾಯಿಗೆ ಕುದುರೆ-ಸವಾರಿಯ ವಿಷಯವನ್ನು ವಿವರಿಸಿದ್ದರು. ಪರಸ್ಪರ ಪರಿಚಯದ ನಂತರ ಹೆಲನ್ನಳು-

"ಕ್ರಿಶ್, ನಿನಗೆ ಮಕ್ಕಳ ಪರಿಚಯವಾಗಿದೆಯೇ?" ಎಂದು ಕೇಳಿದಳು.

"ಇಲ್ಲ"ವೆಂದು ಉತ್ತರಿಸಿದೆ.

"ನನಗೆ ಗೊತ್ತು, ಡಿಕ್ಕನಿಗೆ ಕುದುರೆ, ಆನೆಗಳು ತಲೆಯಲ್ಲಿ ಹೊಕ್ಕವೆಂದರೆ ಜಗತ್ತೇ ಮರೆಯಾಗುತ್ತದೆ." ಎಂದು ನಸುನಗುತ್ತಾ ಗಂಡನ ಕಡೆ ನೋಡಿದಳು. ಗಂಡನು ಇದೇನು ತನಗೆ ಹೊಸದಲ್ಲವೆಂದು ವಿಚಾರಮಗ್ನನಂತೆಯೇ ಇದ್ದ.

ಹಿರಿಯ ಮಗಳು ಡಾರ್‌ಬರಾಳಿಗೆ ತಾಯಿಯದೇ ನಗುಮುಖ. ಏಳೇ ವರ್ಷ ವಯಸ್ಸಾದರೂ ಹತ್ತು ವರ್ಷದವಳಂತೆ ಕಾಣುತ್ತಾಳೆ. ಎರಡನೇ ಮಗಳು ಡಾಯೆನಾ ಬಳಕಲು ದೇಹದವಳು; ಗಂಭೀರಸ್ವಭಾವದವಳು. ನಾಲ್ಕು ವರ್ಷದ ಡೆವಿಸ್‌ಗೆ ತಾಯಿಯ ಸೌಂದರ್ಯವಾಗಲಿ ತಂದೆಯ ಬುದ್ಧಿಯಾಗಲಿ ಬಂದಂತಿರಲಿಲ್ಲ ಕೊನೆಯ ಮಗಳು ಡೆನಿಸ್‌ಳು ಇನ್ನೂ ಎರಡು ವರ್ಷದ ಮಗು. ತೊದಲು ಮಾತನಾಡುತ್ತಿದ್ದಳು. ಕೆಲವು ಅಮೇರಿಕನ್ನರಿಗೆ ತಮ್ಮ ಕುಟುಂಬದವರ ಹೆಸರುಗಳೆಲ್ಲ ಒಂದೇ ಅಕ್ಷರದಿಂದ ಪ್ರಾರಂಭಿಸಬೇಕು ಎನ್ನು ಹುಚ್ಚು ಬಹಳ. ನನ್ನ ಸ್ನೇಹಿತರೊಬ್ಬರ ಮನೆಯಲ್ಲಿ ಎಲ್ಲರ ಹೆಸರುಗಳೂ 'ಜೆ'ದಿಂದ ಪ್ರಾರಂಭವಾಗುತ್ತವೆ. ಜೇನ್, ಜೇಕ್, ಜೊಯ್‌ಸ್, ಜುಡಿ,

ಜಿಮ್ ಮತ್ತು ಜೆರಿ, ಅಧ್ಯಕ್ಷ ಜಾನ್‌ಸನ್ನರ ಕುಟುಂಬದವರ ಹೆಸರುಗಳು - ಲಿಂಡನ್, ಲುಸಿ, ಲಿಂಡಾ ಮತ್ತು ಲೇಡಿ ಬರ್ಡ (ಶ್ರೀಮತಿ ಜಾನ್‌ಸನ್ನರ ಹೆಸರು) ಎಂದಿದೆ. ಡಿಕ್ಕರ ಕುಟುಂಬದಲ್ಲಿ ಎಲ್ಲ ಮಕ್ಕಳ ಹೆಸರೂ 'ಡಿ'ಯಿಂದ ಸುರುವಾಗುವದರಲ್ಲಿ ಆಶ್ಚರ್ಯವಿಲ್ಲ. ಡೆಬಿ (ಡಾರ್‌ಬೆರಾ)ಗೆ, ಭಾರತದ ಬಗ್ಗೆ ಒಂದು ಪ್ರಬಂಧವನ್ನು ಬರೆಯಲು ಹೇಳಲಾಗಿತ್ತಂತೆ. ಆದ್ದರಿಂದ ನನ್ನ ಬರವನ್ನು ಬಹಳ ಆತುರತೆಯಿಂದ ನಿರೀಕ್ಷಿಸುತ್ತಿದ್ದಳಂತೆ. ಕಾಗದ ಮತ್ತು ಪೆನ್ಸಿಲ್‌ಗಳನ್ನು ತಂದು, ನನ್ನ ಮುಂದೆ ಆರೂಢಳಾಗಿ 'ಸಂದರ್ಶಕ'ಳಂತೆ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದಳು.

"ಭಾರತೀಯ ವಿದ್ಯಾರ್ಥಿಗಳ ಉಡುಪು ಏನು? ಅವರು ಎಂತಹ ವಾಹನಗಳ ಮೇಲೆ ಶಾಲೆಗೆ ಹೋಗುತ್ತಾರೆ? ಅವರ ಶಾಲೆಯ 'ಯುನಿಫಾರ್ಮ'ದ ಬಣ್ಣ ಯಾವುದು? ಅವರ ಆಟಗಳು ಯಾವವು? ಅವರು ಯಾವ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಾರೆ?"

ಇತ್ಯಾದಿ, ಇತ್ಯಾದಿ ನೂರಾರು ಪ್ರಶ್ನೆಗಳ ವಿವರ ಆಕೆಗೆ ಬೇಕಾಗಿತ್ತು. ರೇಡಿಯೋ ಗಡಿಯಾರದ ಮಧುರ ಧ್ವನಿಗೆ ಹಾಸಿಗೆ ಬಿಟ್ಟೆದ್ದು, ಹಲ್ಲುಗಳನ್ನು 'ಬ್ರಶ್' ಮಾಡಿ, ಹಣ್ಣಿನ ರಸ, ತತ್ತಿ, ಚಿಕನ್, ಬ್ರೆಡ್, ಹಾಲುಗಳ 'ನಾಶ್ತಾ' ಮಾಡಿ, ಕಾರಿನಲ್ಲಿಯೋ ಮೋಟಾರಿನಲ್ಲಿಯೋ ಶಾಲೆಗೆ ಹೋಗಿ, ಅಲ್ಲಿ ವಿವಿಧ ಬಗೆಯ ನಿರ್ಮಾಪಕ (ನಿರ್ಮಾಣದ constructive) ಆಟ-ಪಾಟಗಳಲ್ಲಿ ಭಾಗವಹಿಸಿ, ವಾಚನಾಲಯಗಳಿಗೆ ಹೋಗಿ, ತಮ್ಮ ವಯಸ್ಸಿಗೆ ತಕ್ಕಂತಿರುವ ಪುಸ್ತಕಗಳನ್ನು ಓದಿ, ಬಗೆಬಗೆಯ 'ಇಲೆಕ್ಟ್ರಾನಿಕ್' ಆಟಿಗೆಗಳಿಂದ ಆಡುವವರಿಗೆ ಹಸಿದ ಹೊಟ್ಟೆಗೆ ಅಷ್ಟು ರೊಟ್ಟಿಯನ್ನೊ, ತಂಗಳ ಅನ್ನವನ್ನೊ ಹಾಕಿ, ಅಣ್ಣನ ಹಳೇ ಚೊಣ್ಣವನ್ನು ಧರಿಸಿ, ಬರಿಗಾಲಿನಿಂದ ಶಾಲೆಗೆ-ಚಳಿಗೋ, ಮಳೆಗೋ, ಬಿಸಿಲಿಗೋ ಮೈಯೊಡ್ಡಿ-ಓಡುತ್ತ ಹೋಗಿ, ಮಣ್ಣಿನಲ್ಲಿ ಕುಳಿತು ಗೋಲಿಯಾಟವನ್ನೊ, ಚಿನ್ನಿಫಣಿಯನ್ನೊ ಆಡುವ ನಮ್ಮ ವಿದ್ಯಾರ್ಥಿಗಳ ಜೀವನವನ್ನು ಹೇಗೆ ವಿವರಿಸಬೇಕೆಂದು ಸಮಸ್ಯೆಯಾಯಿತು. ಅವರಿಗೆ ತಿಳಿಯುವಂತೆ ಭಾರತೀಯ ಆಟಗಳೆಲ್ಲ ಖರ್ಚಿಲ್ಲದವುಗಳೆಂದೆ. ಹಾಳೆಯಿಂದ ಹಡಗ, ಲಾಂಚ್, ಪಟಾಕ್ಷಿ ಮಾಡಿ ಆಡುತ್ತಾರೆಂದೆ. ಅವರಿಗೆ ಅವನ್ನು ಮಾಡಿಯೂ ತೋರಿಸಿದೆ. ಹುಡುಗರಿಗೆಲ್ಲಾ ಬಹಳ ಖುಷಿಯಾಯಿತು. ಕಬ್ಬಡ್ಡಿ (ಹುಡುತುತು) ಖೋ ಖೊ, ತಿಳ್ಳಿ, ಸರಬಡಗಿ, ಗಿಡಮಂಗ, ಕಂಟಲ್ಪಿ, ಅಣಿಕಲ್ಲಾಡೋದು, ಅಸಿಬಿಸಿ, ಕಣ್ಣು ಮುಚ್ಚಣಿಕಿ, ಮೊದಲಾದ ನಮ್ಮಲ್ಲಿಯ ಗಂಡುಹುಡುಗರು, ಹೆಣ್ಣುಹುಡುಗರ ಆಟಗಳನ್ನು ನನಗೆ ಗೊತ್ತಿದಷ್ಟೂ ವಿವರಿಸಿ ಹೇಳಿದೆ. ಇದನ್ನು ಕೇಳಿ, ಅವರಿಗೆ ತಮ್ಮ ಆಟಿಗೆಗಳನ್ನು ತೋರಿಸುವ ಹುಕಿ ಬಂದಿತು. ಕೂಡಲೇ-

"ಮೊಮ್, ಕ್ರಿಶ್‌ನಿಗೆ ಒಂದು ನಿಮಿಷದಲ್ಲಿ ನಮ್ಮ ಆಟಿಗೆಗಳನ್ನು ತೋರಿಸಿಕೊಂಡು ಬರಲೇ?" ಎಂದು ಡೇವಿ ಕೇಳಿದ. ಮಕ್ಕಳಿಗೆ ನಿರುತ್ಸಾಹಗೊಳಿಸುವ ಮನಸ್ಸಿಲ್ಲದೆ ತಾಯಿ ಒಪ್ಪಿಗೆಯಿತ್ತಳು. ಸರಿ, ಮಕ್ಕಳು ಹಿಗ್ಗಿ, ನಾನು ತಾನೆಂದು ನನ್ನ ಕೈ ಹಿಡಿದು ಎಳೆಯುತ್ತ ಕೆಳಮನೆಗೆ (basement) ಹೊರಟರು. ಮೆಟ್ಟಿಲು ಇಳಿದ ಕೂಡಲೇ ಸುಸಜ್ಜಿತವಾದ ಕೋಣೆ. ವಿವಿಧ ತರದ ಸೆರೆಗಳನ್ನು ಇಟ್ಟಿದ್ದರು. ಪಕ್ಕದ ಕೋಣೆಯಲ್ಲಿ ಬಟ್ಟೆ ತೊಳೆಯುವ, ಒಣಗಿಸುವ ಮತ್ತು ಇಸ್ತ್ರೀ ಮಾಡುವ ಯಂತ್ರಸಲಕರಣೆಗಳಿದ್ದವು. ನಂತರ ಬಂದಿತು ದೊಡ್ಡದೊಂದು ಹಾಲು. ಬಣ್ಣ ಬಣ್ಣದ ಕಾರು, ಸಾಯಕಲ್, ವಿಮಾನಗಳಿದ್ದವು. ಪ್ರತಿ

ಮಕ್ಕಳು ತಮ್ಮ ವಾಹನಗಳನ್ನು ನಡೆಸಿ ತೋರಿಸಿದವು. ಡಾಯನಾಳು–

"ಕ್ರಿಶ್, ನಿನಗೆ ನನ್ನ ಮೋಟಾರ ನಡೆಸಲು ಬರುತ್ತದೆಯೇ?" ಎಂದು ಕೇಳಿದಳೂ. ಕೂಡಲೇ ಸೋಲನ್ನೊಪ್ಪಿಕೊಳ್ಳದೆ ಕೋಟು ತೆಗೆದಿಟ್ಟು ಮೋಟಾರು ಪ್ರಾರಂಭಿಸಿಯೇಬಿಟ್ಟೆ. ಮಕ್ಕಳೆಲ್ಲಾ ಚಪ್ಪಾಳೆ ತಟ್ಟಿದವು. ಡಾರ್‌ಬೆರಾ–

"ಕ್ರಿಶ್, ನಿನ್ನ ಭಾರತೀಯ ಆಟವೊಂದನ್ನು ತೋರಿಸಲ್ಲ?" ಎಂದು ನೆನಪು ಮಾಡಿದಳು. ನಾನೊಬ್ಬನೇ ಒಂದು ಪಕ್ಷ. ಉಳಿದವರೆಲ್ಲ ಇನ್ನೊಂದು ಪಕ್ಷ ಮಾಡಿ ಕಬಡ್ಡಿ ಆಟವನ್ನು ವಿವರಿಸಿದೆ. ಸರಿ 'ಕಬಡಿ, ಕಬಡಿ, ಕಬಡಿ' ಎನ್ನುತ್ತ ನಾನು ಹೊರಡುವದೇ ತಡ, ಒಬ್ಬಳು ಶರ್ಟನ್ನು, ಇನ್ನೊಬ್ಬಳು ಟೈಯನ್ನು, ಇನ್ನೊಬ್ಬನು ಕಾಲನ್ನು ಭದ್ರವಾಗಿ ಅವಚಿಕೊಂಡುಬಿಟ್ಟರು! ಅವರ ವಿಜಯಕ್ಕಾಗಿ ನಾನು ಸೋಲಬೇಕಾಯಿತು. ಅವರ ಚೀರಾಟ, ಜಿಗಿದಾಟಗಳಿಗೆ ಮಿತಿಯೇ ಇರಲಿಲ್ಲ.

ಬಹಳ ಹೊತ್ತಿನ ತನಕ ಅತಿಥಿ ಬಾರದ್ದರಿಂದಲೂ, ಕೆಳಮನೆಯ ನಮ್ಮ ಗದ್ದಲ ಮೇಲಕ್ಕೂ ತಲುಪಿದ್ದರಿಂದಲೂ–ಮೇಲಿದ್ದವರೂ ಕೆಳಗೆ ಬರುವಂತಾಯಿತು.

ಇನ್ನೊಮ್ಮೆ ಆಟ ಪ್ರಾರಂಭವಾಯಿತು. ಡಿಕ್, ಹೆಲನ್‌ರಿಗೆ ಮೋಜೆನಿಸಿ ಅವರೂ ಆಟದಲ್ಲಿ ಸೇರಿದರು! ಮಕ್ಕಳೆಲ್ಲಾ ಕ್ರಿಶ್‌ನ ಪಾರ್ಟಿ ಸೇರಿ, ಡೆಡ್ ಮತ್ತು ಮೊಮ್ (ತಂದೆ–ತಾಯಿ)ರನ್ನು ಸೋಲಿಸಿಬಿಟ್ಟರು. ದಣಿದ ಆಟಗಾರಿಗೆ ಕೊಕೊಕೋಲ, ಬಿಸ್ಕಿತ್ತುಗಳು ಬಂದವು. ಕೆಳಮನೆಯ ಕೋಲಾಹಲ ಉಪ್ಪರಿಗೆಯ ಮೇಲೆ ಇರುತ್ತಿದ್ದ ಡಿಕ್ ಮತ್ತು ಹೆಲನ್ನರ ತಾಯಂದಿರ ಕಿವಿಗೂ ಮುಟ್ಟಿ, ಅವರೂ ಸಾವಕಾಶವಾಗಿ ಕೆಳಮನೆಯಲ್ಲಿ ಇಳಿದರು. 'ಹಾಯ್‌ಹಾಯ್'ಗಳು ಮುಗಿದ ನಂತರ ಮಾತಿಗೆ ಆರಂಭವಾಯಿತು. ನಾವು ಮಾತಿನಲ್ಲಿರುವಾಗಲೇ ಹೆಲನ್ ಮಕ್ಕಳಿಗೆ ಮಲಗುವ ವೇಳೆಯಾಯಿತೆಂದು ಬಟ್ಟೆ–ಬರೆ ಬದಲಿಸಿ. ಹುಲ್ಲುಜ್ಜಿ ಮಲಗುವ ಸಿದ್ಧತೆ ಮಾಡುವಂತೆ ಆಜ್ಞೆಯಿತ್ತಳು. ಆಟ–ಸೂರ್ಯನ ಕಡೆಗೆ ಮುಖ ಮಾಡಿ, ಹಿಗ್ಗಿ, ಇಷ್ಟಗಲವಾಗಿದ್ದ ಮಕ್ಕಳ ಸೂರ್ಯಪಾನ–ಮುಖಗಳು, ನಿದ್ರೆಯ ಹೆಸರನ್ನು ಕೇಳಿದ ಕೂಡಲೆ ಬಾಡಿ, ಕಂದಿ, ಜೋಲುಬಿದ್ದವು. ಆದರೂ ಗೊಣಗುತ್ತಲೇ ಅವು ಹೋದವು. ನಾವು ಮೆಲ್ಲಗಡೆ ದಿವಾಣ–ಖಾನೆಗೆ ಬಂದೆವು. ಮಕ್ಕಳು ಮಲಗುವ ಮೊದಲು ಹಿರಿಯರಿಗೆಲ್ಲಾ ಸುಖರಾತ್ರೆಯ ಚುಂಬನ (good-night-kisses) ಕೊಡುವುದು ರೂಢಿ ಹಿರಿಯರೊಂದಿಗೆ ನನಗೂ ಆತ್ಮೀಯ ಆಲಿಂಗನ, ಚುಂಬನಗಳು ದೊರಕಿದವು! ಮೆಲುದನಿಯಲ್ಲಿ–

"ನಾವೆಲ್ಲ ನಿನ್ನನ್ನು ತುಂಬ ಪ್ರೀತಿಸುತ್ತೇವೆ ಕ್ರಿಶ್. ನೀನು ಮತ್ತೆ ಯಾವಾಗ ನಮ್ಮ ಮನೆಗೆ ಬರುವಿ? ಮುಂದಿನ ವಾರ ಬರುವಿಯಾ? ಸ್ವಲ್ಪ ಬೇಗನೆ ಬಾ. ಬಹಳ ಹೊತ್ತು ಆಡೋಣವಂತೆ." ಎಂದು ಒಂದರ ಹಿಂದೊಂದು ಮಗು ಬಂದು, ನನ್ನ ಹತ್ತಿರದಲ್ಲಿ ಪಿಸುಗುಟ್ಟಿದವು. ತಮ್ಮ ಮಲಗುವ ಮನೆಗೆ ಹೋದರೂ ಅಲ್ಲಿಂದಲೆ ಹಣಕಿ ಹಾಕಿ ಹಾಕಿ ನೋಡುವರು. ಡೇವನಂತೂ ತುಸು ಹೊತ್ತಾದ ಮೇಲೆ ಯಾರಿಗೂ ಕಾಣದಂತೆ ನಾನು ಕುಳಿತ ಸೋಫಾದ ಹಿಂದು ಬಂದು ಕುಳಿತು ನನ್ನ ಬೆನ್ನಿಗೆಮೃದುವಾದ ಏಟುಗಳನ್ನು ಹಾಕುತ್ತಲಿದ್ದ. ತಾಯಿಗೆ ಸಂಶಯ ಬಂದು ಆಕೆ ಎದ್ದು ಬಂದು

ಅವನನ್ನು ಎಳೆದುಕೊಂಡು ಹೋಗಿ ಹಾಸಿಗೆಯಲ್ಲಿ ಮಲಗಿಸಿ, ಹೊರಗಿನಿಂದ ಬಾಗಿಲು ಹಾಕಿಕೊಂಡಳು. ಮತ್ತೆ ಬಂದು...

"ಕ್ರಿಶ್, ನೀನು ನಮ್ಮ ಹುಡುಗರ ಮೇಲೆ ಭಾರತದ ಮಾಯಾವಿದ್ಯೆಯ ಪ್ರಯೋಗ ಮಾಡಿದಂತಿದೆ. ಆದ್ದರಿಂದ ಎಂದೂ ಮಲಗಲು ಆಕ್ಷೇಪಿಸದವರು ಈಗ ಎಷ್ಟು ಹೊತ್ತಾದರೂ ಎಚ್ಚರವಾಗಿಯೇ ಇದ್ದಾರೆ.... ಭಾರತೀಯ ಹುಡುಗರೂ ಹೀಗೇ ಮಾಡುತ್ತಾರೆಯೇ?" ಎಂದು ಮುಗುಳುನಗೆ ಬೀರಿ ಕೇಳಿದಳು.

"ಜಗತ್ತಿನ ಎಲ್ಲ ಮಕ್ಕಳೂ ಹೆಚ್ಚು ಕಡಿಮೆ ಒಂದೇ." ಎಂದು ಸ್ವಲ್ಪ ಅಧಿಕಾರ ವಾಣಿಯಿಂದ, ಸ್ವಲ್ಪ ಹೆಮ್ಮೆಯಿಂದ ಹೇಳಿದೆ.

ನಮ್ಮ ಮಾತು ಹಾಗೇ ಸಾಗಿತು. ಮಾತಿನ ನಡುವೆ ನನಗೆ ಛಾಯಾಚಿತ್ರದಲ್ಲಿ ಅಭಿರುಚಿ ಎಂದು ಕೇಳಿ, ತಮ್ಮ ಕುಟುಂಬದವರ ಫೋಟೋಗಳನ್ನು ತೋರಿಸಿದರು. ಡಿಕ್ ತಾನೇ ತೆಗೆದ, ತಮ್ಮ ತಾಯಿಯ ವಿವಾಹದ ಚಲನಚಿತ್ರ ತೋರಿಸುತ್ತೇನೆಂದು ಒಂದು ಪ್ರೊಜೆಕ್ಟರ್ ಮತ್ತು ಫಿಲ್ಮಗಳನ್ನು ತಂದರು,

"ನಿನ್ನ ತಾಯಿಯ ವಿವಾಹ-ಚಿತ್ರವನ್ನು ನೀನು ಹೇಗೆ ತೆಗೆದೆ?" ಎಂದು ಕೇಳಬೇಕೆಂದಿದ್ದೆ. ಆದರೆ ಅಮೇರಿಕನ್ನರು ಏನು ಮಾಡಿಯಾರು, ಏನು ಮಾಡಲಿಕ್ಕಿಲ್ಲ ಎಂಬುದು ಹೇಳಲು ಬರುವುದಿಲ್ಲ. ಜನ್ಮಪೂರ್ವದಲ್ಲಿಯೇ ಕೆಮರಾ ಹಿಡಿಯಲು ಬರುವ ಮಕ್ಕಳಿದ್ದರೆ ಏನಾಶ್ಚರ್ಯ, ಎಂದುಕೊಂಡು ನೋಡಿ ಮಾತನಾಡೋಣವೆಂದು ಆಗ ಸುಮ್ಮನಿದ್ದೆ. ಚಲನಚಿತ್ರ ಪ್ರಾರಂಭವಾಯಿತು. ಕಾರುಗಳು ಬಂದವು, ಜನರು ಸೇರಿದರು. ಪಾದ್ರಿ ಗಾಂಭೀರ್ಯದಿಂದ ವೇದಿಕೆಯನ್ನೇರಿದ. ಮದುಮಗಳು-ಡಿಕ್‌ರ ತಾಯಿ-ಆಗಲೂ ಮುದಿಕೆಯೇ! ತನ್ನ ಎರಡನೇ ಪತಿಯೊಂದಿಗೆ ಸಂಭ್ರಮದಿಂದ ಮಧುಚಂದ್ರ (honey-moon)ಕ್ಕೆ ಹೊರಟಿದ್ದನ್ನು ನೋಡಿ ನಗು ಬಾರದೆ ಇರಲಿಲ್ಲ. ಪಾಪ ಆ ಮುದಕನೂ ಮದಿವೆಯಾದ ಮೂರುನಾಲ್ಕು ವರ್ಷಗಳಲ್ಲಿ ತೀರಿಕೊಂಡನಂತೆ. ಮತ್ತೆ ಒಬ್ಬಂಟಿಗಳಾದ್ದರಿಂದ ಆಕೆ ಮಗನ ಸಂಗಡ ಇದ್ದಾಳೆ. ಜೊತೆಗೆ ಹೆಲನ್ನರ ವಿಧವೆ ತಾಯಿಯೂ ಇದ್ದಾಳೆ. ಹೀಗೆ ಇಬ್ಬರ ತಾಯಂದಿರೂ ತಮ್ಮ ತಮ್ಮ ಮಕ್ಕಳೊಡನೆ ಬಂದಿದ್ದು ಬಾಳ್ವೆ ಮಾಡುವುದು ಅಮೇರಿಕೆಯಲ್ಲಿ ಅತಿ ವಿರಳ. ಭಾರತೀಯ ಸಂಸಾರವನ್ನು ಹೋಲುವ ಈ ಅಮೇರಿಕನ್ ಸಂಸಾರ ನೋಡಿ, ನನಗೆ ಎಷ್ಟೋ ಸಮಾಧಾನವೆನಿಸಿತು.

ತಿಂಡಿ-ತಿನಿಸು, ಮಾತು-ಕತೆಗಳಲ್ಲಿ ವೇಳೆ ಹೋಗಹತ್ತಿತು. ಅನಂತರ ಶಿಕ್ಷಣ ಸಮ್ಮೇಲನವಿದ್ದುದರಿಂದ ಲಗುಬಗೆಯಿಂದ ಹೊರಟೆವು. ಸಮ್ಮೇಲನದಲ್ಲಿ ಮಹತ್ವದ್ದು ಏನೂ ಇರಲಿಲ್ಲ. ಬರೇ ಪರಸ್ಪರ ಪರಿಚಯ 'ಹಾಯ್ ಹಾಯ್'ಗಳಲ್ಲಿ ಹೆಚ್ಚಿನ ವೇಳೆ ಹೋಯಿತು. ನನ್ನನ್ನು ಮನೆಗೆ ಮುಟ್ಟಿಸುತ್ತ ಡಿಕ್‌ರು-

"ಕ್ರಿಶ್ ಮುಂದಿನ ವಾರ ಮತ್ತೆ ನೀನು ಮನೆಗೆ ಬರಬೇಕು. ಎಷ್ಟು ಹೊತ್ತಿಗೆ ಬರಬೇಕೆಂದು ಫೋನ ಮಾಡಿ ತಿಳಿಸುತ್ತೇನೆ." ಎಂದು ಮತ್ತೆ ಔತಣ ಕೊಟ್ಟೇ ಬೀಳ್ಕೊಟ್ಟರು.

ನಿರೀಕ್ಷಿಸದ್ದಕ್ಕಿಂತ ಮೊದಲೇ ಕರೆ ಬಂದಿತು. ಅಂದು ರಾತ್ರಿ 'ಟಿ.ವಿ'ಯಲ್ಲಿ ಶ್ರೀಮತಿ ಜೆಕೆಲಿನ್ ಕೆನಡಿಯವರ ಭಾರತಸಂದರ್ಶನದ ವರ್ಣಚಿತ್ರದ ಕಾರ್ಯಕ್ರಮವಿತ್ತು. ನಾನೂ ಅಲ್ಲಿದ್ದರೆ ಭಾರತೀಯ ವೇಷಭೂಷಣ, ವಾದ್ಯವಿಶೇಷಗಳು ಇತ್ಯಾದಿ ಭಾರತೀಯ

ಜನಜೀವನದ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಗುವುದೆಂದು ಹೆಮಲಿನ್ ದಂಪತಿಗಳ ಅಭಿಪ್ರಾಯವಾಗಿತ್ತು. ಊಟಕ್ಕೂ ಆಮಂತ್ರಣವಿತ್ತು. ಸಪ್ಪೆ ಊಟದ ನೆನಪು ಬಂದು ಜೊತೆಗೆ ಇದ್ದರೆ ನೆಟ್ಟಗೆ ಎಂದು ಕೆಲವು ಹಪ್ಪಳಗಳನ್ನು ತೆಗೆದುಕೊಂಡು ಹೋದೆ.

ಎರಡನೇ ಬಾರಿ ಅವರಲ್ಲಿ ಹೋದಾಗ ಮೊದಲಿನ ಸಲದ ಕೃತ್ರಿಮ ಔಪಚಾರಿಕೆ ಇರಲಿಲ್ಲ. ಅಮೇರಿಕನ್ನರನ್ನು ಅವರ ದೈನಂದಿನ ಜೀವನದಲ್ಲಿ ಕಾಣುವಂತೆ ಆಯಿತು. ನಾನೂ ಮನೆಯಲ್ಲಿ ಒಬ್ಬನಾದಂತೆ ಅನಿಸಿತು. ನಾನು ತಂದ ಹಪ್ಪಳಗಳು ಎಲ್ಲರ ಕುತೂಹಲವನ್ನು ಕೆರಳಿಸಿದವು. ಹೆಲನ್ ಅವನ್ನು ತಿನ್ನುವ ವಿಧಾನದ ಬಗ್ಗೆ ಕೇಳಿದಳು. ಗ್ರಿಸ್ (ಕುದಿಯುವ ಎಣ್ಣೆಗೆ ಅಮೇರಿಕನ್ನರು ಗ್ರಿಸ್ ಎನ್ನುತ್ತಾರೆ!)ನಲ್ಲಿ ಕರಿಯುವದೆಂದರೂ ಅದಕ್ಕೆ ಎಷ್ಟು ಉಷ್ಣತೆ ಬೇಕೆಂಬುದು ನನಗೂ ಗೊತ್ತಿರಲಿಲ್ಲ; ಅವರಿಗೂ ಕಲ್ಪನೆ ಇರಲಿಲ್ಲ. ೩೦೦ ಡಿಗ್ರಿ C ಉಷ್ಣತಾಮಾನದ ವಿದ್ಯುತ್ ಪಾತ್ರೆ ಇದ್ದರೆ ಸಾಕೆಂದು ಹೇಳಿದೆ. ಸರಿ, ಎಣ್ಣೆ ಕಾದ ಮೇಲೆ ಒಂದು ಹಪ್ಪಳ ಹಾಕಿದೆ. ಹಪ್ಪಳ ಮೇಲೆ ಬರಲೇ ಇಲ್ಲ! ೩೫೦ ಡಿಗ್ರಿ C ಉಷ್ಣತೆ ಏರಿಸಲಾಯಿತು, ಪ್ರಯೋಜನವಾಗಲಿಲ್ಲ. ಕೊನೆಗೆ ೪೫೦ ಡಿಗ್ರಿ Cದ ವಿದ್ಯುತ್ ಪಾತ್ರೆ ಉಪಯೋಗಿಸಬೇಕಾಯಿತು. ಹಪ್ಪಳ ಕರಿಯುವ ಸಂಭ್ರಮ ನೋಡಲು ಹುಡುಗರೆಲ್ಲರು ನನ್ನನ್ನು ಸುತ್ತುವರಿದು ನಿಂತಿದ್ದರು. ಚಿಕ್ಕ ಡೇವಿಡ್ ತನಗೆ ಕಾಣದ್ದರಿಂದ ಟೇಬಲ್ ಮೇಲೆ ಹತ್ತಿ ನಿಂತಿದ್ದ. ಎಣ್ಣೆಯ ಸಮೀಪ ನಿಂತಿದ್ದರಿಂದ ಅವನನ್ನು ಎತ್ತಿ ಕೆಳಗೆ ಇಳಿಸಿದೆ. ಮತ್ತೆ ಹತ್ತಿ, ತನ್ನನ್ನು ಇಳಿಸುವಂತೆ ಹೇಳಿದ. ಸರಿ, ಎಲ್ಲ ಹುಡುಗರೂ ತನಗೂ ಹಪ್ಪಳ ನೋಡಲು ಟೇಬಲ್ ಏರಬೇಕಾಗಿದೆಯೆಂದು ಕೂಗಾಡಹತ್ತಿದರು. ಎಲ್ಲರಿಗೂ ಎತ್ತಿ ತೋರಿಸಿ ಕೆಳಗಿಳಿಸಬೇಕಾಯಿತು. ಹಪ್ಪಳಗಳು ಕರಿದು ತಯಾರಾದವು. ಎಲ್ಲರೂ ತನಗೆಂದು ತನಗೆಂದು ಅವನ್ನು ಬೇಡಿ ತಿಂದರು. ಆದರೆ ಎರಡೇ ನಿಮಿಷಗಳಲ್ಲಿ ಮಕ್ಕಳ ಕಣ್ಣು ಕೆಂಪೇರಿ ಮೂಗಿನಿಂದ ನೀರು ಸುರಿಯಲಾರಂಭಿಸಿತು. ಮೂಗೂ ಕಣ್ಣುಗಳೊಡನೆ ಸಹಕರಿಸಿತು. ದೊಡ್ಡವರ ಹೊಟ್ಟೆಯಲ್ಲಿ ಕಾಡುಗಿಚ್ಚು ಹೊತ್ತಿದಂತೆ ಆಯಿತಂತೆ!

ಅಂದಿನ ಊಟ ಬಹಳ ಸಾದಾ ಇತ್ತು. ಕೇವಲ ಹೆಂಬರಗರ್ (ಬ್ರೆಡ್ಡಿನ ತುಂಡುಗಳ ನಡುವೆ ಮಾಂಸದ ವಡೆಗಳನ್ನು ಜೋಡಿಸಿದ ಖಾದ್ಯ)ಗಳು ಇದ್ದವು.

"ಸಂಗಡ ಕುಡಿಯಲು ಏನು ಕೊಡಲಿ?" ಎಂದು ಹೆಲನ್ ನನ್ನನ್ನು ಕೇಳಿ,

"ಡಿಕ್ ಇನ್ನೂ ಚಿಕ್ಕಮಕ್ಕಳಂತೆ ಹಾಲು ಕುಡಿಯುತ್ತಾನೆ." ಎಂದು ಗಂಡನ ಗೇಲಿಮಾಡಿದಳು. ಅದಕ್ಕೆ ನಾನು

"ನಾನು ಮಗುವಿಗಿಂತ ಮಗುವಾಗಿದ್ದೇನೆ. ನಾನು ಕುಡಿಯುವಷ್ಟು ಹಾಲನ್ನು ಡಿಕ್‌ನಿಂದ ಕುಡಿಯಲಾಗುತ್ತದೊ ಇಲ್ಲವೊ. ಅಮೇರಿಕೆಗೆ ಬಂದಂದಿನಿಂದ ನನಗೆ ನೀರು ಕುಡಿದ ನೆನಪೇ ಇಲ್ಲ." ಎಂದು ಉತ್ತರಿಸಿದಾಗ ಆಕೆ ಹಿಗ್ಗಿದಳು. ತನ್ನ ಗಂಡನಂತಹ ಜನರೂ ಇದ್ದಾರೆಂದು ಸಮಾಧಾನಪಟ್ಟಿರಬೇಕು. ದೊಡ್ಡ ಶೀಸೆಯೊಂದರಲ್ಲಿ ನನಗೂ ಹಾಲು ಬಂದಿತು.

ಅಂದು ರಾತ್ರಿಯೂ 'ಟಿ.ವಿ' ಕಾರ್ಯಕ್ರಮ ಮುಗಿದ ಮೇಲೆ ಬಹಳ ಹೊತ್ತು ಮಾತನಾಡುತ್ತ ಕುಳಿತಿದ್ದೆವು. ಅಂದಿನ ತನಕ ಕೇವಲ ಔಪಚಾರಿಕವಾದ, ಸಾಮಾಜಿಕವಾದ

ಆತಿಥ್ಯ ಬೇರೆ ಬೇರೆ ಮನೆಗಳಲ್ಲಿ ನನಗೆ ದೊರಕಿತ್ತು. ಹೆಮಲಿನ್ ಕುಟುಂಬದ ಮಮತೆ, ಆತ್ಮೀಯತೆಗಳು ಬಲು ಬೇಗ ನನ್ನನ್ನು ಅವರಲ್ಲಿ ಒಬ್ಬನನ್ನಾಗಿ ಮಾಡಿದವು. ನಂತರವೂ ಒಂದೆರಡು ಸಲ ಅವರಲ್ಲಿ ಹೋಗಿದ್ದೆ. ಒಮ್ಮೆ ಹೆಮ್ಮಲಿನ್ನರು ಅಮೇರಿಕನ್ ಜಾದೂ ಆಟಕ್ಕೆ ನನ್ನನ್ನು ಕರೆದೊಯ್ದರು. ಅಮೇರಿಕನ್ನರಿಗೆ ಜಾದೂ, ಯಕ್ಷಿಣಿವಿದ್ಯೆಯಲ್ಲಿ ಬಹಳ ಆಸಕ್ತಿ. ಆದರೆ ದುರದೃಷ್ಟದಿಂದ ಒಳ್ಳೆ ಇಂದ್ರಜಾಲಿಕರು ಭಾರತದಲ್ಲಿಯೇ ಇದ್ದಾರೆ ಹೊಟ್ಟೆಗಿಲ್ಲದೆ ಅವರು ಬಳಲುತ್ತಿದ್ದರೂ ಅವರ ಕೈಚಳಕ ಮೆಚ್ಚುವಂತಹದು. ಸ್ವತಃ ಖರ್ಚಿಗೆ ಕಾಸಿಲ್ಲದಿದ್ದರೂ ರೂಪಾಯಿಯ ರಾಶಿ ತೋರಿಸುತ್ತಾರೆ. ತನ್ನ ಭವಿಷ್ಯವನ್ನು ಹೇಳಲಾರದವನು ಇತರ ಜನ್ಮಾಂತರ, ಪರಜನ್ಮಗಳ ಬಗ್ಗೆ ಹೇಳುತ್ತಾರೆ. ಈ ಅಮೇರಿಕನ್ ಜಾದೂಗಾರ ಹತ್ತಿರ ಬೆಲೆಯುಳ್ಳ ಉಡುಪುಗಳು, ವಿವಿಧ ಪ್ರಕಾರದ ಸಲಕರಣೆಗಳು ಇದ್ದರೂ ಮಾತಿನ ಮಾಯಾವಿದ್ಯೆ ನಮ್ಮ ಜಾದೂಗಾರರಂತೆ ಆತನಿಗೆ ಸಾಧಿಸಿರಲಿಲ್ಲ. ಮಾತಿನಲ್ಲಿ ಪ್ರೇಕ್ಷಕರನ್ನು ಮರುಳುಮಾಡಿ, ಕಳ್ಳಜಾಡಿನಿಂದ ಕೈಚಳಕ ಸಾಧಿಸುವ ನಮ್ಮ ಇಂದ್ರಜಾಲಿಕರೆಲ್ಲಿ? ಮಾತೇ ಆಡದ ಅಮೇರಿಕನ್ ಇಂದ್ರಜಾಲಕನೆಲ್ಲಿ? ನನಗೇನೋ ಈ ಆಟ ತೃಪ್ತಿಕರವೆನಿಸಲಿಲ್ಲ.

* * * *

ಕೆಲವೇ ತಿಂಗಳುಗಳಲ್ಲಿ ಹೆಮಲಿನ್ನರಿಗೆ ಅಲ್ಲಿಂದ 'ಲಾಸ್-ಎಂಜಿಲಿಸ್'ಗೆ (ಕೆಲಿಫೋರ್ನಿಯ) ವರ್ಗವಾಯಿತು. ನಾಲ್ಕು ಸಾವಿರ ಮೈಲು ದೂರದಲ್ಲಿದ್ದರೂ ಪತ್ರಮುಖೇನ ನಾವು ಹತ್ತಿರದಲ್ಲೇ ಇದ್ದೆವು. ಮೂರು ವರ್ಷಗಳ ನಂತರ ನನ್ನ ಓದು ಮುಗಿದು ಭಾರತಕ್ಕೆ ಮರಳಲಿದ್ದಾಗ ಅಮೇರಿಕಾ ಪ್ರವಾಸ ಕೈಕೊಂಡಿದ್ದೆ. ಆಗ ಮತ್ತೆ ಅವರನ್ನು ಭೇಟ್ಟಿಯಾಗುವ ಸದವಕಾಶ ದೊರೆಯಿತು. ಡಿಕ್‌ರು ನನ್ನನ್ನು ಸ್ವಾಗತಿಸುವದಕ್ಕಾಗಿ ಐವತ್ತು ಮೈಲು ದೂರದ ಬಸ್‌ನಿಲ್ದಾಣಕ್ಕೆ ಕಾರು ತೆಗೆದುಕೊಂಡು ಬಂದಿದ್ದರು. ಈ ಸಲದ ಅವರ ಹೊಸ ಬ್ರಿಟಿಶ್ ಕಾರು ಬೆಕ್ಕನ್ನು ಕಂಡ ಇಲಿಯಂತೆ ಓಡುತ್ತಿತ್ತು. ಜಗತ್ಪ್ರಸಿದ್ಧವಾದ ಪಾಸಡಿನ, ಹಾಲಿವುಡ್‌ಗಳನ್ನು ತೋರಿಸಿಕೊಂಡು ಮನೆಗೆ ಕರೆದೊಯ್ದರು. ಮೂರು ವರ್ಷಗಳಲ್ಲಿ ಮಕ್ಕಳೆಲ್ಲ ಬೆಳೆದು ನಿಂತಿದ್ದರು. ಆದರೆ ಹಿಂದಿನ ಗೆಳೆತನ ಮರೆತಿರಲಿಲ್ಲ. ಮನೆಗೆ ಕಾಲಿಡುತ್ತಲೇ,

"ಕ್ರಿಶ್, ನಮಗಾಗಿ ಈ ಸಲವೂ ಹಪ್ಪಳ ತಂದಿದ್ದೀಯಾ?" ಎಂದು ಡೇವ್ ಕೇಳಿದ. ಅಪರೂಪಕ್ಕೆ ಮನೆಗೆ ಬಂದ 'ಮಾಮಾ'ನನ್ನು ಸುತ್ತುವರಿಯುವಂತೆ ಈ ಮಕ್ಕಳು ನನ್ನನ್ನು ಸುತ್ತುವರಿದು ನೂರಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಡೆನಿಸ್‌ಳು ತನ್ನ ಹೊಸ ತಂಗಿಯನ್ನು ಎತ್ತಿಕೊಂಡು ಬಂದು ತೋರಿಸಿದಳು. ಮಲಗಿದ ಮಗುವನ್ನು ಎತ್ತಿದ್ದರಿಂದ ಮತ್ತು ಮಕ್ಕಳ ಕೋಲಾಹಲಕ್ಕೆ ಅದು ಅಳಲಾರಂಭಿಸಿತು. ನಾನು ಎತ್ತಿಕೊಂಡಾಗ ಮೀಸೆಯ ಈ ಅಪರಿಚಿತ ಯಾರೆಂದು ತಿಳಿಯದೇ ಅಳು ನಿಲ್ಲಿಸಿ ಪಿಳಿಪಿಳಿ ನೋಡಲಾರಂಭಿಸಿತು. ಮಕ್ಕಳಿಗೆಲ್ಲ ತಮಾಷೆಯೆನಿಸಿ ನಕ್ಕವು. ಈ ಬಾರಿಯೂ ನನ್ನನ್ನು ಕರೆದುಕೊಂಡು ಹೋಗಿ ತಮ್ಮ ಹೊಸ ಆಟಿಗೆಗಳನ್ನು ತೋರಿಸಿದವು. ಕಬಡ್ಡಿ ಆಟವನ್ನೂ ಆಡುವ ಮನಸ್ಸು ಇತ್ತು. ಆದರೆ ನನ್ನೊಡನೆ ಮಾತುಕತೆಯಾಡಲು ಆತುರಳಾದ ಹೆಲನ್ ಅಡಿಗೆ ಮನೆಗೇ ನನ್ನನ್ನು ಕರೆದುಕೊಂಡು ಹೋದಳು.

ಅಡಿಗೆಮನೆ ಅಧುನಿಕ ಸಲಕರಣೆಗಳಿಂದ ಸುಸಜ್ಜಿತವಾಗಿತ್ತು, ಅಡಿಗೆಗೆ ವಿದ್ಯುತ್

ಒಲೆ, "ಓವನ್'ಗಳು, ಪಾತ್ರೆಗಳನ್ನು ಸ್ವಚ್ಛಮಾಡಲು 'ಡಿಶ್-ವಾಶ್', ಎಲವುಗಳನ್ನು ಪುಡಿಮಾಡುವ, 'ಕ್ರಶರ್', ಮಸಾಲೆ ಅರೆಯುವ 'ಬ್ಲೆಂಡರ್'ಗಳು. ಅಡಿಗೆಗೆ ಇಟ್ಟರೆ ಅಡಿಗೆ ಸಿದ್ಧವಾದೊಡನೆ ತನ್ನಷ್ಟಕ್ಕೆ ಉಷ್ಣತೆ ನಂದಿಹೋಗುವ ವ್ಯವಸ್ಥೆಯಿತ್ತು. ಒಂದೊಂದೇ ನೋಡಿ ಪ್ರಶಂಸಿಸುತ್ತಿದ್ದೆ.

ಆದರೆ ಹೆಲನ್ ಹೇಳಿದಳು:

"ಕ್ರಿಶ್ ಇವೆಲ್ಲ ಸರಿಯಾಗಿ ನಡೆದರೇ ಚೆಂದ.... ಹೋದ ವಾರ ನನ್ನ ಗೋಳು ಹೇಳತೀರದು.

"ಏನಾಯಿತು?" ಎಂದೆ.

"ನನ್ನ ಎರಡು ಬಟ್ಟೆ ಒಗೆಯುವ ಯಂತ್ರಗಳಲ್ಲಿ ಒಂದು ಸಂಪು ಹೂಡಿಬಿಟ್ಟಿತು. ಮಕ್ಕಳಿದ್ದ ಮನೆಯಲ್ಲಿ ಒಂದು ಮಶಿನ್ ಕೆಟ್ಟರೆ ಕೈ ಮುರಿದಂತಾಗುವದೆಂದು ಮೊದಲ ಬಾರಿ ಕಂಡುಂಡೆ."

"ಹೆಲನ್, ನಿನಗೆ ಒಂದಾದರೂ ಮಶಿನ್ ಇತ್ತಲ್ಲ. ಭಾರತೀಯರಿಗೆ ಬಟ್ಟೆ ತೊಳೆಯುವ ಯಂತ್ರವಿದೆಯೆಂದು ಗೊತ್ತಿಲ್ಲ. ಅಂಥಲ್ಲಿ ಅದರ ಉಪಯೋಗವಂತೂ ದೂರವೇ ಉಳಿಯಿತು. ತುಂಬ ಮಕ್ಕಳಿದ್ದ ಮನೆಯಲ್ಲಿ ಯಂತ್ರವೇ ಇಲ್ಲದಿದ್ದರೆ ನೀನೇನು ಮಾಡಬಹುದಾಗಿತ್ತು. ಕಲ್ಪಿಸಿಕೋ?" ಸುಮ್ಮನಿರಲಾರದೇ ನಾನೂ ಕೆಣಕಿದೆ. ನನ್ನ ಮಾತುಗಳನ್ನು ಕೇಳಿ, ಹೆಚ್ಚುತ್ತಿದ್ದ ತರಕಾರಿ/ಚಾಕುಗಳನ್ನು ಅಲ್ಲೆ ಬಿಟ್ಟು ಹೆಲನ್ ಆಶ್ಚರ್ಯದಿಂದ-

"ಹಾಗಾದರೆ ನಿಮ್ಮ ಮನೆಯಲ್ಲಿ ಬಟ್ಟೆ ತೊಳೆಯುವ, ಒಣಗಿಸುವ ಯಂತ್ರ ಇಲ್ಲವೇ?.... ಬಡವರ ಮನೆಯಲ್ಲಿ ಇರಲಿಕ್ಕಿಲ್ಲ. ಆದರೆ ಉಳ್ಳವರ ಮನೆಗಳಲ್ಲಿ....? ಮಹಾರಾಜರ* ಮನೆಗಳಲ್ಲಿ ಇರಬಹುದಲ್ಲ?" ಕೇಳಿದಳು.

"ನಿಮಗೆ ಯಂತ್ರಗಳ ಸಹಾಯವಿದೆ. ನಮಗೆ ಜನಬಲವಿದೆ. ನಿಮ್ಮ ಪ್ರತಿಯೊಂದು ಒತ್ತು-ಗುಂಡಿ (push-button) ಇದ್ದಂತೆ ಮಹಾರಾಜರಿಗೆ ಸೇವಕ ಸೇವಕಿಯರಿರುತ್ತಾರೆ. 'ಮಹಾರಾಣಿ'ಯ ವೇಳೆ ಅಡಿಗೆಯವ, ಚೌಕೀದಾರ, ಮಾಲಿ, ಅಗಸ ಮುಂತಾದವರಿಗೆ ಕೆಲಸ ಒಪ್ಪಿಸುವುದರಲ್ಲೆ ಹೋಗುತ್ತದೆ." ಎಂದು ಮಹಾರಾಣಿಯ ಕಥೆ ಹೇಳಿದೆ.

"ಎಷ್ಟು ಮೋಜಿರಬೇಕು ನಿಮ್ಮ ದೇಶ! ಈ ಅಡಿಗೆಮನೆಯಿಂದ ಬಿಡುಗಡೆಗಿಂತ ಹೆಚ್ಚಿನ ಸೌಖ್ಯ ಇನ್ನಿಲ್ಲ. ಕ್ರಿಶ್, ನೀನು ಭಾರತಕ್ಕೆ ಹೋದರೆ ನಾಲ್ಕೈದು ಸೇವಕರನ್ನಾದರೂ ಇಡುವಿಯಾ? ನಿನ್ನ ಸಂಬಳವೆಲ್ಲ ಅವರಿಗೇ ಹೋಗುವುದಲ್ಲ?" ಎಂದು ಕೇಳಿ ನಾನೂ ಒಬ್ಬ ಮಹಾರಾಜರ* ವರ್ಗಕ್ಕೇ ಸೇರಿದವನೋ ಅಥವಾ ಬಡವರ ಗುಂಪಿಗೆ ಸೇರಿದವನೋ ಪರೀಕ್ಷಿಸಿದಳು. ಅದಕ್ಕೆ ನಾನು ನಗುತ್ತ-

---

* ಭಾರತದ ಮಹಾರಾಜ-ಮಹಾರಾಣಿಯರೆಂದರೆ ಅಮೇರಿಕನ್ನರಿಗೆ ಮೇರೆ ಇಲ್ಲದ ಕುತೂಹಲ. ಇವರೆಲ್ಲ ಅಗರ್ಭ ಶ್ರೀಮಂತರೆಂದೂ, ಸಕಲ ಐಶ್ವರ್ಯೋಪಭೋಗ ಗಳನ್ನು ಅನುಭವಿಸುವ ವರ್ಗವೆಂದು ಸಾಮಾನ್ಯ ನಂಬಿಕೆಯಿದೆ. ಇಲ್ಲಿ ಮಹಾರಾಜ ಎಂಬ ಶಬ್ದ ಭಾರೀ ಶ್ರೀಮಂತ ಎನ್ನುವ ಅರ್ಥದಲ್ಲಿ ಬಳಸಲಾಗಿದೆ.

"ನೀವೇನು ಯಂತ್ರಕ್ಕೆ ಖರ್ಚು ಮಾಡುವದಿಲ್ಲವೇ? ನಮ್ಮಲ್ಲಿ ಮಾನವ-ಯಂತ್ರಗಳು ಇವುಗಳಿಗಿಂತ ಅಗ್ಗವಾಗಿವೆ. ತಿಂಗಳಿಗೆ ನಾಲ್ಕು ಡಾಲರ್ ಕೊಟ್ಟರೆ ಅಡಿಗೆಯವಳು ಅಡಿಗೆ ಮಾಡಿಟ್ಟು ಹೋಗುತ್ತಾಳೆ. ನಾಲ್ಕು ಡಾಲರ್ ಕೊಟ್ಟರೆ ಆಳೊಬ್ಬ ಸಿಗುತ್ತಾನೆ. ಎರಡು ಡಾಲರಿಗೆ ಪಾತ್ರೆ ತಿಕ್ಕುವವಳು ಸುಲಭವಾಗಿ ದೊರೆಯುತ್ತಾಳೆ" ಎಂದು ಹೇಳಿದರೂ, ನನ್ನ ಈ ನಕ್ಕ ನಗೆಯ ಒಳಗೆ ನನ್ನ ದೇಶದ ದಾರುಣ ಬಡತನದ ಸಾವಿರ ಚೇಳುಗಳು ಕಡಿದಂತಾಗುತ್ತಿತ್ತು. ಅದನ್ನೆಲ್ಲ ಸಹಿಸಿ, ಈ ಅಗ್ಗ ಕೂಲಿಗೆ ಆ ಬಡತನವೇ ಕಾರಣ ಎಂದು ಮಾತ್ರ ಬಾಯಿಬಿಡಲಿಲ್ಲ. ನನ್ನ ಈ ಮಾತನ್ನು ನಂಬುವದು ಹೆಲನ್‌ಳಿಗೆ ಅಸಾಧ್ಯವಾಯಿತು. ಆದರೂ ಆತುರತೆಯಿಂದ-

"ಡಿಕ್, ಡಿಕ್, ನೀನೂ ಭಾರತದಲ್ಲಿ ಒಂದು ನೌಕರಿಯನ್ನು ಹುಡುಕಬಾರದೆ? ನಾವೂ ಮಹಾರಾಜರಂತೆ ಇರಬಹುದು!" ಎಂದು ಹೊರಗಿದ್ದ ಗಂಡನನ್ನು ಕೂಗಿ ಹೇಳಿದಳು. ಡಿಕ್ ಇದೇನು ತಮಾಷೆಯೆಂದು ಒಳಗೆ ಬಂದರು. ಅವರಿಗೂ ಆಕೆ ಈ ಆಳುಗಳ ಸೌಲಭ್ಯವನ್ನು ತಿಳಿಸಿದಾಗ ಆಶ್ಚರ್ಯವೆನಿಸಿತು.

"ಓಹೋ! ನಿಮಗೇನು ಭಾರತದಲ್ಲಿ ನೌಕರಿ ಸಿಗಬಹುದು. ಆದರೆ ಸಂಬಳ ಮಾತ್ರ ಇಲ್ಲಿಯ ಒಂದು ಹತ್ತಾಂಶವೂ ಸಿಗಲಿಕ್ಕಿಲ್ಲ. ನೀವಿಲ್ಲಿ ಕೆಲಸ ಮಾಡುವ ಕಂಪನಿಯೇ ನಿಮ್ಮನ್ನು ಭಾರತಕ್ಕೆ ಕಳಿಸಿದರೆ ಮಾತ್ರ ನೀವು ನಿಜಕ್ಕೂ ಮಹಾರಾಜರಂತೆ ಬಾಳಬಹುದು." ಎಂದು ಉತ್ತರಿಸಿದೆ.

ಹೆಲನ್ನರಿಗೆ ಇದು ಅಸಾಧ್ಯ ಮಾತೆಂದು ಗೊತ್ತಿದ್ದರಿಂದ,

"ನನಗೆ ಆಳುಗಳಿಂದ ಕೆಲಸ ಮಾಡಿಸುವ ಭಾಗ್ಯವಿಲ್ಲದಿದ್ದರೂ ಆ ಭಾಗ್ಯ ಪಡೆದು ಬಂದವರ ದೇಶವನ್ನಾದರೂ ನೋಡುವ ಆಶೆ ಉತ್ಕಟವಾಗಿದೆ. ನಮ್ಮನ್ನು ಎಂದು ಭಾರತಕ್ಕೆ ಕರೆದುಕೊಂಡು ಹೋಗುತ್ತೀ ಕ್ರಿಶ್?" ಎಂದು ಕೇಳಿದಳು.

"ಕ್ರಿಶ್‌ನ ಪರಿಚಯವಾದಾಗಿನಿಂದ ನನಗೂ ಭಾರತಕ್ಕೆ ಹೋಗಬೇಕೆಂದಿದೆ. ನೋಡೋಣ, ಒಂದು ವಾರದ ರಜೆ ತೆಗೆದುಕೊಂಡಿದ್ದೇನಲ್ಲ, ಹಾಯಾಗಿ ಕುಳಿತು ಅದರ ಬಗ್ಗೆ ವಿಚಾರಿಸೋಣಂತೆ." ಎಂದು ಡಿಕ್ ರಾಗ ಎಳೆದ.

ಹರಟೆಯ ನಡುವೆ ಅಡಿಗೆ-ಊಟಗಳು ಸಾಗಿದವು. ನನ್ನ ವಿಶ್ರಾಂತಿಗೆಂದು ಹೆಮಲಿನ್ನರು ತಮ್ಮ ಸ್ವಂತದ ಕೋಣೆಯನ್ನು ತೆರವು ಮಾಡಿದ್ದರು. ನಾನು ಎಷ್ಟು ಬೇಡವೆಂದರೂ ಅಲ್ಲಿಯೇ ಮಲಗಬೇಕೆಂದು ಪಟ್ಟುಹಿಡಿದರು. ತಾವು ಮಕ್ಕಳೊಡನೆ ಮಲಗಿದರು. ಭಾರತಕ್ಕೆ ಹೋದ ಮೇಲೆ ಮಹಾರಾಜನಾಗುತ್ತೇನೋ, ಮತ್ತೇನಾಗತ್ತೇನೋ ಎಂದು ಹೇಳಲಾಗದಿದ್ದರೂ ಇಲ್ಲಿ ಅಮೇರಿಕನ್ ದಂಪತಿಗಳಿಂದ ಮಾತ್ರ ನನಗೆ ಮಹಾರಾಜರ ಸತ್ಕಾರ, ಸ್ವಾಗತ ದೊರೆಯಿತು!

ಬೆಳಿಗ್ಗೆ ಎಚ್ಚರವಾದದ್ದು ಮಕ್ಕಳು ಬಾಗಿಲನ್ನು ನೂಕಿದಾಗ, ಬಾಗಿಲು ತೆರೆಯುತ್ತವೇ ಎಲ್ಲ ಹುಡುಗರೂ ಒಳಗೆ ಬಂದು ಮಂಚವೇರಿದವು. ಕೋಲಾಹಲವೇ ಕೋಲಾಹಲ. ಒಬ್ಬನು ತನ್ನನ್ನೆತ್ತಿಕೋ ಎಂದರೆ, ಇನ್ನೊಬ್ಬಳು 'ಉಪ್ಪುಮರಿ' ಮಾಡು ಎನ್ನುವಳು. ಚಿಕ್ಕ ಡೆನಿಸ್ ಬಂದು ನನ್ನ ಕೆನ್ನೆಗೆ ಮುತ್ತು ಕೊಟ್ಟು,

"ಕ್ರಿಶ್, ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದಳು. ನಾನು ಎದ್ದು ಕೂದಲು ಹಿಕ್ಕಿಕೊಳ್ಳುತ್ತಿರುವಾಗ ಡಾಯೆನಾ ಬಂದು ಅಪ್ಪಿಕೊಂಡಳು.

"ಕ್ರಿಶ್, ನೀನು ನಮ್ಮ ಎರಡನೇ ತಂದೆಯಂತೆ. ಆದ್ದರಿಂದ ನಾವೆಲ್ಲ ನಿನ್ನನ್ನು ಪ್ರೀತಿಸುತ್ತೇವೆ." ಎಂದಳು. ಅದು ಮುಗ್ಧ ಮಾತಾಗಿದ್ದರೂ ನನ್ನ ಪ್ರೌಢಮತಿಗೆ ಸರಿಬೀಳದ್ದರಿಂದ ಮಾತು ಬದಲಿಸಿದೆ. ಅಷ್ಟರಲ್ಲಿ ಶಾಲೆಗೆ ಹೋಗಲು ಸಿದ್ಧರಾಗಿರೆಂದು ತಾಯಿಯ ಆಜ್ಞೆ ಬಂದಿತು. ಎಲ್ಲರೂ ಬರುವ ಮೋಟಾರಿಗಾಗಿ ಕಾಯಲು ಸಿದ್ಧರಾದರು. ಮೋಟಾರು ಬಿಡುವ ತನಕ ಜೊತೆಗೆ ಇರೆಂದು ಎಲ್ಲ ಹುಡುಗರು ಆಗ್ರಹಪಡಿಸಿದವು. ಒಪ್ಪಿ ಹೊರಟಾಗ ತಾನು-ತಾನೆಂದು ಕೈ ಹಿಡಿಯಲು ಎಳೆದಾಡಿದವು. ಕೊನೆಗೆ ಎರಡು ಕೈಗಳನ್ನು ಮೂವರು ಹಿಡಿದು ಹೊರಟರು. ಇದನ್ನು ನೋಡುತ್ತ ನಿಂತ ಹೆಲನ್-

"ಕ್ರಿಶ್, ನಿನಗೆ ಮದುವೆಯಾಗದಿದ್ದರೂ ಮಕ್ಕಳನ್ನು ಸಂಬಾಳಿಸಿಕೊಂಡು ಹೋಗುವ ಕಲೆ ಸಾಧಿಸಿದೆ. ಡಿಕ್‌ನಿಗೆ ಇದಾವುದೂ ಸೇರುವುದಿಲ್ಲ. ನಿನ್ನ ಪತ್ನಿಯಾಗುವವಳು ಪಡೆದುಬಂದಿರುತ್ತಾಳೆ." ಎಂದು ಹೊಗಳಿದಳು.

ಮೋಟಾರು-ನಿಲ್ದಾಣದಲ್ಲಿ ಕೆಲವು ತಾಯಂದಿರು ತಮ್ಮತಮ್ಮ ಮಕ್ಕಳೊಂದಿಗೆ ಬಂದು ನಿಂತಿದ್ದರು. ಅವರೆಲ್ಲ ಮಕ್ಕಳಿಂದ ಹೆಮಲಿನ್ನರ ಮನೆಯಲ್ಲಿ 'ಕ್ರಿಶ್' ಬರುವವನಿದ್ದಾನೆಂದು ಮೊದಲೇ ತಿಳಿದುಕೊಂಡಿದ್ದರು. ಅವರೆಲ್ಲರ ಪರಿಚಯವೂ ಆಯಿತು. ಅಷ್ಟರಲ್ಲಿ ಬಸ್ ಬಂದಿದ್ದರಿಂದ ಹುಡುಗರೆಲ್ಲ ಅದರಲ್ಲಿ ಹತ್ತಿದರು. ಬಸ್ಸು ಕಣ್ಮರೆಯಾಗುವ ತನಕ ಪುಟ್ಟಪುಟ್ಟ ಕೈಗಳು ಕಿಟಕಿಯ ಹೊರಗೆ ಬೀಸುತ್ತಲೇ ಇದ್ದವು.

ಮಧ್ಯಾನ್ಹ ಊಟದ ನಂತರ ನನಗೆ ವಿಶ್ರಮಿಸಲು ಹೇಳಿದರು. ಏನೋ ಓದುತ್ತ ಬಿದ್ದುಕೊಂಡಿದ್ದೆ. ಸ್ವಲ್ಪ ಹೊತ್ತಿನೊಳಗೆ ಹುಡುಗರು ತಿರುಗಿ ಬಂದರು. ಡೇವ್ ಕಳೆದ ಮೂರು ದಿನಗಳಿಂದ ಸ್ವೆಟರನ್ನು ಶಾಲೆಯಲ್ಲಿ ಮರೆತು ಬಂದಿದ್ದನಂತೆ. ದಿನಾಲು ತಾಯಿ ನೆನಪು ಮಾಡುತ್ತಿದ್ದಳು. ಇಂದೂ ಹೊರಡುವ ಮುನ್ನ ಸ್ವೆಟರನ್ನು ಮರೆಯಬೇಡ ವೆಂದು ಹೇಳಿದ್ದಳು. ಆದರೂ ಸ್ವೆಟರ್ ಮನೆಗೆ ಬಂದಿರಲಿಲ್ಲ! ತಾಯಿ ಬೇಸತ್ತು.

"ಕ್ರಿಶ್, ನಿಮ್ಮಲ್ಲಿ ಹುಡುಗರು ಹೀಗೆ ಮಾಡಿದರೆ ತಾಯಿ ಏನು ಮಾಡುತ್ತಾಳೆ?" ಎಂದು ಕೇಳಿದಳು.

"ಮರೆತ ಸಾಮಾನು ತರದಿದ್ದರೆ ಅಂದು ಊಟವಾಗಲೀ, ತಿಂಡಿಯಾಗಲಿ ದೊರೆಯುವದಿಲ್ಲವೆಂದು ಬಜಾಯಿಸುತ್ತಾಳೆ" ಎಂದೆ, ಹೆಲನ್ನಳಿಗೆ ಈ ಉಪಾಯ ಸರಿಕಂಡಿರಬೇಕು. ಡೇವನನ್ನು ಕರೆದು ಸ್ವೆಟರ್ ಬಿಟ್ಟು ಬಂದದ್ದಕ್ಕೆ ಸಂಜೆಯ ತಿಂಡಿ ಆತನಿಗೆ ಸಿಗಲಿಕಿಲ್ಲವೆಂದು ಹೇಳಿದಳು. ಒಂದು ತಾಸಿನೊಳಗೆ ಸ್ವೆಟರ್ ಮನೆಗೆ ಬಂದಿತು! ನಮ್ಮ ನಿರೀಕ್ಷೆ ಮೀರಿ ಡೇವ್ ಓಡುತ್ತಲೇ ಶಾಲೆಗೆ ಹೋಗಿ ಅದನ್ನು ತಿರುಗಿ ತಂದಿದ್ದ. ಹೆಲನ್ ಸಂತೋಷದಿಂದ,

"ಕ್ರಿಶ್, ನಿನ್ನ ಉಪಾಯ ಫಲಿಸಿದೆ (Krish, it works)" ಎಂದಳು.

"ಮಕ್ಕಳಿಗೆ ಇದರಿಂದ ತೊಂದರೆಯಾದರೂ ಪಾಠ ಕಲಿಯುತ್ತಾರೆ." ನಾನೆಂದಾಗ ಎಲ್ಲರೂ ಒಪ್ಪಿದರು.

ಹುಡುಗರು ಬಟ್ಟೆ-ಬರೆ ಬದಲಿಸಿ ಆಟದ ತೋಟಕ್ಕೆ ನನ್ನನ್ನು ಕರೆದುಕೊಂಡು ಹೋದರು. ಜೋಕಾಲಿ, ಜಾರುಬಂಡಿಗಳ ಆಟವಾಯಿತು. ಖೋ, ಖೋ ಆಟ ಅವರಿಗೆ ಕಲಿಸಿದೆ. ಕುಂಟಾಟವನ್ನೂ ಹೇಳಿಕೊಟ್ಟೆ. ಅಷ್ಟರಲ್ಲಿ ಕಾಫಿಗೆ ಕರೆ ಬಂದಿತು. ಕಾಫಿ ಕುಡಿಯಲು ಕುಳಿತಾದ ಏಳು ವರ್ಷದ ಡಾಯೆನಾ,

"ಮೊಮ್, ನಾನು ಕ್ರಿಶ್‌ನನ್ನು ಬಹಳ ಪ್ರೀತಿಸುತ್ತೆನೆ. ನನಗವನು ಬಹಳ ಸೇರುತ್ತಾನೆ. ನಾನು ಅವನನ್ನೇ ಮದುವೆಯಾಗುತ್ತೇನೆ!" ಎಂದಳು. ಆ ಮಾತಿಗೆ ನಾವೆಲ್ಲ ಬೆಪ್ಪಾದೆವು.

"ನೀನೆಷ್ಟು ಸುಂದರಳಿದ್ದಿ ಡಾಯೆನಾ, ನನ್ನಂತಹ ಕಪ್ಪು ಬಣ್ಣದವನನ್ನು ಹೇಗೆ ಮದುವೆಯಾಗುವಿ?" ಎಂದು ನಾನು ಕೇಳಿದಾಗ,

"ನೀನು ಕಪ್ಪೇನಲ್ಲ. ಗೋದಿಯ ಬಣ್ಣ, ನಿನ್ನ ಬಣ್ಣ ನನಗೆ ಬಹಳ ಸೇರುತ್ತದೆ." ಎಂದು ಉತ್ತರಿಸಿದಳು. ನಾನು,

"ನೀನು ನನ್ನನ್ನು ಮದುವೆಯಾಗಲು ಒಪ್ಪಿದ್ದಿ. ಆದರೆ ನಾನು ನಿನ್ನನ್ನು ಒಪ್ಪಿಕೊಂಡಿದ್ದೇನೆಯೇ ಎಂದು ಕೇಳಲೇ ಇಲ್ಲವಲ್ಲ?" ಎಂದು ಚೇಷ್ಟೆಮಾಡಿದೆ. ಡಾಯೆನಾ,

"ನೀನು ನಮ್ಮನ್ನೆಲ್ಲ ಎಷ್ಟೊಂದು ಪ್ರೀತಿಸುತ್ತಿ. ನನ್ನನ್ನು ಮದುವೆಯಾಗು ಎಂದು ಕೇಳಿಕೊಂಡರೆ ಆಗುವದಿಲ್ಲವೇ? ಎಂದು ಯಾವ ಸಂಶಯವೂ ಇಲ್ಲದೆ ಸರಳವಾಗಿ ಕೇಳಿದ ಈ ಮುಗ್ಧ ಪ್ರಶ್ನೆಗೆ ಎಲ್ಲರೂ ಹೊಟ್ಟೆ ಬಿಗಿಹಿಡಿದು ನಕ್ಕರು, ನಾನು,

"ಹೋಗಲಿ ನಾನು ಒಪ್ಪಿಕೊಂಡೆ ಎಂದೇ ಇಟ್ಟುಕೊಳ್ಳೋಣ, ನಾನೆಷ್ಟು ದೊಡ್ಡವ; ನೀನಾದರೂ ಚಿಕ್ಕವಳು, ನಮ್ಮ ಮದುವೆ ಹೇಗೆ ಆಗಬೇಕು?" ಎಂದು ಮತ್ತೆ ಕೇಳಿದೆ. ಡಾಯೆನಾ,

"ನಾನೇನು ಯಾವಾಗಲೂ ಚಿಕ್ಕವಳಾಗಿಯೇ ಉಳಿಯುತ್ತೇನೆಯೇ? ನಾನೂ ದೊಡ್ಡವಳಾದ ಮೇಲೆ ಕಾರು ತೆಗೆದುಕೊಂಡು ಭಾರತಕ್ಕೆ ಬರುತ್ತೇನಂತೆ. ಅಲ್ಲಿ ಇಬ್ಬರೂ ಮದುವೆಯಾಗೋಣ." ಎಂದಳು.

ಕೊನೆಯ ವಾದದಲ್ಲಿ ನಾನೇ ಸೋಲಬೇಕಾಯಿತು.

ಆದರೆ, ಎಲ್ಲಿ ಈ ಹುಡುಗಿ ದೊಡ್ಡವಳಾದ ಮೇಲೆ ಭಾರತಕ್ಕೆ ಹೊರಟೇ ಬಂದುಬಿಡುತ್ತಾಳೋ ಏನೋ! ಎಂಬ ಒಂದು ಭಯ ಒಳಗೇ ಕಟ್ಟಾಡಿಸಿತು.

ಡಿಕ್‌ರಿಗೆ ಭಾರತಕ್ಕೆ ಹೋಗುವ ವಿಚಾರ ತುಂಬ ಒಪ್ಪಿಗೆಯಾಯಿತೆಂದು ಕಾಣುತ್ತದೆ. ಅಂತೆಯೇ ಪ್ರಶ್ನೆ ಹಾಕಿ ಹಾಕಿ ಮಾಹಿತಿ ಸಂಗ್ರಹಿಸಲಾರಂಭಿಸಿದರು. ಟ್ರೆವಲ್ ಏಜಂಟರೊಬ್ಬರ ಬಳಿ ಕರೆದುಕೊಂಡು ಹೋದರು. ಆತನಿಂದ ಭಾರತದ ಬಗ್ಗೆ ಇದ್ದ ಸಾಹಿತ್ಯವನ್ನು ರಾಶಿ ರಾಶಿ ಸಂಗ್ರಹಿಸಿ ತಂದರಲ್ಲದೇ ಪಾಸ್‌ಪೋರ್ಟಗಾಗಿ ಅರ್ಜಿಯನ್ನು ಸಲ್ಲಿಸಿದರು. ನಾವೆಯಲ್ಲಿ ಭಾರತಕ್ಕೆ ಹೋಗುವ ಸಾಹಸವನ್ನು ಮಾಡಿದ್ದರಂತೆ, ಅದಕ್ಕಾಗಿ ಐವತ್ತು ಘೂಟಿನ ಸುಸಜ್ಜಿತ ನಾವೆಯೊಂದನ್ನು ಕೊಳ್ಳುವ ವಿಚಾರವೂ ಇತ್ತು ಅವರಿಗೆ. ಹೆಂಡತಿಗೆ 'ಸಮುದ್ರ-ಬೇನೆ' (see sickness) ಇದ್ದುದ್ದರಿಂದ ಆ ವಿಚಾರ ಬಿಟ್ಟುಕೊಡಬೇಕಾಯಿತು.

ಅನಂತರ ಕಾರಿನ ವಿಚಾರ ಬಂತಂತೆ. ಹಲವಾರು ನಕಾಶೆಗಳ ಅಭ್ಯಾಸವನ್ನೂ ನಡೆಸಿದ್ದರು. ಅವರ ಉತ್ಸಾಹವನ್ನು ನೋಡಿ ನಾಳೆಯೇ ಭಾರತಕ್ಕೆ ಹೊರಡುತ್ತಾರೇನೋ ಎಂದು ಹೆದರಿಬಿಟ್ಟಿದ್ದೆ. (ಅವರಿಗೆ ರಜೆ ದೊರೆಯದಿದ್ದರಿಂದ ಭಾರತದ ಪ್ರವಾಸ ಮುಂದೆ ಬಿತ್ತೆಂದು ನಂತರ ಅವರ ಪತ್ರ ಬಂದಿತ್ತು.)

ರಾತ್ರಿ ಊಟಕ್ಕೆ ಕುಳಿತಾಗ ಮಕ್ಕಳೆಲ್ಲ ಮಲಗಿದ್ದರಿಂದ ಸೊಂಪಾಗಿ ಮಾತು ಸಾಗಿತ್ತು. ಮಾತನಾಡುತ್ತ ಆಡುತ್ತ ವಿಷಯ ಸಾವಕಾಶವಾಗಿ ಭಾರತೀಯ ಮಹಿಳೆಯತ್ತ ತಿರುಗಿತು.

"ಮಹಿಳೆಯರಿಗೆ ಎಂತಹ ಸಾಮಾಜಿಕ-ಜೀವನ (social-life) ಇದೆ ನಿಮ್ಮ ದೇಶದಲ್ಲಿ?" ಹೆಲನ್ ಕೇಳಿದಳು.

"ನಿಮ್ಮ ಜೀವನಕ್ಕೂ ಭಾರತೀಯ ಮಹಿಳೆಯ ದೈನಂದಿನ ಜೀವನಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿಯಂತೆ ಅಡಿಗೆಗೆ ಬೇಕಾಗುವ ಜೀನಸುಗಳೆಲ್ಲ ಪೊಟ್ಟಣಗಳಲ್ಲಿ ಸಿಗದ್ದರಿಂದ ಧಾನ್ಯ ಸ್ವಚ್ಛ ಮಾಡುವಲ್ಲಿಂದ ಹಿಡಿದು ಆಕೆ ಪ್ರತಿಯೊಂದು ಕೆಲಸವನ್ನೂ ತಾನೇ ಮಾಡಬೇಕಾಗುತ್ತದೆ. ಅವಳ ಕೆಲಸದ ಯಂತ್ರ ಬೆಳಗ್ಗಿನಿಂದ ರಾತ್ರಿಯವರೆಗೂ ಬಿಡದೇ ನಡೆದಿರುತ್ತದೆ. ಚಹ, ಕಾಫಿ, ಊಟ, ತಿಂಡಿ, ನೀರು, ಅಡಿಗೆ, ಬಟ್ಟೆ ಒಗೆತ, ಗುಡಿಸುವುದು. ಸಾರಿಸುವುದು ಎಲ್ಲವೂ ಮನೆಯವಳ ಜವಾಬ್ದಾರಿ. ಇವುಗಳ ನಡುವೆ ಸಿಕ್ಕ ಅಲ್ಪ ವೇಳೆಯಲ್ಲಿ ನೆರೆಮನೆಗೆ ಹೋಗಿ ಅಡಿಗೆ, ಮದುವೆ, ಮುಂಜಿವೆಗಳ ಮಾತು-ಕತೆಯಾಡಿದಳೆಂದರೆ ಅಷ್ಟೇ ಮನರಂಜನೆ ಅವಳಿಗೆ. ತನ್ನ ಗಂಡ ಮತ್ತು ಮಕ್ಕಳ ಸುಖವೇ ತನ್ನ ಸುಖವೆಂದು ನಂಬಿದ ಭಾರತೀಯ ನಾರಿಗೆ ತನ್ನ ಜೀವನದ ಬಗ್ಗೆ ಮರುಕವಿಲ್ಲ. ಸಮಾಧಾನವಿದೆ." ನಾನು ತಿಳಿಸಿದೆ.

ಸಂಭಾಷಣೆಯಲ್ಲಿ ಹೆಲನ್ ಮಾ, ರೋಜಮಾ (ಹಾಗೆಂದು ಹೆಲನ್‌ಳ ತಾಯಿಯನ್ನೂ, ಡಿಕ್ಕರ ತಾಯಿಯನ್ನೂ ನಾನು ಕರೆಯುತ್ತಿದ್ದೆ) ಭಾಗವಹಿಸಿದ್ದರು. ಹೆಲನ್‌ಮಾಳಿಗೆ ತನ್ನ ಬಾಲ್ಯದ ನೆನಪಾಗಿರಬೇಕು. ಆಕೆಯೆಂದರು:

"ಕ್ರಿಶ್, ನಾನು ಸಣ್ಣವಳಿದ್ದಾಗ ನೀನು ಈಗ ವರ್ಣಿಸಿದ ಜೀವನವೇ ನಮ್ಮದೂ ಆಗಿತ್ತು. ನನ್ನ ತಂದೆ ಒಕ್ಕಲಿಗನಾಗಿದ್ದ. ಆತ ಹೊಲದಲ್ಲಿದ್ದಾಗ ನಾನು ಬುತ್ತಿಯನ್ನು ತೆಗೆದುಕೊಂಡು ಹೋಗುತ್ತಿದ್ದೆ. ಕುದುರೆಯ ಮೈ ತೊಳೆಯುವುದು ಮನೆಗೆ ಸುಣ್ಣಬಣ್ಣ ಹಚ್ಚುವದು, ಇವೆಲ್ಲ ನನ್ನ ಪ್ರೀತಿಯ ಕೆಲಸಗಳಾಗಿದ್ದವು. ಈಗಿನಂತೆ ಆಹಾರದ ಪೊಟ್ಟಣಗಳು ಆಗ ದೊರೆಯುತ್ತಿರಲಿಲ್ಲ. ನಾವೇ ಕಾಳು-ಕಡಿ ಆರಿಸಿ, ಬೀಸಿ ಹಿಟ್ಟುಮಾಡಿ, ತಿಂಡಿ ತಿನಸುಗಳನ್ನು ಮಾಡಬೇಕಾಗಿತ್ತು. ಈಗ ನೀನು ಕಾಣುತ್ತಿರುವ ಅಮೇರಿಕನ್ ಜೀವನವೆಲ್ಲ ಇತ್ತೀಚಿನದು. ದ್ವಿತೀಯ ಮಹಾಯುದ್ಧದ ನಂತರದ ಬೆಳವಣಿಗೆಯಿದು. ಈ ಬದಲಾವಣೆ ಹುಡುಗರ ಸಮಸ್ಯೆಗಳಿಗೆ ಕಾರಣವಾಗಿದೆ."

"ನಮ್ಮಲ್ಲಿ ಮಕ್ಕಳೆಲ್ಲ ಮನೆಗೆಲಸದ ಎಷ್ಟೋ ಜವಾಬ್ದಾರಿಗಳನ್ನು ಹೊರಬೇಕಾಗುತ್ತದೆ. ಅಂಗಡಿಗಳಿಗೆ ಹೋಗಿ ಸಾಮಾನು ತರುವದಾಗಲಿ, ಧಾನ್ಯ ಬೀಸಿಸಿಕೊಂಡು ಬರುವದಾಗಲಿ, ಇತರ ಚಿಕ್ಕಪುಟ್ಟ ಕೆಲಸಗಳಲ್ಲಾಗಲಿ ಸಹಾಯ ಮಾಡುತ್ತಾರೆ. ಇದರಿಂದ ತಾಯಿಗೆ ಸಹಾಯವಾಗುವದಲ್ಲದೇ ಮಕ್ಕಳ ಹೊಣೆಗೇಡಿತನಕ್ಕೆ ಅವಕಾಶವಿರುವುದಿಲ್ಲ" ಎಂದೆ. ಅದಕ್ಕೆ ಹೆಲನ್‌ಮಾ.

"ನೀನು ಹೇಳುವುದು ಅಕ್ಷರಶಃ ಸತ್ಯವಿದೆ ಕ್ರಿಶ್. ನಮ್ಮ ವೇಳೆಯೆಲ್ಲ ಕೆಲಸದಲ್ಲಿ ಹೋಗುತ್ತಿತ್ತು. ಹೀಗಾಗಿ ಇಂದಿನ ಹುಡುಗರ ಎಷ್ಟೋ ತಿಳಗೇಡಿ ಚಟುವಟಿಕೆಗಳು ನಮ್ಮ ಕಲ್ಪನೆಯಲ್ಲೂ ಬರುವಂತಿರಲಿಲ್ಲ. ಇಂದು ಮನೆಗೆರಡು ಕಾರು, ವಾರಕ್ಕೆ ಬೇಕಾಗುವ ತಿಂಡಿಗಳನ್ನು ಇಡಲು 'ರಿಫ್ರಿಜೆರೇಟರ್' ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು, ಮನೆ ಸ್ವಚ್ಛಮಾಡಲು ಮಶಿನ್‌ಗಳು ಇರಬೇಕಾದರೆ ಮನೆಯ ಯಜಮಾನಿ, ಬೆನ್ನು ಮುರಿದುಹೋಗುವಷ್ಟು ದುಡಿಯಬೇಕಾಗಿಲ್ಲ. ತಾಯಿಗೆ ಸಾಕಷ್ಟು ಕೆಲಸವಿಲ್ಲದಿರುವಾಗ ಮಕ್ಕಳಿಗೆಲ್ಲಿಂದ ಬರಬೇಕು? ಇಷ್ಟು ಸಾಲದೆಂಬಂತೆ ಧನಸಂಪಾದನೆಯ ಸವಲತ್ತುಗಳೂ ಇವೆ. ಮಕ್ಕಳಿಗೆ ಆರ್ಥಿಕ ಸ್ವಾತಂತ್ರ್ಯ ಬಂದಾಗಿನಿಂದ ನಮ್ಮ ಕೌಟುಂಬಿಕ ಜೀವನಕ್ಕೆ ಬಲವಾದ ಆಘಾತವುಂಟಾಗಿದೆ. ತಂದೆ-ತಾಯಿಗಳು ಸುಖಲೋಲುಪರಾದಾಗ ಮಕ್ಕಳೂ ಇಲ್ಲಸಲ್ಲದ ಹುಡುಗಾಟಿಕೆಯಲ್ಲಿ ತೊಡಗಿರುತ್ತವೆ" ಎಂದಳು. ಹೆಲನ್ ನಡುವೆ ತನ್ನದೊಂದು ಮಾತು ಸೇರಿಸಿ,

"ಇಂದಿನ ಜಗತ್ತಿನಲ್ಲಿ ನಮ್ಮ ಜೀವನವನ್ನು ನಾವೇ ರೂಪಿಸಿಕೊಳ್ಳುವಂತೆಯಿಲ್ಲ. ನಮ್ಮ ಸುತ್ತ ಸಮಾಜ ಅಧಿಕಾರ ನಡೆಸಿರುತ್ತದೆ... ನೋಡು ಕ್ರಿಶ್, ನಮ್ಮ ಮಕ್ಕಳನ್ನು ಕಾಮಪ್ರಚೋದನೆಯೇ ಮುಖ್ಯವಾದ ಟಿ.ವಿ ಯಿಂದ ದೂರ ಇಡಬೇಕೆಂದು ಮೊದಲಿನಿಂದಲೂ ನಿರ್ಧರಿಸಿ ಎಷ್ಟೋ ವರ್ಷ ನಾವು ಟಿ.ವಿ ಸೆಟ್‌ಕೊಳ್ಳಲಿಲ್ಲ. ಶಾಲೆಗೆ ಹೊಗುತ್ತಿದ್ದ ಮಕ್ಕಳು.

"ಡೆಡ್, ನಮ್ಮಲ್ಲಿ ಏಕೆ ಟಿ.ವಿ ಇಲ್ಲ? ಜಾನ್‌ನ ಮನೆಯಲ್ಲಿದೆ, ಟಿಮ್‌ನ ಮನೆಯಲ್ಲಿದೆ. ಎಲ್ಲರ ಮನೆಯಲ್ಲೂ ಇದೆ, ನಮ್ಮಲ್ಲಿ ಏಕೆ ಇಲ್ಲ?.... ಇಂದು ಆರು ಗಂಟೆಗೆ 'ಕಾಮಿಕ್ಸ್' ಇದೆಯಂತೆ. ನಾವು ಜಾನ್‌ನ ಮನೆಗೆ ಹೋಗಿ ನೋಡಬಹುದೇ?" ಎಂದು ಕೇಳಿದವು. ಇನ್ನೊಮ್ಮೆ,

"ನಾವು ಟಿ.ವಿ ಕೊಳ್ಳಲಿಕ್ಕೆ ಆಗದಷ್ಟು ಬಡವರೇ?" ಎಂದು ಕೇಳಿದವು. ಅವು ಹಾಗೆಂದಾಗ ಎಲ್ಲಿಲ್ಲದ ಕೋಪ ಬಂದಿತ್ತು. ಇನ್ನೊಬ್ಬರ ಮನೆಗೆ ಹೋಗಿ ನೋಡಲೇ ಎಂದಾಗ ಸಿಟ್ಟು ಪರಾಕಾಷ್ಠೆ ಮುಟ್ಟಿತ್ತು. ಆಧುನಿಕ ಮನೋವಿಜ್ಞಾನದ ಪ್ರಕಾರ ಮಕ್ಕಳ ಮೇಲೆ ಸಿಟ್ಟಿಗೆದ್ದರೆ ಅವುಗಳ ಮಾನಸಿಕ ಬೆಳವಣಿಗೆಗೆ ಧಕ್ಕೆ ತಗಲುತ್ತದಂತೆ. ದೈಹಿಕ ಶಿಕ್ಷೆಯೂ ಕೇಡು ಮಾಡುತ್ತದಂತೆ. ಆದ್ದರಿಂದ ಮಕ್ಕಳ ಮನ ಒಲಿಸಲು,

"ಟಿ.ವಿ ನೋಡಬಾರದು. ಅದು ಒಳ್ಳೆಯದಲ್ಲ. ಆದ್ದರಿಂದ ನಮ್ಮಲ್ಲಿ ಇಟ್ಟಿಲ್ಲ. ನೀನು ಜಾನ್‌ನ ಮನೆಗೆ ಹೋಗಿ ಟಿ.ವಿ. ನೋಡುವುದು ಬೇಡ" ಎಂದಾಗ ಡೇವ್ ಪಟ್ಟು ಹಿಡಿದು ಕುಳಿತ. ಎಷ್ಟು ತಿಳಿಹೇಳಿದರೂ ಆತನ ಮನಸ್ಸನ್ನು ಒಲಿಸುವುದು ಸಾಧ್ಯವಾಗದ್ದರಿಂದ ಚರ್ಮದ ಪಟ್ಟಿಯಿಂದ ಎರಡು ಬಿಗಿದೆ. ಸರಿ, ಅಷ್ಟಕ್ಕೆ ಹುಡುಗ ತುಂಬ ಸಾಧುವಾದನಲ್ಲದೇ ತಿರುಗಿ ಟಿ.ವಿಯ ಮಾತು ಕೂಡ ಎತ್ತಲಿಲ್ಲ!" ಎಂದಳು.

ಇಷ್ಟೊತ್ತು ಭಾರತದ ನಕಾಶೆ ತಿರುವಿ ಹಾಕುತ್ತಿದ್ದ ಡಿಕ್ ಈಗ ಸಂಭಾಷಣೆಯಲ್ಲಿ ಬಂದು ಸೇರಿದರು. ಆಗ ಹೆಲನ್,

"ಡಿಕ್, ಇಂದು ಮಧ್ಯಾಹ್ನ ಒಂದು ಮೋಜಾಯಿತು. ಡೇವ್, ನಾಲ್ಕು ದಿನಗಳಿಂದ ಸ್ವೆಟರನ್ನು ಶಾಲೆಯಲ್ಲಿ ಮರೆತುಬರುತ್ತಿದ್ದನಲ್ಲವೇ? ಇಂದು ಕ್ರಿಶ್ ಸೂಚಿಸಿದಂತೆ, ಸ್ವೆಟರ್ ತರದಿದ್ದರೆ ಸಂಜೆಯ ತಿಂಡಿಯಿಲ್ಲವೆಂದು ಹೇಳಿಬಿಟ್ಟೆ, ಡೇವ್ ಓಡುತ್ತೇವೆ ಶಾಲೆಗೆ ಹೋಗಿ ಸ್ವೆಟರ್ ತಂದ! ಈ ಭಾರತೀಯ ಮಂತ್ರ ಒಳ್ಳೇ ಸಹಾಯಕ್ಕೆ ಬಂದಿತು."

ಎನ್ನುತ್ತ ಕಪಾಟಿನ ಮೇಲಿದ್ದ ಎರಡು ಬೆರಳಗಲದ ಪಟ್ಟಿಯನ್ನು ತೋರಿಸಿ ನನ್ನನ್ನುದ್ದೇಶಿಸಿ,

"ಕೆಲವೊಮ್ಮೆ ಮಕ್ಕಳು ನಮ್ಮ ಮಾತು ಕೇಳದಿದ್ದರೂ ಇದರ ಮಾತನ್ನು ಕೇಳುತ್ತವೆ." ಎಂದಳು, ಡಿಕ್ಕರು,

"ಕ್ರಿಶ್, ಭಾರತದಲ್ಲಿ ಮಕ್ಕಳಿಗೆ ದೇಹದಂಡನೆ ಕೊಡುತ್ತಾರೆಯೇ?" ಎಂದು ಕೇಳಿದರು.

"ಮಾತಿನಿಂದ ತಿಳಿದುಕೊಳ್ಳಲಾರದವನಿಗೆ ಬೆತ್ತದಿಂದ ಹೇಳಿಕೊಡಬೇಕಾಗುತ್ತದೆ. ನಿಮ್ಮ ದೇಶದಲ್ಲಿಯೂ ಬೆತ್ತದ ಅವಶ್ಯಕತೆ ಬಹಳವಿದೆಯೆಂದು ನನಗನಿಸುತ್ತದೆ. ದಂಡನೆಯಿಲ್ಲದಿದ್ದರೆ ಮಕ್ಕಳು ಯಾರಿಗೂ ಹೆದರುವುದಿಲ್ಲ. ನಮ್ಮ ಆಫೀಸಿನ ಟೈಪಿಸ್ಟಳಿಗೆ ಮೂವರು ಮಕ್ಕಳು. ಬರುವಾಗ ಮಕ್ಕಳನ್ನು ಕರೆದುಕೊಂಡೇ ಬರುತ್ತಾಳೆ. ಭಯಂಕರ ಗದ್ದಲ ಹಾಕುತ್ತವೆ ಹುಡುಗರು. ತಾಯಿ ಒಂದೇ ಸವನೆ ಮೆಲುದನಿಯಲ್ಲಿ ಸುಮ್ಮನಿರುವಂತೆ ಬೇಡಿಕೊಳ್ಳುತ್ತಾಳೆ. ಅವು ಕಿವಿಗೊಡುವುದೇ ಇಲ್ಲ. ಒಮ್ಮೆ ತಮ್ಮತಮ್ಮಲ್ಲಿ ಕಾದಾಡಿ ನಮ್ಮ ಅಲ್‌ಮೈರಾದ ದೊಡ್ಡ ಕನ್ನಡಿಯನ್ನು ಒಡೆದು ಹಾಕಿದವು. ತಾಯಿ ಆಗಲೂ ಒಂದೆರಡು ಮಾತನಾಡಿ ಸುಮ್ಮನಿರಬೇಕೇ? ಆ ಹುಡುಗರೂ ಏನೂ ಆಗಿಲ್ಲವೆಂಬಂತೆ ತಮ್ಮ ಕಾಳಗವನ್ನು ಮುಂದುವರಿಸಿದವು." ನಾನೆಂದಾಗ,

"ಅವಳು ಅವರಿಗೆ ದೈಹಿಕ ದಂಡನೆ ವಿಧಿಸಿದ್ದರೆ ಇಷ್ಟೆಲ್ಲ ತೊಂದರೆ ಕೊಡತ್ತಿರಲಿಲ್ಲವೆಂದು ನಿನಗನಿಸುತ್ತದೆಯೇ?" ಡಿಕ್ ಕೇಳಿದ.

"ನಿಸ್ಸಂಶಯವಾಗಿ! ನನ್ನ ಪ್ರಾಧ್ಯಾಪಕ, ಮೆಕ್ ಎಂಡ್ರೂಸರು ಒಂದು ಘಟನೆಯನ್ನು ಹೇಳುತ್ತಿದ್ದರು. ಅವರು ಒಮ್ಮೆ ಕೆಲವು ಕುಟುಂಬಗಳೊಡನೆ 'ಪಿಕ್‌ನಿಕ್'ಗೆ ಹೋಗಿದ್ದರಂತೆ. ಜಾನ್ ದಂಪತಿಗಳಿಗೆ ಏಳೆಂಟು ವರ್ಷದ ಒಬ್ಬಳೇ ಮಗಳಂತೆ. ಹೀಗಾಗಿ ಅವಳನ್ನು ತುಂಬ ಮುದ್ದಿಸಿ, ಒಂದಿಷ್ಟೂ ನೋಯಿಸದೆ ಬೆಳಸಿದ್ದರಂತೆ, ಹುಡುಗಿ ಕಾಡಾನೆಯಂತೆ ಬೆಳದಿದ್ದಳಲ್ಲದೆ ತನ್ನ ವಯಸ್ಕರನ್ನು ಹೊಡೆಯುವುದು, ಬಡಿಯುವುದು ಮಾಡುತ್ತಿದ್ದಳು. ಹಾದಿಯುದ್ದಕ್ಕೂ ಆಕೆ ಕಿಡಿಗೇಡಿತನ ಮಾಡಿದರೂ ತಂದೆ-ತಾಯಿ ಪಿಟ್ಟೆನ್ನಲಿಲ್ಲವಂತೆ. ಮೆಕ್ ಎಂಡ್ರೂಸರಿಗೆ ಇದು ಸಹನವಾಗದಿದ್ದರೂ ಸುಮ್ಮನಿದ್ದರು. ಮಂಡಳಿ ಊಟಕ್ಕೆ ಕುಳಿತಾಗ ಹುಡುಗಿ ಇತರ ಮಕ್ಕಳ ಎಲೆಗಳಲ್ಲಿ ಮಣ್ಣು ತೂರಿದಳಂತೆ. ಊಟವಾದ ಮೇಲೆ ಹುಡುಗರೆಲ್ಲ ಕೆಲವರು ಸರೋವರದ ದಂಡೆಯಲ್ಲಿ ನಿಂತು ತೆರೆಗಳನ್ನು ನೋಡುತ್ತಿದ್ದಾಗ ಆ ಹುಡುಗಿ ಹಿಂದಿನಿಂದ ಹೋಗಿ ಇನ್ನೊಬ್ಬ ಹುಡುಗಿಯನ್ನು ನೂಕಿ ಬಿಟ್ಟಳಂತೆ! ಸಿಟ್ಟಿನಿಂದ ಕೆಂಡಕೆಂಡವಾದ ಮೆಕ್ ಎಂಡ್ರೂಸರು ಓಡಿ ಹೋಗಿ ಆ ಹುಡುಗಿಯನ್ನು ಹಿಡಿದು ನಾಲ್ಕಾರು ಏಟುಗಳನ್ನು ಬಿಗಿದರು. ಹುಡುಗಿಯ ಪಾಲಕರು 'ನಮ್ಮ ಹುಡುಗಿಯನ್ನು ದಂಡಿಸುವ ಅಧಿಕಾರ ನಿಮಗಿಲ್ಲ' ಎಂದು ತಡೆಯಲು ಬಂದರಂತೆ. "ನೀವು ಒಂದು ಹೆಜ್ಜೆ ಮುಂದಿಟ್ಟರೆ ನಿಮಗೂ ಏಟು ಬಿದ್ದಾವು" ಎಂದು ಗುಡುಗಿ ಪ್ರಾಧ್ಯಾಪಕರು ಹುಡುಗಿಗೆ ಮತ್ತೆರೆಡು ಏಟು ಬಿಗಿದು "ನೀನು ಸರಿಯಾಗಿ ನಡೆದುಕೊಳ್ಳದಿದ್ದರೆ ಇನ್ನೊಂದು ಅರ್ಧ ತಾಸಿಗೆ ಬಂದು ನಿನ್ನ ಬೆನ್ನ ಮೂಳೆ ಮುರಿದುಬಿಡುತ್ತೇನೆ"ಂದು ಗದ್ದರಿಸಿ ತಮ್ಮ ಕುಟುಂಬದೊಡನೆ ತಿರುಗಿ ಬಂದರಂತೆ. ಮರುದಿನ ತಮ್ಮ ಇನ್ನೊಬ್ಬ ಗೆಳೆಯನಿಗೆ ಆ

ಹುಡುಗಿಯ ಬಗ್ಗೆ ವಿಚಾರಿಸಿದರು; ಓ! ನೀನು ಹೊರಟು ಹೋದ ಮೇಲೆ ಆ ಹುಡುಗಿ ದೇವಿಯಂತೆ (angel) ನಡೆದುಕೊಂಡಳು!" ಎಂದು ಟಾಮ್ ಉದ್ಗರಿಸಿದನಂತೆ. ಅತಿ ಸಲಿಗೆ ಹುಡುಗರನ್ನು ಕೆಡಿಸುತ್ತದೆ ಎನ್ನುವದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ?" ನಾನು ಉದಾಹರಣೆ ಕೊಟ್ಟು ವಿವರಿಸಿದೆ.

"ನೀನು ಹೇಳುವುದು ಸರಿ ಕ್ರಿಶ್. ಆದರೆ ಇದಕ್ಕೆ ನಮ್ಮ ಸಮಾಜದ ಅನುಮೋದನೆಯಿಲ್ಲ. ನಿನಗೆ ಟಿ.ವಿಯ ವಿಷಯ ಹೇಳುತ್ತಿದ್ದೆನಲ್ಲವೇ? ಮಕ್ಕಳು ಟಿ.ವಿಯ ಗೊಡವೆ ಬಿಟ್ಟರು. ಆದರೆ ನಮ್ಮ ಸಂಸ್ಥೆಗಳು ನಮ್ಮನ್ನು ಬಿಡಬೇಕಲ್ಲ? ಒಂದು ದಿನ ಶಿಕ್ಷಕಿಯು ಯಾವದೋ ಟಿ.ವಿ ಕಾರ್ಯಕ್ರಮ ನೋಡಿ ಅದರ ಬಗ್ಗೆ ಒಂದು ಪ್ರಬಂಧವನ್ನು ಬರೆಯಲು ಹೇಳಿದ್ದಳು. ನಮ್ಮಲ್ಲಿ ಟಿ.ವಿ ಇಲ್ಲದ್ದರಿಂದ ಮಕ್ಕಳಿಂದ ಆ ಮನೆಗೆಲಸ ಪೂರೈಸಲಾಗಲಿಲ್ಲ. ಮರುದಿನ ಶಿಕ್ಷಕಿಯಿಂದ ಕರೆ ಬಂದಿತು. ಟಿ.ವಿಯ ಬಗ್ಗೆ ನಮ್ಮ ವಿರೋಧವನ್ನು ವ್ಯಕ್ತಪಡಿಸಿದಾಗ ಶಿಕ್ಷಕಿ ತಲೆಯಲ್ಲಾಡಿಸಿ, ತನ್ನ ಕೈಯಲ್ಲಿ ಏನೂ ಇಲ್ಲವೆಂದೂ ಮೇಲಧಿಕಾರಿಗಳ ನಿರ್ದೇಶನದಂತೆ ತಾನು ಪಾಠ ಕೊಡುತ್ತಿರುವುದಾಗಿ ತಿಳಿಸಿದಳು. ಉಪಾಯವಿಲ್ಲದೇ ನಾವೂ ಟಿ.ವಿ ತರಬೇಕಾಯಿತು; ತಂದೆವು. ಆದರೆ ಮಕ್ಕಳು ಶೈಕ್ಷಣಿಕ ಕಾರ್ಯಕ್ರಮಗಳನ್ನಷ್ಟೇ ನೋಡಬೇಕೆಂದು ಕಡ್ಡಾಯ ಮಾಡಿಬಿಟ್ಟಿದ್ದೇವೆ." ಹೆಲನ್ ಅಷ್ಟರಲ್ಲೆ ತಿದ್ದಿಕೊಂಡಳು.

"ನಿಮ್ಮ ಧೋರಣೆ ನೋಡಿ ನನಗೆ ಬಹಳ ನೆಮ್ಮದಿಯೆನಿಸಿದೆ. ನಿಮ್ಮಂತೆ ಹೆಚ್ಚಿನ ಅಮೇರಿಕನ್ನರ ಧೋರಣೆಯಿದ್ದರೆ ನಿಮ್ಮ ದೇಶ ಇನ್ನೂ ಉನ್ನತಿಯ ಹಾದಿಯಲ್ಲಿ ಇರುತ್ತಿತ್ತು." ನಾನೂ ಒಂದು ಉಪದೇಶಕೊಟ್ಟೆ. ಎಲ್ಲರೂ ಮೌನವಾಗಿ ಸಮ್ಮತಿ ಸೂಚಿಸಿದರು. ಎಲ್ಲರೂ ತಮ್ಮ ತಮ್ಮ ಕೋಣೆಗಳಿಗೆ ಮರಳಿದರು. ನಾಲ್ಕೈದು ದಿನ ಹೆಮಲಿನ್‌ರೊಂದಿಗೆ ಇದ್ದು ಅವರ ಆತಿಥ್ಯ ಪಡೆದೆ. ನನಗೆ ಗೊತ್ತಿದ್ದ ಕೆಲ ಭಾರತೀಯ ಅಡಿಗೆ ತಿಂಡಿಯನ್ನು ಮಾಡಿ ಅವರಿಗೆ ಬಡಿಸಿದೆ. ಆ ನಾಲ್ಕೈದು ದಿನಗಳು ನಾಲ್ಕೈದು ನಿಮಿಷಗಳಂತೆ ಕಳೆದವು. ನಾನು ಹೊರಟು ನಿಂತಾಗ ಹೆಲನ್ನಳ ಕಂಠ ತುಂಬಿ ಬಂದಿತ್ತು.

"ಕ್ರಿಶ್, ನೀನು ಬಲು ಬೇಗ ನಮಗೆ ಸಮೀಪದವನಾದೆ. ನೀನು ನನ್ನ ತಮ್ಮನಂತೆ ನನಗೆ ಭಾಸವಾಗುತ್ತಿದೆ... ಇನ್ನೂ ಕೆಲ ದಿನ ನೀನು ಇಲ್ಲಿ ನಿಲ್ಲುವಂತಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!" ಎಂದು ದಾರಿಯಲ್ಲಿ ತಿನ್ನುವದಕ್ಕೆಂದು 'ಸೆಂಡ್‌ವಿಚ್', ಗೇರು-ಬೀಜಗಳನ್ನು ಕಟ್ಟಿಕೊಟ್ಟಳು. ಊರಲ್ಲಿಯ ನನ್ನ ಅಕ್ಕಂದಿರು ತೋರಿಸುವ ಮಮತೆಗೆ ಯಾವುದರಲ್ಲೂ ಕಡಿಮೆಯಾಗಿರಲಿಲ್ಲ. ನನ್ನ ಬಸ್ಸು ಮಧ್ಯರಾತ್ರಿ ಹೊರಡಲಿತ್ತು. ನಾನು ಹೊರಟಾಗ ಮಕ್ಕಳೆಲ್ಲ ಮಲಗಿದ್ದರು. ಮರುದಿನ ಎದ್ದಾಗ ನಾನಿಲ್ಲದ್ದು ನೋಡಿ ಮಕ್ಕಳಿಗೆ ನಿರಾಶೆಯಾಯಿತೆಂದು ಹೆಲನ್ನಳ ಪತ್ರ ತಿಳಿಸಿತು.

* * *

ಲೇಖನಿಯ ಸ್ನೇಹಿತೆ

ಅನೇಕ ವರ್ಷಗಳ ಪತ್ರವ್ಯವಹಾರದ ನಂತರ ಸಮಕ್ಷಮ ಭೆಟ್ಟಿಯಾಗುವ ಸುಸಂಧಿ ದೊರಕಿದಾಗ ಆಗುವ ಸ್ಥಿತಿ ಜೇನ್ ರೊಥಳನ್ನು ಭೆಟ್ಟಿಯಾದಾಗ ನಾನು ಅನುಭವಿಸಿದೆ. ಭಾರತದಲ್ಲಿದ್ದಾಗಲೇ ಪತ್ರ ಮೂಲಕವಾಗಿ ಪ್ರಾರಂಭವಾದ ಸ್ನೇಹ ಅಮೇರಿಕೆಗೆ ಹೋದ ಮೇಲೂ ಮುಂದುವರಿಯಿತು. ಅಮೇರಿಕೆಗೆ ಹೋದೊಡನೆ ಅವಳನ್ನು ಭೆಟ್ಟಿಯಾಗುವ ಇಚ್ಛೆಯಾದರೂ ಆಕೆ ಸಾಯರೆಕ್ಯೂಸಿನಿಂದ ಮೂರು ಸಾವಿರ ಮೈಲು ದೂರದಲ್ಲಿ ಇರುತ್ತಿದ್ದರಿಂದ ಮತ್ತೆ ಮೂರು ವರ್ಷ ನಮ್ಮ ಪತ್ರಸ್ನೇಹ ಅದೇ ರೂಪದಲ್ಲಿ ಮುಂದುವರಿಯಬೇಕಾಯಿತು. ಕೊನೆಗೊಮ್ಮೆ ನಾನು ಅಮೇರಿಕೆಯನ್ನು ಸುತ್ತಾಡಲು ಹೋದಾಗ ಆಕೆಯ ಊರಾದ 'ಸ್ವೀಟ್ ಹೊಮ್' (Sweet Home)ಕ್ಕೆ ಹೋಗುವ ಸದವಕಾಶ ದೊರೆಯಿತು. ಭೆಟ್ಟಿಯಾದಾಗ ಇಬ್ಬರಿಗೂ ಹೇಗೆ ಮಾತನ್ನು ಆರಂಭಿಸಬೇಕೆಂದು ಹೊಳೆಯಲಿಲ್ಲ. ಭೆಟ್ಟಿಯಾದ ಸಂತೋಷದಲ್ಲಿ ಸುಮ್ಮನೆ ಸ್ವಲ್ಪ ಹೊತ್ತು ನೋಡುತ್ತ ನಿಂತೆವು. ಮಾತು ಪ್ರಾರಂಭವಾದಾಗ ಅದು ಕೊನೆಯ ಪತ್ರದ ಉತ್ತರರೂಪವನ್ನು ಧರಿಸಿಕೊಂಡು ಬಂತು.

ಶ್ರೀಮತಿ ಜೇನ್‌ರೊಥ್ ಮಧ್ಯಮ ವಯಸ್ಸಿನ ಮೂರು ಮಕ್ಕಳ ತಾಯಿ. ವೃತ್ತಿಯಿಂದ ಅವರು ಒಕ್ಕಲಿಗರು. ವಿರಾಮದ ದಿನಗಳಲ್ಲಿ ಆಕೆಯ ಗಂಡ ಜೇಕ್ ಕಟ್ಟಿಗೆಯ ಕಾರಖಾನೆಯಲ್ಲಿ ಕೆಲಸ ಮಾಡುತ್ತಾನೆ. ಅವರಿಗೆ ನಾಲ್ವತ್ತು ಎಕರೆ ಹೊಲವಿದೆ. ಸಾಗುವಳಿಗೆ ಬೇಕಾದ ಎಲ್ಲ ಯಂತ್ರಸಾಮಾಗ್ರಿಗಳಿವೆ. ಹಾಲಿಗಾಗಿ ಆಕಳುಗಳನ್ನು ಸಾಕಿದ್ದಾರೆ. ತಂದೆ, ತಾಯಿ, ಮಕ್ಕಳು ಕೂಡಿ ಹೊಲದಲ್ಲಿ ದುಡಿಯುತ್ತಾರೆ. ಜೊತೆಗೆ ವಿವಿಧ ಪ್ರಕಾರದ ಕಾಯಿಪಲ್ಲೆಗಳನ್ನು ತಮ್ಮಲ್ಲಿ ಬೆಳೆಸಿ ಡಬ್ಬಿಗಳಲ್ಲಿ ಕಾಯ್ದಿಡುತ್ತಾರೆ, ಚಳಿಗಾಲಕ್ಕೆಂದು. ತಮಗೆ ಹೆಚ್ಚಾಗಿ ಉಳಿದ ಕಾಯಿಪಲ್ಲೆ ಹಣ್ಣುಗಳನ್ನು ನೆರೆಹೊರೆಯವರಿಗೆ ಕೊಟ್ಟು ತಮಗೆ ಬೇಕಾದ ಜೀನಸುಗಳನ್ನು ಕೊಳ್ಳುತ್ತಾರೆ. ಊರಿನ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ನೆರೆಹೊರೆಯವರಿಗೆ ಅನೇಕ ವಿಧದಲ್ಲಿ ಸಹಾಯಮಾಡುತ್ತಾರೆ.

ಜೇನಳ ವಂಶಜರು ಫ್ರೆಂಚರಂತೆ. ಮೆಥಡಿಸ್ಟ ಪಂಗಡಕ್ಕೆ ಸೇರಿದ ಪ್ರೊಟೆಸ್ಟಂಟರು ಇವರು, ತುಂಬ ಧಾರ್ಮಿಕರು, ತುಂಬ ಸಾದಾ ಸರಳ ಜೀವನ ನಡೆಸುತ್ತಿದ್ದ ರೊಥ್ ಕುಟುಂಬ ಅಮೇರಿಕನ್ನರಿಗೆ ಸಹಜವಾದ ಬಾಹ್ಯಾಡಂಬರದಿಂದ ದೂರ ಇದ್ದದ್ದು, ಸದಿಚ್ಛೆಯಿಂದಲೇ ಬಡವರಾಗಿ ಉಳಿದಿದ್ದಾರೆ. ವೇಳೆ ಸಿಕ್ಕಾಗಲೆಲ್ಲ ಜೇನಳು ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಾಳೆ. ಅನೇಕ ಮಹಿಳಾ–ಮಂಡಲಗಳ ಸಂಪರ್ಕ ವಿಟ್ಟುಕೊಂಡಿದ್ದಾಳೆ. ಆಗಾಗ ಹೋಗಿ ಭಾಷಣ ಕೊಡುತ್ತಾಳೆ. ಕುಟುಂಬದೊಡನೆ ಆಗಾಗ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಬರುತ್ತಾಳೆ. ಅನೇಕ ಜನ ಭಾರತೀಯ ಮತ್ತು ಜಪಾನೀ ಲೇಖನಿಯ ಸ್ನೇಹಿತರಿದ್ದಾರೆ ಆಕೆಗೆ. ಬೆಳಿಗ್ಗೆ ಕುಟುಂಬದ ಯೋಗ–ಕ್ಷೇಮು, ಮನೆಗೆಲಸಗಳಿಗೆ ಲಕ್ಷ್ಯಗೊಡುವ ಮೊದಲು, ಪತ್ರ ಬರೆಯುಲು ಸ್ವಲ್ಪ ವೇಳೆ ಮೀಸಲಿಡುತ್ತಾಳಂತೆ. ಆಮೇಲೆ ಸ್ವತಃ ಆಕಳುಗಳನ್ನು ಹಿಂಡಿ ಬಕೆಟ್‌ಗಟ್ಟಲೆ ಹಾಲು ತರುತ್ತಾಳೆ. ಆ ಹಾಲನ್ನೆಲ್ಲ ಒಂದೇ ದಿನದಲ್ಲಿ ಮುಗಿಸುವದರಿಂದ ಜೇನಳ ಕುಟುಂಬವೆಲ್ಲ

ಪೈಲವಾನರದಾಗಿದೆ. ಸಾಲದ್ದಕ್ಕೆ ಇಬ್ಬರು ಸಣ್ಣ ಮಕ್ಕಳನ್ನು ಸಾಕಲು ತೆಗೆದುಕೊಂಡಿದ್ದಾಳೆ. ಕುದುರೆ, ನಾಯಿ, ಬೆಕ್ಕುಗಳನ್ನು ಸಾಕಿದ್ದಾಳೆ. ಎಲ್ಲವನ್ನು ಯೇಸುಕ್ರಿಸ್ತನೇ ತನ್ನಿಂದ ಮಾಡಿಸುತ್ತಾನೆ! ಎಂದು ದೃಢವಾಗಿ ನಂಬಿದ್ದಾಳೆ.

ತನ್ನ ದೇವರು, ಧರ್ಮಗಳಲ್ಲಿ ಹೆಚ್ಚಾಗಿ ವಿಶ್ವಾಸವಿಟ್ಟು ಜೀನಳಿಗೆ ಇತರ ಧರ್ಮದ ಬಗ್ಗೆಯೂ ತಿಳಿದುಕೊಳ್ಳುವ ಕುತೂಹಲ ಸಾಕಷ್ಟಿದೆ. ನಾನಲ್ಲಿ ಹೋದ ಸಂಜೆ ಮಾಮೂಲಿ ಮಾತುಕತೆ ನಡೆದವು. ಮರುದಿನ ರವಿವಾರವಾದ್ದರಿಂದ ಅವರೆಲ್ಲ ಚರ್ಚಿಗೆ ಹೋಗಲಿದ್ದರು. ನಾನೂ ಅವರೊಡನೆ ಹೋದೆ. ಅಂದು ವಿಶಿಷ್ಟ ಅಡಿಗೆಯಿದ್ದುದರಿಂದ ಜೀನ್ ಭರದಿಂದ ಅಡಿಗೆಗೆ ತೊಡಗಿದಳು. ನನಗಾಗಿ ಅಡಿಗೆಯ ಮನೆಯಲ್ಲೇ ಕುರ್ಚಿ ಹಾಕಿದಳು. ಸರಿ, ಮಾತಿಗಾರಂಭವಾಯಿತು;

"ಕ್ರಿಶ್, ನಿಮ್ಮ ದೇವಾಲಯಕ್ಕೂ ನಮ್ಮ ಚರ್ಚಿಗೂ ಅಂತರವಿರಬಹುದಲ್ಲವೇ?"

"ಬಹಳ ಅಂತರವಿದೆ. ನಿಮ್ಮ ಹಿಂದಿನ ಚರ್ಚುಗಳು ಹೇಗೆ ಇದ್ದವೊ ಗೊತ್ತಿಲ್ಲ. ಆಧುನಿಕ ಚರ್ಚುಗಳಂತೂ ಅಮೇರಿಕನ್ನರ ಬೆಡಗು, ಬಿನ್ನಾಣಗಳನ್ನು ಪ್ರದರ್ಶಿಸುವ ಸ್ಥಳಗಳಾಗಿವೆ. ಜನರೆಲ್ಲ ಕ್ಲಬ್‌ಗೋ, ಪಾರ್ಟಿಗೋ ಹೋಗುವವರಂತೆ ಎಚ್ಚರದಿಂದ ಶೃಂಗರಿಸಿಕೊಂಡು, ಆತ್ಮವನ್ನು ಮನೆಯಲ್ಲಿಯೇ ಬಿಟ್ಟು ಒಬ್ಬರನ್ನು ಇನ್ನೊಬ್ಬರು ಭೇಟ್ಟಿಯಾಗುತ್ತ 'ಹಾಯ್ ಹಾಯ್' ಎನ್ನುತ್ತ ಪಾದ್ರಿಗಳು ಹೇಳಿದ ರಾಜಕಾರಣದ ಭಾಷಣಗಳನ್ನು ಕೇಳಿ, ತುಂಬಿದ ಕಿಸೆಯನ್ನು ಖಾಲಿಮಾಡಿಕೊಂಡು ಬರುತ್ತಾರೆ. ಜನರಿಗೆಲ್ಲ ಅತ್ಯವಶ್ಯಕವಾದ ಆಧ್ಯಾತ್ಮಕತೆಯ ಒಂದಂಶವಾದರೂ ನಿಮ್ಮ ಚರ್ಚುಗಳಲ್ಲಿ ದೊರೆಯುವುದಿಲ್ಲ. ನಮ್ಮಲ್ಲೂ ದೇವರನ್ನು ಭೇಟ್ಟಿಯಾಗುವ ಕಾಲಕ್ಕೆ ದೇವಸ್ಥಾನಕ್ಕೆ ಹೋಗಿಬರುವವರಿದ್ದಾರೆ. ಆದರೆ ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಜೀವನಕ್ಕೆ ದೇವಾಲಯ ಕೇಂದ್ರವಾಗಿದೆ."

"ಚರ್ಚುಗಳಿಗೆ ಹೆಸರಿಡಲು ನೀನೆಷ್ಟು ಚರ್ಚುಗಳಿಗೆ ಹೋಗಿ ಬಂದಿದ್ದೀಯಾ?"

"ಭಾರತದಲ್ಲಿದ್ದಾಗ ನಾಲ್ಕೈದು ಚರ್ಚುಗಳಿಗೆ ಹೋಗಿ ಬಂದಿದ್ದೇನೆ. ಸಾಯರೆಕ್ಯೂಸಿಗೆ ಬಂದ ನಂತರ ಹತ್ತಿಪ್ಪತ್ತು ಸಲ ಬೇರೆ ಬೇರೆ ಚರ್ಚುಗಳಿಗೆ ಹೋಗಿ ಬಂದಿದ್ದೇನೆ. ಅಲ್ಲದೇ ಎರಡು ಬಾರಿ ಸೋಡಸ್ (ನ್ಯೂಯಾರ್ಕ)ದ ಪಾದ್ರಿಗಳೊಬ್ಬರ ವೈಯಕ್ತಿಕ ಅತಿಥಿಯಾಗಿ ಹೋಗಿದ್ದೆ. ಹೀಗಾಗಿ ಚರ್ಚಿನ ಆಗು–ಹೋಗುಗಳನ್ನೆಲ್ಲ ಕಣ್ಣಾರೆ ಕಂಡು ನಿರ್ಣಯಿಸುವ ಧೈರ್ಯಮಾಡಿದ್ದೇನೆ. ಚರ್ಚಿನ ಬೋಧನೆಯೆಲ್ಲ ಬಹಳ ಸಂಕುಚಿತ ದೃಷ್ಟಿಕೋನವುಳ್ಳದ್ದಾಗಿದೆ. ನಾನು ಕೇಳಿದ ಕೆಲವು ದೃಷ್ಟಾಂತಗಳನ್ನು ಕೊಡಲೇ?

ಇಂದು ನಾವು ಇಪ್ಪತ್ತನೆಯ ಶತಮಾನದಲ್ಲಿದ್ದೇವೆ. ಈ ಶತಮಾನದಲ್ಲಿ ಆದಷ್ಟು ವಿಜ್ಞಾನದ ಪ್ರಗತಿ ಹಿಂದೆಂದೂ ಆಗಿಲ್ಲ. ಮಾನವನು ಕೆಳಮಟ್ಟದ ಪಶುಪಕ್ಷಿಗಳಿಂದ ಉತ್‌ಕ್ರಾಂತಿ (evolution) ಹೊಂದುತ್ತ ಸದ್ಯದ ಸ್ವರೂಪ ತಳೆದಿದ್ದಾನೆಂದು ಪ್ರಾಣಿಶಾಸ್ತ್ರಜ್ಞರು ಸಿದ್ಧಪಡಿಸಿದ್ದಾರಷ್ಟೆ? ಆದರೆ ನಿಮ್ಮ ಉಪದೇಶಕರು ಇನ್ನೂ 'ಆ್ಯಡಂ' ಮತ್ತು 'ಈವ್'ರ ಕತೆಯನ್ನು ಪುನರುಚ್ಚರಿಸುತ್ತ ನಾವೆಲ್ಲ ಅವರ ಮರಿಮಕ್ಕಳೆಂದು ಒತ್ತಿ ಹೇಳುತ್ತಾರೆ. ಬಾಯಬಲ್‌ದಲ್ಲಿ ಬರೆದದ್ದೆಲ್ಲ ವೇದವಾಕ್ಯವೆಂದು ಖಂಡಿತ ನಂಬಿದಂತೆ ಇರುತ್ತದೆ ಅವರ ಧ್ವನಿ.

ಚರ್ಚಿನ ಬಹಳಷ್ಟು ಪ್ರವಚನಗಳು ಸಿರಿವಂತಿಕೆಯೆಂದರೆ ದೇವರ ಕೃಪಾ ಕಟಾಕ್ಷದ ಸೂಚಕವೆಂದು ನಂಬಿದಂತೆ ಇರುತ್ತದೆ. ಹೀಗಾಗಿ ದೇವರ ಸಾನ್ನಿಧ್ಯ ಪಡೆಯಲು ಜನ

ಹೆಚ್ಚೆಚ್ಚು ಧನಸಂಪಾದನೆಯಲ್ಲಿ ತೊಡಗಿದರೆ ಆಶ್ಚರ್ಯವಿಲ್ಲ. ಧನದ ರೂಪದಲ್ಲಿ ದೇವರು ಹೀಗೆ ಸಹಾಯ ಮಾಡುತ್ತಾನೆಂಬುದರ ಬಗ್ಗೆ ಹತ್ತಾರು ಕತೆಗಳನ್ನು ಕೇಳಿದ್ದೇನೆ. ಎಲ್ಲ ಕತೆಗಳಲ್ಲೂ ಪ್ರಾರಂಭದಲ್ಲಿ ನಾಯಕ-ನಾಯಿಕೆಯರು ಮೊದಲು ನಾಸ್ತಿಕರಿದ್ದು ಚರ್ಚಿಗೆ ಹೋಗುತ್ತಿರುವುದಿಲ್ಲ. ಆದ್ದರಿಂದ ಬಹಳ ಕಷ್ಟದಿಂದ, ಬಡತನದಿಂದ ಜೀವನ ನಡೆಸುತ್ತಿರುತ್ತಾರೆ. ಒಮ್ಮೆ ಇವರಿಗೆ ಯೇಸುಕ್ರಿಸ್ತನು ಕನಸಿನಲ್ಲಿ ಬಂದೊ, ಅಥವಾ ಪಾದ್ರಿಯೊಬ್ಬ ಭೆಟ್ಟಿಯಾಗಿಯೋ ಇವರಿಗೆ ಚರ್ಚಿಗೆ ಹೋಗ ಹೇಳಿ ಅವರ ವೈಯಕ್ತಿಕ ಕಷ್ಟಗಳನ್ನು ದೇವರಲ್ಲಿ ಅರುಹಲು ಆಜ್ಞೆ ಕೊಡುತ್ತಾರೆ. ಅವರು ಅದರಂತೆ ಮಾಡಿದಾಗ ಅವರಿಗೆ ಧನ, ಆಹಾರ, ಸುಖ, ಸಮೃದ್ಧಿಗಳು ಒದಗುತ್ತವೆ!

ಇನ್ನೊಂದು ಚರ್ಚಿನಲ್ಲಿ ಸುಂದರವಾದ ವೈಜ್ಞಾನಿಕ ಚಲನಚಿತ್ರವೊಂದನ್ನು ತೋರಿಸಿದರು. ಅದರಲ್ಲಿ ಗತ-ವೇಳೆ-ಚಲನಚಿತ್ರದಿಂದ (Time-lapse-photography) ಅರಳುವ ಹೂವುಗಳು, ಬೆಳೆಯುವ ಜೀವಾಣುಗಳು ಓಡುವ 'ಪೇರಮೇಶಿಯಮ್' ಮೊದಲಾದವುಗಳ ಚಲನವಲನಗಳನ್ನು ತೋರಿಸಿ, ಕೊನೆಯಲ್ಲಿ ಇವುಗಳನ್ನೆಲ್ಲಾ ಜೀಸಸ್ ಕ್ರಾಯಿಸ್ಟನು ನಿಮಗಾಗಿ ನಿರ್ಮಾಣ ಮಾಡಿದ್ದಾನೆ! ಎಂದು ಹೇಳಿದರು.

ನನಗೆ ಬಂದ ನಗುವನ್ನು ಕಷ್ಟದಿಂದ ತಡೆದುಕೊಂಡೆ.

ನಾನು ನೋಡಿದಂತೆ ಇಂದು ಕ್ರಿಸ್ತಧರ್ಮ ಚರ್ಚಿಗೆ ಹೋಗುವದರಲ್ಲಿಯೇ ಮುಕ್ತಾಯವಾಗುತ್ತದೆ. ಸಾಲದ್ದಕ್ಕೆ ಹೆಚ್ಚಿನ ಸಂಖ್ಯೆಯ ಕ್ರೈಸ್ತರಿಗೆ ಇತರ ಧರ್ಮಗಳ ಬಗ್ಗೆ ರವಷ್ಟೂ ತಿಳಿಯದು. ಅವರಿಗೆ ಇಸ್ಲಾಂ ಅಂದರೆ ನಾಲ್ಕು ಹೆಂಡಂದಿರನ್ನು ಮಾಡಿಕೊಳ್ಳುವ ಧರ್ಮ, ಯಹೂದಿ-ಧರ್ಮವೆಂದರೆ 'ಕೋಶರ್ ಮಾಂಸ' ತಿನ್ನುವುದು ಮತ್ತು ಹಿಂದೂಧರ್ಮವೆಂದರೆ ಗೋಮಾತೆಯನ್ನು ಪೂಜಿಸುವ ಧರ್ಮ ಎಂದಿಷ್ಟು ಗೊತ್ತು."

"ನನಗಾದರೂ ಹಿಂದೂಧರ್ಮದ ಬಗ್ಗೆ ಬಹಳ ತಿಳಿಯದು. ಕೆಲವು ಭಾರತೀಯ ಸ್ನೇಹಿತರಿಂದ ತಿಳಿದುಕೊಳ್ಳಲು ಯತ್ನಿಸಿದೆ. ಅವರಾದರೂ ಸಮರ್ಪಕವಾಗಿ ಉತ್ತರಿಸಲಿಲ್ಲ. ನೀನು ಸ್ವಲ್ಪ ವಿವರಿಸುವಿಯಾ?"

"ಇತರ ಧರ್ಮಗಳಿಗೆ ಹೋಲಿಸಿದರೆ ಹಿಂದೂಧರ್ಮದ ವ್ಯಾಖ್ಯೆ ಸ್ವಲ್ಪದರಲ್ಲಿ ಕೊಡುವುದು ಕಷ್ಟ. ಏಕೆಂದರೆ ನಮ್ಮ ಧರ್ಮ ಒಂದು ಚರ್ಚು, ಒಂದು ಧರ್ಮಗ್ರಂಥ. ಕೆಲ ಪಾದ್ರಿಗಳು ಇವರಿಗಷ್ಟೆ ಪರಿಮಿತವಾಗಿರದೇ ಪ್ರತಿ ವ್ಯಕ್ತಿಯ ಜೀವನದಲ್ಲಿ ಹಾಸು ಹೊಕ್ಕಾಗಿದೆ. ನಮಗೆ ಧರ್ಮ, ಜೀವನದ ಪದ್ಧತಿಯೂ ಹೌದು; ನಮ್ಮ ಧರ್ಮ ಒಂದು ವ್ಯಕ್ತಿಯ ನಿರ್ಮಾಣವಲ್ಲ. ಒಂದು ಶತಕದ ಬೆಳವಣಿಗೆಯಲ್ಲ. ನಮ್ಮ ಪುರಾತನರಲ್ಲಿ ಸಹಸ್ರಾರು ವರ್ಷಗಳಿಂದ ಜ್ಞಾನಿಗಳು (ಋಷಿಗಳು ದ್ರಷ್ಟಾರರು) ತಮ್ಮದೇ ರೀತಿಯಲ್ಲಿ ನಮ್ಮ ಧರ್ಮದ ವ್ಯಾಖ್ಯೆ ಕೊಡಲು ಯತ್ನಿಸಿದ್ದಾರೆ. ಒಂದು 'ಬಾಯಬಲ್', ಒಂದು 'ಕುರಾನ್'ದಂತಹ ಧರ್ಮಗ್ರಂಥಗಳಲ್ಲಿ ಅತ್ಯಾಧುನಿಕ ವಿಚಾರಗಳನ್ನು ಕಾಣಬಹುದು. ನಮ್ಮಲ್ಲಿ ಯಾವದೂ ಕಡ್ಡಾಯವಿಲ್ಲ. ಎಲ್ಲವನ್ನು ವೈಯಕ್ತಿಕ ಸ್ವಾತಂತ್ರಕ್ಕೆ ಬಿಡಲಾಗಿದೆ. ಬೌದ್ಧಿಕ ಜಗತ್ತಿನಲ್ಲಿ ಹಿಂದೂ ಧರ್ಮ ಉಳಿದೆಲ್ಲ ಧರ್ಮಗಳನ್ನು ಹಿಂದೆ ಹಾಕಿದೆಯೆಂದು ಅಭಿಮಾನದಿಂದ ಹೇಳಬಹುದು. ಪಾಶ್ಚಾತ್ಯ ವಿದ್ವಾಂಸರು ಅನೇಕ ಜನ ಈ ಮಾತನ್ನು ಒಪ್ಪಿಕೊಂಡಿದ್ದಾರೆ.

ನಮ್ಮಲ್ಲಿ ಮನುಷ್ಯನ ಆತ್ಮಕ್ಕೆ ಅತಿಶ್ರೇಷ್ಠ ಸ್ಥಾನ ಕೊಡಲಾಗಿದೆ. ಆತ್ಮವೇ ದೇವರು ಎಂದು ಹೇಳಿದ್ದರಿಂದ ಅದಕ್ಕನುಗುಣವಾಗಿ ನಡೆದರೆ ದೇವರಿಗೆ ಅನುಗುಣವಾಗಿ ನಡೆದಂತೆ ಎಂದು ಭಾವಿಸಲಾಗುತ್ತದೆ. ಸಮಾಜದಲ್ಲಿ ಧಾರ್ಮಿಕ-ಕ್ಷೇತ್ರದಲ್ಲಿ ಪರೋಪಕಾರ ಮಾಡುವವನು ಧಾರ್ಮಿಕನೆಂದು ಪರಿಗಣಿಸಲಾಗುವದರಿಂದ ಸ್ವಾರ್ಥತ್ಯಾಗಕ್ಕೆ ನಮ್ಮ ಧರ್ಮದಲ್ಲಿ ಬಹಳ ಪ್ರಾಶಸ್ತ್ಯ ಕೊಡಲಾಗಿದೆ. ನಮ್ಮಲ್ಲಿ ಹುಟ್ಟಿದ ಪ್ರತಿಯೊಬ್ಬನೂ ಹಿಂದೂವಾದ್ದರಿಂದ ಧರ್ಮಾಂತರ ಮಾಡುವ ಪದ್ಧತಿ ನಮ್ಮಲ್ಲಿಲ್ಲ. ಅದೇ ಕ್ರೈಸ್ತರು ತಮ್ಮ ಧರ್ಮಪ್ರಸಾರದಲ್ಲಿ ವಿಶೇಷ ಆಸ್ಥೆ ವಹಿಸುತ್ತಾರೆ. ಕ್ರೈಸ್ತೇತರರು ನಿಜವಾದ ಮಾನವರಲ್ಲ (?) ಎಂದು ಅವರ ಭ್ರಮೆ. ನಮ್ಮಲ್ಲೂ ಕ್ರೈಸ್ತಧರ್ಮ-ಪ್ರಚಾರಕರು ಮೂಲೆ ಮೂಲೆಗೆ ಹರಡಿಕೊಂಡಿದ್ದಾರೆ.... ಇವರಲ್ಲಿ ಅಮೇರಿಕದ ಪ್ರತ್ಯಕ್ಷ ಅಪ್ರತ್ಯಕ್ಷ ಧನಸಹಾಯ ಪಡೆಯುವವರು ಸಾಕಷ್ಟು ಜನರಿದ್ದಾರೆ. ಆದರೆ ಒಂದು ಮಾತು ಜೀನ್, ನಮ್ಮಲ್ಲಿಯ ಬಡತನದ ಉಪಯೋಗವನ್ನು ಇದಕ್ಕಾಗಿ ಮಾಡುತ್ತಿದ್ದಾರೆ. ಅನ್ನ, ಬಟ್ಟೆ, ಧನ, ಶಿಕ್ಷಣ, ನೌಕರಿಗಳನ್ನು ಕೊಡುವ ಆಶ್ವಾಸನೆ ತೋರಿಸಿ ಜನರ ಧರ್ಮಾಂತರ ಮಾಡುತ್ತಾರೆ. ಹೃದಯ ಪರಿವರ್ತನೆಯಿಂದ ಕ್ರಿಶ್ಚನ್ ಆಗುವವರು ಬೆರಳ ಮೇಲೆ ಎಣಿಸುವಷ್ಟು ಜನರಿರಬಹುದು.

ಜೀನಳಾದರೂ ಭಾರತೀಯ ಕ್ರೈಸ್ತರ ಬಗ್ಗೆ ಕ್ರೈಸ್ತಮತ-ಪ್ರಚಾರಕರ ಬಗ್ಗೆ ವಿಶೇಷ ಆಸ್ಥೆ ತಳೆದವಳು. ತನ್ನಿಂದಾದಷ್ಟು ಅವರಿಗೆ ಸಹಾಯವನ್ನು ಮಾಡುತ್ತಿದ್ದಳು. ಆದ್ದರಿಂದ ನನ್ನ ಈ ವಿವರಣೆ ಕೇಳಿದಾಗ ಅವಳಿಗೆ ಸಖೇದಾಶ್ಚರ್ಯವಾಯಿತು. ಆದರೂ,

"ಕಂಗಾಲಾದ ಜನರಿಗಷ್ಟೆ ಇದರ ಅವಶ್ಯಕತೆ ಇರುತ್ತದೆ. ಉಂಡುಟ್ಟು ಸುಖವಾಗಿದ್ದ ಜನ ಹುಟ್ಟಾ ಪಾಲಿಸುತ್ತ ಬಂದ ಧರ್ಮವನ್ನು ಕಾರಣವಿಲ್ಲದೇ ಏಕೆ ಬಿಟ್ಟುಕೊಟ್ಟಾರು<" ಎಂದು ಒಪ್ಪಿಕೊಂಡಳು.

ಊಟವಾದ ಮೇಲೆ ಇದೇ ಸರಣಿಯಲ್ಲಿ ಮಾತು ಮುಂದುವರಿಯಿತು. ನಾನೇ ಅಂದೆ:

"ಕ್ರೈಸ್ತಮತ-ಪ್ರಚಾರದಲ್ಲಿ ಅಮೇರಿಕನ್ನರು ಹೆಚ್ಚೆಚ್ಚು ಆಸ್ಥೆ ವಹಿಸುತ್ತಾರೆ. ಕೇವಲ ಆಫ್ರಿಕ, ಏಶ್ಯಗಳಲ್ಲಿ ಅಷ್ಟೆ ಅಲ್ಲ. ಅಮೇರಿಕದಂತಹ ಮುಂದುವರಿದ ರಾಷ್ಟ್ರಗಳಲ್ಲೂ ಇದು ನಡೆಯುತ್ತದೆ. ಅಷ್ಟೇಕೆ ನನ್ನನ್ನು ಧರ್ಮಾಂತರಗೊಳಿಸಲು ಸಾಯರೆಕ್ಯೂಸಿನಲ್ಲಿ ಮೂವರು ಕ್ರಿಶ್ಚಿನ್ನರು ಬಂದಿದ್ದರು!"

"ಓಹ್!" ಜೀನ್ ಅವಿಶ್ವಾಸ ವ್ಯಕ್ತಪಡಿಸಿದಳು.

"ನಿಜಕ್ಕೂ ಹೌದು ಜೀನ್, ಅಂದು ಯಾವದೋ ಪರೀಕ್ಷೆಯ ತಯಾರಿಗೆ ಭರದಿಂದ ತೊಡಗಿದ್ದೆ. ನನಗಾರೋ ಅತಿಥಿಗಳು ಬಂದಿದ್ದಾರೆಂದು ಮನೆಯ ಮಾಲಕ ಕೂಗಿ ಹೇಳಿದ. ನನ್ನ ಪರಿಚಯ ತೀರ ಕಡಿಮೆ ಇದ್ದುದ್ದರಿಂದ ಕುತೂಹಲವೆನಿಸಿ ಧಾವಿಸಿ ಬಂದು ನೋಡಿದೆ. ಯಾರೋ ಮೂವರು ಅಪರಿಚಿತರು ನನಗಾಗಿ ಕಾದಿದ್ದರು. ಒಬ್ಬನು ಯಾಂಕಿಯಾದರೆ, ಇನ್ನಿಬ್ಬರು ಏಶಿಯನ್ನರು ತಾವು ನಾಗಾಲ್ಯಾಂಡ್ ಮತ್ತು ಫಿಲಿಫೈನ್ಸದವರೆಂದು ಪರಿಚಯ ಹೇಳಿಕೊಂಡರು. ಬಂದ ಕಾರಣವನ್ನು ಹೇಳುವ ಮೊದಲು, ಮೂರು ವರ್ಷದ ಹಿಂದೆ ನಾನು ಲಂಡನ್ನಿನಿಂದ ಬರೆದ ಕಾಗದವೊಂದನ್ನು ನನ್ನ ಕೈಯಲ್ಲಿಟ್ಟರು. ವಿದೇಶಗಳಿಂದ ಬರುವ ಸಂಸ್ಥೆಯೊಂದು ಕೊಟ್ಟ ಜಾಹೀರಾತನ್ನು

ವೃತ್ತಪತ್ರಿಕೆಯಲ್ಲಿ ಓದಿ, ಸಹಾಯಕೋರಿ ಬರೆದ ಕಾಗದವದು. ನ್ಯೂಯಾರ್ಕದಲ್ಲಿ ಈ ಮೊದಲು ಸ್ವಾಗತ ನೀಡಲಾಗದ್ದಕ್ಕೆ ಕ್ಷಮೆ ಕೋರಿ ಈ ಮೂವರು ಸರತಿಯಂತೆ ಕ್ರೈಸ್ತಧರ್ಮ ಬೋಧನೆಗೆ ಪ್ರಾರಂಭಿಸಿದರು. ತಮ್ಮ ಸಂಕುಚಿತ ದೃಷ್ಟಿ, ಸ್ವಾರ್ಥ, ಪರಮಧರ್ಮಗಳ ಬಗ್ಗೆ ಇದ್ದ ಅಜ್ಞಾನವನ್ನು ಸಂಪೂರ್ಣವಾಗಿ ತೋರಿಸಿಕೊಂಡರು. ಅವರಿಗೆ ಗೊತ್ತಿದ್ದಕ್ಕಿಂತ ಕ್ರೈಸ್ತಧರ್ಮದ ಬಗ್ಗೇ ನನಗೇ ಹೆಚ್ಚು ತಿಳಿದಿತ್ತು! ಯಾಂಕಿಯಂತೂ ಮಾತಿನಮಲ್ಲ. ತಲೆನೋವಾಗುವಷ್ಟು ತೊಂದರೆ ಕೊಟ್ಟ. ಅವರಿಗೆಲ್ಲ ಒಂದೊಂದು ಬಿಗಿದುಕಳಿಸುವಷ್ಟು ಸಿಟ್ಟು ಬಂದಿತ್ತು. ಅತಿಥಿಗಳಿಗೆ ಅನಾದರ ತೋರಿಸಬಾರದೆಂಬ ವಿವೇಕ ನನ್ನನ್ನು ತಡೆಹಿಡಿಯಿತು. ಅವರ ಹುಂಬತನ ನೋಡಿ ಒಳಗೊಳಗೇ ನಕ್ಕೆ. ಈ ರೀತಿಯ ಪ್ರಚಾರದಿಂದ ಎಂದಾದರೂ ಕ್ರೈಸ್ತಧರ್ಮ ಪ್ರಚಾರವಾದೀತೇ ಎನಿಸಿತು.

"ಚರ್ಚುಗಳಲ್ಲಿ ವಿವಿಧ ಸಾಮಾಜಿಕ ಚಟುವಟಿಕೆಗಳು ನಡೆಯುತ್ತವೆ. ಅವುಗಳಲ್ಲಿ ನೀನು ಭಾಗವಹಿಸಬೇಕು. ನಿನಗೆ ಬಿಡುವಾಗಿದ್ದಾಗ ಫೋನ್ ಮಾಡು, ಬಂದು ನಿನ್ನನ್ನು ಕರೆದುಕೊಂಡು ಹೋಗುತ್ತೇವೆ" ಎಂದು ಆಶ್ವಾಸನೆ ಕೊಟ್ಟು ಫೋನ್ ನಂಬರು ಮತ್ತು ಇತರ ವಿವರಗಳಿದ್ದ ಕಾರ್ಡು ಕೊಟ್ಟು ಹೊರಬಿದ್ದರು."

ತತ್‌ಕ್ಷಣ ಆ ಕಾಗದ ಕಸದ ಬುಟ್ಟಿಯನ್ನು ಸೇರಿತು.

"ಅವರು ಯಾವ ಚರ್ಚ್‌ಗೆ ಸೇರಿದವರಿದ್ದರು?" ಜೇನ್ ಕೂಡಲೆ ಕೇಳಿದಳು.

"ಯಾವ ಚರ್ಚೋ?.... ನಮ್ಮ ಜಾತೀಯತೆಯ ಬಗ್ಗೆ ನಿಮ್ಮವರೆಲ್ಲ ಎಷ್ಟು ಹಾಸ್ಯ ಮಾಡುತ್ತೀರಿ! ನಮಗೆ ಕಡಿಮೆಯಿಲ್ಲದ ಪಂಗಡ, ಒಳಪಂಗಡಗಳು ನಿಮ್ಮಲ್ಲಿವೆಯಲ್ಲ? ಯಾರಿಗಾದರೂ ಏಳೆಂಟು ಮಕ್ಕಳಿದ್ದರೆ ರೋಮನ್ ಕ್ಯಾಥೋಲಿಕ್‌ರಿರಬೇಕು ಎಂದು ಹಾಸ್ಯ ಮಾಡುತ್ತಾರೆ. ಬ್ಯಾಪ್‌ಟಿಸ್ಟ್, ಪ್ರೆಸ್‌ಬಿಟೇರಿಯನ್, ಮೆಥಡಿಸ್ಟ್ ವೆನಿಷಿಯನ್ ಇನ್ನೆಷ್ಟೊ ಪಂಥಗಳೆಲ್ಲ ತಾವೇ ಉಳಿದವರಿಗಿಂತ ಕ್ರಿಸ್ತನಿಗೆ ಹತ್ತಿರ ಸಂಬಂಧಿಕರೆಂದು ಹೇಳಿಕೊಳ್ಳುತ್ತಾರೆ ಅಲ್ಲವೇ?"

"ನೀನು ಹೇಳುವದರಲ್ಲಿ ಸತ್ಯವಿದೆ ಕ್ರಿಶ್. ಹೋದ ಚುನಾವಣೆಯಲ್ಲಿ ಅಧ್ಯಕ್ಷ ಕೆನಡಿ, ಕೆಥೊಲಿಕ್ ಪಂಥಕ್ಕೆ ಸೇರಿದವರಿದ್ದದ್ದರಿಂದ ರೇಡಿಯೊ, ಟೆಲಿವಿಜನ್, ವೃತ್ತಪತ್ರಿಕೆಗಳು ಅವರ ವಿರುದ್ಧ ಜಾತೀಯ ಯುದ್ಧವನ್ನೇ ಹೂಡಿಬಿಟ್ಟಿದ್ದವು. ಪ್ರೊಟೆಸ್ಟಂಟರನ್ನೆಲ್ಲ ಎಲ್ಲಿ ನಿರ್ಲಕ್ಷ ಮಾಡಲಾಗುತ್ತಿದೆಯೋ ಎಂದು ನಾವೆಲ್ಲ ಹೆದರಿದ್ದೆವು. ಈ ಹೆದರಿಕೆಯಿಂದಲೇ ನಾವೆಲ್ಲ ವಿರುದ್ಧ ಹುರಿಯಾಳಿಗೆ ನಮ್ಮ ಮತ ಕೊಟ್ಟೆವು. ಕೊನೆಗೆ ಕೆನಡಿಯವರು–

"ನನ್ನ ಪಂಥ, ನನ್ನ ಹೊಣೆಗಾರಿಕೆಯ ನಿರ್ವಹಣೆಗೆ ಅಡ್ಡಿ ಬಂದರೆ ಅಧ್ಯಕ್ಷಪದಕ್ಕೆ ರಾಜಿನಾಮೆ ಕೊಡುತ್ತೇನೆ. ಎಂದು ಅವರು ಬಹಿರಂಗವಾಗಿ ಸಾರುವಷ್ಟು ಜಾತೀಯತೆಯ ಪ್ರಚಾರ ಸಾಗಿತ್ತು ಇಲ್ಲಿ." ಎಂದಳು.

"ಅದೇ ಕೆನಡಿ ಅಧ್ಯಕ್ಷರಾದ ಮೇಲೆ ತಮ್ಮ ಬುದ್ಧಿಮತ್ತೆ, ದೃಷ್ಟಿವೈಶಾಲ್ಯ ಮತ್ತು ಮುಂದಾಲೋಚನೆಗಳಿಂದ ಈ ಹಿಂದಿನ ಎಷ್ಟೊ ಅಧ್ಯಕ್ಷರನ್ನು ಹಿಂದಕ್ಕೆ ಹಾಕಲಿಲ್ಲವೇ? ಯಾರೋ ಒಬ್ಬರು ಜನರಲ್ ಐಸೆನ್‌ಹಾವರರು, ತಮ್ಮ ಎಂಟು ವರ್ಷದ ಸುದೀರ್ಘ ಅಧ್ಯಕ್ಷತೆಯಲ್ಲಿ 'ಇಂಗ್ಲಿಷ್ ಸ್ಪೆಲಿಂಗ್' ಮತ್ತು 'ಪೋಲೋ' ಆಟವನ್ನು ಸುಧಾರಿಸಿಕೊಂಡರು ಎನ್ನಲಿಲ್ಲವೇ?" ಒಂದು ಪುರವಣಿ ಜೋಡಿಸಿದೆ. ಜೇನ್ ನಕ್ಕಳು. ಏನೋ ನೆನಪು ಮಾಡಿಕೊಂಡು–

"ಸೋಡಸ್ ಎಲ್ಲಿದೆ ಕ್ರಿಶ್?" ಎಂದು ಕೇಳಿದಳು.

"ಸಾಯರೆಕ್ಯೂಸ್ ರೊಚೆಸ್ಟರಗಳ ನಡುವೆ ಓನ್‌ಟರಿಯೋ ಸರೋವರದ ಮೇಲೆ ಈ ಚಿಕ್ಕ ಪಟ್ಟಣವಿದೆ. ಈ ಪಟ್ಟಣದವರು ಪ್ರತಿವರ್ಷ ಹತ್ತಾರು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆಮಂತ್ರಿಸಿ ಸತ್ಕರಿಸುತ್ತಾರೆ. ಮೊದಲ ಸಲ, ಅಲ್ಲಿಯ ಮುಖ್ಯ ಪ್ರೀಸ್ಟರಿನ ಅತಿಥಿಯಾಗಿ ಹೋಗಿದ್ದೆ. ಆಗ ಅವರ ಪತ್ನಿ ಕಾಯಿಲೆಬಿದ್ದ ತನ್ನ ತಂಗಿಯನ್ನು ನೋಡಲು ಫಿಲಡೆಲ್ಫಿಯಕ್ಕೆ ಹೋಗಿದ್ದಳು. ಹೀಗಾಗಿ ನಾವಿಬ್ಬರೇ ಮನೆಯಲ್ಲಿ ಇದ್ದೆವು. ಅಂತಾರಾಷ್ಟ್ರೀಯ ವಿದ್ಯಾರ್ಥಿ ತಮ್ಮ ಅತಿಥಿಯಾದ್ದರಿಂದ ಹೆಚ್ಚಿನ ಸಂಭ್ರಮ ಅವರಿಗೆ. ಮರುದಿನ ನನ್ನನ್ನು ಚರ್ಚಿಗೆ ಕರೆದುಕೊಂಡು ಹೋಗಿ ತಮ್ಮ ಪ್ರವಚನ ಪ್ರಾರಂಭಿಸುವ ಮೊದಲು ನೆರೆದ ಸಮೂಹಕ್ಕೆ ನನ್ನ ಪರಿಚಯ ಮಾಡಿಕೊಟ್ಟರು. ಮರಳಿ ಹೋಗುವಾಗ ಅವರೆಲ್ಲರ ಕೈಕುಲುಕಿ ಸಾಕಾಗಿ ಹೋಯಿತು. ಸೋಡಸ್ ಬಹಳ ಸುಂದರವಾದ ಊರು. ಊರ ತುಂಬ ಪೀಚ್, ಎಪ್ಪಲ್, ಸ್ಟ್ರೊಬೇರಿ, ಚೆರಿಹಣ್ಣುಗಳ ತೋಟಗಳಿವೆ. ಊರಿನ ಸನಿಹದಲ್ಲೇ ಆಲ್ಹಾದಕರ ಸರೋವರವಿದೆ. ನನಗೆ ಸೋಡಸ್ ಬಹಳ ಸೇರಿತು. ಮುಖ್ಯ ಪಾದ್ರಿಗಳು ತಮ್ಮ ಪತ್ನಿ ಹಿಂದಿರುಗಿದ ಮೇಲೆ ಇನ್ನೊಮ್ಮೆ ಬರಬೇಕೆಂದು ಆಗ್ರಹದ ಆಮಂತ್ರಣವಿತ್ತರು. ಎರಡನೇ ಬಾರಿ ಹೋದಾಗ ನನಗೆ ವಿಶೇಷ ಆತಿಥ್ಯ ಕಾದಿತ್ತು...."

ಇಷ್ಟರಲ್ಲಿ ಜೀನಳ ಪತಿ ಜೇಕರು ಸಾಮಾನುಗಳನ್ನು ಹೊತ್ತುಕೊಂಡು ಒಳಗೆ ಬಂದರು. ಜೀನ್ ನಾವೇನು ಮಾತನಾಡುತ್ತಿದ್ದೆವೆಂದು ಯಜಮಾನನಿಗೆ ವರದಿಸಿದಳು. ಅಲ್ಲಿಂದ, ನಡೆದ ಸಂಭಾಷಣೆಯಲ್ಲಿ ಅವರೂ ಸೇರಿದರು.

"ಕ್ರಿಶ್, ಒಂದು ವಾರದ ಹಿಂದೆ ಟಿ.ವಿಯಲ್ಲಿ ನಿನ್ನ ಭಾರತದ ಒಂದು ಕಾರ್ಯಕ್ರಮವಿತ್ತು. ಸಾವಿರಾರು ಜನ ಭಾರತೀಯರು ರಸ್ತೆಗಳ ಮೇಲೆಯೇ ತಮ್ಮ ಜೀವನ ನಡೆಸುತ್ತಿದ್ದುದನ್ನು ನೋಡಿ ಬಹಳ ಕಿಸಿವಿಸಿಯಾಯಿತು. ಈ ಸಮಸ್ಯೆ ನಿಮ್ಮಿಂದ ಬಿಡಿಸಲಿಕ್ಕೆ ಆಗದೇ?" ಎಂದು ಕಳವಳದಿಂದ ಕೇಳಿದರು.

"ಅಮೇರಿಕನ್ ಪತ್ರಿಕೆಗಾರರು, ಟಿ.ವಿಯವರೆಲ್ಲ ಭಾರತದ ಕೊಳಚೆ ಓಣಿಗಳಲ್ಲಷ್ಟೆ ತಿರುಗಾಡಿ, ಅಸಾಮಾನ್ಯ ಚಿತ್ರಗಳನ್ನೂ, ಕೇವಲ ದೋಷಗಳನ್ನೇ ಎತ್ತಿ ತೋರಿಸುವ ದೃಶ್ಯಗಳನ್ನೇ ತಮ್ಮ ದೇಶದಲ್ಲಿ ಪ್ರದರ್ಶಿಸಿ, ಜನರ ಕುತೂಹಲ ಕೆರಳಿಸಿ ಹಣ ಸಂಪಾದಿಸುತ್ತಾರೆ. ಕೇವಲ ಕೆಡುಕನ್ನೇ ನೋಡ ಹೋದರೆ ಅಮೇರಿಕದಲ್ಲೇನು ಕೊಳಚೆ ಕಡಿಮೆಯಾಗಿದೆಯೇ? ನನ್ನ ಹತ್ತಿರವೇ ನೂರಾರು ಚಿತ್ರಗಳಿವೆ, ಬೇಕಿದ್ದರೆ ತೋರಿಸುತ್ತೇನೆ." ಎಂದು ಸ್ವಲ್ಪ ಚುಚ್ಚಿದೆ.

"ನಾನು ಹೇಳುವುದು ಬಡತನದ ಮಾತು. ದಕ್ಷಿಣ ರಾಜ್ಯದವರು (ಏಪಲೇಶಿಯನ್ನರು) ಬಡವರಿದ್ದರೂ ನಿಮ್ಮಷ್ಟು ಬಡವರಿಲ್ಲ. ಈ ಕಡು ಬಡತನಕ್ಕೆ ಕಾರಣವೇನು ಎಂದು ಕೇಳಿದೆ." ಮಾತು ಉರುಳಿಸಿದರು.

"ನಮ್ಮದು ವೈವಿಧ್ಯಪೂರ್ಣ ದೇಶ. ಬಡತನ, ಸಿರಿವಂತಿಕೆಗಳೆರಡೂ ನಮ್ಮ ದೇಶದಲ್ಲಿವೆ. ಶಿಲಾಯುಗದ ಜನರೂ ಇದ್ದಾರೆ. ಆತ್ಯಾಧುನಿಕರೆನಿಸಿಕೊಳ್ಳುವ ಜನರೂ ಇದ್ದಾರೆ. ಅತ್ಯಂತ ಶ್ರೀಮಂತರು ಭಾರತದಲ್ಲಿದ್ದರೆ, ನಿಮ್ಮ ಯೋಚನೆಗೆ ಮೀರಿದ ಕಡು ಬಡವರು ಇದ್ದಾರೆ. ಭಾರತದ ಬುದ್ಧಿಶಾಲಿ ಜಗತ್ತಿನ ಇನ್ನಾವ ದೇಶದ ಬುದ್ಧಿಶಾಲಿಗೂ ಕಡಿಮೆಯಿಲ್ಲ. ನಿಮ್ಮದು ಮಧ್ಯವರ್ತಿ ದೇಶ."

"ಹಾಗಿದ್ದರೆ ನಮ್ಮ ದೇಶ ಜಗತ್ತಿನಲ್ಲಿಯೇ ಮುಂದುವರಿದ ದೇಶ, ಐಶ್ವರ್ಯವಂತ ದೇಶ, ಬಲಾಢ್ಯ ದೇಶ ಎಂದೇಕೆ ಪರಿಗಣಿಸಲಾಗುತ್ತದೆ?" ಜೆಕ್ ಕೇಳಿದರು.

"ನದಿಗೆ ಮಹಾಪೂರ ಬಂದಂತೆ ನಿಮ್ಮ ದೇಶಕ್ಕೆ ಒಮ್ಮೆಲೇ ಪ್ರೌಢಾವಸ್ಥೆ ಬಂದಿದೆ. ಈ ಮಹಾಪೂರ ಇಳಿಯುವಂತೆ ಸಮೃದ್ಧಿಯ ನಿಮ್ಮ ಸ್ಥಿತಿ ಇಳಿಮುಖವಾಗದಿದ್ದರೆ ಸಾಕು. ನಮ್ಮ ನಿಮ್ಮ ದೇಶಗಳಲ್ಲಿ ಯಾವದೇ ತುಲನೆ ಸಾಧ್ಯವಿಲ್ಲ. ಭಾರತ ಸಂಸ್ಕೃತಿಯ ಪ್ರೌಢಾವಸ್ಥೆ ಮುಟ್ಟಿದಾಗ ಅಮೇರಿಕ ನಿದ್ರಾವಸ್ಥೆಯಲ್ಲಿತ್ತು. ನಿಮ್ಮದು ಹೊಸ ರಾಷ್ಟ್ರ. ಕಡಿಮೆ ಜನವಸತಿ. ಫಲವತ್ತಾದ ಭೂಮಿ, ವನಸಿರಿ, ಖನಿಜಸಂಪತ್ತಿನಿಂದ ತುಂಬಿ ತುಳುಕುವ ನಾಡು, ನಿಸರ್ಗವೆಲ್ಲ ನಿಮಗೆ ಅನುಕೂಲವಿದ್ದಾಗ ಬಲಾಢ್ಯವಾದ ರಾಷ್ಟ್ರವಾದರೆ ಆಶ್ಚರ್ಯವೇನು? ನಿಮಗಿಂತ ಮೂರು ಪಟ್ಟು ಜನವಸತಿಯುಳ್ಳ ಭಾರತ ನಿಮ್ಮ ದೇಶದ ಮೂರರಲ್ಲೊಂದು ಪಾಲು ಮಾತ್ರ ವಿಸ್ತಾರವಾಗಿದೆ. ಅಂದರೆ ನಂಬುತ್ತೀರಷ್ಟೆ? ಅನಾದಿಕಾಲದಿಂದ ನಮ್ಮ ಜನವಸತಿ ಬೆಳೆಯುತ್ತಲೇ ಇದೆ. ಮಕ್ಕಳೇ ತಮ್ಮ ಪಾಲಿನ ಐಶ್ವರ್ಯವೆಂಬ ನಮ್ಮ ಜನರ ನಂಬಿಗೆಯೇ ಇದಕ್ಕೆ ಕಾರಣ. ಹೊಲಗಳು ಶತಮಾನಗಳಿಂದ ಧಾನ್ಯ ಬೆಳೆದು ಬೆಳೆದು ಶಕ್ತಿಹೀನವಾಗಿವೆ.... ನಿಮ್ಮ ದೇಶ ಮುಂದುವರಿದಿದೆ ನಿಜ. ಆದರೆ ಅಮೇರಿಕನ್‌ರಷ್ಟೇ ಅಲ್ಲದೇ ಇತರ ಎಷ್ಟೋ ದೇಶಗಳ ಜನರೂ ಇದಕ್ಕೆ ಕಾರಣರಾಗಿದ್ದಾರೆ. ಜರ್ಮನ್, ಆಯ್‌ರಿಶ್, ಜಪಾನೀ, ಭಾರತೀಯ ವಿಜ್ಞಾನಿಗಳೆಷ್ಟೋ ಜನ ಅಮೇರಿಕದ ಏಳ್ಗೆಗೆ ದುಡಿದಿದ್ದಾರೆ. ಭಾರತೀಯರ ಯೋಗ್ಯತೆಯನ್ನು ಅಳೆಯಬೇಕಾದರೆ ಭಾರತೀಯ ಮತ್ತು ಅಮೇರಿಕನ್ ವಿದ್ಯಾರ್ಥಿಗಳಿಗೆ ಒಂದೇ ತರದ ಶಿಕ್ಷಣ, ಉಪಕರಣ ಮತ್ತು ಪ್ರೋತ್ಸಾಹಗಳನ್ನು ನೀಡಿದರೆ ಭಾರತೀಯರು ಅಮೇರಿಕನ್ ವಿದ್ಯಾರ್ಥಿಗಳನ್ನು ಹಿಂದೆ ಹಾಕುವುದರಲ್ಲಿ ಯಾವ ಸಂದೇಹವೂ ಇಲ್ಲ. ಇಲ್ಲಿಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ಭಾರತೀಯರು ತಮ್ಮ ಸಹಪಾಠಿಗಳನ್ನು ಮೀರಿಸಿ ಸಹಜವಾಗಿಯೇ ಶಿಷ್ಯವೇತನ ಗಳಿಸುತ್ತಾರೆ. ಇಲ್ಲಿ ಬಂದ ಹೆಚ್ಚಿನ ಭಾರತೀಯರು ಕಾರ್ಯತತ್ಪರತೆ ಮತ್ತು ಕಾರ್ಯಕುಶಲತೆಗಳಲ್ಲಿ ಅಮೇರಿಕನ್ನರನ್ನು ಹಿಂದೆ ಹಾಕಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

"ಹೌದು, ಇಷ್ಟೆಲ್ಲ ವಿದ್ಯಾರ್ಥಿಗಳು ಇಲ್ಲಿ ಕಲಿತು ತಮ್ಮ ದೇಶಕ್ಕೆ ಮರುಳುತ್ತಾರಷ್ಟೆ? ಅವರೇಕೆ ಭಾರತವನ್ನು ಮುಂದೆ ತರುವದರಲ್ಲಿ ಶ್ರಮಿಸುವದಿಲ್ಲ?" ಎಂದು ಮರ್ಮವನ್ನೇ ಕೆಣಕಿದರು ಜೆಕ್,

"ಇದಕ್ಕೆ ಉತ್ತರ ಕೊಡುವುದು ಕಠಿಣವಾದರೂ ನನಗೆ ತಿಳಿದ ಮಟ್ಟಿಗೆ ನಿಮಗೆ ಅರ್ಥವಾಗುವಂತೆ ಹೇಳುತ್ತೇನೆ. ನಾವು ಸ್ವಾತಂತ್ರ್ಯ ಪಡೆದು ಎರಡು ದಶಕಗಳಾಗುತ್ತ ಬಂದರೂ ನಮ್ಮ ವಿಚಾರಸರಣಿ, ದೃಷ್ಟಿಕೋನಗಳಲ್ಲಿ ಹೆಚ್ಚು ಬದಲಾವಣೆಯಾಗಿಲ್ಲ. ನಮ್ಮಲ್ಲಿ ಇನ್ನೂ ಕೆಲಸಕ್ಕೆ ಯೋಗ್ಯವಾದ ಪ್ರೋತ್ಸಾಹನೆ, ಪ್ರಶಂಸೆ, ಸಂಭಾವನೆಗಳು ಸರಿಯಾಗಿ ಸಿಗುತ್ತಿಲ್ಲ. ಶಿಕ್ಷಣಪದ್ಧತಿಯಲ್ಲಿ ಸುಧಾರಣೆಯೂ ಕಂಡುಬಂದಿಲ್ಲ. ವಿದ್ಯಾರ್ಥಿಗಳಿಗೆ ಸಾಕಷ್ಟು ಸವಲತ್ತುಗಳು, ಪ್ರೋತ್ಸಾಹನೆ ನೀಡುವ ಬದಲು ದಶಕಗಳ ಹಿಂದಿನ ಪುಸ್ತಕಗಳು ಮತ್ತು ತಲೆಮಾರಿನಿಂದ ಬಂದ ನೋಟ್ಸುಗಳನ್ನು ಕೊಟ್ಟು ಕಲಿಸಿ, ಅವರಲ್ಲಿ ಸ್ವವಿಚಾರಶಕ್ತಿ ಜಾಗೃತವಾಗದಂತೆಯೇ ಮಾಡಿದ್ದಾರೆ. ಕೆಲಸ ಮಾಡುವವರನ್ನೂ ಮಾಡದವರನ್ನೂ ಒಂದೇ ದೃಷ್ಟಿಯಿಂದ ಜನತೆ ನಡೆಸಿಕೊಳ್ಳುವದರಿಂದ ತರುಣರು ವಿದ್ಯಾರ್ಥಿ-ಜೀವನದಿಂದಲೇ ಮೈಗಳ್ಳತನ ಕಲಿತುಬಿಡುತ್ತಾರೆ.

ಸಾಲದ್ದಕ್ಕೆ ನೂರಾರು ವರ್ಷಗಳ ದಾಸ್ಯ ನಮ್ಮ ಕ್ರಿಯಾಶಕ್ತಿ, ಕಲ್ಪಕಶಕ್ತಿಗಳನ್ನು ಕುಂಠಿತಗೊಳಿಸಿದೆ. ಅಲ್ಲದೇ ಧರ್ಮವೂ ಈ ದೌರ್ಬಲ್ಯವನ್ನು ಹೆಚ್ಚಿಸಿದೆ. ಹಿಂದೂ ತತ್ವಜ್ಞಾನದ ಪ್ರಕಾರ ಜಗತ್ತೆಲ್ಲ ಮಿಥ್ಯ, ಹಿಂದಿನ ಜನ್ಮದ ಪಾಪ-ಪುಣ್ಯಗಳಿಗೆ ನಾವು ಪಾಲುಗಾರರು, ಒಂದಿಲ್ಲೊಂದು ದಿನ ನಾವು ಪರಮಾತ್ಮನಲ್ಲಿ ಐಕ್ಯವಾಗುವವರಿದ್ದುದರಿಂದ ಈ ತಾತ್ಪೂರ್ತಿಕ ಜೀವನದ ಲೋಭಕ್ಕೆ ಒಳಗಾಗದೇ ವೈರಾಗ್ಯದಿಂದ ಬಾಳಬೇಕೆಂಬ ವಿಶ್ವಾಸ ನಮ್ಮಲ್ಲಿ ಬೆಳೆದುಬಂದಿದೆ. ಒಂದು ದೃಷ್ಟಿಯಿಂದ ಇದು ಉತ್ತಮ ತತ್ವಜ್ಞಾನವಾದರೂ ದೈನಂದಿನ ವಿಕಾಸಕ್ಕೆ ಅದು ನಿರುಪಯೋಗಿಯಾಗಿದೆ. ಜನರು ಮೈಮುರಿ ದುಡಿದು ಹೆಚ್ಚಿನ ಸುಖ-ಸೌಲಭ್ಯಗಳನ್ನು ದೊರಕಿಸುವ ಬದಲಾಗಿ ಇದ್ದುದ್ದರಲ್ಲಿಯೇ ಸಂತೃಪ್ತಿ ಪಡೆಯಲು ಬಯಸುತ್ತಾರೆ. ದಿನಕ್ಕೆ ಎರಡು ಊಟ ಸಿಗದಿದ್ದವರು ಕೂಡ ದೇವರಲ್ಲಿ "ಸಿಗುವ ಒಂದು ಊಟಕ್ಕೆ ಧಕ್ಕೆ ತರಬೇಡ" ಎಂದು ಪ್ರಾರ್ಥಿಸುತ್ತಾರೆ. ಇಂದು ಭಾರತದಲ್ಲಿ ಕ್ರಾಂತಿಯುಗ ಬೇಕಾಗಿದೆ. ಕೊಲೆ, ಸುಲಿಗೆ, ರಕ್ತಪಾತಗಳಿಲ್ಲದ ಕ್ರಾಂತಿ. ಈ ಕ್ರಾಂತಿಯಿಂದ ನಮ್ಮದೆಂಬ ಸುಗುಣಗಳನ್ನು ಬಿಟ್ಟುಕೊಡದೇ ಪಾಶ್ಚಾತ್ಯರ ಉತ್ತಮಾಂಶಗಳನ್ನು ನಾವೂ ಅಳವಡಿಸಿಕೊಳ್ಳಬೇಕಾಗಿದೆ...." ಎಂದು ಏನೇನೋ ಹೇಳಬೇಕೆಂದಿದ್ದೆ. ವಿಷಯ ಗಹನವಾದದ್ದರಿಂದ ಜೇನ್ ವಿಷಯ ಬದಲಿಸಿದಳು.

"ಕ್ರಿಶ್, ಧರ್ಮವೆಂದ ಕೂಡಲೇ ನೆನಪಾಯಿತು. ಭಾರತೀಯ ಮಹಿಳೆಯರು ಹಣೆಯಲ್ಲಿ ಕೆಂಪು ಬಣ್ಣ ಹಚ್ಚಿಕೊಳ್ಳುತ್ತಾರಲ್ಲ ಅದು ಧರ್ಮದ ಕುರುಹೇ?"

"ಇದು ಧರ್ಮಸಂಕೇತವಲ್ಲದಿದ್ದರೂ ಸೀರೆಯಂತೆ ಈ ಬಣ್ಣವೂ ಸಾವಿರಾರು ವರ್ಷಗಳಿಂದ ಭಾರತೀಯ ಉಡುಗೆಯ ಭಾಗವಾಗಿ ಹೋಗಿದೆ. ಇದು ಸೌಭಾಗ್ಯದ ಸಂಕೇತವೆಂದು ಭಾರತೀಯ ಹೆಣ್ಣುಮಕ್ಕಳು ಧರಿಸುತ್ತಾರೆ. ವಿಧವೆಯರು ಮಾತ್ರ ಧರಿಸುವುದಿಲ್ಲ."

(ಸೌಭಾಗ್ಯ ಎಂದರೇನು ಎಂದು ಅವರಿಗೆ ತಿಳಿಸಿ ಹೇಳಬೇಕಾದರೆ ನನಗೆ ಕುರಿ, ಕೋಣಗಳು ಬಿದ್ದು ಹೋದವು!)

"ಭಾರತೀಯ ಮಹಿಳೆಯರ ಉಡುಪಿನಷ್ಟು ಅಂದವಾದ ಉಡುಪು ಬೇರೆ ಇನ್ನಿಲ್ಲ." ಎಂದು ಜಿನ್ ಶಿಫಾರಸು ಮಾಡಿದಳು.

"ನಿಜ. ಅಮೇರಿಕನ್ನರಿಗೆ ಭಾರತೀಯ ಸೀರೆ ಆಕರ್ಷಿಸಿದಷ್ಟು ಇನ್ನಾವ ಬಟ್ಟೆಯೂ ಆಕರ್ಷಿಸುವುದಿಲ್ಲವೆಂದು ತೋರುತ್ತದೆ. ನಾವು ವಾಷಿಂಗ್‌ಟನ್ನಿಗೆ ಹೋದಾಗ ಒಂದು ಮೋಜು ನಡೆಯಿತು" ಎಂದು ವಾಶಿಂಗ್‌ಟನ್ನಿನ ಘಟನೆಯನ್ನು ಅವರಿಗೆ ಹೇಳಿದೆ.

ಶ್ವೇತಭವನ (ಅಮೇರಿಕದ ಅಧ್ಯಕ್ಷರ ವಾಸಸ್ಥಾನ)ವನ್ನು ನೋಡಲು ನಾನು ಆತುರನಾಗಿದ್ದೆ. ಅಮೇರಿಕನ್ನರಿಗೆ ಕೂಡ ಅಮೇರಿಕದ "ರಾಜ-ರಾಣಿ"ಯರಂತಿದ್ದ ಕೆನಡಿ- ದಂಪತಿಗಳ ವಾಸಸ್ಥಾನವನ್ನು ನೋಡುವ ಅವಕಾಶ ಸುಲಭವಾಗಿ ದೊರೆಯುವುದಿಲ್ಲ. ಹೀಗಾಗಿ ವಾರಾಂತ್ಯದಲ್ಲಿ ದೂರ ದೂರದಿಂದ ಕಾರಿನಲ್ಲಿ ಬಂದು ತಾಸುಗಟ್ಟಲೆ ಬಿಸಿಲಿನಲ್ಲಿ ನಿಂತು ಶ್ವೇತಭವನದ ದರ್ಶನ ಪಡೆದು ಧನ್ಯರಾದೆವೆಂದು ತಿಳಿಯುತ್ತಾರೆ. ಕಾರಿಲ್ಲದ ಭಾರತೀಯ ವಿದ್ಯಾರ್ಥಿಗಳು ಅಮೇರಿಕದ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದು ಸ್ವಲ್ಪ ಪ್ರಯಾಸದ ಕೆಲಸ. ಅಂತೆಯೇ ಯಾರೊಬ್ಬರ ಹತ್ತಿರ ಕಾರೊಂದು ಇದ್ದರೆ, ಉಳಿದವರು ಪೆಟ್ರೋಲ್ ವೆಚ್ಚದ ಪಾಲುದಾರರಾಗಿ ಪ್ರವಾಸಕ್ಕೆ ಹೊರಡುತ್ತಾರೆ. ನಾನೂ ಹೀಗೆಯೇ ಕಾರಿದ್ದ ಭಾರತೀಯ ದಂಪತಿಗಳೊಡನೆ ಅಮೇರಿಕೆಯ

ರಾಜಧಾನಿಯನ್ನು ನೋಡಲು ಹೊರಟೆ. ರಾತ್ರೆಯೆಲ್ಲ ಪ್ರವಾಸ ಮಾಡಿ ವಾಶಿಂಗ್‌ಟನ್ ಮುಟ್ಟಿದಾಗ ನಸಕು ಹರಿದಿತ್ತು. ಅಂದು ರವಿವಾರವಾದ್ದರಿಂದ ಅಂದೇ ಶ್ವೇತಭವನ ನೋಡಿ ಮುಗಿಸಬೇಕಾಗಿತ್ತು. (ರವಿವಾರವಷ್ಟೆ ಅದು ಸಾರ್ವಜನಿಕರಿಗೆ ತೆರೆದಿರುತ್ತದೆ.) ಹೀಗಾಗಿ ರಾತ್ರಿಯೆಲ್ಲ ನಿದ್ರೆಗೆಟ್ಟರೂ ಹೋಟೆಲೊಂದಕ್ಕೆ ಹೋಗಿ ಬಟ್ಟೆಬರೆ ಬದಲಿಸಿ, ಶ್ವೇತಭವನಕ್ಕೆ ಮತ್ತೆ ಹೊರಟೆವು. ನಾವಲ್ಲಿಗೆ ಹೋದಾಗ ಅದಾಗಲೇ ಜನಸಂದಣಿ ಸೇರಿಬಿಟ್ಟಿತ್ತು. ನೂರಾರು ಕಾರುಗಳು, ಸಾವಿರಾರು ಜನರು ಕೂಡಿದ್ದರು. ನಮಗೆ ಕಾರನ್ನು ನಿಲ್ಲಿಸಲು ಸ್ಥಳ ಸಿಗಲಿಲ್ಲ. ಕಾರನ್ನು ನಿಲ್ಲಿಸಿ ನಂತರ ಒಳಗೆ ಹೋಗಲು 'ಕ್ಯೂ' ನಿಲ್ಲಬೇಕಾದ್ದರಿಂದ ಬಹಳ ತಡವಾಗಬಹುದೆಂದು ನನ್ನ ಗೆಳೆಯ ನಮ್ಮನ್ನು ಮೊದಲೇ ಇಳಿಸಿ ತಾನು ಕಾರನ್ನು ನಿಲ್ಲಿಸಲು 'ಪಾರ್ಕಿಂಗ್' ಸ್ಥಳಕ್ಕೆ ಹೋದ. ಜನರೆಲ್ಲ ಶಿಸ್ತಿನಿಂದ ನಾಲ್ಕು ಜನರ ಸಾಲಿನಲ್ಲಿ ನಿಂತಿದ್ದರು. ನಾವೂ (ನಾನು, ಸ್ನೇಹಿತನ ಹೆಂಡತಿ, ಅವರ ಇಬ್ಬರು ಮಕ್ಕಳು) ಸಾಲಾಗಿ ಒಂದು ಉದ್ದ ಸಾಲಿನಲ್ಲಿ ಸೇರಿಕೊಂಡೆವು. ಸಾವಿರಾರು ಮಂದಿ ಸಾಲಿನಲ್ಲಿ ನಿಂತಿದ್ದರೂ ನೋಡುವುದು ಬಲು ಬೇಗ ಮುಗಿಯುತ್ತಿದ್ದರಿಂದ ನಮ್ಮ ಸರತಿ ಬೇಗ ಬಂದಿತು.

ಶ್ವೇತಭವನ ಹೆಸರಷ್ಟೇ ದೊಡ್ಡದು. ಶ್ವೇತಬಣ್ಣವೊಂದನ್ನು ಬಿಟ್ಟರೆ ಅಲ್ಲಿ ಏನೂ ಇಲ್ಲವೆಂದು ಬೇಗ ಅರಿವಾಯಿತು. ಭಾರತದ ಯಾವದೇ ಮಹಾರಾಜರ ಅರಮನೆ ಇದಕ್ಕಿಂತ ದೊಡ್ಡದಿದ್ದು ಸುಂದರವಾಗಿದೆ. ಇದನ್ನು ನೋಡಲೆಂದು ಐದುನೂರು ಮೈಲು ಬಂದೆನೆಲ್ಲ ಎಂದು ನಿರಾಸೆಯಾಯಿತು. ಶ್ರೀಮತಿ ಕೆನಡಿಯವರ ದರ್ಶನ ಲಭಿಸವದೊ ಎಂದು ನೋಡಿದರೆ ಆಕೆ ಇಟಾಲಿಗೆ ಹೋಗಿದ್ದರು. ಶ್ವೇತಭವನದಲ್ಲಿ ಹಸಿರುಕೋಣೆ, ಕೆಂಪುಕೋಣೆ, ಅಬ್ರಾಹಮ್ ಲಿಂಕನ್, ರೂಝುವೆಲ್ಟರು ಉಪಯೋಗಿಸುತ್ತಿದ್ದ ಕುರ್ಚಿಗಳು, ಅವರು ಊಟ ಮಾಡುತ್ತಿದ್ದ ಟೇಬಲ್ ಎಲ್ಲವನ್ನು ನೋಡಿದೆವು. ಬಸವಣ್ಣನ ಮೂಗಿನಲ್ಲಿ ಬಟ್ಟಿಟ್ಟು ಮಳ್ಳ ಕಂಡ ಮಳ್ಳ ಠ್ಯಾಂ ಎಂದ ನಿರಾಸೆ–ಭಾವ ನನ್ನಲ್ಲಿ ತುಂಬಿತು. ಆದರೂ ನನ್ನ ಜೊತೆಗೆ ಒಳಗೆ ಬಂದ ಅಮೇರಿಕನ್ ಗುಂಪಿಗೆ ನಿರಾಸೆಯಾದಂತೆ ತೋರಲಿಲ್ಲ. ಅವರೆಲ್ಲ ನನ್ನ ಸ್ನೇಹಿತನ ಹೆಂಡತಿ ಉಟ್ಟ ಸುಂದರ ನಕ್ಷೆಯುಳ್ಳ ರೇಶಿಮೆ ಸೀರೆಯನ್ನು ಕುತೂಹಲದಿಂದ ನೋಡುತ್ತಿರುವುದು ಗೊತ್ತಾಯಿತು. ನಾವು ತಿರುಗಿ ಬರುವ ಹೊತ್ತಿಗೆ ನೂರಾರು ಕಣ್ಣುಗಳು ಆ ಸೀರೆಯನ್ನು ನೋಡಿರಬೇಕು, ಹತ್ತಾರು ಕೈಗಳು ಅದನ್ನು ಮುಟ್ಟಿ ನೋಡಿರಬೇಕು. ಶ್ವೇತಭವನ ಬಿಟ್ಟು ಹೊರಗೆ ಬಂದಾಗ ಮುದುಕಿಯೊಬ್ಬಳು ಓಡುತ್ತ ಬಂದು,

"ನನ್ನ ಮೊಮ್ಮಗಳಿಗೆ ಸೀರೆಯ ಮೇಲೆ ಒಂದು ಪ್ರಬಂಧ ಬರೆಯಬೇಕಾಗಿದೆಯಂತೆ. ಆದ್ದರಿಂದ ಈ ಸೀರೆಯನ್ನು ನೋಡಿ ನಿಮ್ಮನ್ನು ಮಾತನಾಡಿಸಬೇಕು ಎಂದಿದ್ದಾಳೆ." ಎಂದು ವಿನಂತಿಸಿಕೊಂಡಳು. ಪುಟ್ಟ ಹುಡುಗಿಯೊಬ್ಬಳು ಅಜ್ಜಿಯ ಹಿಂದೆ ಬಂದು ಸೀರೆಯನ್ನು ಮುಟ್ಟಿ ನೋಡಿ ಪ್ರಶ್ನೆಗಳನ್ನು ಕೇಳಲಾರಂಭಿಸಿದಳು. ನನ್ನ ಸ್ನೇಹಿತನ ಹೆಂಡತಿಗೆ ಇಂಗ್ಲೀಷ್ ಚೆನ್ನಾಗಿ ಬರುತ್ತಿರಲಿಲ್ಲವಾದ್ದರಿಂದ ಪ್ರಶ್ನೆಗಳಿಗೆಲ್ಲ ನಾನೇ ಉತ್ತರ ಕೊಡಬೇಕಾಯಿತು. ಮಧ್ಯವಯಸ್ಕಳೊಬ್ಬಳು ಬಂದು ತನ್ನ ಊರವರಿಗೆ ಸೀರೆಯನ್ನು ತೋರಿಸುವ ಉತ್ಸುಕತೆಯಿಂದ ನಮ್ಮ ಹತ್ತಿರ ಬಂದು,

"ಫೋಟೋ ತೆಗೆಯಬಹುದೇ?" ಎಂದು ದೈನ್ಯದಿಂದ ವಿನಂತಿಸಿಕೊಂಡಳು. ಗೆಳೆಯನ ಹೆಂಡತಿ ಹಿಗ್ಗಿನಿಂದ ಕೂಡಲೆ ಒಪ್ಪಿದಳು. ಸರಿ, ಒಂದು, ಎರಡು, ಮೂರು,

ನಾಲ್ಕು ಬಾರಿ ಕ್ಯಾಮರಾ ಕ್ಲಿಕ್ ಎಂದಿತು. ನನ್ನ ಗೆಳೆಯ ಇನ್ನೂ ನಮ್ಮನ್ನು ಸೇರಿಕೊಂಡಿರಲಿಲ್ಲವಾದ್ದರಿಂದ ಆತನಿಗೆ ಕಾಯುತ್ತ ಒಂದೆಡೆ ನಿಂತಿದ್ದವು. ಅಲ್ಲೂ ಕೆಲ ಅಮೇರಿಕನ್ನರು ಬಂದು ಫೋಟೋಗಾಗಿ 'ಫೋಜ್' (pose) ಕೊಡುವಂತೆ ಪ್ರಾರ್ಥಿಸಿ ಕೊಂಡರು. ನಾವು ಪತಿ-ಪತ್ನಿಯರೆಂದೇ ಅವರು ತಿಳಿದು ಕೊಂಡಿರಬೇಕು. ನನಗೆ ಬಹಳ ತೊಂದರೆಗಿಟ್ಟುಕೊಂಡಿತು. ಆದರೆ ಗೆಳೆಯನ ಹೆಂಡತಿ ಫೋಟೋ ತೆಗೆಸಿಕೊಳ್ಳಲು ಬಹಳ ಉತ್ಸಾಹ ತೋರಿಸಿ. ಕೇಳುವವರಿಗೆಲ್ಲ ತನಗೆ ತಿಳಿದ ಇಂಗ್ಲೀಷದಲ್ಲಿ ಆಗಲೆಂದು ಕೂಡಲೇ ಉತ್ತರಿಸುತ್ತಿದ್ದಳು. ಸರಿ, ನಾನು ಬೇಡವೆನ್ನುವ ಮೊದಲೇ ಅವಳನ್ನು ನನ್ನ ಪಕ್ಕದಲ್ಲಿ ತಮಗೆ ಬೇಕಾದಂತೆ ನಿಲ್ಲಿಸಿ ಒಂದೇ ಸವನೇ ಫೋಟೋ ತೆಗೆಯಲಾರಂಭಿಸಿದರು! ಸ್ನೇಹಿತನ ಮಕ್ಕಳೂ ನನ್ನ ಪಕ್ಕದಲ್ಲಿ ನಿಂತವು! ನೂರಾರು ಕ್ಯಾಮರಾಗಳು ನಾಲ್ಕೂ ದಿಕ್ಕಿನಿಂದ ಬಂದು ಕ್ಲಿಕ್ ಕ್ಲಿಕ್ ಎನ್ನತೊಡಗಿದವು. ಹೀಗೆ ಮದುವೆಯಾಗುವ ಮೊದಲೇ "ಸಂಸಾರ"ದೊಂದಿಗೆ ತೆಗೆದ ನನ್ನ ಫೋಟೋ ನೂರಾರು ಅಮೇರಿಕನ್ ಮನೆಗಳಲ್ಲಿ ಅಲಂಕರಿಸಿರಬೇಕು!

ಈ ಘಟನೆಯನ್ನು ರೊಥ್ ಕುಟುಂಬದವರಿಗೆ ವಿವರಿಸುತ್ತ,

"ಭಾರತದ ಸೀರೆ ಹೀಗೆ ಅಮೇರಿಕನ್ನರಿಗೆ ಎಣೆಯಿಲ್ಲದ ಸೋಜಿಗದ ವಸ್ತುವಾಗಿಬಿಟ್ಟಿದೆ!" ಎಂದು ಅವರತ್ತ ತಿರುಗಿ 'ಸಮ್'ಗೆ ಬಂದು ಮುಟ್ಟಿದೆ.

"ಭಾರತದಲ್ಲಿ ವಿಧವೆಯರು ಇದ್ದಾರೆಯೇ? ಅವರು ಪತಿಯೊಡನೆ ಸತಿ ಹೋಗುತ್ತಾರೆಂದು ಎಲ್ಲೋ ಓದಿದ ನೆನಪು."

"ನೀವು ಹೇಳುವುದು ಶತಮಾನಗಳ ಹಿಂದಿನ ಮಾತು. ಯಾಕೋ ಏನೋ ಅಮೇರಿಕನ್ ವೃತ್ತಪತ್ರಗಳೂ, ಟಿ.ವಿಯೂ ಇಂಥ ವಿಚಿತ್ರ ಸಮಾಚಾರ ಹರಡುವದರಲ್ಲಿಯೇ ತೊಡಗಿವೆ. ಭಾರತದ ಹಾವಾಡಿಗರು, ಜೂದಾಗಾರರು, ಮಹಾರಾಜರು, ಭಿಕ್ಷುಕರು, ದನ-ಕರುಗಳು (ಇವು ಭಾರತದಲ್ಲಿ ಪೋಲಿಸರ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತವೆಯಂತೆ!) ಇದೇ ವಿಷಯುಗಳು ಸುಳ್ಳಿನ ಮಸಾಲೆಯೊಂದಿಗೆ ರೋಚಕವಾಗುವಂತೆ ಪತ್ರಿಕೆ, ರೇಡಿಯೋ, ಟಿ.ವಿಗಳಲ್ಲಿ ಕಾಣುತ್ತವೆ. ಭಾರತಕ್ಕೆ ಹೋದ ಅಮೇರಿಕನ್ನರಾದರೂ ಇಂತಹ ವಿಷಯಗಳ ಬಗ್ಗೆಯೇ ಮಾಹಿತಿ ಸಂಗ್ರಹಿಸಿ ಚಿತ್ರಗಳನ್ನು ತೆಗೆದುಕೊಂಡು ಬರುತ್ತಾರೆ. ಕುರುಡರು ಆನೆ ನೋಡಿದಂತೆ ಮಾಡುತ್ತಾರೆ. ಏನು ಸಾಧಿಸುತ್ತಾರೋ ತಿಳಿಯದು. ಅದು ಇಲ್ಲಾ ಎಂದಲ್ಲ. ಅದೇ ಎಲ್ಲಾ ಅಲ್ಲ. ಭಾರತದಲ್ಲಿರುವ ಸಹಸ್ರಾರು ಜೀವನಮುಖಗಳಲ್ಲಿ ಅದೊಂದು ಮುಖ ಅಷ್ಟೆ. ಅಮೇರಿಕನ್ನರು-ಭಾರತಕ್ಕೆ ಹೋಗಿ ಬಂದವರೇ ಆಗಲಿ, ಇಲ್ಲಿದ್ದವರೇ ಆಗಲಿ-ಭಾರತದ ಗುಣಾಂಶಗಳನ್ನು ನೋಡುವ ಪರಿಪಾಠ ಏಕೆ ಹಾಕಿಕೊಂಡಿಲ್ಲವೋ ಏನೋ?"

"ನಮ್ಮ ವರ್ತಮಾನ-ಪತ್ರಗಳು, ರೇಡಿಯೋ, ಟಿ.ವಿಗಳು ಉಳಿದ ದೇಶಗಳಲ್ಲಿಯಂತೆ ಸರಕಾರದಿಂದ ನಿಯಂತ್ರಿತವಾಗಿದ್ದರಿಂದ ತಮ್ಮ ಈ ಸ್ವಾತಂತ್ರ್ಯದ ಸುದಪಯೋಗ ವಾಗುತ್ತಿದೆಯೆಂದು ನಂಬಿದ್ದೆ. ಆದರೆ ಸ್ವಾತಂತ್ರ್ಯಪ್ರಿಯ ಜನರಿಗೆ ಈ ರೀತಿಯ ಸಂಕುಚಿತ ಸಮಾಚಾರಗಳು ದೊರೆಯುತ್ತವೆಂದರೆ ಆಶ್ಚರ್ಯದ ಮಾತಿನಕ್ಕಿಂತ ವಿಷಾದದ ಮಾತು." ಜೇಕ್ ನುಡಿದರು.

"ಅಲ್ಲಿಯೇ ಬಂದಿದೆ ತೊಡಕು. ಜನರ ಒಲವು ನಿಲವುಗಳ ಪ್ರಕಾರ ಸುದ್ದಿ.

ಸಮಾಚಾರಗಳಿಗೆ ಪ್ರಾಧಾನ್ಯ ಕೊಡಲಾಗುತ್ತಿದೆ. ಸುದ್ದಿಯ ಸಾರವಲ್ಲದಿದ್ದರೂ ಬರವಣಿಗೆಯ ಕೌಶಲ್ಯದಿಂದ ಅದನ್ನು ಜನಪ್ರಿಯ ಮಾಡಲು ಈ ಜನ ಬಲ್ಲರು. ಅಮೇರಿಕನ್ನರಿಗೆ ಹೊಸತನದ ಹಪಾಪಿ ಹೆಚ್ಚು. ಸದಾ ಕುತೂಹಲ ಕೆರಳಿಸುವ (exciting) ಘಟನೆಗಳನ್ನೇ ಬಯಸುತ್ತಾರೆ. ಪತ್ರಿಕಾಕಾರರಾದರೂ ಜನತೆಯ ಈ ಬಯಕೆಯನ್ನು ಪೂರೈಸುವದರಲ್ಲಿಯೇ ಸದಾ ತೊಡಗಿದ್ದಾರೆ. ಇಲ್ಲಿನ ಪ್ರಮುಖ ಪತ್ರಿಕೆಯಾದ 'ನ್ಯೂಯಾರ್ಕ ಟಾಯಿಮ್ಸ್' ಕೂಡ ಇದಕ್ಕೆ ಅಪವಾದವಲ್ಲ. ಭಾರತದ ಬಗ್ಗೆ ಯಾವಾಗಲೂ ವಕ್ರವಿಚಾರಗಳೇ (biased) ಕಂಡುಬರುತ್ತವೆ. ಇದಕ್ಕೆ ಉದಾಹರಣೆ ಬೇಕೆಂದರೆ, ಮೊನ್ನೆ ಭಾರತವು ಗೋವೆಯ ವಿಮೋಚನೆ ಮಾಡಿದಾಗ ಒಂದಾದರೂ ಅಮೇರಿಕನ್ ಪತ್ರಿಕೆ ಸತ್ಯವಾದ ಘಟನೆಯನ್ನು ಪ್ರಕಟಿಸಿತೇ?" ಎಂದು ಕೇಳಿದೆ. ಅದಕ್ಕೆ ಜೇಕ್ ತಿರುಗಿ ನನ್ನನ್ನೇ ಕೇಳಿದ:

"ಹಾಗಾದರೆ ಕ್ರಿಶ್ ನಿಜವಾಗಿ ಘಟಿಸಿದ್ದಾದರೂ ಏನು?"

"ಇಲ್ಲಿಯ ವೃತ್ತಪತ್ರಿಕೆಗಳು 'ಗೋವಾ ನಾಲ್ಕು ನೂರು ವರ್ಷಗಳಿಂದ ಪೋರ್ತುಗಾಲದ ಅವಿಭಾಜ್ಯ ಅಂಗವೆಂದೂ ಅಲ್ಲಿಯ ಜನಸಂಖ್ಯೆ ನೂರಕ್ಕೆ ಅರವತ್ತರಷ್ಟು ಕ್ರಿಶ್ಚನ್‌ರೆಂದೂ, ಅಲ್ಲಿಯ ಜನತೆಯ ಇಚ್ಛೆಯ ವಿರುದ್ಧ ಭಾರತ ಸರಕಾರ ಸೈನ್ಯ ಕಳಿಸಿ ಆ ಪ್ರದೇಶವನ್ನೆಲ್ಲ ಆಕ್ರಮಿಸಿತು.' ಎಂದು ಸಾರಿದವು..."

ಜೇನ್ ನಡುವೆಯೇ....

"ಪೋರ್ತುಗೀಜರ ಪ್ರದೇಶವನ್ನು ನೀವು ಆಕ್ರಮಿಸಿದ್ದು ತಪ್ಪಲ್ಲವೇ?" ಎಂದು ಕೇಳಿದಳು.

"ನ್ಯೂಯಾರ್ಕ್ ನಗರವನ್ನು ಭಾರತ ಸರಕಾರವು ನಾಲ್ಕು ನೂರು ವರ್ಷ ತನ್ನ ವಶದಲ್ಲಿಟ್ಟುಕೊಂಡರೆ ನ್ಯೂಯಾರ್ಕವು ಎಂದಾದರೂ ಭಾರತದ ಅವಿಭಾಜ್ಯ ಭಾಗವಾದೀತೆ?" ಎಂದು ನಾನೇ ಅವರನ್ನು ಕೇಳಿದೆ. ಅದಕ್ಕೆ ಜೇಕ್ ಅಂದ:

"ಹಾಗಿದ್ದರೆ ಗೋವಾ ಪೋರ್ತುಗಾಲದ ಭಾಗವಲ್ಲವೆ? ಅದೊಂದು ಪೋರ್ತುಗಾಲದ ಹತ್ತಿರವೇ ಇದ್ದ ನಡುಗಡ್ಡೆಯೆಂದು ತಿಳಿದಿದ್ದೆ."

"ಗೋವಾ ನಮ್ಮ ಊರಿನಿಂದ ಐವತ್ತು ಮೈಲಿನ ಒಳಗೇ ಇದೆ. ನನ್ನ ಮಾತೃಭಾಷೆ ಮತ್ತು ಗೋವಾದ ಭಾಷೆ ಒಂದೇ ಆಗಿದೆ. ಕೆಲವು ತಲೆಮಾರಿನ ಹಿಂದೆ ನಮ್ಮ ಪೂರ್ವಜರು ಪೋರ್ತುಗೀಜರಿಂದ ಬಲತ್ಕಾರದ ಕ್ರಿಶ್ಚಿನ್ ಧರ್ಮಾಂತರ ತಪ್ಪಿಸಲು ಗೋವೆಯಿಂದ ಓಡಿ ಬಂದರು. ನಮ್ಮ ಕುಲದೇವತೆಯ ದೇವಾಲಯವಿನ್ನೂ ಗೋವಾದಲ್ಲಿಯೇ ಇದೆ. ಗೋವೆಯ ಜನರ ಭಾಷೆ, ಆಹಾರ, ಉಡುಗೆ-ತೊಡಿಗೆ ಎಲ್ಲ ನನ್ನ ಮನೆಯ ಪದ್ಧತಿಯಂತೆಯೇ ಇದೆ. ನಾನು ಭಾರತೀಯನಿದ್ದಷ್ಟೆ ಗೋವಾದ ಜನರೂ ಭಾರತೀಯರಾಗಿದ್ದಾರೆ."

"ಗೋವಾ ಬಗ್ಗೆ ನನಗೆ ಹೆಚ್ಚು ತಿಳಿಯದು, ಆದರೆ ಕಾಶ್ಮೀರ ನ್ಯಾಯವಾಗಿ ಪಾಕಿಸ್ತಾನಕ್ಕೆ ಸೇರಬೇಕಾದದ್ದು. ನಿಮ್ಮ ನಾಯಕರಾದ ಮಿ॥ ಗ್ಯಾಂಡಿ (ಗಾಂಧಿಯ ಅಪಭ್ರಂಶ!)ಯವರು ಜಾತಿಯ ತಳಹದಿಯ ಮೇಲೆ ವಿಭಾಗಿಸಲು ಒಪ್ಪಿ, ಹಿಂದುಗಳ ಇಂಡಿಯವನ್ನೂ ಮುಸಲ್ಮಾನರ ಪಾಕಿಸ್ತಾನವನ್ನೂ ನಿರ್ಮಿಸಲಿಲ್ಲವೇ? ಕಾಶ್ಮೀರದಲ್ಲಿ ಶೇಕಡಾ ೬೦ಕ್ಕಿಂತ ಹೆಚ್ಚು ಜನ ಮುಸಲ್ಮಾನರಿರುವದರಿಂದ ಅದು ನ್ಯಾಯವಾಗಿ

ಪಾಕಿಸ್ತಾನಕ್ಕೆ ಹೋಗಬೇಡವೇ? ಇಷ್ಟಿದ್ದರೂ ಸೈನ್ಯಬಲದಿಂದ ಕಾಶ್ಮೀರವನ್ನು ಏಕೆ ಭಾರತದಲ್ಲಿ ಸೇರಿಸಿದ್ದಾರೆ?" ಎಂದು ಜೇಕ್ ತನ್ನ ಸೋಲು ತಪ್ಪಿಸಿಕೊಳ್ಳಲು ಒಂದರಿಂದ ಇನ್ನೊಂದು ವಿಷಯಕ್ಕೆ ಜಿಗಿದರು.

"ನೀವು ಹೇಳಿದ್ದು ಅಕ್ಷರಶಃ ನಿಮ್ಮ ವೃತ್ತಪತ್ರಗಳ ಹೇಳಿಕೆಯಾಗಿದೆ. ಆದರೆ ಇದು ಸತ್ಯದಿಂದ ಬಹಳ ಬಹಳ ದೂರವಿದೆ. ಹೋದಲ್ಲೆಲ್ಲ ಪಂಗಡಗಳನ್ನು ಮಾಡಿ ಆಳುವುದು ಬ್ರಿಟಿಷರ ಪದ್ಧತಿಯಾಗಿತ್ತು. ಅವರಿಗೆ ಭಾರತ ಬಿಟ್ಟು ತೊಲಗುವ ಮನಸ್ಸಿರದ್ದರಿಂದ ಹೋಗುವ ಮೊದಲು ಪಾಕಿಸ್ತಾನದ ನಿರ್ಮಾಣ ಮಾಡಿ ಹೋದರು. ಇವರನ್ನು ಭರದಿಂದ ತೊಲಗಿಸಬೇಕಾದರೆ ಭಾರತ, ಪಾಕಿಸ್ತಾನ ನಿರ್ಮಾಣಕ್ಕೆ ಒಪ್ಪಬೇಕಾಯಿತು. ಈ ದೇಶದ ಇಬ್ಭಾಗದಲ್ಲಿ ಎರಡೂ ಕಡೆಯ ಕೆಲವು ನಾಯಕರದಷ್ಟೇ ಕೈವಾಡವಿತ್ತೇ ಹೊರತಾಗಿ ಪಾಕಿಸ್ತಾನ ಬೇಕೆಂದು ಅಖಂಡ ಭಾರತದ ಮುಸಲ್ಮಾನರೆಲ್ಲ ಎಂದೂ ಕೇಳಿಕೊಳ್ಳಲಿಲ್ಲ. ಇಂದಿಗೂ ಎರಡೂ ದೇಶದ ಜನತೆ ಇದೇ ರೀತಿಯ ಅಭಿಪ್ರಾಯವುಳ್ಳದ್ದಾಗಿದೆ. ಪಾಕಿಸ್ತಾನದ ಅರ್ಧದಷ್ಟು ಮುಸಲ್ಮಾನರು ಭಾರತದಲ್ಲಿದ್ದಾರೆ! ಜಾತೀಯತೆಯ ಮೇಲೆ ಕಾಶ್ಮೀರ ಪಾಕಿಸ್ತಾನಕ್ಕೆ ಹೋಗಬೇಕೆಂದರೆ ಭಾರತದ ಹತ್ತು ಕೋಟಿಗಿಂತ ಹೆಚ್ಚು ಮುಸಲ್ಮಾನರು ಎಲ್ಲಿ ಹೋಗಬೇಕು? ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಅಲ್ಲದೇ ವಿಭಜನೆಯ ವೇಳೆಯಲ್ಲಿ ಸ್ವತಂತ್ರವಿದ್ದ ಸಂಸ್ಥಾನಿಕರಿಗೆಲ್ಲ ಭಾರತ ಇಲ್ಲವೇ ಪಾಕಿಸ್ತಾನದಲ್ಲಿ ಸೇರ್ಪಡೆಯಾಗುವ ಸ್ವಾತಂತ್ರ್ಯವಿತ್ತು. ಅದರ ಪ್ರಕಾರ ಕಾಶ್ಮೀರದ ಅರಸು ಭಾರತ ಒಕ್ಕೂಟಕ್ಕೆ ಸೇರಿದರೆ ತಪ್ಪೇನು? ಭಾರತ ಕೇವಲ ಹಿಂದೂಗಳ ರಾಷ್ಟ್ರವಿರದೇ ವಿವಿಧ ಜಾತಿ, ಜನಾಂಗ, ಪಂಗಡ, ಧರ್ಮಗಳ ರಾಷ್ಟ್ರವಾಗಿದೆ. ನಮ್ಮದು ಜಾತ್ಯಾತೀತ ರಾಷ್ಟ್ರ. ನಮ್ಮ ಉಪರಾಷ್ಟ್ರಪತಿಗಳು ಮುಸ್ಲಿಂ ಧರ್ಮದವರಿದ್ದಾರೆ. ಪ್ರತಿಷ್ಠಿತ ಹೊಣೆಗಾರಿಕೆಯ ಸ್ಥಾನಗಳಲ್ಲೆಲ್ಲ ಮುಸ್ಲಿಂರಿದ್ದಾರೆ.... ಹಾಗೆ ನೋಡಿದರೆ ಪಾಕಿಸ್ತಾನಕ್ಕೆ ಕಾಶ್ಮೀರದ ಮೇಲೆ ಯಾವ ರೀತಿಯಲ್ಲೂ ಅಧಿಕಾರವಿಲ್ಲ. ಪಾಕಿಸ್ತಾನಕ್ಕೆ ನಿಜಕ್ಕೂ ಕಾಶ್ಮೀರ ಬೇಕಾಗಿಲ್ಲ. ಆದರೆ ದೇಶದ ದಾರಿದ್ರ್ಯ, ಕೊರತೆಗಳಿಂದ ಸಂತ್ರಸ್ತ ಜನತೆಯ ಲಕ್ಷ್ಯವನ್ನು ಬೇರಡೆ ಸೆಳೆಯುವುದಕ್ಕೆ, ಧಾರ್ಮಿಕ ಭಾವನೆಗಳನ್ನು ಕೆಣಕಿ ಉದ್ರೇಕಿಸಲಿಕ್ಕೆ ಕಾಶ್ಮೀರ ಒಂದು ಸಾಧನವಾಗಿದೆ."

"ಪಾಕಿಸ್ತಾನದ ಜನತೆಗೆ ಕಾಶ್ಮೀರದ ಬಗ್ಗೆ ಅಷ್ಟು ಆದರವಿಲ್ಲವೆಂದು ನಿನಗೆ ಹೇಗೆ ಗೊತ್ತು?"

"ಬಹುಶಃ ಪಾಕಿಸ್ತಾನ–ಭಾರತದವರು ಆಜನ್ಮ ವೈರಿಗಳೆಂದು ನೀವು ತಿಳಿದಿರಬಹುದು. ಕಳೆದ ಮೂರು ವರ್ಷಗಳಿಂದ ನಾವು ಇಬ್ಬರು ಭಾರತೀಯರು, ಇಬ್ಬರು ಪಾಕಿಸ್ತಾನಿಗಳು ಒಟ್ಟಿಗಿದ್ದೇವೆ ಎಂದರೆ ನಂಬುತ್ತೀರಷ್ಟೆ? ನಾವೆಲ್ಲ ಕೂಡಿ ಅಡಿಗೆ ಮಾಡುತ್ತೇವೆ. ಊಟ ಮಾಡುತ್ತೇವೆ, ಪರಸ್ಪರ ಗೇಲಿ ಮಾಡುತ್ತ ಬಹಳ ಮೋಜಿನಿಂದ ಇದ್ದೇವೆ. ನಮ್ಮಲ್ಲಿ ಈ ತನಕ ಯಾವದೇ ಒಳಭೇದ, ಜಗಳಗಳು ಬಂದಿಲ್ಲ. ಕಾಶ್ಮೀರದ ವಿಷಯದಲ್ಲಿ ಎರಡೂ ಸರಕಾರಗಳು ಕೂಡಿಕೊಳ್ಳುವುದು ಇದೆ ಎಂದು ಎರಡೂ ದೇಶದ ವಿಚಾರವಂತರೂ ಒಪ್ಪುತ್ತಾರೆ. ರಾಜಕಾರಣದಲ್ಲಿ ವಿರುದ್ಧ ಪಂಗಡಗಳಿಗೆ ಸೇರಿದ ದೇಶದ ನಾಗರಿಕರು ಒಂದೇ ಮನೆಯವರಂತೆ ವಾಸಿಸುತ್ತಾರೆಂದು ತಿಳಿದಾಗ ಬಹಳಷ್ಟು ಅಮೇರಿಕನ್ನರಿಗೆ

ಆಗುವ ಆಶ್ಚರ್ಯ ಅಷ್ಟಿಷ್ಟಲ್ಲ. ಸರಕಾರವೆಂದರೆ ಸರ್ವಜನಾಭಿಪ್ರಾಯವಲ್ಲ ಎಂಬ ಮಾತು ನಿಜವಷ್ಟೆ? ಬಹುಶಃ ಅಮೇರಿಕನ್ ಜನಸಾಮಾನ್ಯರಿಗೂ ರಶಿಯನ್ ಜನಸಾಮಾನ್ಯರಿಗೂ ನಾವು ತಿಳಿದಷ್ಟು ಭೇದವಿದೆಯೋ ಇಲ್ಲವೋ?"

"ನೀನನ್ನುವುದು ನಿಜ. ನನಗೇನಾದರೂ ರಶಿಯಕ್ಕೆ ಹೋಗಿ ಅಲ್ಲಿಯ ಜನರ ಸಂಪರ್ಕ ಬಂದರೆ ಈಗಿರುವಷ್ಟು ರಶಿಯದ ಬಗ್ಗೆ ಅನಾದರ ಆಗ ಉಳಿಯುತ್ತದೋ ಇಲ್ಲವೋ!"

"ಹಿಂದೂ-ಮುಸಲ್ಮಾನರು ಶತಮಾನಗಟ್ಟಲೆಯಿಂದ ಸಹಜೀವನ ನಡೆಸುತ್ತ ಬಂದಿದ್ದಾರೆ. ಒಮ್ಮೆಲೇ ಮುಸಲ್ಮಾನ ಮುಖಂಡರಿಗೆ ಪ್ರತ್ಯೇಕ ರಾಜ್ಯವೊಂದು ಬೇಕಾಯಿತು. ನಿಜವಾಗಿ ಹೇಳಬೇಕೆಂದರೆ ಈ ವ್ಯವಸ್ಥೆ ಪೂರ್ವಪಾಕಿಸ್ತಾನಗಳ ಮುಸಲ್ಮಾನರಿಗೇ ಇಲ್ಲ! ನಮ್ಮಲ್ಲಿಯ ಮುಸಲ್ಮಾನರಾದರೂ ಭಾರತದ ನೆಲದೊಡನೆ ಒಂದಾಗಿದ್ದಾರೆ. ನನಗೆ ಶಾಲಾ ದಿನಗಳಿಂದ ಮುಸಲ್ಮಾನ ಗೆಳೆಯರಿದ್ದಾರೆ."

ಜೇಕ್ ಹೊರಗೆ ಹೋಗಬೇಕಾದ್ದರಿಂದ ನಮ್ಮ ಸಂಭಾಷಣೆ ಅಲ್ಲಿಗೆ ನಿಂತಿತು. ಜೀನ್ ಮತ್ತೆ ಅಡಿಗೆಮನೆ ಸೇರಿದಳು. ನಾನು ಒಳಗೆ-ಹೊರಗೆ ಮಕ್ಕಳೊಡನೆ ಮಾತನಾಡುತ್ತ ಸುತ್ತಾಡುತ್ತಿದ್ದೆ. ಒಂದೆಡೆ ರಾಶಿ ಹಾಕಿದ ಕಾಗದ ಮತ್ತು ಪ್ಲಾಸ್ಟಿಕ್‌ದ ಹೊರಚೀಲಗಳು, ಖಾಲಿ ಟಿನ್ನುಗಳ ಕಡೆಗೆ ನನ್ನ ಲಕ್ಷ್ಯ ಹರಿಯಿತು. ಜೀನ್‌ಳಿಗೆಂದೆ:

"ಅದಾಗಲೇ ಹೇಳಿದ್ದೆನಲ್ಲವೇ? ಅಮೇರಿಕನ್ನರಿಗೆ ಹೊಸತನದ ಹಪಾಪಿ ಬಹಳೆಂದು, ನೋಡು, ಪ್ರತಿಯೊಂದು ಪೊಟ್ಟಣಕ್ಕೆ ಹೊಸ ರೀತಿಯ ತಯಾರಿಕೆ, ಹೊಸ ಆಕಾರ, ಹೊಸ ಸುವಾಸನೆ, ಹೊಸ ಬಣ್ಣ-ಏನೂ ಇಲ್ಲವೆಂದರೆ ಹೊಸ ನಮೂನೆಯ ಪೆಕೆಟ್ ಎಂದಾದರೂ ಬರೆಯುತ್ತಾರೆ.

ಜೀನ್ ಕುತೂಹಲದಿಂದ ಎಲ್ಲ ಪೊಟ್ಟಣಗಳನ್ನೂ ಪರಿಶೀಲಿಸಿದಳು. ಎಲ್ಲ ಪೊಟ್ಟಣಗಳಲ್ಲಿ 'ಹೊಸ' ಶಬ್ದ ಒಂದಿಲ್ಲೊಂದು ರೀತಿಯಲ್ಲಿ ಸೇರಿಸಲಾಗಿತ್ತು. ಮತ್ತೆ ಹೋಗಿ ಕಪಾಟು, ರಿಫ್ರಿಜಿರೇಟರ್‌ಗಳ ಬಾಗಿಲು ತೆಗೆದು ಅವುಗಳಲ್ಲಿಟ್ಟ ಪೊಟ್ಟಣಗಳನ್ನು ನೋಡಿದಳು. ಅವುಗಳ ಮೇಲೆಯೂ ಹಾಗೇ ಬರೆಯಲಾಗಿತ್ತು. ಆಶ್ಚರ್ಯದಿಂದ ಜೀನ್‌ಳೆಂದಳು:

"ಕ್ರಿಶ್, ನಾನು ಎಷ್ಟೊಂದು ವರ್ಷಗಳಿಂದ ಈ ಜೀನಸುಗಳನ್ನು ತಂದು ಅಡಿಗೆ ಮಾಡುತ್ತಿದ್ದೇನೆ. ಆದರೆ ಒಮ್ಮೆಯೂ ಇಂತಹ ಸಂಶೋಧನೆ ಮಾಡಿರಲಿಲ್ಲ. ನಮ್ಮಲ್ಲಿ ಜಾಹೀರಾತುಗಳ ಜಾಡ್ಯ ದಿನದಿನಕ್ಕೆ ಬೆಳೆದಂತೆ ನಾವು ಇವಕ್ಕೆಲ್ಲ ಕುರುಡರಾಗಲಿಕ್ಕೆ ಹತ್ತಿದ್ದೇವೆ."

ಅವರಲ್ಲಿದ್ದ ಮೂರೂ ದಿನ ರೊಥ್-ದಂಪತಿಗಳು ನೂರಾರು ಸಾಮಾಜಿಕ, ರಾಜಕೀಯ ಪ್ರಶ್ನೆಗಳನ್ನೆತ್ತಿ ಚರ್ಚೆಗೆಳೆಯುತ್ತಿದ್ದರು. ಇಂತಹ ಚರ್ಚೆಗಳಲ್ಲಿ ನನ್ನದೇ ಮೇಲುಗೈ ಆಗುತ್ತಿತ್ತು. ಅತಿಥಿಯನ್ನು ನೋಯಿಸಬಾರದೆಂದು ಅವರು ಸೋಲು ಒಪ್ಪುತ್ತಿದ್ದರೋ ಅಥವಾ ಉಳಿದ ಅಮೇರಿಕನ್ನರಂತೆಯೇ ಬಲು ಬೇಗ ವಾದಿಸಲಾಗದೇ ಸೋಲುತ್ತಿದ್ದರೋ ಎಂದು ಹೇಳುವುದು ಕಷ್ಟ! ಆದರೆ ಹೆಮಲಿನ್ ಕುಟುಂಬದಂತೆ

ನಿರ್ವ್ಯಾಜ್ಯ ಪ್ರೀತಿ, ಆತ್ಮೀಯತೆಗಳು ನನಗೆ ಇಲ್ಲೂ ದೊರಕಿದವು. ನಾನು ಹೊರಡುತ್ತಿದ್ದಂತೆ,

"ಕ್ರಿಶ್, ನಮ್ಮಷ್ಟು ಬುದ್ಧಿವಂತರು, ಸುಸಂಸ್ಕೃತರು ಜಗತ್ತಿನಲ್ಲಿ ಇನ್ನಾರೂ ಇಲ್ಲವೆಂದು ಅಮೇರಿಕನ್ನರಿಗೆ ದುರಭಿಮಾನ ಬಂದುಬಿಟ್ಟಿದೆ.... ಭಾರತೀಯರೆಂದರೆ ಹಿಂದುಳಿದವರು, ಹೊಟ್ಟೆಗಿಲ್ಲದವರು ಎಂಬ ಭಾವನೆ ನಮ್ಮದಾಗಿತ್ತು. ನಿನ್ನಂತಹ ರಾಜಕಾರಣ ಸೋಂಕದ 'ಸಾಂಸ್ಕೃತಿಕ ರಾಯಭಾರಿ'ಯನ್ನು ಭೆಟ್ಟಿಯಾದಾಗ ವಸ್ತುಸ್ಥಿತಿಯ ಕಲ್ಪನೆಯಾಗುತ್ತದೆ. ನಿನ್ನ ಸಹವಾಸ (company) ಒದಗಿದ್ದಕ್ಕಾಗಿ ಅನೇಕ ಧನ್ಯವಾದಗಳು." ಎಂದು ಮನಸ್ಸು ತುಂಬಿ ಬೀಳ್ಕೊಟ್ಟಾಗ ರೊಥ್ ದಂಪತಿಗಳ ಹೃದಯ ಭಾವೋದ್ವೇಗದಿಂದ ಭಾರವಾಗಿತ್ತು.

* * *

ಸಿರಿ ಇಲ್ಲದ ಸಿರಿವಂತರು

ಸಿರಿವಂತಿಕೆಯಂದರೇನು? ಯಾರಿಗೆ ಸಿರಿವಂತರನ್ನೆಬೇಕು? ಎಂಬ ವಿಚಾರ ಯುಗಯುಗಗಳಲ್ಲಿ ಬದಲಾಗುತ್ತ ಬಂದಿದೆ. ಆಕಳುಗಳ ಸಂಖ್ಯೆಯಿಂದ (ಗೋಧನ) ಸಿರಿವಂತಿಕೆಯನ್ನು ಅಳೆಯುವ ಕಾಲವೊಂದಿದ್ದರೆ, ಹೊಲ-ಮನೆಗಳಿಂದ ಸಿರಿವಂತಿಕೆಯ ಪ್ರಮಾಣ ಗೊತ್ತುಮಾಡುವ ಕಾಲವೊಂದಿತ್ತು. ನಂತರ ನಗ-ನಾಣ್ಯ, ಹಣ-ಹೊನ್ನುಗಳು ಮಾಪನವಾದವು. ಇತ್ತಿಚಿಗೆ ಆಧುನಿಕ ಜೀವನದ ಸೌಕರ್ಯ ಸಾಮಗ್ರಿಗಳು ಸಿರಿವಂತಿಕೆಯ ಮಾನದಂಡವಾಗಿವೆ. ಈ ದೃಷ್ಟಿಯಲ್ಲಿ ಅಮೇರಿಕೆ ಜಗತ್ತಿನಲ್ಲಿ ಸಿರಿವಂತ ರಾಷ್ಟ್ರವೆಂಬ ಸಾಮಾನ್ಯ ಮಾತನ್ನು ಎಲ್ಲರೂ ಬಲ್ಲರು. ಅಮೇರಿಕೆಯಲ್ಲಿ ನಿಸರ್ಗ-ಸಂಪತ್ತು ಹೇರಳವಾಗಿದೆ. ಜೊತೆಗೆ ಮಾನವನಿರ್ಮಿತ ಸುಖ-ಸಂಪತ್ತು ದಿನದಿನಕ್ಕೆ ಹೆಚ್ಚತೊಡಗಿದೆ. ಪ್ರತಿಯೊಬ್ಬ ಅಮೇರಿಕನ್ ನಾಗರಿಕನಿಗೆ ತನ್ನದೇ ಮನೆ, ರೇಡಿಯೋ, ಟೆಲಿವಿಜನ್, ಕಾರು ಮೊದಲಾದವುಗಳಿರುತ್ತವೆ. ಈಗ ಪ್ರತಿ ಮೂರು ವ್ಯಕ್ತಿಗಳಿಗೊಂದು ಕಾರು ಇದ್ದರೆ, ಪ್ರತಿ ಒಬ್ಬರಿಗೂ ಒಂದು ಕಾರು ದೊರೆಯುವಂತಾಗಬೇಕು ಎಂದು ಅವರದು ರಾಷ್ಟ್ರೀಯ ಮಹತ್ವಾಕಾಂಕ್ಷೆಯಂತೆ! ಇಷ್ಟೆಲ್ಲ ಸುಖಸಾಧನಗಳಿದ್ದರೂ ಅಮೇರಿಕನ್ನರನ್ನು ಭಾರತೀಯ ದೃಷ್ಟಿಕೋನದಿಂದ ಸಿರಿವಂತರೆಂದು ಕರೆಯಬಹುದೇ? ಇಲ್ಲವೆಂದರೆ ಭಾರತದ ಹೊರಗೆ ಹೋಗದ ಎಷ್ಟು ಜನ ಭಾರತೀಯರು ಇದನ್ನು ನಂಬಬಹುದು?

ಭಾರತದಂತೆಯೇ ಅಮೇರಿಕೆಯಲ್ಲೂ ಮಧ್ಯಮವರ್ಗದವರೇ ಸಮಾಜದ ಬೆನ್ನೆಲುಬಾಗಿದ್ದಾರೆ. ಅವರು ಉಂಡುಟ್ಟು, ಅತ್ಯಾಧುನಿಕ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದರೂ ಭಾರತೀಯ ಮಧ್ಯಮ ವರ್ಗದವರಿಗಿಂತ ಇವರ ಸಮಸ್ಯೆಗಳು ಹೆಚ್ಚು ಬಿಗಿಯಾಗಿವೆ. ಇವರಿಗೆ ಬಡವರಂತೆ ಆಧುನಿಕ ಸಾಮಾಗ್ರಿಗಳಿಲ್ಲದೇ ಜೀವಿಸುವ ಮನಸ್ಸಿಲ್ಲ. ಮೇಲಿನ ವರ್ಗದವರಂತೆ ಜೀವನ ನಡೆಸುವ ತ್ರಾಣವಿಲ್ಲ. ಅಂತೆಯೇ ಅವರ ಜೀವನ-ಮಟ್ಟವನ್ನು ಏರಿಸಲು ಹೋರಾಟದಿಂದಲೇ ಜೀವನ ಪ್ರಾರಂಭವಾಗುತ್ತದೆ. ಅಮೇರಿಕನ್ ಮಕ್ಕಳಿಗೆ ಪಿತ್ರಾರ್ಜಿತ ಸಂಪತ್ತು ದೊರೆಯುವುದು ಅತಿ ವಿರಳ. ಅಂತೆಯೇ ತೀರ ಚಿಕ್ಕ ವಯಸ್ಸಿನಿಂದಲೇ ಅವರು ದುಡಿಯಲಾರಂಭಿಸುತ್ತಾರೆ. ಯಾವ ಕೆಲಸಕ್ಕೂ ಅವರು ಸಿದ್ಧರಿರುತ್ತಾರೆ. ಚಾಕಲೆಟ್ ತಿನ್ನಬೇಕಾಗಿದ್ದರೆ, ಆಯ್ಸ್‌ಕ್ರೀಮ್ ಸೇವಿಸುವ ಆಸೆಯಾದರೆ, ಹೊಸ ಬೂಟು ಇಲ್ಲವೆ ಬಟ್ಟೆ ಕೊಳ್ಳುವದಿದ್ದರೆ ಹುಡುಗರು ಬೂಟ್-ಪಾಲಿಶ್ ಮಾಡಿಯೋ, ಪೇಪರ್ ಮಾರಿಯೋ ಹಣ ಗಳಿಸುತ್ತಾರೆ. ಇಂಥ ಧನಸಂಪಾದನೆಯಿಂದ ಹುಡುಗರ ಸ್ವಾವಲಂಬನ-ವೃತ್ತಿ ಹೆಚ್ಚುತ್ತದೆಂದು ಪಾಲಕರು ಇದನ್ನು ಪ್ರೋತ್ಸಾಹಿಸುತ್ತಾರೆ.

ಹುಡುಗರು ದೊಡ್ಡವರಾದಂತೆ ಅವರ ಬೇಡಿಕೆಗಳೂ ಬೆಳೆಯುತ್ತವೆ. ಹೀಗಾಗಿ ಸ್ಕೂಲಿಗೆ ರಜೆ ಇದ್ದಾಗ ಹೆಚ್ಚಿನ ಧನಸಂಪಾದನೆಗೆ ಹವಣಿಸುತ್ತಾರೆ. ಅವರಿವರ ಕಾರು ತೊಳೆದು, ಕಟ್ಟಡ ಕಟ್ಟುಗೆಯಲ್ಲಿ ಕಲ್ಲು-ಮಣ್ಣು ಹೊತ್ತು ಸಹಾಯ ಮಾಡಿಯೋ ಹೋಟೆಲ್‌ಗಳಲ್ಲಿ ಮಾಣಿಯಾಗಿ ಅಥವಾ ಕಪ್ಪು-ಬಸಿ ತೊಳೆದೋ, ಇಲ್ಲವೇ ಪೆಟ್ರೋಲ್

ಮಾರಿಯೋ ಧನ ಸಂಗ್ರಹಿಸುತ್ತಾರೆ. ಎಷ್ಟೋ ಜನರ ಶಾಲಾಭ್ಯಾಸ ಇಂಥ ಸೂಟಿಯ ದುಡಿತದಿಂದ ಬಂದ ಹಣದಿಂದ ಸಹಜವಾಗಿ ತೂಗಿ ಹೋಗುತ್ತದೆ. ಕಾಲೇಜಿಗೆ ಸೇರಿಕೊಂಡರೆ ವೆಚ್ಚ ಒಮ್ಮೆಲೆ ಬೆಳೆಯುತ್ತದೆ. ಕುಮಾರಿಯರ ಸಹವಾಸ ಬೇರೆ ಅಪೇಕ್ಷಿಸಿದರಂತೂ ಹಣದ ರಾಶಿಯೇ ಬೇಕಾಗುತ್ತದೆ. ವಿದ್ಯಾರ್ಥಿ ತನ್ನ ಸ್ವಂತ ಸಂಪಾದನೆಯ ಸಂಗಡ ಬ್ಯಾಂಕಿನ ಸಾಲವನ್ನೂ ಸೇರಿಸಬೇಕಾಗುತ್ತದೆ. ಅಮೇರಿಕೆಯ ಬ್ಯಾಂಕುಗಳಿಂದರೆ ಭಾರತದ ಮಾರವಾಡಿಗಳಿದ್ದಂತೆ. ಇವರಿಂದ ನೂರು ಡಾಲರಗಳನ್ನು ಹತ್ತು ತಿಂಗಳಿಗಾಗಿ ಸಾಲ ತೆಗೆದುಕೊಳ್ಳಬೇಕಾಗಿದೆ, ಎಂದು ಇಟ್ಟುಕೊಳ್ಳೋಣ. ಹತ್ತು ತಿಂಗಳಿಗೆ ಹತ್ತು ಡಾಲರ್ ಬಡ್ಡಿ ಸೇರಿಸಿ ನಿಮ್ಮ ಸಾಲ ನೂರಾಹತ್ತು ಡಾಲರಾಯಿತು ಎನ್ನುತ್ತಾರೆ. ಅಂದರೆ ಪ್ರತಿ ತಿಂಗಳು ಹನ್ನೊಂದು ಡಾಲರು ಕೊಡುತ್ತ ಹೋಗಬೇಕು. ಮೊದಲ ಕಂತನ್ನು ಮುರಿದುಕೊಂಡೇ ಎಂಭತ್ತೊಂಬತ್ತು ಡಾಲರುಗಳನ್ನು ಕೈಮೇಲೆ ಹಾಕುವ ಹೊಸ ಮಾದರಿಯ ಸಾವುಕಾರರಿವರು! ಈ ಸಾಲ ಮುಗಿಯುವ ಮೊದಲೇ ಇನ್ನೊಂದು ಸಾಲ ತೆಗೆಯುವುದು ಅನಿವಾರ್ಯವಾಗುತ್ತದೆ. ಇಷ್ಟರಲ್ಲಿ ಮದುವೆಯಾದರಂತೂ (ಹೆಚ್ಚಿನ ಅಮೇರಿಕನ್ನರು ವಿದ್ಯಾರ್ಥಿದೆಸೆಯಲ್ಲಿ ಮದುವೆಯಾಗುತ್ತಾರೆ) ತೀರಿಹೋಯಿತು. ಸಾಲಕ್ಕೆ ಸಾಲ ಸೇರುತ್ತದೆ. ಪತಿ-ಪತ್ನಿಯರಿಬ್ಬರೂ ವಿದ್ಯಾರ್ಥಿಗಳಿದ್ದಲ್ಲಿ ಒಂದು ವರ್ಷ ಪತಿ ಓದನ್ನು ಮುಂದುವರಿಸುತ್ತಾನೆ. ಪತ್ನಿ ಗಳಿಸುತ್ತಾಳೆ. ಇನ್ನೊಂದು ವರ್ಷ ಪತ್ನಿ ಕಾಲೇಜು ಸೇರಿದಾಗ ಪತಿ ಧನಸಹಾಯ ಒದಗಿಸುತ್ತಾನೆ. ಅಷ್ಟರಲ್ಲಿ ಒಂದೆರಡು ಮಕ್ಕಳೂ ಬಂದಿರುತ್ತವೆ. ಓದನ್ನು ಮುಗಿಸಿದ ಕೂಡಲೇ ಒಳ್ಳೇ ನೌಕರಿಯೊಂದು ಕಾದಿರುತ್ತದೆ. ಆದರೆ ಸಾಲ ಬೆನ್ನಿಗಿದ್ದೇ ಇರುತ್ತದೆ.

ನೌಕರಿ, ಸ್ಥಾನ-ಮಾನಗಳೊಂದಿಗೆ ಬೇಡಿಕೆಗಳೂ ಏರುತ್ತ ಹೋಗುತ್ತವೆ. ಹೊಸ ಕಾರೊಂದು ಬೇಕು ಅವರಿಗೆ. ಬೇಕಾದಾಗ, ಬೇಕಾದಷ್ಟು ಸಾಲ ಒದಗಿಸಲು ಬ್ಯಾಂಕುಗಳು ಇದ್ದೇ ಇರುತ್ತವೆ. ಸರಿ, ಬೇಡಿಕೆಗಳೂ ಸಾಲವೂ ಜೊತೆಜೊತೆಗೆ ಏರಾಟವಾಡುತ್ತ ಸಾಗುತ್ತವೆ. ತಿಂಗಳ ಏಳು ನೂರು ಡಾಲರುಗಳು ಪಗಾರದಲ್ಲಿ ಕೈಗೆ ಬರುವದು ನಾಲ್ಕು ನೂರು ಡಾಲರುಗಳು ಮಾತ್ರ. ಆದರೂ ಹೊಸ ಬಗೆಯ ರಿಫ್ರೆಜಿರೇಟರ್, ಬಣ್ಣದ ಟಿ.ವಿ (ಟೆಲಿವಿಜನ್), ಯಂತ್ರದ ನಾವೆ ಇವೆಲ್ಲ ಬೇಕೇ ಬೇಕು. ಅಂತೆಯೇ ಸಾಲದ ಮೇಲೆ ಸಾಲ ಅನಿವಾರ್ಯವಾಗುತ್ತದೆ. ಹೀಗೆ ಬಂದ ಸಾಲ ತನ್ನ ಜೊತೆಗೆ ಚಕ್ರಬಡ್ಡಿಯನ್ನೂ ತಂದು ಅವರ ತಲೆಯ ಮೇಲೆ ಕೂಡಿಸುತ್ತದೆ. ಅದನ್ನೂ ತೆತ್ತಬೇಕು.

ಬ್ಯಾಂಕಿನ ಮಾರವಾಡಿಗಳು ಗಳಿಸುತ್ತಿದ್ದ ಹಣವನ್ನು ತಾವು ಏಕೆ ಗಳಿಸಬಾರದು? ಎಂದು ಇತ್ತಿತ್ತಲಾಗಿ ಅಂಗಡಿಕಾರರೂ ಬ್ಯಾಂಕುಗಳ ಸಂಗಡ ಸ್ಪರ್ಧಿಸುತ್ತಾರೆ. ಸುಪರ್-ಮಾರ್ಕೆಟ್ (ಕಿರಾಣಿ-ಅಂಗಡಿ) ಒಂದನ್ನು ಬಿಟ್ಟರೆ ಉಳಿದೆಲ್ಲ ಅಂಗಡಿಗಳು ಉದ್ದರಿಯಾಗಿ ಸಾಮಾನುಗಳನ್ನು ಕೊಡುತ್ತಾರೆ. ಕಾರಿನ ವ್ಯಾಪಾರಿಯೂ ಇದಕ್ಕೆ ಅಪವಾದಿಯಲ್ಲ. ಈತ ಹೊಸ ಮಾದರಿಯ ಕಾರನ್ನು ಎರಡು ಸಾವಿರ ಡಾಲರಗಳಿಗೆ ಮಾರುತ್ತಾನೆ. ಗಿರಾಕಿ ಎರಡು ವರ್ಷಗಳಲ್ಲಿ ಕಂತಿನಿಂದ ಹಣ ಮುಟ್ಟಿಸುತ್ತೇನೆಂದರೆ ಬಡ್ಡಿ ಕೂಡಿ ತಿಂಗಳಿಗೆ ನೂರು ಡಾಲರಗಳಂತೆ ಹಣ ಮುಟ್ಟುತ್ತ ಹೋಗಬೇಕೆಂದು ಅವನ ಲೆಕ್ಕಾಚಾರ. ಕೈಯಲ್ಲಿ ಹಣವಿಲ್ಲದಿದ್ದರೂ ಕಾರು ಪಡೆಯುವ ಭಾಗ್ಯ ಒದಗಿತಲ್ಲ! ಎಂದು ಗಿರಾಕಿ ಸಂತಸ. ಕಾರನ್ನು ಸಿಕ್ಕಂತೆ ಉಪಯೋಗಿಸುವುದರಿಂದ ಒಂದು ವರ್ಷದಲ್ಲಿ ಮುದಿಯಾಗಿ ಬಿಡುತ್ತದೆ.

ಈ ಮುದಿ ಕಾರಿನ ಚಿಕಿತ್ಸೆಗಿಂತ ಹೊಸ ಕಾರು ಅಗ್ಗವಾಗಿ ಸಿಗುವದರಿಂದ ಆ ಕಾರನ್ನು ಮಾರಿ ಹೊಸದನ್ನು ಕೊಳ್ಳುವ ಹವ್ಯಾಸ ಗಿರಾಕಿಗೆ. ಮತ್ತೆ ಕಾರಿನ ವ್ಯಾಪಾರಿಯತ್ತ ಧಾವಿಸುತ್ತಾನೆ. ಒಂದು ವರ್ಷದಲ್ಲಿ ಮೊದಲಿನ ಕಾರಿನ ಹನ್ನೆರಡುನೂರು ಡಾಲರಗಳಷ್ಟೇ ಮುಟ್ಟಿವೆ. ಈಗ ಅದೇ ಕಾರಿನ ಬೆಲೆ ಆರುನೂರು ಡಾಲರೆಂದು ನಿರ್ಧರಿಸಲಾಗುತ್ತದೆ. ಉಳಿದ ಆರು ನೂರು ಡಾಲರಗಳನ್ನು ಹೊಸ ಕಾರಿನ ಎರಡು ಸಾವಿರ ಡಾಲರಗಳೊಂದಿಗೆ ಕೂಡಿಸಿ ಮತ್ತೆ ಸಾಲ ಮುಂದುವರಿಯುತ್ತದೆ. ಒಂದೇ ವರ್ಷದಲ್ಲಿ ಕಾರಿನ ವ್ಯಾಪಾರಿ ಎರಡು ಹೊಸ ಕಾರಿನ ಲಾಭ, ಹಳೆ ಕಾರಿನ ಪ್ರಾಪ್ತಿ ಮತ್ತು ತನ್ನ ಹಣದ ಚಕ್ರಬಡ್ಡಿಯನ್ನು ಪಡೆದಿರುತ್ತಾನೆ! ತನ್ನ ಹಣ ಮುಳುಗೀತೆಂದು ಯಾರೂ ಭಯಪಡಬೇಕಾಗಿಲ್ಲ. ಗಿರಾಕಿಯ ಇಡೀ ಜೀವನವೇ ಸಾಲದ ಮೇಲೆ ನಡೆಯಬೇಕಾದ್ದರಿಂದ, ಪ್ರತಿಯೊಬ್ಬನ ಕೊಡಕೊಳ್ಳುವ ವ್ಯವಹಾರ ಹೇಗಿದೆ? ಎಂದು ಪರೀಕ್ಷಿಸಿ ನಿರ್ಧರಿಸುವ (credit-exchange) ಕಂಪನಿಗಳು ಇರುತ್ತವೆ. ಈ ಕಂಪನಿಗಳು ಒಬ್ಬ ಅಸಾಮಿಯ ಬಗ್ಗೆ ತಮ್ಮ ನಿರ್ಧಾರ ತಿಳಿಸಿದರೆಂದರೆ ಯಾವ ಅಂಗಡಿಕಾರನಿಂದಲೂ ಆತನಿಗೆ ಸಾಲ ದೊರೆಯದು!

ಅಂಗಡಿಕಾರರು ಇತರ ನೌಕರಿ ಮಾಡುವವರಿಗಿಂತ ಬಲು ಬೇಗ ಹಣ ಗಳಿಸುವದರಿಂದ ಈ ವ್ಯಾಪಾರಿ ವರ್ಗ ದಿನದಿನಕ್ಕೆ ಬೆಳೆಯುತ್ತಿದೆ. ಈ ದೇಶದಲ್ಲಿ ಎಲ್ಲರನ್ನೂ ಮೀರಿಸುವವರು ವಿಮಾಕಂಪನಿಯವರು. ನಿಂತರೆ, ಕೂತರೆ ವಿಮೆ ಇಳಿಸುತ್ತಾರೆ. ಇವರು ಮನೆಯ ವಿಮೆ, ಬೆಂಕಿಯ ಅನಾಹುತ ವಿಮೆ, ಮಗುವಿನ ವಿಮೆ, ಕಾರಿನ ವಿಮೆ! ಕಾರಿನ ಅಪಘಾತದ ವಿಮೆ, ಕಣ್ಣು–ಮೂಗು–ಹಲ್ಲುಗಳ ವಿಮೆ, ಪ್ರಸೂತಿಯ ವಿಮೆ, ಏನಾದರೂ ಅಕಸ್ಮಾತ್ ಅನಾಹುತ ನಡೆದು ವಿಮೆಯಿಂದ ಸಹಾಯವಾದೀತು ಎಂದು ಪೂರ್ಣ ನಂಬಲಾಗುವುದಿಲ್ಲ. ತಮ್ಮ ಕಂಪನಿಯ ಕಾನೂನಿನ ಪ್ರಕಾರ ಅನಾಹುತಗಳು ಈ ವಿಮೆಯಲ್ಲಿ ಸೇರ್ಪಡೆಯಾಗುವುದಿಲ್ಲ ಎಂದು ಬಿಡುತ್ತಾರೆ. ಇಷ್ಟೆಲ್ಲ ಇದ್ದರೂ ಅಮೇರಿಕನ್ನರು ವಿಮೆಗಾಗಿ ಸಾಕಷ್ಟು ಖರ್ಚುಮಾಡುವದಕ್ಕೆ ಕಾರಣವಿಲ್ಲದೇ ಇಲ್ಲ. ಅಮೇರಿಕೆಯ ಕೆಲವು ಕಾನೂನುಗಳು ವಿಚಿತ್ರವಾಗಿವೆ. ಯಾವನೊಬ್ಬನ ಮನೆಯಲ್ಲಿ ಬಾಡಿಗೆದಾರನಿಗೆ ಅಥವಾ ಆಗುಂತಕನಿಗೆ ಏನಾದರೂ ಅನಾಹುತವಾದರೆ ಅದಕ್ಕೆ ಮನೆಯ ಮಾಲೀಕ ದಂಡ ತೆತ್ತಬೇಕು! ಕಾರಿನಲ್ಲಿ ಪ್ರಯಾಣ ಮಾಡುವಾಗ ಅಪಘಾತ ಸಂಭವಿಸಿದರೆ ಕಾರಿನ ಮಾಲಕ ಅಪಘಾತ ಸಂಭವಿಸಿದವನಿಗೆ ಹಣ ತೆರಬೇಕು. ಮೊದಲೇ ರೊಕ್ಕಕ್ಕಾಗಿ ಬಡಿದಾಡುವ ಜನರಿಗೆ, ಅಪಘಾತಕ್ಕೆ ಗುರಿಯಾದವರಿಗೆ ಕೊಡಲು ಎಲ್ಲಿಂದ ಹಣ ಬರಬೇಕು? ಅಂತೆಯೇ ವಿಮಾಕಂಪನಿಗೆ ಮೊರೆಹೋಗುತ್ತಾರೆ. ಈ ವಿಮೆಯ ಕ್ಷೇತ್ರ ಎಷ್ಟು ವ್ಯಾಪಕವಾಗಿದೆಯೆಂದು ಸ್ವಲ್ಪದರಲ್ಲಿ ಹೇಳುವುದು ಅಸಾಧ್ಯ. ನಟಿಯೊಬ್ಬಳು ತನ್ನ ಸುಂದರ ಕಾಲುಗಳ ವಿಮೆ ಇಳಿಸಿದರೆ, ನಟನೊಬ್ಬಾತ ತನ್ನ ಮೀಸೆಯ ವಿಮೆ ಇಳಿಸುತ್ತಾನೆ! ವಿಮೆಯ ಹಣಕ್ಕಾಗಿ ನಡೆಯುವ ಮೊಕದ್ದಮೆಗಳಂತೂ ಹೇರಳವಾಗಿವೆ. ಮಹಿಳೆಯೊಬ್ಬಳು ಡಾಕ್ಟರನ ಸಲಹೆ. ಪ್ರಕಾರ ಹಲ್ಲು ಕೀಳಿಸಿದಳಂತೆ. ನಂತರ ಚುಂಬನದ ಸುಖಸ್ಪರ್ಶದಿಂದ ತಾನು ವಂಚಿತಳಾದದ್ದನ್ನು ಕಂಡುಕೊಂಡಳು. ಕೂಡಲೇ ಡಾಕ್ಟರನ ಮೇಲೆ ಹಾನಿಯ ಮೊಕದ್ದಮೆ ಹೂಡಿಬಿಟ್ಟಳು.

ಆರೋಗ್ಯದ ವಿಮೆ ಇಳಿಸಿದವರಿಗಂತೂ ಬಹಳ ಲಾಭವಿದೆ. ಡಾಕ್ಟರರ ಸಲಹಾ ಫೀಯಾಗಲಿ, ಔಷಧೋಪಚಾರದ ಖರ್ಚಾಗಲಿ ಬಹಳೇ ತುಟ್ಟಿಯಾಗಿರುವದರಿಂದ

ಜನಸಾಮಾನ್ಯರಿಗೆ ಇವು ಮೀರಿದ ಮಾತಾಗಿದೆ. ಮೂರು ದಿನದ ಹೆರಿಗೆಗೆ ದೊಡ್ಡ ಆಸ್ಪತ್ರೆಗಳಲ್ಲಿ ಐನೂರು ಡಾಲರ (೩,೫೦೦ ರೂಪಾಯಿ) ಬೀಳುತ್ತದೆ. ಇದರ ಬದಲಾಗಿ ಹೆರಿಗೆಯ ವಿಮೆ ಇಳಿಸಿದರೆ ಈ ಖರ್ಚಿನ ಹೆಚ್ಚಿನ ಖರ್ಚನ್ನು ವಿಮಾ ಕಂಪನಿಯವರೇ ಕೊಡುತ್ತಾರೆ. ಪ್ರಯಾಣಗಳಿಗಾಗಿ, ಕ್ರಿಸ್‌ಮಸ್ ಹಬ್ಬದ ಕಾಣಿಕೆಗಳಿಗಾಗಿ ಹಣವನ್ನು ಕೂಡಿಡಬೇಕಾಗುತ್ತದೆ. ಸತತ ಸಾಲದಲ್ಲಿ ಮುಳುಗೇಳುತ್ತಿದ್ದವರಿಗೆ ಈ ಹಣ ಕೂಡಿಸಲು ಎಲ್ಲಿ ಸಾಧ್ಯ? ಅದಕ್ಕಾಗಿಯೂ ವಿಮಾ-ಕಂಪನಿಯವರು ಏರ್ಪಾಡನ್ನು ಮಾಡುತ್ತಾರೆ. ಪ್ರತಿವಾರ ಇಂತಹ ಸಂಗ್ರಹ-ಖಾತೆಗೆ ಹಣ ತೆರಬೇಕು.

ಕಾರಿನ ಸಾಲ, ಮನೆಯ ಸಾಲ, (ಮನೆ ಕಟ್ಟಿದರೆ) ವಿಮೆಯ ಕಂತು, ಉಳಿತಾಯದ ಕಂತು ಮುಂತಾದವುಗಳಿಗೆ ಹಣ ತೆತ್ತ ನಂತರ ಸಂಬಳವಾದ ದಿನ ಕೈಯಲ್ಲಿ ನೂರು ಡಾಲರು ಕೂಡ ಉಳಿಯುವುದಿಲ್ಲ. ಇದರಲ್ಲಿ ತಿಂಗಳ ಖರ್ಚು ದಾಟಬೇಕು. ವಾರ ವಾರ ಧರ್ಮಕ್ಕೆ (charity) ಸ್ವಲ್ಪ ಹಣ ತೆರಬೇಕು. ಹೀಗಾಗಿ ಬಹಳೇ ಇಕ್ಕಟ್ಟಿನ ದಿನ ಕಳೆಯಬೇಕಾಗುತ್ತದೆ. ಒಂದು ಅಮೇರಿಕನ್ ಕುಟುಂಬ ಒಬ್ಬ ಅತಿಥಿಯನ್ನು ಆಮಂತ್ರಿಸಬೇಕಾದರೆ ತಮ್ಮಲ್ಲಿ ಅನುಕೂಲವಿದೆಯೇ ಎಂದು ಎರಡೆರಡು ಬಾರಿ ಯೋಚಿಸಬೇಕಾಗುತ್ತದೆ. ಮದುವೆಯಾಗಿ ಎರಡು ವರ್ಷಗಳು ದಾಟಿದರೂ ತಮಗೆ ಒಂದು ಮಗು ಪಡೆಯುವ ಆರ್ಥಿಕ ಅನುಕೂಲತೆ ಒದಗಲಿಲ್ಲವೆಂದು ಮರುಗಿದ ದಂಪತಿಗಳೂ ಇದ್ದಾರೆ.

ಸಾಮಾನ್ಯ ಜನರ ಈ ಅಸಹಾಯಕತೆಯ ಲಾಭವನ್ನು ವ್ಯಾಪಾರಿಗಳು ಮತ್ತು ಕಂಪನಿಗಳು ಚೆನ್ನಾಗಿಯೇ ಮಾಡಿಕೊಳ್ಳುತ್ತವೆ. ದಿನನಿತ್ಯದ ಬಳಕೆಯ ಸಾಮಾನುಗಳು ಅವನ್ನು ಬಳಸುವವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯುತ್ತಿವೆ! ಅಂತೆಯೇ ರೇಡಿಯೋ, ಟೆಲಿವಿಜನ್, ಮತ್ತು ವರ್ತಮಾನಪತ್ರಗಳೆಲ್ಲ ಇವುಗಳ ಜಾಹೀರಾತುಗಳಿಂದ ತುಂಬಿತುಳುಕುತ್ತಿವೆ. ಪಾರಿವಾಳಗಳು ಕಾಳು ಹೆಕ್ಕುವಂತೆ ದಿನಪತ್ರಿಕೆಯ 'ಸಂಚಿಕೆ'ಯ ಪುಟಗಳಲ್ಲಿ ಸುದ್ದಿಗಳನ್ನು ಹೆಕ್ಕಿ ಹೆಕ್ಕಿ ಓದಬೇಕಾಗುತ್ತದೆ.

ವಿದೇಶೀಯರಿಗೆ ಈ ಜಾಹೀರಾತುಗಳು ತಲೆನೋವಾದರೂ ಅಮೇರಿಕನ್ನರು ಇವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ವ್ಯಾಪಾರಿಗಳು, ರೇಡಿಯೋ ಕಂಪನಿಗಳು ಇವುಗಳ ಖರ್ಚನ್ನು ಕೊಡುವುದರಿಂದ ತಮಗೇನು ಎಂಬ ಸಮಾಧಾನ ಅವರಿಗೆ. ಅಂಚೆಯ ಮುಖಾಂತರವೂ ಈ ಜಾಹೀರಾತುಗಳು ಗಿರಾಕಿಗಳ ಕೈಸೇರುವಂತೆ ವ್ಯಾಪಾರಿಗಳು ವ್ಯವಸ್ಥೆಯನ್ನು ಮಾಡಿರುತ್ತಾರೆ. ಗಿರಾಕಿಗಳನ್ನು ಆಕರ್ಷಿಸಲು ಅವರು ಕೈಕೊಳ್ಳುವ ದೊಡ್ಡ ಸ್ಟಂಟ್ (stunt) ಎಂದರೆ 'ಸೇಲ್' (sale). ಯಾವದಾದರೂ ಒಂದು ಸಾಮಾನನ್ನು ತೀರ ಅಗ್ಗವಾಗಿ ಮಾರುತ್ತೇವೆ ಎಂದು ಜಾಹೀರಾತು ಮಾಡುತ್ತಾರೆ. ಉಳಿದ ದಿನಗಳಲ್ಲಿ ಈ ಸಾಮಾನಿನ ಬೆಲೆಯತ್ತ ಲಕ್ಷ್ಯವನ್ನೇ ಕೊಡದ ಮಂಕು ಅಮೇರಿಕನ್ನರು ಈ 'ಅಗ್ಗ' ಸಾಮಾನನ್ನು ಕೊಳ್ಳಲು ಧಾವಿಸುತ್ತಾರೆ. ಬೆಳಿಗ್ಗೆ ಏಳರಿಂದ ಎಂಟರವರೆಗೆ 'ಸೇಲ್' ಎಂದರೆ ಮನೆಯ ಯಜಮಾನತಿ ಬೇಗ ಎದ್ದು ಗಂಡನಿಗೆ 'ನಾಶ್ತಾ' (ನ್ಯಾರಿ) ತಯಾರಿಸಲು ಹಚ್ಚಿ ತಾನು ಲಗುಬಗೆಯಿಂದ ಸಿಂಗರಿಕೊಂಡು ಕಾರಿನಲ್ಲಿ ಮಾರಾಟದ ಸ್ಥಳಕ್ಕೆ ಧಾವಿಸುತ್ತಾಳೆ. 'ಕ್ಯೂ' ಹಚ್ಚಿ ನಿಲ್ಲಬೇಕು? ಒಂದು ಡಾಲರಿಗೆ ಐದು ಬನಿಯನ್‌ಗಳು, ಜೊತೆಗೆ ತನಗೆ ಸೇರಿದ ಐದು ಡಾಲರಿನ ಸಾಮಾನುಗಳನ್ನು ಕೊಳ್ಳುತ್ತಾಳೆ. ತನ್ನ ಹತ್ತಿರ ರೊಕ್ಕವಿಲ್ಲದಿದ್ದರೂ ಅಂಗಡಿಕಾರ ಉದ್ದರಿಯಾಗಿ ಕೊಟ್ಟನೆಂಬ

ಸಂತೋಷ ಅವಳಿಗೆ. ಮನೆಗೆ ಬಂದ ಮೇಲೆ ಒಂದೂ ಬನಿಯನ್ ಗಂಡನ ಮೈಯನ್ನೇರದು ಎಂದಾಗ ಮುಖ ಪೆಚ್ಚಾಗುತ್ತದೆ. ಈ ಬನಿಯನ್‌ಗಳನ್ನು ತೆಗೆದುಕೊಂಡು ತಿರುಗಿ ಮಾರಾಟದ ಸ್ಥಳಕ್ಕೆ ಕಾರನ್ನು ಓಡಿಸುತ್ತಾಳೆ. ಅಂಗಡಿಕಾರ "ಇದು ವಿಶೇಷ ಮಾರಾಟವಾದ್ದರಿಂದ ಸಾಮಾನು ತಿರುಗಿ ತೆಗೆದು ಕೊಳ್ಳಲಾಗುವುದಿಲ್ಲ" ಎಂದು ಖಂಡಿತವಾಗಿ ಹೇಳಿದಾಗ, ಬನಿಯನ್ನುಗಳು ಒಂದು ಡಾಲರ್ ಮತ್ತು ಅದಕ್ಕಾಗಿ ಒಂದು ಡಾಲರಿನ ಪೆಟ್ರೋಲ್ ಖರ್ಚಾದದ್ದು ಅವಳಿಗೆ ಹೊಳೆಯುತ್ತದೆ.

ಆಗೊಮ್ಮೆ ಈಗೊಮ್ಮೆ ಹೀಗೆ ಟೊಪ್ಪಿಗೆ ಬಿದ್ದರೂ ಜಾಹೀರಾತುಗಳಿಗೆ ಮರುಳಾಗಿ ಅಮೇರಿಕನ್ನರು ಇಂಥ 'ಸೇಲ್'ಗಳಿಗೆ ಮತ್ತೆ ಮತ್ತೆ ಹೋಗದೆ ಇರುವುದಿಲ್ಲ. ದೊಡ್ಡ ದೊಡ್ಡ ಅಂಗಡಿಗಳಲ್ಲಿ ಬಹಳ ದಿನಗಳಿಂದ ಮಾರಾಟವಾಗದೇ ಮೂಲೆ ಹಿಡಿದು ಬಿದ್ದ ಸಾಮಾನುಗಳನ್ನು ಅಗ್ಗದಲ್ಲಿ ಮಾರುವ ಅಂಗಡಿಗಳೂ ಇವೆ. ಈ ಧೋರಣೆಯನ್ನು ಅನುಸರಿಸಿ, ಇತರ ಅಂಗಡಿಕಾರರೂ ಗಿರಾಕಿಗಳನ್ನು ಮರುಳುಗೊಳಿಸಲು ಈ 'ಸೇಲ್'ದ ನಾಟಕ ಮಾಡುತ್ತಾರೆ. 'ಊರನ್ನು ಬಿಟ್ಟು ಹೋಗುವದರಿಂದ ಸಾಮಾನುಗಳನ್ನು ಕಡಿಮೆ ದರದಲ್ಲಿ ಮಾರಲಿದ್ದೇವೆ' ಎಂದು ಒಂದು ಅಂಗಡಿಯವರು ಘೋಷಿಸಿದರೆ. ಇನ್ನೊಂದು ಅಂಗಡಿಯವರು 'ದಿವಾಳಿಯೆದ್ದು ಅಂಗಡಿ ಮುಚ್ಚಲಿದ್ದೇವೆ.... ಶೇಕಡಾ ೫೦ ರಿಂದ ೮೦ರ ವರೆಗೆ ಕಡಿತ ಮಾಡಲಾಗಿದೆ' ಎಂದು ಸಾರುತ್ತಾರೆ. ಈ ಜಾಹೀರಾತುಗಳಿಗೆ ದೂರ ದೂರದಿಂದ ಗಿರಾಕಿಗಳು ಓಗೊಡುತ್ತಾರೆ. ಸಾಯರೆಕ್ಯೂಸಿನ ಕೆಲವು ಅಂಗಡಿಕಾರರು ನಾನಲ್ಲಿ ಇದ್ದ ನಾಲ್ಕು ವರ್ಷವೂ ದಿವಾಳಿ ತೆಗೆದು ಮುಚ್ಚುವದರಲ್ಲಿಯೇ ಇದ್ದರು!

ಪ್ರತಿ ವರ್ಷ ಪ್ರತಿ ದಿನ ಹೊಸ ಹೊಸ ಬಗೆಯ ಸಲಕರಣೆಗಳು ಪೇಟೆಯಲ್ಲಿ ಬರುವದರಿಂದ ಅಮೇರಿಕನ್ನರ ಬೇಕುಗಳು ಹೆಚ್ಚುತ್ತಲೇ ಹೋಗುವವು. ಮೈತುಂಬ ಸಾಲವಾದಾಗ ನಿರ್ವಾಹವಿಲ್ಲದೇ ಪತ್ನಿಯು ಕೆಲಸಕ್ಕೆ ಸೇರುತ್ತಾಳೆ. ಮಕ್ಕಳು, ಮಕ್ಕಳಾಡಿಸುವವರ (baby-sitter) ಮೇಲ್ವಿಚಾರಣೆಯಲ್ಲಿ ಬೆಳೆಯುತ್ತಾರೆ. ಇಬ್ಬರ ದುಡಿತದಿಂದ ಸಾಲದ ಭಾರ ಕಡಿಮೆಯಾದಾಗ ಹೊಸ ಆಕಾಂಕ್ಷೆಗಳು ತಲೆಯೆತ್ತುತ್ತವೆ. ಅಮೇರಿಕನ್ ಸಮಾಜದಲ್ಲಿ ಪರಸ್ಪರ ಸ್ಪರ್ಧೆ ಬಲು ಜೋರಾಗಿದೆ. ನೆರೆಮನೆಯವರು ೧೯೬೬ರ ಮಾಡೆಲ್ ಕಾರು ತೆಗೆದುಕೊಂಡರೆ ತಾನು ೧೯೬೭ರ ಮಾಡೆಲ್ ಕಾರು ಕೊಳ್ಳಲೇಬೇಕು. ಅದರಂತೆ ಆಧುನಿಕ ಈಸು-ಕೊಳ (swimming-pool) ತಾನು ಕಟ್ಟಿಸಿದರೆ ನೆರೆಕೆರೆಯಲ್ಲಿ ಖ್ಯಾತಿಹೊಂದಬಹುದಾದ ಯಾಂತ್ರಿಕ-ಹಡಗ (motor-boat)ವೊಂದು ತನಗಿರಬೇಕು. ಓದದಿದ್ದರೂ ವಿಶ್ವಕೋಶದ (encyclopaedia) ಪ್ರತಿಗಳೆಲ್ಲ ತನ್ನ ಶೆಲ್ಫಿನ ಮೇಲಿರಬೇಕು, ಇವೆಲ್ಲ ಬೆಲೆಯುಳ್ಳ ಹವ್ಯಾಸಗಳಿದ್ದವೆಂದರೆ ಎಷ್ಟೇ ಹಣ ಬಂದರೂ ಕೊರತೆಯಾಗುವುದು ಸಹಜವಷ್ಟೇ? ಇಬ್ಬರು ದುಡಿದರೂ ಸಾಲುವುದಿಲ್ಲ. ಹೀಗಾಗಿ ಪತಿದೇವರು ರಾತ್ರಿಯ ಸಣ್ಣದೊಂದು ನೌಕರಿ ಹಿಡಿಯುತ್ತಾನೆ. ಅದರಿಂದ ಜೀವನದ ಉದ್ದಕ್ಕೂ ಸುಖ-ಸೌಕರ್ಯ, ಹಣ, ವೇಳೆಗಳಿಗಾಗಿ ಸಾಮಾನ್ಯ ಅಮೇರಿಕನ್ನರು ಹೋರಾಡುತ್ತಲೇ ಇರುತ್ತಾರೆ. ಹೆಚ್ಚಿನ ಜನ ಈ ಅವಿಶ್ರಾಂತ ಮಾನಸಿಕ ಶ್ರಮದಿಂದ ಬಳಲುವುದುಂಟು. ಅವರ ಅಂಕಿಸಂಖ್ಯೆಗಳ ಪ್ರಕಾರ ಪ್ರತಿ ಹನ್ನೆರಡರಲ್ಲಿ ಒಬ್ಬ ಮಾನಸಿಕ-ರೋಗಿಯಾಗಿರುತ್ತಾನೆ.

ಭಾರತದಲ್ಲಿ ಸಮಸ್ಯೆಗಳಿಂದ ಬಳಲಿ ಬಳಲಿ ಬೆಂಡಾದವರು ದೇಹವಿಟ್ಟಾಗ

ಮುಕ್ತಿ ಪಡೆಯಬಹುದು. ಆದರೆ ಅಮೇರಿಕನ್ನರಿಗೆ ಜೀವನದುದ್ದಕ್ಕೂ ಪೀಡಿಸಿದ ಹಣದ ಸಮಸ್ಯೆ ಸತ್ತರೂ ಬೆನ್ನು ಬಿಡುವುದಿಲ್ಲ. ಅಮೇರಿಕೆಯಲ್ಲಿ ಎಷ್ಟೋ ಜನ ಸ್ಮಶಾನಯಾತ್ರೆಯ ವ್ಯಾಪಾರದಲ್ಲೂ ತೊಡಗಿದ್ದಾರೆ. (funeral homes). ಪ್ರತಿ ಊರಿನಲ್ಲೂ ಅಲಂಕಾರಭರಿತವಾದ ಸ್ಮಶಾನಯಾತ್ರೆಯ ಅಂಗಡಿಗಳು ತಪ್ಪದೇ ಕಣ್ಣಿಗೆ ಬೀಳುವವು. ಹೊಸದಾಗಿ ಹೋದ ಭಾರತೀಯರು ಇವುಗಳನ್ನು ವಿವಾಹಗೃಹಗಳೆಂದು ತಿಳಿದು ಮೋಸಹೋಗುವಷ್ಟು ಅಲಂಕಾರಭರಿತವಾಗಿರುತ್ತವೆ ಇವು! ಬೆಲ್ಲದಂತಹ ಮಾತು ಆಡಿ ಮರುಳುಮಾಡುವ ಅಂಗಡಿಕಾರರು ಇವನ್ನು ನಡೆಸುತ್ತಾರೆ. ಯಾವನೊಬ್ಬ ಮೃತನಾದರೆ ಆತನ ಮನೆಯವರು ಏನೇನೂ ಚಿಂತಿಸುವ ಕಾರಣವಿಲ್ಲ. ಈ ವ್ಯಾಪಾರಿಗಳಿಗೆ ಫೋನ್ ಮಾಡಿದರೆ ಸಾಕು, ಅವರು ಶವದ ಜವಾಬ್ದಾರಿಯನ್ನು ಸಂಪೂರ್ಣ ಹೊತ್ತುಬಿಡುತ್ತಾರೆ. ಜೀವಂತ ಇದ್ದಾಗ ಹಣಕ್ಕಾಗಿ ನಡೆಸಿದ ಹೋರಾಟದಲ್ಲಿ ಒಳ್ಳೆ ಬಟ್ಟೆ ಧರಿಸಲು ವೇಳೆಯಿದ್ದಿರಲಿಕ್ಕಿಲ್ಲವೆಂದು ಭಾವಿಸಿಯೋ ಏನೋ ಶವಕ್ಕೆ ಅತ್ಯುತ್ತಮ ಬಟ್ಟೆ ತೊಡಿಸುತ್ತಾರೆ. ಉತ್ತಮವಾಗಿ ಶೃಂಗರಿಸಿ ಮೇಣಬತ್ತಿಗಳ ಮಂದಪ್ರಕಾಶದಲ್ಲಿ ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಅಪ್ತೇಷ್ಟರು ಸುಂದರ ಬಟ್ಟೆಗಳನ್ನು, ಕೋಟುಗಳನ್ನು ಧರಿಸಿ, ಹೂವಿನ ತುರಾಯಿಗಳನ್ನು ತಂದು ತಂದು ಶವಕ್ಕೆ ಅರ್ಪಿಸುತ್ತಾರೆ. ಪಾದ್ರಿ ಬಂದು ಅಂತ್ಯಕ್ರಿಯೆ ಓದಿ ಅಪ್ಪಣೆ ಕೊಡಿಸಿದ ಮೇಲೆ 'ಶವಯಾತ್ರೆ'ಯ ವ್ಯಾಪಾರಿಗಳೇ ಶವವನ್ನು ಹೂಳುವ ಸ್ಥಳಕ್ಕೆ ಸಾಗಿಸುತ್ತಾರೆ. ಅಲ್ಲಿಯೂ ಕೆಲವು ಪರಿಚಿತರು, ದಾಯಾದಿಗಳು ಬರುವದರಿಂದ ಸುಂದರ ಮಂಟಪವನ್ನು ನಿಲ್ಲಿಸುತ್ತಾರೆ. ಬಂದ ಬಂಧುಬಳಗದವರು ಹೂಗಳನ್ನು ಅರ್ಪಿಸಿ, ತೋಡಿದ ಕುಣಿ ಮುಚ್ಚಿದ ಮೇಲೆ, ಒಂದೊಂದು ಹಿಡಿ ಮಣ್ಣನ್ನು ಹಾಕಿ ಸತ್ತ ಆಪ್ತನಿಂದ ಬಿಡುಗಡೆ ಹೊಂದುತ್ತಾರೆ. ಬಂದವರು ಹೊರಟುಹೋದ ಎರಡೇ ನಿಮಿಷಗಳಲ್ಲಿ ರಾಕ್ಷಸಾಕಾರದ ಟ್ರ್ಯಾಕ್ಟರ್ ಒಂದು ಬಂದು ಶವದ ಪೆಟ್ಟಿಗೆಯನ್ನು ಮಣ್ಣಿನಿಂದ ಬಲವಾಗಿ ಮುಚ್ಚಿ ಜಮಖಾನೆಯಂತೆ ಬೆಳೆಸಿದ ಹುಲ್ಲನ್ನು ಅದರ ಮೇಲೆ ಬಿಚ್ಚಿಬಿಡುತ್ತದೆ. ನೋಡುನೋಡುತ್ತಿದ್ದಂತೆ ಎಲ್ಲ ಮುಗಿದು ಹೋಗುತ್ತದೆ.

ಇಷ್ಟು ಹೊತ್ತಿನ ತನಕ ವಿಧವೆಯನ್ನು ಸಂತೈಸಲು ಆಪ್ತರಾದರೂ ಇದ್ದರು. ಈಗ ಸಂಸಾರಸಮುದ್ರದಲ್ಲಿ ಆಕೆಯೊಬ್ಬಳೇ. ಆಕೆಯ ಸಂಗಾತಿಗಳೆಂದರೆ ಅಂತ್ಯಕ್ರಿಯೆಗಾಗಿ ತಗಲಿದ ವೆಚ್ಚದ ಬಿಲ್ಲುಗಳು, ವ್ಯಾಪಾರಿಗಳ ಫೋನಿನ ಕರೆ, ಆಗೊಮ್ಮೆ ಈಗೊಮ್ಮೆ ಸ್ವತಃ ಬರುತ್ತಿದ್ದ ಉದ್ದರಿ ಕೊಟ್ಟ ವ್ಯಾಪಾರಿಗಳು, ಆಕೆ ಇವುಗಳಿಂದ ಸುಲಭದಲ್ಲಿ ಬಿಡುಗಡೆ ಪಡೆಯುವಂತಿಲ್ಲ. ಎಲ್ಲ ಅಂತ್ಯಸಂಸ್ಕಾರವನ್ನು ನೂರು ಡಾಲರುಗಳಲ್ಲಿ ಮುಗಿಸಬೇಕೆಂದಿದ್ದವಳಿಗೆ ಇದಾಗಲೇ ಐನೂರು ಡಾಲರುಗಳ ಬಿಲ್ ಬಂದಿದೆ! ಅಲ್ಲದೇ ಜೀವನದುದ್ದಕ್ಕೂ ಅವಳನ್ನು ಅತ್ಯಂತ ಪ್ರೀತಿಸಿ, ಎಡೆಬಿಡದೇ ಅವಳಿಗಾಗಿ ಶ್ರಮಿಸಿದ ಪತಿಯ ಗೌರವಾರ್ಥವಾಗಿ ಉತ್ತಮ ಸಮಾಧಿಯನ್ನು ಕಟ್ಟಿಸಬೇಕೆಂದು ಪತ್ನಿಯನ್ನು ಪ್ರೇರೇಪಿಸಿ ಅವಳು ತನ್ನ ನಿರ್ಣಯ ಕೊಡುವ ಮೊದಲೇ ೧೦,೦೦೦ ಡಾಲರುಗಳ ಸಾಲ ತೆಗೆಯಿಸಿ ಆ ಸಾಲದ ಅಗ್ನಿಯಲ್ಲಿಯೇ ಸತಿಹೋಗುವ ಏರ್ಪಾಡು ಮಾಡಿರುತ್ತಾರೆ.

ಹೀಗೆ ಅಮೇರಿಕನ್ನರು ಇಡೀ ಜೀವನ ಹಣಕ್ಕಾಗಿ ಹೋರಾಟದಲ್ಲಿ ಕಳೆಯುತ್ತಿದ್ದರೂ ಅವರು ಸಿರಿವಂತರೆಂದು ಭಾರತೀಯ ಕಲ್ಪನೆಯಿರುವುದು, ಮೋಜಿನದು; ಸಹಜವೂ

ಇದೆ. ಇದಕ್ಕೆ ಕಾರಣವೆಂದರೆ ಭಾರತದಲ್ಲಿ ಅಮೇರಿಕನ್ನರು ನಡೆಸುವ ಜೀವನ. ಮೂಲ ಅಂತರವಿರುವುದು ನಮ್ಮ ಅವರ ಹಣದಲ್ಲಿ. ಭಾರತದಲ್ಲಿ ಐದು ನೂರು ರೂಪಾಯಿ ಗಳಿಸುವವನು ಅಮೇರಿಕೆಯಲ್ಲಿ ಸಹಜವಾಗಿ ಐದು ನೂರು ಡಾಲರು ಗಳಿಸಬಹುದು. ಈ ಐದು ನೂರು ಡಾಲರುಗಳನ್ನು ಅಮೇರಿಕೆಯಲ್ಲಿ ಖರ್ಚು ಮಾಡಿದರೆ ಭಾರತದಲ್ಲಿ ಐದು ನೂರು ರೂಪಾಯಿಗೆ ಬರುವಷ್ಟು ಸಾಮಾನುಗಳು ಸಹಜವಾಗಿಯೇ ಬರುತ್ತದೆ. ಆದರೆ ಅವೇ ಡಾಲರುಗಳನ್ನು ಭಾರತದ ರೂಪಾಯಿಗಳಲ್ಲಿ ಪರಿವರ್ತಿಸಿದರೆ ೩೭೬೦ ರೂಪಾಯಿಗಳಾಗುವವು. ಭಾರತದ ಅತ್ಯುಚ್ಚ ಅಧಿಕಾರಿಗೂ ಇಷ್ಟು ಸಂಬಳ ಸಿಗುವುದು ಸಾಧ್ಯವಿಲ್ಲ. ಆದರೆ ಅಮೇರಿಕೆಯಿಂದ ಭಾರತಕ್ಕೆ ಬಂದ ಅಧಿಕಾರಿಗಳಾಗಲಿ, ಇತರರಾಗಲಿ ಇಷ್ಟು ಸಂಬಳ ಪಡದೇ ಪಡೆಯುವರು. ಹೀಗಾಗಿ ಭಾರತೀಯರ ದೃಷ್ಟಿಯಲ್ಲಿ ಇಂತಹರು ಆಗರ್ಭ ಶ್ರೀಮಂತರಾಗಿಬಿಡುತ್ತಾರೆ. ಎಂಟು ನೂರು ರೂಪಾಯಿಯ 'ಏರ್ ಕಂಡೀಶನ್ಡ್' ಮನೆ, ಅಡಿಗೆಯವ, ಸಿಪಾಯಿ, ಮಾಲಿ, ಧೋಬಿ, ಡ್ರಾಯ್ವ್ಹರ್ ಮುಂತಾದ ಅಮೇರಿಕೆಯಲ್ಲಿ ಕನಸಿನಲ್ಲೂ ಲಭ್ಯವಿಲ್ಲದ ನೌಕರ ವರ್ಗವನ್ನು ಅವರು ಇಟ್ಟುಕೊಳ್ಳಲು ಸಾಧ್ಯವಿದೆ. ಇಂತಹ ರಾಜಭೋಗವನ್ನು ಅನುಭವಿಸುತ್ತ ಚಹಾ ತಂದವನಿಗೆ, ದಾರಿ ತೋರಿಸಿದವನಿಗೆ ಧಾರಾಳವಾಗಿ ಭಕ್ಷೀಸು ಕೊಡುತ್ತಾರೆ. ಹೀಗಾಗಿ ಭಾರತೀಯರ ಕಣ್ಣಲ್ಲಿ ಇವರೆಲ್ಲ ಸಿರಿವಂತರೇ!! ಆದರೆ ಒಮ್ಮೆ ತಮ್ಮ ದೇಶಕ್ಕೆ ಮರಳಿದರೆಂದರೆ ಮತ್ತೆ ಸಾಲದಲ್ಲಿ ತೊಳಲಬೇಕು. ಅಂತೆಯೇ ಬಹಳಷ್ಟು ಅಮೇರಿಕನ್ನರು ಭಾರತದ ಆರಾಮ ಜೀವನದ ಸುಖ ಕಂಡವರು ತಿರುಗಿ ಅಮೇರಿಕೆಗೆ ಹೋಗಲು ಒಪ್ಪುವುದಿಲ್ಲ. ಮರಳಿ ಹೋದ ಮೇಲೆ ಪತಿಗೆ ಕಿಸೆ ತುಂಬ ರೊಕ್ಕವಿರುವುದಿಲ್ಲ ಎಂದು ಕಾತುರತೆಯಿದ್ದರೆ, ಪತ್ನಿಗೆ ತಿರುಗಿ ಅಡಿಗೆಮನೆ ಸೇರಬೇಕಲ್ಲಾ ಎಂದು ಬೇಸರ. ಮಹಾರಾಜ–ಮಹಾರಾಣಿಯರ* ಈ ದೇಶವನ್ನು ಬಿಟ್ಟು ಮತ್ತೆ ತಮ್ಮ ದಿನಗಳಿಕೆಯ ಊಟದ ದೇಶಕ್ಕೆ ಹೋಗಲು ಯಾರು ಒಪ್ಪಿಯಾರು?

* * *

* 'ಹೆಮಲಿನ್ ಕುಟುಂಬದೊಡನೆ' ಅಧ್ಯಾಯದಲ್ಲಿ ಇದರ ವಿವರ ಬಂದಿದೆ.

ಶಿಕ್ಷಣ ಪದ್ಧತಿ

ತಲೆ ಮಾರುಗಳಿಂದ ಕಲಿಸಿದ್ದನ್ನೇ ಕಲಿಸುವ ರೂಢಿ ಇಟ್ಟುಕೊಂಡ ದೇಶದಿಂದ ವಿದ್ಯಾಭ್ಯಾಸ ಮುಗಿಸಿ ಅಮೇರಿಕೆಗೆ ಹೊಸದಾಗಿ ಹೋದಾಗ ಎದುರಿಸಬೇಕಾದ ಸಮಸ್ಯೆಗಳಿಗೆ ಲೆಕ್ಕವಿಲ್ಲ. ನಮ್ಮಲ್ಲಿಯ ಶಿಕ್ಷಣ ಪದ್ಧತಿಗೂ ಅಲ್ಲಿಯದಕ್ಕೂ ಆಕಾಶ ಪಾತಾಳದಷ್ಟು ಅಂತರ. ನಮ್ಮ ಪ್ರಾಧ್ಯಾಪಕರು ಬರೆಸಿದ್ದನ್ನೇ ಗಟ್ಟಿಮಾಡಿ ಪರೀಕ್ಷೆ ಒಂದು ತಿಂಗಳು ಇರುವಾಗ ಹಗಲಿರುಳು ಊರುಹಾಕಿ, ನಿರೀಕ್ಷಿತ ಪ್ರಶ್ನೆಗಳಿಗಷ್ಟೆ ಉತ್ತರ ತಯಾರಿಸಿ ಪರೀಕ್ಷೆ ಕೊಡುವ ಆರಾಮ-ಜೀವನ ಭಾರತೀಯ ವಿದ್ಯಾರ್ಥಿಗಳದು. ಅಲ್ಲಾದರೊ ಪ್ರಾದ್ಯಾಪಕರು ಏನೇನೂ ಬರೆಸುವುದು ಇಲ್ಲ; ಕಲಿಸುವುದೂ ಇಲ್ಲ. ಏನೇನು ಓದಬೇಕೆಂದು ಮಾತ್ರ ಹೇಳಿ ಉಳಿದೆಲ್ಲ ದುಡಿತವನ್ನು ವಿದ್ಯಾರ್ಥಿಗೇ ಬಿಟ್ಟು ಬಿಡುತ್ತಾರೆ. ಹೀಗಾಗಿ ಅಲ್ಲಿ ಬಹಳಷ್ಟು ಓದಬೇಕಾಗುತ್ತದೆ. ನಮ್ಮ ಅವರ ಶಿಕ್ಷಣದ ಪದ್ಧತಿಯಲ್ಲಿ ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣದ ವರೆಗೆ ಅಜಗಜಾಂತರವಿದೆ.

ಅಮೇರಿಕೆಗೆ ಹೊರಡುವ ಮೊದಲು ಆ ದೇಶದಲ್ಲಿ ಪರೀಕ್ಷೆಗಳನ್ನು ಪಾಸು ಮಾಡುವುದು ಮುಖ್ಯವಲ್ಲ; ಆದರೆ ವಿಷಯಜ್ಞಾನ ಮಹತ್ವದ್ದು. ಆದ್ದರಿಂದ ಪ್ರತಿನಿತ್ಯದ ಕೆಲಸದ ಮೇಲಿನಿಂದ ವರ್ಗ ನಿರ್ಧರಿಸುತ್ತಾರೆಂದು ಓದಿ ತಿಳಿದುಕೊಂಡಿದ್ದೆ. ಪರೀಕ್ಷೆಗಳಿಂದ ಬೇಸತ್ತವನಿಗೆ ಇದರಿಂದ ಬಹಳ ಆನಂದವೂ ಆಗಿತ್ತು. ಆದರೆ ಅಲ್ಲಿ ಹೋದ ಮೇಲೆ ವಿಶ್ವವಿದ್ಯಾಲಯದ ಪಾಠಕ್ರಮ ಸುರುವಾಗುವದಕ್ಕೆ ಮೊದಲೇ ಪರೀಕ್ಷೆಯಿಂದಲೇ ನನ್ನ ವಿದ್ಯಾರ್ಥಿ-ಜೀವನವೂ ಮೊದಲಾಯಿತು. ಎಲ್ಲದ್ದಕ್ಕೂ ಮೊದಲು ವಿದೇಶಿಯರು ಇಂಗ್ಲೀಷ್ ಪರೀಕ್ಷೆ ಕೊಡಬೇಕಂತೆ! ಅದನ್ನು ಪಾಸು ಮಾಡದಿದ್ದರೆ ಇಂಗ್ಲೀಷ್ ಕಲಿಯಬೇಕಂತೆ. ಸುದೈವಕ್ಕೆ ನನಗೆ ಈ ಸ್ಥಿತಿ ಬರಲಿಲ್ಲ. ಆದರೆ ಎರಡು ವರ್ಷ ಶಿಕ್ಷಕರ ಕುರ್ಚಿಯಲ್ಲಿ ಕುಳಿತು ನಂತರ ವಿದ್ಯಾರ್ಥಿಯ ಬೆಂಚಿನ ಮೇಲೆ ಕೂಡುವುದು ಎಷ್ಟು ತೊಂದರೆಯಿದೆಯೆಂದು ಮೊದಲ ಬಾರಿಗೆ ಕಂಡುಕೊಂಡೆ. ನಂತರ ಬಂದಿತು ಪ್ರವೇಶ ಪರೀಕ್ಷೆ. ಭಾರತದಿಂದ ಎಂ.ಎಸ್.ಸಿ ಮುಗಿಸಿ ಹೋದರೆ ಅಲ್ಲಿ ಅದನ್ನು ಮಾನ್ಯ ಮಾಡುತ್ತಾರೆಂಬ ನಿಯಮವಿಲ್ಲ. ಕಲಿತ ವಿಷಯ ಎಷ್ಟರ ಮಟ್ಟಿಗೆ ಅರ್ಥಮಾಡಿ ಕೊಂಡಿದ್ದಾನೆ ಎಂದು ನಿರ್ಣಯಿಸಲು ಈ ಪರೀಕ್ಷೆಯಂತೆ. ಈ ಪರೀಕ್ಷೆಯಲ್ಲಿ ತೋರಿಸಿದ ಯೋಗ್ಯತೆಯ ಮೇಲೆ ಮುಂದಿನ ವಿದ್ಯಾಭ್ಯಾಸ ಅವಲಂಬಿಸಿರುತ್ತದೆ. ಈ ಪರೀಕ್ಷೆ ಲಿಖಿತ ಮತ್ತು ಮೌಖಿಕವಿರುವುದು. ಕೆಲವಡೆ ಕೇವಲ ಲಿಖಿತವಿರಬಹುದು ಅಥವಾ ಮೌಖಿಕವಾಗಿಯೂ ಇರಬಹುದು. ಆದರೆ ಈ ಪರೀಕ್ಷೆಯ ಪ್ರಶ್ನೆಗಳ ವ್ಯಾಪ್ತಿ ಎಷ್ಟಿರಬಹುದೆಂದು ಕೆಲ ಮಾತುಗಳಲ್ಲಿ ಹೇಳುವುದು ಸಾಧ್ಯವಿಲ್ಲ. ಹೀಗಾಗಿ ಹತ್ತು ವರ್ಷಗಳವರೆಗೆ ಕಲಿತದ್ದೆಲ್ಲ ತಿರುವಿ ಹಾಕಬೇಕಾಯಿತು. ಈ ಪರೀಕ್ಷೆಯಲ್ಲಿ ತೇರ್ಗಡೆಯಾದಾಗ ಇನ್ನಿಲ್ಲದಷ್ಟು ಆನಂದವಾಯಿತು. ಏನೋ ಇಷ್ಟು ದೂರ ಬಂದು ಕಷ್ಟಪಟ್ಟುದಕ್ಕೆ ಏನಾದರೂ ಸಾಧಿಸಿಯೇನು ಎಂಬ ಆಸೆ ಬಲವಾಗಿ ತೊಡಗಿತು.

ಇಲ್ಲಿಂದ ಮುಂದೆ ಎಣೆಯಿಲ್ಲದ ಓದಿಗೆ ಪ್ರಾರಂಭವಾಯಿತು. ಮುಂದಿನ ಎರಡು ಮೂರು ವರ್ಷಗಳಲ್ಲಿ ಮಾಡಲಿರುವ ಸಂಶೋಧನೆಯ ರೂಪರೇಷೆಯ ವಿವರವನ್ನು ಕೊಡಬೇಕೆಂದು ಪ್ರಾಧ್ಯಾಪಕರ ಅಪ್ಪಣೆಯಾಯಿತು. ಅವರೇ ಸಂಶೋಧನೆಯ ವಿಷಯ-ಕ್ರಮ ಸೂಚಿಸಬಹುದೆಂದು ನಂಬಿದ ನನಗೆ ದಿಗಲಾಯಿತು. ಸಂಶೋಧನೆಯೆಂದರೆ ಏನೆಂದು ಸರಿಯಾಗಿ ತಿಳಿದುಕೊಳ್ಳದೆ ಭವಿಷ್ಯದ ಸಂಶೋಧನೆಯ ಬಗ್ಗೆ ಏನು ತಾನೇ ಹೇಳಬಲ್ಲೆ? ಹಗಲಿರುಳು ವಾಚನಾಲಯದಲ್ಲೆ ಕಳೆಯಲಾರಂಭಿಸಿದೆ. ಹತ್ತಾರು ಪುಸ್ತಕ, ನೂರಾರು ಪತ್ರಿಕೆ, ಸಾವಿರಾರು ಪುಟಗಳನ್ನು ಓದಿ ಮನನಮಾಡುವ ಸಂದರ್ಭ ಬಂದಾಗ ತಿಳಿಯಿತು. ಸಂಶೋಧನೆಯೆಂದರೆ ಹೇಗಿರುತ್ತದೆಂದು! ಬಹಳ ಕಷ್ಟಪಟ್ಟು ಸಂಶೋಧನೆಯ ರೂಪರೇಷೆಯ ಕರಡುಪ್ರತಿಯನ್ನು ಹಿಂಜರಿಯುತ್ತ ಪ್ರಾಧ್ಯಾಪಕರ ಎದುರು ಇಟ್ಟಾಗ ನನಗಾವ ಆಸೆಯೂ ಉಳಿದಿರಲಿಲ್ಲ. ಆದರೆ ಅದರ ಮುಖದಲ್ಲಿ ತೃಪ್ತಿಯ ನಗೆ ಹೊರಸೂಸಿದಾಗ ಆಶೋದಯವಾಯಿತು.

ಭಾರತದಲ್ಲಿಯಂತೆ ಸಂಶೋಧನೆಯ ಪ್ರಬಂಧವೊಂದನ್ನು ಬರೆದರೆ ಅಮೇರಿಕೆಯಲ್ಲಿ ಪಿಎಚ್.ಡಿ ಪದವಿ ದೊರೆಯಲಾರದು. ಬೇರೆ ಬೇರೆ ವಿಷಯಗಳಲ್ಲಿ ಪರಿಣಿತಿ ಪಡೆಯಬೇಕಾಗುತ್ತದೆ. ಕೀಟಶಾಸ್ತ್ರದ ಅಭ್ಯಾಸಿ ಭಾರತದಲ್ಲಿ ಕೀಟಗಳನ್ನಷ್ಟೆ ಕುರಿತು ಅಭ್ಯಾಸ ಕೈಕೊಂಡರೆ ಅಮೇರಿಕೆಯಲ್ಲಿ ಇದಕ್ಕೆ ಹೊಂದಿ ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪದಾರ್ಥವಿಜ್ಞಾನ ಮೊದಲಾದವುಗಳನ್ನೂ ಅಭ್ಯಸಿಸಬೇಕಾಗುತ್ತದೆ.

ತಮಗೆ ಬೇಕಾದ ವಿಷಯಗಳನ್ನು ಆರಿಸುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗೆ ಇದೆ ಎಂದು ಭಾರತದಲ್ಲಿ ಹೇಳಿದ್ದರೂ ಅಲ್ಲಿ ಹೋದ ಮೇಲೆ ನನ್ನ ಸಲಹಾಕಾರರು ಇಂಥಿಂಥ ವಿಷಯಗಳಲ್ಲಿ ಉತ್ತಮ ಗ್ರೇಡ ಗಳಿಸಬೇಕು ಎಂದು ಹೇಳಿದಾಗ ನನ್ನ ಜಂಘಾಬಲವೇ ಉಡುಗಿಹೋಯಿತು. ಪ್ರತಿಯೊಂದು ವಿಷಯದಲ್ಲೂ ಅತ್ಯಾಧುನಿಕ ಮಾಹಿತಿಯನ್ನು ಪಡೆಯಬೇಕು, ಪ್ರತಿಯೊಬ್ಬ ಶಿಕ್ಷಕನೂ ಗುಡ್ಡದಷ್ಟು ಗೃಹವಾಚನವನ್ನು ಕೊಡುತ್ತಾನೆ. ಎರಡು ದಿನ ರಜೆಯಿದ್ದ ವಾರಾಂತ್ಯ ಬಂದರಂತೂ ನಾಲ್ಕು ದಿನದ ಕೆಲಸ ಕೊಡುತ್ತಾರೆ. ಬೆಳಿಗ್ಗೆ ಎಂಟರಿಂದ ಹನ್ನೆರಡರ ವರೆಗೆ ಕೆಲಸ ಮಾಡಿದರೂ ಮುಗಿಯುವಂತಿಲ್ಲ. ಪುಣ್ಯಕ್ಕೆ ಕಾಲೇಜು, ವರ್ಗಗಳು ವಿದ್ಯಾರ್ಥಿಗೆ ಅಭ್ಯಾಸಕ್ಕೆ ಒಂದು ಪ್ರತ್ಯೇಕ ಕೋಣೆಯನ್ನು ಕೊಡುವುದಲ್ಲದೇ ಉಪಯೋಗದ ಎಲ್ಲ ಕೋಣೆ, ಪ್ರಯೋಗ ಶಾಲೆಗಳ ಬೀಗದ ಕೈಗಳನ್ನು ಕೊಟ್ಟಿರುತ್ತಾರೆ. ಚಹ-ಕಾಫಿ, ಅಲ್ಪೋಪಹಾರಗಳ ವ್ಯವಸ್ಥೆ ಅದೇ ಕಟ್ಟಡದಲ್ಲಿ ಇರುತ್ತದೆ. ಮಲಗಲು ಹಾಸಿಗೆಯೊಂದನ್ನು ಬಿಟ್ಟು ಉಳಿದೆಲ್ಲದರ ವ್ಯವಸ್ಥೆಯಿರುತ್ತದೆ. ಕೆಲ ವಿದ್ಯಾರ್ಥಿಗಳು ಅದಕ್ಕೂ ಅನುಕೂಲ ಮಾಡಿಕೊಂಡು ಕಾಲೇಜಿನಲ್ಲೇ ಮಲಗಿದ್ದೂ ಉಂಟು!

ವರ್ಗ, ಪ್ರಯೋಗಶಾಲೆಗಳಷ್ಟೆ ಅಲ್ಲದೇ ಇಲ್ಲಿಯ ಅಭ್ಯಾಸಕ್ರಮದಲ್ಲಿ ವಾಚನಾಲಯವೂ ಹೆಚ್ಚು ಮುಖ್ಯವಾಗಿರುತ್ತದೆ. ಒಮ್ಮೆಯೂ ವಾಚನಾಲಯಕ್ಕೆ ಹೋಗದೆ, ಪ್ರಾಧ್ಯಾಪಕರು ಕೊಟ್ಟ ನೋಟ್ಸುಗಳನ್ನೇ ಆಗಲಿ, ಮುದ್ರಿತವಾದ ಟಿಪ್ಪಣಿಗಳನ್ನೇ ಆಗಲಿ ಓದಿ ಪಾಸಾಗುವುದು ನಮ್ಮಲ್ಲಿಯ ವಿದ್ಯಾರ್ಥಿಗಳ ಕ್ರಮ. ಆದರೆ ಅಮೇರಿಕೆಯಲ್ಲಿ ವಾಚನಾಲಯಕ್ಕೆ ಹೋಗುವುದು ಅನಿವಾರ್ಯವಾಗಿಬಿಡುತ್ತದೆ. ಗೃಹಪಾಠಕ್ಕೆಂದು ಕೊಡುವ ಬಹಳಷ್ಟು ವಿಷಯಗಳನ್ನು ಸಂಶೋಧನಾ ಪತ್ರಗಳೊಳಗಿಂದ ಕೊಟ್ಟಿರುತ್ತಾರೆ. ಅದಕ್ಕಾಗಿ

(reference) ಸಹಾಯಕ ಓದಿನ ಕೆಲಸ ನಡೆಯಬೇಕಲ್ಲ? ಪಠ್ಯಪುಸ್ತಕಗಳಾದರೂ ಎರಡು, ಮೂರು ವರ್ಷಗಳಿಗೊಮ್ಮೆ ಬದಲಾಗುತ್ತಲೇ ಇರುವುದರಿಂದ ಹೊಸ ಪುಸ್ತಕಗಳಿಗೆ ವಾಚನಾಲಯಗಳೇ ಗತಿ. ಹೊಸ ಹೊಸ ಪುಸ್ತಕಗಳು ಹೊರ ಬಂದಂತೆ ಅವುಗಳನ್ನು ಪಠ್ಯಪುಸ್ತಕಗಳನ್ನಾಗಿ ಸ್ವೀಕರಿಸುವುದು ಅಲ್ಲಿ ಪದ್ಧತಿ. ಆದ್ದರಿಂದ ಪ್ರತಿವರ್ಷ ನೂತನ ಸಂಶೋಧನೆ ಮತ್ತು ಕ್ರಮಗಳನ್ನು ಪಠ್ಯಕ್ರಮಕ್ಕೆ ಜೋಡಿಸುತ್ತ ಹೋಗುತ್ತಾರೆ. ಹೊಸ ಪುಸ್ತಕಗಳು ಹೊರಗೆ ಬಂದಾಗ ಹಳೆಯವನ್ನು ಕೊಳ್ಳುವುವರೇ ಇರುವದಿಲ್ಲ. ಆದ್ದರಿಂದ ಅವು ರದ್ದಿಯಂಗಡಿಯಲ್ಲಿ ತೀರ ಅಗ್ಗ ಬೆಲೆಗೆ ದೊರೆಯುತ್ತವೆ. ನನ್ನಂತಹ ವಿದೇಶಿಯ ವಿದ್ಯಾರ್ಥಿಗಳೇ ಅವುಗಳಿಗೆ ಹೆಚ್ಚಾದ ಗಿರಾಕಿಗಳು.

ಸಂಶೋಧನೆಯಲ್ಲಿ ತೊಡಗಿದವರಿಗಂತೂ ವಾಚನಾಲಯವೇ ಜೀವಾಳ. ಎಲ್ಲಿ ಬೇಕಾದರೂ ಹೋಗಿ ಬೇಕಾದ ಪುಸ್ತಕ ಎಳೆದು ಓದಬಹುದು. ಮನೆಗೆ ಒಯ್ಯುವ ಪುಸ್ತಕಗಳಿಗೆ ಮಾತ್ರ ದಾಖಲೆ ಮಾಡಬೇಕಾಗುತ್ತದೆ. ಇದೀಗ ಹೆಚ್ಚೆಚ್ಚು ಪುಸ್ತಕಗಳು ಪ್ರಕಟವಾಗುತ್ತಿರುವದರಿಂದ ಅದನ್ನು ಇಡಲು ಸ್ಥಳವಿಲ್ಲದ್ದರಿಂದ ಅದನ್ನು ಹೆಚ್ಚಾಗಿ (micro-film) ಸೂಕ್ಷ್ಮ-ಫಿಲ್ಮಗಳನ್ನಾಗಿ ಪರಿವರ್ತಿಸಿ ಇಡುತ್ತಾರೆ. ಬೇಕಾದಾಗ ಇವನ್ನು ತೆಗೆದುಕೊಂಡು ಮಶೀನಿನಲ್ಲಿ ಹಾಕಿ ಓದಿದರಾಯಿತು. ಯಾವುದೇ ಸಂಶೋಧನ-ಪತ್ರಿಕೆ ಕಾಲೇಜಿನ ವಾಚನಾಲಯದಲ್ಲಿ ಇರದಿದ್ದರೆ ಹೊರಗಿನಿಂದ ಅವನ್ನು ತರಿಸುವ ವ್ಯವಸ್ಥೆಯಿದೆ. ಸಂಶೋಧನೆಗೆ ಬೇಕಾಗುವ ಸಾಮಗ್ರಿಗಳಾದರೂ ಅಷ್ಟೆ. ಇಂದು ಇದಿಲ್ಲ; ನಾಳೆ ಅದಿಲ್ಲ ಎಂದು ತಲೆಕೆರೆದುಕೊಳ್ಳಬೇಕಾಗಿಲ್ಲ. ಡಿಪಾರ್ಟಮೆಂಟಿನ ಸಂಗ್ರಹಾಲಯದ ಬೀಗದ ಕೈಯೇ ವಿದ್ಯಾರ್ಥಿಗಳ ಹತ್ತಿರವಿರುವುದು. ಬೇಕಾದಾಗ, ಬೇಕಾದ್ದನ್ನು, ಬೇಕಷ್ಟು ತೆಗೆದುಕೊಳ್ಳಬಹುದು. ಯಾವುದೇ ವಸ್ತುವಿನ ಅವಶ್ಯಕತೆ ಕಂಡುಬಂದರೆ ಪ್ರಾಧ್ಯಾಪಕರಿಗೆ ತಿಳಿಸಿದರಾಯಿತು. ತತ್‌ಕ್ಷಣ ಫೋನಿನ ಮೂಲಕ ಕಂಪನಿಗೆ ಆರ್ಡರ್ ಹೋಗುತ್ತದೆ. ಮರುದಿನ ಆ ಸಾಮಾನು ನಮ್ಮ ಕೈಸೇರುತ್ತದೆ. ಇಷ್ಟೆಲ್ಲಾ ಅನುಕೂಲ ಸೌಕರ್ಯಗಳಿರುವಾಗ ಸಂಶೋಧನೆ ಮಾಡಲಾಗದಿದ್ದರೆ ಯಾರು ತಾನೆ ಕ್ಷಮಿಸಿಯಾರು?

ಸಂಶೋಧನೆಯಲ್ಲಿ ಪರೀಕ್ಷೆಗಳೂ ಪ್ರಮುಖ ಪಾತ್ರವಹಿಸುತ್ತವೆ. ಇವು ಅನೇಕ ವಿಧವಾಗಿರುತ್ತವೆ. ಪ್ರತಿಯೊಂದು ವಿಷಯದಲ್ಲೂ ಮೊದಲಿನ ಐದು ನಿಮಿಷಗಳಲ್ಲಿ ಅನಿರೀಕ್ಷಿತ ಪರೀಕ್ಷೆ ತೆಗೆದುಕೊಳ್ಳಬಹುದು. ತಿಂಗಳಿಗೆ ಎರಡು, ಒಂದು ತಾಸಿನ ಪರೀಕ್ಷೆಗಳನ್ನು ಇಟ್ಟಿರಬಹುದು. ಇಲ್ಲವೇ ಮನೆಯಿಂದ ಉತ್ತರ ಬರೆದುಕೊಂಡು ಬರುವ (take home examination) ಪರೀಕ್ಷೆಯೂ ಇರಬಹುದು. ಇವಲ್ಲದೇ ಒಂದು ಶೈಕ್ಷಣಿಕ 'ಸಮೆಸ್ಟರ' (semester) ಟರ್ಮಿನಲ್ಲಿ ಹಲವಾರು ಪೇಪರುಗಳನ್ನು ಬರೆಯುವ ಪರೀಕ್ಷೆಯಿರುತ್ತದೆ. ಯಾವುದಾದರೊಂದು ಯೋಜನೆ ಆರಿಸಿಕೊಂಡು ಅದರ ಮೇಲೆ ಲೇಖ ಬರೆಯುವ ಪರೀಕ್ಷೆಯೂ ಇರಬಹುದು. ನಡುವೆ ರಜೆ ಬಂದರಂತೂ ಮೈತುಂಬ ಕೆಲಸ. ಅಂತ್ಯದಲ್ಲಿ, ವರ್ಷದಲ್ಲಿ ಆಗಾಗ್ಗೆ ಕೊಟ್ಟ ಪರೀಕ್ಷೆಗಳಲ್ಲಿ ಪಡೆದ ಗುಣಗಳ ಸರಾಸರಿ ವರ್ಗವನ್ನು ದಯಪಾಲಿಸುತ್ತಾರೆ. ಭಾರತದಂತೆ ಶೇಕಡಾ ೩೫ ಪಾಸು-ವರ್ಗ, ಶೇಕಡಾ ೪೫ ಎರಡನೇ ವರ್ಗ, ಶೇಕಡಾ ೬೦ ಮೊದಲನೇ ವರ್ಗವೆಂಬ ಲೆಕ್ಕಾಚಾರವಿಲ್ಲ. ಅಲ್ಲಿ A (ಅತ್ಯುತ್ತಮ), B (ಉತ್ತಮ), C (ಮಧ್ಯಮ), D (ಪಾಸು), F (ನಪಾಸು), I (ಅಪೂರ್ಣ) ಮುಂತಾದ ಗ್ರೇಡುಗಳು ಸಾಮಾನ್ಯವಾಗಿವೆ. ಅಲ್ಲದೆ ಹೆಚ್ಚಿನ ಬುದ್ಧಿವಂತರಿರುವ ವರ್ಗದಲ್ಲಿ ಹೆಚ್ಚಿಗೆ ಗುಣಗಳ ಮೇಲೂ, ತೀರ ಸಾಮಾನ್ಯ

ವಿದ್ಯಾರ್ಥಿಗಳ ವರ್ಗದಲ್ಲಿ ಸ್ವಲ್ಪ ಕಡಿಮೆ ಗುಣಗಳ ಮೇಲಿಂದಲೂ ವರ್ಗವನ್ನು ನಿರ್ಧರಿಸುತ್ತಾರೆ. ಅಂದರೆ ಇದರ ಅರ್ಥ ದಡ್ಡರ ಕ್ಲಾಸಿನಲ್ಲಿ ಶೇಕಡಾ ೬೦ ಗುಣಗಳಿಗೆ A ಗ್ರೇಡ ಸಿಗುವದೆಂದಲ್ಲ. ಡಿಗ್ರಿ ಪಡೆಯಲು ಪ್ರತಿಯೊಂದು ಕೋರ್ಸಿಗೆ (course ಅಂದರೆ ಒಂದು ವಿಷಯದಲ್ಲಿ ಪರಿಪೂರ್ಣತೆ ಪಡೆಯುವ ವಿಷಯಕ್ರಮ) ನಿರ್ದಿಷ್ಟ ಸರಾಸರಿ ಗ್ರೇಡ ಪಡೆಯಲೇ ಬೇಕೆಂಬ ಕಡ್ಡಾಯವಿದೆ. ಉದಾಹರಣೆಗೆ ಹೇಳುವುದಾದರೆ ಕೆಳಗಿನ ವರ್ಗದವರಿಗೆ C ಗ್ರೇಡ ಸರಾಸರಿ ಇರಬೇಕೆಂದರೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ B ಗ್ರೇಡ ಸರಾಸರಿ ಇರಬೇಕೆಂಬ ನಿಯಮವಿದೆ. ಅಂದರೆ ಸ್ನಾತಕೋತ್ತರ ವಿದ್ಯಾರ್ಥಿಯೊಬ್ಬನಿಗೆ ಒಂದು ವಿಷಯದಲ್ಲಿ C ಗ್ರೇಡ ದೊರಕಿದರೆ ಸರಾಸರಿ ಗುಣ ಪಡೆಯಲು ಆತ ಇನ್ನೊಂದು ವಿಷಯದಲ್ಲಿ A ಗ್ರೇಡ ಪಡೆಯಲೇ ಬೇಕು. ಇಪ್ಪತ್ತರಿಂದ ಐವತ್ತು ವಿದ್ಯಾರ್ಥಿಗಳಿರುವ ವರ್ಗದಲ್ಲಿ ಎಲ್ಲ ವಿಷಯಗಳಲ್ಲಿ A ಗ್ರೇಡ ಪಡೆಯುವುದು ಅತ್ಯಂತ ಕಠಿಣವಾದ ಕೆಲಸ. ಒಮ್ಮೆ ಶಿಕ್ಷಕರೂ ವಿದ್ಯಾರ್ಥಿಗಳೂ ಉಪಹಾರ ತೆಗೆದು ಕೊಳ್ಳುತ್ತಿದ್ದಾಗ ಶಿಕ್ಷಕರೊಬ್ಬರು;

"ನಿಮ್ಮ ಅಭ್ಯಾಸವೊಂದನ್ನು ಬಿಟ್ಟರೆ ನೀವು ಬೇರಾವ ಚಟುವಟಿಕೆಯಲ್ಲೂ ಏಕೆ ಭಾಗವಹಿಸುವುದಿಲ್ಲ?" ಎಂದು ವಿದ್ಯಾರ್ಥಿಗಳನ್ನು ದೂರಿದರು. ವಿದ್ಯಾರ್ಥಿಯೊಬ್ಬ "ದಿನದಲ್ಲಿ ಹದಿನಾರು ತಾಸು ದುಡಿದರೂ ನೀವು ಕೊಟ್ಟ ಕೆಲಸ ಮುಕ್ತಾಯವಾಗದಿರುವಾಗ ಉಳಿದ ಚಟುವಟಿಕೆಗೆ ವೇಳೆಯೆಲ್ಲಿಂದ ಬರಬೇಕು?" ಎಂದು ಮರುಸವಾಲು ಹಾಕಿದ. ಶಿಕ್ಷಕರು ಕೂಡಲೇ ಉತ್ತರಿಸಿದರು. "ನಿನ್ನ ಹದಿನಾರು ತಾಸಿನ ದುಡಿತ ಕಡಿಮೆಯೆಂದೇ ಹೇಳಬೇಕು. ಯಾಕೆಂದರೆ ನಾಳೆ ದಿನಕ್ಕೆ ಹದಿನೆಂಟು ತಾಸು ದುಡಿಯುವವರೊಂದಿಗೆ ನೀನು ಸ್ಪರ್ಧಿಸಬೇಕಾಗಿದೆ!"

ಸ್ನಾತಕೋತ್ತರ ವಿದ್ಯಾರ್ಥಿಯ ಮೊದಲನೇ ಶಿಕ್ಷಣ-ಹಂತ (ಟರ್ಮ)ದಲ್ಲಿ B ಗ್ರೇಡ ಸರಾಸರಿಗಿಂತ ಸ್ವಲ್ಪ ಕಡಿಮೆಯಾದರೂ ಅವನಿಗೆ ಎಚ್ಚರಿಕೆ (warning)ಕೊಟ್ಟು ಎರಡನೇ ಹಂತದಲ್ಲಿ ಓದನ್ನು ಮುಂದುವರಿಸಲು ಅನುಮತಿ ನೀಡುತ್ತಾರೆ. ಆಗಲೂ ಸರಾಸರಿ B ಗ್ರೇಡ ಬರದಿದ್ದರೆ ನೇರ ಮನೆಗೆ ಕಳಿಸಿಬಿಡುತ್ತಾರೆ. ಹೀಗೆ ಅಪ್ಪಣೆ ಪಡೆದು ಮರಳುವವರಲ್ಲಿ ಭಾರತೀಯರ ಸಂಖ್ಯೆಯೇನೂ ಕಡಿಮೆಯಿಲ್ಲ. ನಾವೆಲ್ಲ ಎಂಟು ವಿದ್ಯಾರ್ಥಿಗಳ ಗುಂಪು ಕೀಟಶಾಸ್ತ್ರದ ಉಚ್ಚ ಅಭ್ಯಾಸವನ್ನು ಕೈಕೊಂಡಿದ್ದೆವು. ವರ್ಷದ ಕೊನೆಯಲ್ಲಿ ನಾಲ್ವರನ್ನು ತಿರುಗಿ ಕಳಿಸಲಾಯಿತು. ಭಾರತದಲ್ಲಿ ಇಂತಹ ಗ್ರೇಡ್ ಪದ್ಧತಿ ಇಲ್ಲದ್ದರಿಂದ ಅಮೇರಿಕೆಗೆ ಹೋಗುವ ವಿದ್ಯಾರ್ಥಿಗಳ ಬುದ್ಧಿಬಲದ ಪರಿಚಯ ಅಲ್ಲಿಯವರಿಗೆ ಆಗುವುದು ಕಷ್ಟ. ಅಲ್ಲದೇ ಅವರು ಜೊತೆಗೆ ಒಯ್ಯುವ ಶಿಫಾರಸು-ಪತ್ರಗಳು (recommendation letters)ಪರಿಸ್ಥಿತಿಯಿಂದ ಹೊರತಾಗಿರುತ್ತವೆ. ಇವುಗಳನ್ನೇ ನಂಬಿದ ಪ್ರಾಧ್ಯಾಪಕರಿಗೆ ವರ್ಷದ ಕೊನೆಯಲ್ಲಿ ವಿದ್ಯಾರ್ಥಿಗಳ ಪ್ರಗತಿ ಕಂಡಾಗ ನಿರಾಶೆ, ಆಶ್ಚರ್ಯಗಳು ಉಂಟಾಗುವುದು ಸಹಜ. ನನ್ನ ಪ್ರಾಧ್ಯಾಪಕ ಡಾ.ಕ್ರಾಲ್‌ರು ಒಂದು ದಿನ:

"ಕ್ರಿಶ್, ನನಗೊಂದು ಸಮಸ್ಯೆಯಾಗಿದೆ. ನಿನ್ನ ದೇಶದಿಂದ ಬರುವ ವಿದ್ಯಾರ್ಥಿಗಳಿಗೆಲ್ಲ ಅತ್ಯುತ್ತಮ ಶಿಫಾರಸ್ಸು-ಪತ್ರಗಳಿರುತ್ತವೆ. ಇವುಗಳ ಆಧಾರದ ಮೇಲೆ ಇಲ್ಲಿ ಪ್ರವೇಶ ದೊರಕಿಸಿದ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ. ಇಲ್ಲವೇ ನಮ್ಮ ಅಪೇಕ್ಷೆಯಷ್ಟು ಚೆನ್ನಾಗಿ ಮಾಡುವುದಿಲ್ಲ. ಇದಕ್ಕೆ ಕಾರಣವೇನು?" ಎಂದು ಕೇಳಿದರು. ಅದಕ್ಕೆ ನಾನು,

"ನಿಮ್ಮಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಬಗ್ಗೆ ತಮಗೆ ತಿಳಿದದ್ದನ್ನು ಮುಚ್ಚುಮರೆಯಿಲ್ಲದೇ ಶಿಫಾರಸು-ಪತ್ರದಲ್ಲಿ ನಮೂದಿಸುತ್ತಾರೆ. ಅವರು ವಿದ್ಯಾರ್ಥಿಗಳ ದೋಷಗಳನ್ನು ಕಾಣಿಸಲು ಮರೆಯುವುದಿಲ್ಲ. ತಾವು ಬರೆದದ್ದು ವಿದ್ಯಾರ್ಥಿಗಳಿಗೆ ತಿಳಿಯುವುದಿಲ್ಲವೆಂದು ಖಾತ್ರಿ ಇದೆ. ಒಂದು ವೇಳೆ ತಿಳಿದರೂ ಅದಕ್ಕಾಗಿ ಅವರು ಹೆದರಬೇಕಾಗಿಲ್ಲ. ಭಾರತದಲ್ಲಿ ಸ್ಥಿತಿ ತೀರ ಬೇರೆಯಾಗಿದೆ. ಶಿಕ್ಷಕರು ತಮ್ಮ ಶಿಫಾರಸ್ಸು-ಪತ್ರದಲ್ಲಿ ವಿದ್ಯಾರ್ಥಿಗೆ ಲಾಭ ಆಗುವಂತಿದ್ದರೆ ತಾನೇಕೆ ಅಡ್ಡಿಯಾಗಬೇಕು? ಎಂಬ ಉದಾರಭಾವದಿಂದ ವಿದ್ಯಾರ್ಥಿಯಲ್ಲಿ ಇಲ್ಲದ ಉತ್ತಮ ಗುಣಗಳನ್ನೆಲ್ಲ ಶಿಫಾರಸ್ಸು-ಪತ್ರದಲ್ಲಿ ಕಾಣಿಸುತ್ತಾರೆ. ಕೆಲವು ಶಿಕ್ಷಕರು ಇಂತಹ ಪತ್ರಗಳನ್ನು ವಿದ್ಯಾರ್ಥಿಗಳಿಗೇ ಬರೆದು ತರಲು ತಿಳಿಸಿ, ತಾವು ಸಹಿ ಮಾತ್ರ ಮಾಡುತ್ತಾರೆ! ಶಿಕ್ಷಕರು ಇಂಥ ಪತ್ರಗಳನ್ನು ಅಮೇರಿಕೆಗೆ ಕಳಿಸಲು ಸ್ವಂತ ಕಿಸೆಯಿಂದ ಖರ್ಚುಕೊಡುವ ಮನಸ್ಸು ಮಾಡದ್ದರಿಂದ ವಿದ್ಯಾರ್ಥಿಯೇ ಇವನ್ನು ಕಳಿಸಿಕೊಡುತ್ತಾನೆ. ಆದ್ದರಿಂದ ಒಂದು ವೇಳೆ ವಿದ್ಯಾರ್ಥಿಗೆ ಅನುಕೂಲವಾದ ಶಿಫಾರಸ್ಸು-ಪತ್ರವನ್ನು ಆತ ಕೊಡದಿದ್ದರೆ ಅದು ನಿಮ್ಮ ಕೈಸೇರುವದೂ ಇಲ್ಲ. ಅಮೇರಿಕೆಗೆ ಬರುವ ಹೆಚ್ಚಿನ ವಿದ್ಯಾರ್ಥಿಗಳು ಭಾರತದ ಬುದ್ಧಿಶಾಲಿಗಳಲ್ಲ. ಬಹುಸಂಖ್ಯಾತರ ತಂದೆ-ತಾಯಿ, ಇಲ್ಲವೆ ಪಾಲಕರು ಅಗರ್ಭ ಶ್ರೀಮಂತರಿರುತ್ತಾರೆ. ಇಲ್ಲವೇ ದೊಡ್ಡ ಸರಕಾರಿ ಹುದ್ದೆಯಲ್ಲಿರುತ್ತಾರೆ. ಶಿಫಾರಸಿನ ಬಲ, ಧನಬಲಗಳಿಂದ ಬಂದವರು ಇಲ್ಲಿಯ ಅಭ್ಯಾಸವನ್ನು ಎದುರಿಸಲಿಕ್ಕಾಗದೇ ಶರಣು ಹೊಡೆಯುತ್ತಾರೆ." ಎಂದು ಸಮಾಧಾನ ಹೇಳಿದೆ. ಪ್ರಾಧ್ಯಾಪಕರು ನಗುತ್ತ,

"ಕ್ರಿಶ್ ನೀನು ಯಾವ ಬಲದ ಆಧಾರದಿಂದ ನಮ್ಮ ದೇಶಕ್ಕೆ ಬಂದೆ?" ಎಂದು ನನ್ನನ್ನೇ ಕೇಳಿದರು. ನನಗೆ ಇವಾವುದರ ಆಧಾರವೂ ಇದ್ದಿಲ್ಲವೆಂದು ಅವರಿಗೆ ಗೊತ್ತು. ಬೇಕೆಂದು ಕೆಣಕಲೆಂದೇ ಹಾಗೇ ಕೇಳಿದ್ದರು.

ಬಹಳಷ್ಟು ಶ್ರಮವಹಿಸಿ ಗ್ರೇಡು ಗಳಿಸಿದೆವು ಎಂದಿಟ್ಟುಕೊಂಡರೆ ಸಾರ್ಥಕವಾಗಲಿಲ್ಲ. ಜೊತೆಗೆ ದೀರ್ಘ ಸಂಶೋಧನೆಯನ್ನೂ ಕೈಕೊಳ್ಳಬೇಕು ಎಂದು ಪ್ರಾಧ್ಯಾಪಕರು 'ಬಜಾಯಿಸುತ್ತಲೇ' ಇರುತ್ತಾರೆ. ಸಾಲದ್ದಕ್ಕೆ ಸಂಶೋಧನೆಯ ಗುಣಾವಗುಣಗಳನ್ನು ಪರಾಮರ್ಶಿಸಲು ಮೂವರು ಪ್ರಾಧ್ಯಾಪಕರ ಸಮಿತಿಯೊಂದು ಇರುತ್ತದೆ. ತಿಂಗಳಿಗೊಮ್ಮೆ ಅವರನ್ನು ಭೆಟ್ಟಿಯಾಗಿ ನೀವು ಮಾಡಿದ ಸಂಶೋಧನೆಗಳನ್ನೆಲ್ಲ ವಿವರಿಸಬೇಕು. ಅವರು ತೃಪ್ತಿಯನ್ನು ವ್ಯಕ್ತಪಡಿಸಿದಾಗಲೇ ಗಾಡಿ ಮುಂದುವರಿಯುತ್ತದೆ.

ವಿಷಯದ ಅಭ್ಯಾಸ ಪ್ರಾರಂಭಿಸಿದ ಒಂದು ಒಂದೂವರೆ ವರ್ಷದೊಳಗೆ 'ಅರ್ಹತಾ ಪರೀಕ್ಷೆ' (qualifying examination)ಯನ್ನು ಪಾಸುಮಾಡಬೇಕು. ಈ ಪರೀಕ್ಷೆ ಪಾಸುಮಾಡುವ ಮೊದಲು ಪಿಎಚ್.ಡಿಯ ಅರ್ಹ-ವಿದ್ಯಾರ್ಥಿಯೆಂದು ಆತ ಪರಿಗಣನೆಯಾಗುವುದೇ ಇಲ್ಲ. ಈ ಪರೀಕ್ಷೆಯಾದರೂ ಬಹಳ ಕಠಿಣವಾಗಿರುತ್ತದೆ. ಆರು ಜನ ಪ್ರಾಧ್ಯಾಪಕರ ಪರೀಕ್ಷಾ-ಸಮಿತಿಯೊಂದು ಇರುತ್ತದೆ. ಪರೀಕ್ಷೆ ಕೇವಲ ಲಿಖಿತವಿರಬಹುದು; ಕೇವಲ ಮೌಖಿಕವಿರಬಹುದು. ಇಲ್ಲವೇ ಎರಡನ್ನೂ ಒಳಗೊಂಡಿರಬಹುದು. ನಾನು ಕೇವಲ ಮೌಖಿಕ ಪರೀಕ್ಷೆಯನ್ನು ಕೊಡಬೇಕಾಯಿತು.

ಈ ಪರೀಕ್ಷೆಯಲ್ಲಿ ಅಡಿಗೆಯಿಂದ ಅಣುವಿನವರೆಗೆ ಯಾವುದೇ ವಿಷಯದ ಮೇಲೆ ಪ್ರಶ್ನೆ ಕೇಳಬಹುದು. ಈ ಪರೀಕ್ಷೆಯ ವೈಶಿಷ್ಟ್ಯವೆಂದರೆ ಕೇವಲ ಎರಡು ಬಾರಿ ಇದಕ್ಕೆ

ಕೂಡ್ರಲು ಅವಕಾಶವಿದೆ. ಎರಡನೇ ಬಾರಿಯೂ ಯಶಸ್ವಿಯಾಗದಿದ್ದರೆ ಹಿಂದಿರುಗುವದೊಂದೇ ಮಾರ್ಗ. ಕೆಲವು ಸುದ್ಯೆವಿಗಳು ಮೊದಲನೇ ಸಲ ಕೆಲವೇ ಗುಣಗಳಿಂದ ಅಯಶಸ್ವಿಯಾದರೆ ಎಂ.ಎಸ್.ಗೆ (ಎಂ.ಎಸ್‌ಸಿ) ಪ್ರವೇಶ ಪಡೆಯುತ್ತಾರೆ. ಒಂದು ವಿಶ್ವವಿದ್ಯಾಲಯದಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿಗೆ ಬೇರೆ ಯಾವದೇ ವಿಶ್ವವಿದ್ಯಾಲಯದಲ್ಲೂ ಪ್ರವೇಶ ದೊರೆಯಲಾರದು. ಎಲ್ಲಿಯೇ ಅರ್ಜಿ ಹಾಕಿದರೂ ಆ ಸಂಸ್ಥೆಯ ಅಧಿಕಾರಿಗಳು ಮೊದಲಿನ ಪ್ರಾಧ್ಯಾಪಕರಿಗೆ ಫೋನ್ ಮಾಡಿ ಆ ವಿದ್ಯಾರ್ಥಿಯ ವಿವರವಾದ ಮಾಹಿತಿಯನ್ನು ಪಡೆಯದಿರುವುದಿಲ್ಲ.

ಇಷ್ಟಕ್ಕೇ ಮುಗಿಯಲಿಲ್ಲ ಕಷ್ಟಪರಂಪರೆ. ಪಿಎಚ್.ಡಿಯ ಅತ್ಯುಚ್ಚ ಪದವಿ ಪಡೆಯುವವರಿಗೆ (ವಿಜ್ಞಾನದಲ್ಲಿ ಕೂಡ) ಇಂಗ್ಲೀಷ್ ಬಿಟ್ಟು ಫ್ರೆಂಚ್, ಜರ್ಮನ್, ರಶಿಯನ್‌ದೊಳಗಿನ ಯಾವದೇ ಎರಡು ಭಾಷೆಯೊಳಗೆ ವಿಶೇಷ ಪರೀಕ್ಷೆ ಕೊಡಬೇಕು. ಈ ಪರೀಕ್ಷೆಗಳನ್ನು ಆಯಾ ವಿಭಾಗದವರೇ ನಡೆಸುವದರಿಂದ ಅವರು ಸಹಜವಾಗಿಯೇ ಹೆಚ್ಚಿನ ಮಟ್ಟವನ್ನು ಅಪೇಕ್ಷಿಸುತ್ತಾರೆ. ನಾನು ಫ್ರೆಂಚ್ ಭಾಷೆ ಕಲಿಯಲು ಬಹಳಷ್ಟು ಬೆವರು ಇಳಿಸಬೇಕಾಯಿತು. ಕೀಟಶಾಸ್ತ್ರ (Entomology) ನನ್ನ ವಿಷಯವಾಗಿದ್ದರಿಂದ, ವಿಷಯಾಭ್ಯಾಸವನ್ನು (course-work) ಕೆಳಗಿನ ವರ್ಗದಿಂದಲೇ ಪ್ರಾರಂಭಿಸಬೇಕಾಯಿತು. ಫ್ರೆಂಚ್ ವರ್ಗಗಳು ಬೆಳಿಗ್ಗೆ ಏಳುಗಂಟೆಗೆ ಇರುತ್ತಿದ್ದವು. ಮೈ ಕೊರೆಯುವ ಚಳಿಯಲ್ಲಿ ಧಾವಿಸಬೇಕಾಗುತ್ತಿತ್ತು. ವರ್ಗದಲ್ಲಿಯ ಪಾಠದ ವೇಗವನ್ನು ನೋಡಿದಾಗ ನಾನು ಐದು ವರ್ಷ ಕಲಿತರೂ ಈ ಭಾಷೆ ನನಗೆ ಬಾರದೆಂದು ತಿಳಿದುಕೊಂಡೆ. ವರ್ಗದ ಪಾಠದ ಜೊತೆಗೆ ಖಾಸಗೀ ರೀತಿಯಲ್ಲೂ ಪಾಠ ಹೇಳಿಸಿಕೊಳ್ಳಲಾರಂಭಿಸಿದೆ. ನನಗೆ 'ಟ್ಯೂಶನ್' ಕೊಡುತ್ತಿದ್ದವಳು ಪ್ರೆಂಚ್ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿನಿ. ತಾಸಿಗೆ ಫೀ ಎಂದು ಮೂರು ಡಾಲರ್ (ಈಗಿನ ಲೆಕ್ಕದಂತೆ ೨೨ ರೂಪಾಯಿ ೫೦ ಪೈಸೆ) ಕೊಡಬೇಕಾಗುತ್ತಿತ್ತು ಅವಳಿಗೆ. ಒಂದೆರಡು ಗಂಟೆಯೆಂದರೆ ಹತ್ತು ಬಾರಿ ಕೈಗಡಿಯಾರ ನೋಡುತ್ತ, ಬಾಯ್ತುಂಬ ಮಾತನಾಡುತ್ತ, ಹವಾಮಾನದ ಸುದ್ಧಿಯಾಡುತ್ತ, ಅಂಗವಿನ್ಯಾಸ ಮಾಡುತ್ತ ಕಾಲ ಕಳೆಯುತ್ತಿದ್ದಳು. ಟ್ಯೂಶನ್ನಿಗೆಂದು ನನ್ನ ಬೊಕ್ಕಸ ಬರಿದಾಗುತ್ತ ಬಂದರೂ ಪ್ರೆಂಚ್ ಭಾಷೆ ತಲೆಯಲ್ಲಿ ತುಂಬಿಕೊಳ್ಳುವುದು ದುಸ್ತರವಾಯಿತು. ಫ್ರೆಂಚ್ ಭಾಷೆ ಆಕರ್ಷಿಸುವಂತಹದಲ್ಲವೆಂದು ನಾನು ಕಂಡುಕೊಂಡೆ. ಈ ಬಿಗಿ ಭಾಷೆಯನ್ನು ಕಲಿಯಲು ಇನ್ನೂ ಒಂದು ಉಪಾಯ ಕೈ ಕೊಳ್ಳಬೇಕಾಯಿತು. ನಮ್ಮ ಕಾಲೇಜಿನಲ್ಲಿ ಕೆಲವು ಫ್ರೆಂಚ್ ವಿದ್ಯಾರ್ಥಿಗಳಿದ್ದರು. ಅವರೊಡನೆ ಬಿಡುವಿದ್ದಾಗಲೆಲ್ಲ ಫ್ರೆಂಚ್ ಮಾತನಾಡಲು ಪ್ರಯತ್ನಿಸತೊಡಗಿದೆ. ಅವಕಾಶ ಸಿಕ್ಕಾಗಲೆಲ್ಲ ಅವರಿಂದಲೂ ಪಾಠ ಹೇಳಿಸಿಕೊಳ್ಳುತ್ತಿದ್ದೆ. ಈ ಒಂದು ಭಾಷೆ ಕಲಿಯಲು ವೆಚ್ಚ ಮಾಡಿದ ರೊಕ್ಕ, ವೇಳೆಗಳನ್ನು ಭಾರತದಲ್ಲಿ ವೆಚ್ಚ ಮಾಡಿದ್ದರೆ ಇನ್ನೊಂದು ಮಾಸ್ಟರ್ಸ್ ಡಿಗ್ರಿ ದೊರೆಯುತ್ತಿತ್ತು! ಈ ಪರೀಕ್ಷೆ ಪಾಸಾದ ದಿನ ನನ್ನ ಅತಿ ದೊಡ್ಡ ಭಾರವೊಂದು ಇಳಿದಂತಾಯಿತು.

ಇವೆಲ್ಲ ಕುತ್ತುಗಳನ್ನು ದಾಟಿದ ಮೇಲೆ ಸಂಶೋಧನೆ ಜೋರಾಗಿ ನಡೆಯಿತು. ನಮ್ಮ ಕಾಲೇಜಿನಿಂದ ಐದು ಮೈಲು ದೂರದಲ್ಲಿ "ಪ್ರಾಯೋಗಿಕ" ಅರಣ್ಯವಿದೆ. (experimental forest). ಅಲ್ಲಿಗೆ ಪ್ರತಿನಿತ್ಯ ಹೋಗಬೇಕಾಗುತ್ತಿತ್ತು. ಕಾರು ಇಲ್ಲದವರಿಗೆ ಕಾಲಬಲವೇ ಗತಿ ತಾನೆ? ದಾರಿಹೋಕರಿಗೆ ಬೇರೆ ರಸ್ತೆಯಿಲ್ಲದ್ದರಿಂದ ಟ್ರಕ್, ಕಾರುಗಳು

ಎಡೆಬಿಡದೇ ಹೋಗುವ ರಸ್ತೆಯಲ್ಲಿ ಸಾವಧಾನದಿಂದ ಹೋಗಬೇಕಾಗುತ್ತಿತ್ತು. ಆಗೊಮ್ಮೆ ಈಗೊಮ್ಮೆ ಕಾರಿನವರ ದಯೆ ಬಂದು ಗುರುತು-ಪರಿಚಯವಿಲ್ಲದಿದ್ದರೂ ಕಾರಿನಲ್ಲಿ ಕೂಡ್ರಿಸಿಕೊಂಡು ತಲುಪಬೇಕಾದ ಸ್ಥಳಕ್ಕೆ ಮುಟ್ಟಿಸಿದ್ದೂ ಉಂಟು. ಪ್ರಾಯೋಗಿಕ ಅರಣ್ಯದಲ್ಲಿ ದಿನಕ್ಕೆ ಎಂಟು ಹತ್ತು ತಾಸು ಕಳೆಯಬೇಕಾಗುತ್ತಿತ್ತು. ಅಲ್ಲಿಯ ಕೀಟ ಸಂಗ್ರಹವನ್ನಾಗಲಿ ಬೇರೆ ಸಾಮಗ್ರಿಯನ್ನಾಗಲಿ ತಂದು ಕಾಲೇಜಿನ ಪ್ರಯೋಗಶಾಲೆಯಲ್ಲಿ ಕೆಲಸ ಮುಂದುವರಿಸಬೇಕಾಗುತ್ತಿತ್ತು. ಕೆಲವೊಮ್ಮೆ ಮಧ್ಯರಾತ್ರಿಯ ತನಕವೂ ದುಡಿಯ ಬೇಕಾಗುತ್ತಿತ್ತು. ಎಷ್ಟೋ ಸಲ ನಸುಕು ಹರಿಯುವ ತನಕವೂ ಪ್ರಯೋಗಶಾಲೆಯಲ್ಲಿ ಕಳೆದ ನೆನಪಿದೆ. ನನ್ನ ಪ್ರಾಧ್ಯಾಪಕರಾದರೂ ಈ ಕಠಿಣ ದುಡಿತವನ್ನು ಮೆಚ್ಚಿಕೊಂಡು, ತುಂಬ ಪ್ರೋತ್ಸಾಹಿಸಿದ್ದರಿಂದ ನಾನು ಯಾವಾಗಲೂ ಉತ್ಸಾಹದಿಂದ ಇರುತ್ತಿದ್ದೆ. ಅಮೇರಿಕೆಯಲ್ಲಿ ಮೊದಲೇ ತೀರ ಕಡಿಮೆಯಾದ ವಿದ್ಯಾರ್ಥಿ-ಪ್ರಾಧ್ಯಾಪಕರ ಅಂತರ ಮಾಯವಾಗುತ್ತ ಬಂದಿತು. ನನ್ನನ್ನು ಸರಿಸಮಾನತೆಯಿಂದ ನನ್ನ ಪ್ರಾಧ್ಯಾಪಕರು ಕಾಣಲಾರಂಭಿಸಿದರು. ಆದರೆ ಹೀಗೆಂದು ಹೆಚ್ಚಿನ ಸಲಿಗೆಗೂ ಅವರು ಅವಕಾಶ ಕೊಟ್ಟಿರಲಿಲ್ಲ.

ನಂತರ ಬಂದದ್ದು ಪ್ರಬಂಧ (thesis)ವನ್ನು ಮುಗಿಸುವ ಸಮಸ್ಯೆ. 'ಟಾಯಿಪ್' ಮಾಡುವವರು ಬಹಳೇ ಹಣ ಕೇಳುವುದರಿಂದ ಹೆಚ್ಚಿನ ವಿದ್ಯಾರ್ಥಿಗಳು ತಮ್ಮ ತಮ್ಮ ಪ್ರಬಂಧವನ್ನು ತಾವೇ 'ಟಾಯಿಪ್' ಮಾಡುತ್ತಾರೆ. ನಾನೂ 'ಟಾಯಿಪ್' ಮಾಡುವುದನ್ನು ಕಲಿತುಕೊಂಡೆ. ಮೊದಲ ಸಲ ಎರಡುನೂರು ಪುಟದ ನನ್ನ ಪ್ರಬಂಧವನ್ನು 'ಟಾಯಿಪ್' ಮಾಡಿ ಹೆಮ್ಮೆಯಿಂದ ಪ್ರಾಧ್ಯಾಪಕರ ಎದುರಿಗೆ ಇಟ್ಟಾಗ-

"ಕ್ರಿಶ್, ಇದೇನು, ನಿಮ್ಮ ಮಹಾಭಾರತ ಬರೆದಿರುವಿರಾ?" ಎಂದು ಕೇಳಿ ನಕ್ಕರು. ಅವರ ಸೂಚನೆಯಂತೆ ಸಂಕ್ಷೇಪಿಸಿ ಅದನ್ನು ಎಪ್ಪತ್ತು ಪುಟಕ್ಕೆ ಇಳಿಸಲಾಯಿತು. ಪ್ರಬಂಧಕ್ಕೆ ಅವಶ್ಯವಾಗಿ ಚಿತ್ರ, ರೇಖಾಚಿತ್ರ, ಭಾವಚಿತ್ರಗಳು ಬೇಕಷ್ಟೆ? ಇವಕ್ಕಾದರೂ ಬಹಳಷ್ಟು ಹಣ ತೆತ್ತಬೇಕಾಗುವುದು. ಸುದೈವಕ್ಕೆ ನನಗೆ ಇವುಗಳಲ್ಲಿ ಸ್ವಲ್ಪ ಪರಿಶ್ರಮವಿತ್ತು. ಅಮೇರಿಕೆಗೆ ಹೋದ ನಂತರ ಫೋಟೋಗ್ರಾಫಿಯನ್ನೂ ಸುಧಾರಿಸಿಕೊಂಡೆ. ಇವೆಲ್ಲ ಆಕೃತಿ-ಚಿತ್ರಗಳನ್ನು ತಯಾರಿಸಲು ಒಮ್ಮೊಮ್ಮೆ ಬೆಳಿಗ್ಗೆ ನಾಲ್ಕು ಗಂಟೆಯ ತನಕ ಪ್ರಯೋಗಶಾಲೆಯಲ್ಲಿ ಕಳೆದ ದಿನಗಳಿವೆ. ಪ್ರಬಂಧದ ಕರಡು-ಪತ್ರಿಕೆಗಳನ್ನು ಪರೀಕ್ಷಾ-ಸಮಿತಿಯ ಆರು ಪ್ರಾಧ್ಯಾಪಕರಿಗೆ ತೋರಿಸಬೇಕು. ಅವರ ಸೂಚನೆಗಳಂತೆ ಅದನ್ನು ತಿದ್ದಬೇಕು. ಪಕ್ಕಾ ಕಾಪಿಗಳಲ್ಲಿ ಒಂದೆರಡು ತಪ್ಪುಗಳಿದ್ದರೂ ನಡೆಯಲಾರದು. ಹೀಗಾಗಿ ಕಣ್ಣಲ್ಲಿ ಕಣ್ಣಿಟ್ಟು ಪರಿಶೀಲಿಸಬೇಕಾಗುತ್ತದೆ. ಕೊನೆಗೆ ನುರಿತ ಟಾಯಿಪಿಸ್ಟ ಒಬ್ಬಳಿಂದಲೇ ಕೊನೆಯ ಪ್ರತಿಗಳನ್ನು 'ಟಾಯಿಪ್' ಮಾಡಿಸಬೇಕಾಯಿತು. ಅದಕ್ಕೆ ಸುಮಾರು ಎರಡು ಸಾವಿರ ರೂಪಾಯಿ ಖರ್ಚಾಯಿತು!

ವಿದ್ಯಾಭ್ಯಾಸ ಮುಕ್ತಾಯವಾಗುತ್ತ ಬಂದಂತೆ ದಿಗಿಲೂ ಹೆಚ್ಚಾಗತೊಡಗಿತು. ಕೊನೆಯ ಪರೀಕ್ಷೆಯನ್ನು ಎದುರಿಸಬೇಕಾಗಿತ್ತು. ಏಳು ಪ್ರಾಧ್ಯಾಪಕರ ಸಮಿತಿಯ ಎದುರು ನನ್ನ ಸಂಶೋಧನೆಯನ್ನು ಸಮರ್ಥಿಸುವ (defence of the thesis) ಪರೀಕ್ಷೆ ಅದಾಗಿತ್ತು. ಸಂಶೋಧನೆಯ ಪ್ರತಿಯನ್ನು ನೋಡಿ ತಲೆದೂಗಿದ ಪ್ರಾಧ್ಯಾಪಕರೇ ಇವರಾದರೂ ಪರೀಕ್ಷೆಯ ಹಾಃಲಿನಲ್ಲಿ ಮೌಖಿಕವಾಗಿ ಅವರನ್ನು ಎದುರಿಸುವ ಪ್ರಸಂಗ ಬಂದಾಗ

ಅವರ ಪ್ರತಿಕ್ರಿಯೆ ಹೇಗಿರುತ್ತದೋ ಯಾರು ಬಲ್ಲರು? ಸುತ್ತು ಕಡೆಯಿಂದ ಎಡೆಬಿಡದೇ ಪ್ರಶ್ನೆಗಳ ಸುರಿಮಳೆಯಾಗ ತೊಡಗಿತು. ಬಿಡದೇ ಅವುಗಳಿಗೆ ಉತ್ತರಿಸಬೇಕಾಯಿತು. ಎರಡೂವರೆ ತಾಸುಗಳ ಅಗ್ನಿಪರೀಕ್ಷೆಯ ನಂತರ ಬೆವರು ಒರಿಸಿಕೊಳ್ಳಲು ಸಮಯ ದೊರಕಿತು. ಅವರೆಲ್ಲ ಒಮ್ಮತದಿಂದ ನನ್ನನ್ನು ಅಭಿನಂದಿಸಿದಾಗ ಕೊನೆಗೊಮ್ಮೆ ಗೆದ್ದೆನೆಂದು ಪುಲಕಿತನಾದೆ. ಅಂದಿನಿಂದ ಡಾ. ಕಾಮತನಾದೆ!

ಡಾಕ್ಟರೇಟ್ ಪದವಿ ದೊರಕಿದ ಹರ್ಷೋದ್ವೇಗ ಕಡಿಮೆಯಾಗುವ ಮೊದಲೇ ಮುಂದೇನು? ಎಂಬ ಸಮಸ್ಯೆ ತಲೆದೋರಿತು. ಇತರ ನನ್ನ ಭಾರತೀಯ ಸಹಪಾಠಿಗಳ ಪಾಡನ್ನು ದಿನವಹಿ ನೋಡುತ್ತಿದ್ದ ನನಗೆ ಮೂರು ವರ್ಷಗಳ ಶ್ರಮ ಸಾರ್ಥಕವಾಯಿತೆಂದು ಗೊತ್ತಿದ್ದರೂ ಅನಿಶ್ಚಿತ ಭವಿಷ್ಯದ ಸಮಸ್ಯೆಯನ್ನು ಕಡೆಗಣಿಸುವಂತಿರಲಿಲ್ಲ. ನನ್ನ ಪಾಸ್‌ಪೋರ್ಟ್ ಇನ್ನೂ ಹದಿನೆಂಟು ತಿಂಗಳವರೆಗೆ ಬಾಧ್ಯವಿತ್ತು. ಈ ಅವಧಿಯಲ್ಲಿ ಅಮೇರಿಕೆಯಲ್ಲೇ ಇದ್ದು ಹಣ ಗಳಿಸಬಹುದೆಂಬ ವಿಚಾರ ಬಂತು. ಆದರೆ ನನಗಾಗಿ ಕಾಯುತ್ತಿದ್ದ ತಂದೆ-ತಾಯಿ, ತಮ್ಮ ಅಣ್ಣನ ಮದುವೆಯಲ್ಲಿ ಮೆರೆದಾಡಬೇಕೆಂಬ ಹುಮ್ಮಸದ ತಮ್ಮ ತಂಗಿಯರು, ಅಣ್ಣನ ಮದುವೆಯಾದ ಹೊರತು ತನಗೆ ಮದುವೆಯಿಲ್ಲವಲ್ಲ! ಎಂದು ಕಾತುರಗೊಂಡ ತಮ್ಮ ಇವರೆಲ್ಲರ ನೆನಪು ತೀವ್ರವಾಗ ತೊಡಗಿತು. ಅಮೇರಿಕೆಯಲ್ಲಿ ನೆಮ್ಮದಿಯ ಜೀವನ ಸುಲಭಸಾಧ್ಯವಿದ್ದರೂ ನನ್ನನ್ನು ಸಾಕಿ ಸಲುಹಿದ, ನನ್ನ ದೇಶ, ಉಪ್ಪುಂಡು ಬೆಳೆದ ನನ್ನ ತಾಯ್ನಾಡು ಎಡೆಬಿಡದೇ ನನ್ನನ್ನು ಕರೆಯತೊಡಗಿದವು. ಇಲ್ಲಿ ಪಡೆದ ಉಚ್ಚ ಶಿಕ್ಷಣದ ಯೋಗ್ಯ ಉಪಯೋಗವನ್ನು ನನ್ನ ದೇಶದಲ್ಲಿಯೇ ಮಾಡಬೇಕೆಂದು ಹಿಂದೆಯೇ ನಿರ್ಧರಿಸಿದ್ದೆ. ಈಗ ಇಲ್ಲಿದ್ದೇ ಭಾರತದಲ್ಲಿ ನೌಕರಿಯೊಂದನ್ನು ಗೊತ್ತುಮಾಡುವದೆಂದು ನಿರ್ಣಯಿಸಿಕೊಂಡೆ. ಆ ದಿಕ್ಕಿನಲ್ಲಿ ಪ್ರಯತ್ನಿಸತೊಡಗಿದೆ ಯೋಗಾಯೋಗವೆಂಬಂತೆ ಭಾರತದ U.P.S.C (Union Public Service Commission)ಯ ಅಧಿಕಾರಿಯೊಬ್ಬರು ಶೀಘ್ರದಲ್ಲಿಯೇ ಅಮೇರಿಕೆಗೆ ಬರಲಿದ್ದರು. ಉಚ್ಚ-ಪದವಿಗಳನ್ನು ಪಡೆದು ಭಾರತಕ್ಕೆ ಬರಲು ಒಪ್ಪದೇ ಅಮೇರಿಕೆಯಲ್ಲೇ ಇರಬಯಸುವ ಭಾರತೀಯರ ಮನ ಒಲಿಸಲು ವಿಶಿಷ್ಟ ಹೊಣೆಗಾರಿಕೆಯೊಂದಿಗೆ ಅವರನ್ನು ಕಳಿಸಲಾಗಿತ್ತಂತೆ. ಅಮೇರಿಕೆಯ ಪ್ರಮುಖ ಶಹರಗಳಲ್ಲಿ ಸಂಚರಿಸಿ ನೂರಾರು ಭಾರತೀಯ ವಿದ್ಯಾರ್ಥಿಗಳನ್ನು ಭೆಟ್ಟಿಯಾಗಿ ಕೇಂದ್ರ ಸರಕಾರದ ವತಿಯಿಂದ ಅವರಿಗೆಲ್ಲ ನೌಕರಿಯ ಆಶ್ವಾಸನೆ ಕೊಡುವ ಅಧಿಕಾರವನ್ನು ಇವರು ಪಡೆದಿದ್ದರು!

ಅಮೇರಿಕೆಯಲ್ಲಿ ಶಿಕ್ಷಣ ಮುಗಿಸಿದ ಅಥವಾ ಮುಗಿಸಲಿರುವ, ಭಾರತದಲ್ಲಿ ನೌಕರಿಯನ್ನು ಬಯಸುವ ಜನರನ್ನೆಲ್ಲ ನ್ಯೂಯಾರ್ಕನಗರದಲ್ಲಿ 'ಇಂಟರ್‌ವ್ಯೂ'ಗೆ ಕರೆಯಲಾಯಿತು.

ನನ್ನಂತೆ ನೌಕರಿಗಾಗಿ ಅರ್ಜಿ ಸಲ್ಲಿಸಿದ ಹಲವಾರು ಜನರಿದ್ದರು. ಒಬ್ಬನು ಬೋಸ್ಟನ್ನಿನಿಂದ ಬಂದರೆ ಇನ್ನೊಬ್ಬನು ಎಮಹರ್ಸ್ಟದಿಂದ ಬಂದಿದ್ದನು. ಸಾವಿರ ಮೈಲು ದೂರದಿಂದ ಬಂದ ಕೆಲವರಿದ್ದರು. ಕೊಲಂಬಿಯಾ ಕಾಲೇಜ ಕಟ್ಟಡದಲ್ಲಿ 'ಇಂಟರ್‌ವ್ಯೂ' ಇಟ್ಟಿದ್ದರು. ಎಲ್ಲರೂ ಭಾರತೀಯ ಪದ್ಧತಿಯ 'ಇಂಟರ್‌ವ್ಯೂ' ನಿರೀಕ್ಷಿಸಿದ್ದರಿಂದ ಸಾಕಷ್ಟು ಉಜಳಣಿ ಮಾಡಿಕೊಂಡೇ ಬಂದಿದ್ದರು. ಶಿಸ್ತಿನ ಬಟ್ಟೆ, ಬರೆ, ಹೆಚ್ಚಿನ ಠೀವಿಗಳಿಂದ ವೇಳೆಗೆ ಮೊದಲೇ ಬಂದಿದ್ದರು. ಅಮೇರಿಕನ್ ಮಹಿಳೆಯೊಬ್ಬಳು ಬಂದು ನಮ್ಮ

ಕಾಗದ-ಪತ್ರಗಳನ್ನು, ಪರಿಶೀಲಿಸಿದಳು. ಬಂದವರೆಲ್ಲ ಪರಿಚಯಮಾಡಿಕೊಂಡು ಮಾತುಕತೆಗೆ ಪ್ರಾರಂಭಿಸಿದೆವು. ನಿರ್ದಿಷ್ಟ ವೇಳೆಗಿಂತ ಒಂದು ತಾಸು ತಡವಾಗಿ ಬಂದು, ಭಾರತೀಯ ಅಧಿಕಾರಿಗಳು ತಮ್ಮ ಭಾರತೀಯತನವನ್ನು ಸ್ಪಷ್ಟಗೊಳಿಸಿದರು. ಕೋರ್ಟಿನ ನೌಕರನು ಅಪರಾಧಿಯ ಹೆಸರು ಹಿಡಿದು ಕೂಗುವಂತೆ ಮೊದಲನೇ ಉಮೇದುವಾರನನ್ನು ಉಚ್ಚ-ಧ್ವನಿಯಿಂದ ಕರೆಯಲಾಯಿತು. ಆತ ಹೋದ ಐದು ನಿಮಿಷಗಳಲ್ಲೇ ಪೆಚ್ಚುಮುಖ ಹಾಕಿಕೊಂಡು ಬಂದ. ಏನಾಯಿತೆಂದು ಕೇಳುವ ಮೊದಲೇ ನನ್ನ ಹೆಸರನ್ನು ಕೂಗಿದ್ದರಿಂದ ಒಳಗೆ ಹೋಗುವಂತಾಯಿತು. ಕೋಣೆಯೊಳಗೆ ಹೋದೊಡನೆ ಅಲ್ಲಿ ಕುಳಿತವರ ಪರಿಚಯಮಾಡಿಕೊಡುವ ಗೊಡವೆಗೆ ಯಾರೂ ಹೋಗಲಿಲ್ಲ. (ಅಮೇರಿಕೆಯ ವಾಸ್ತವ್ಯದಲ್ಲಿ ಈ ರೂಢಿ ವಾಡಿಕೆಯಾಗಿಬಿಟ್ಟಿತ್ತು) ಶಾಲಾ ವಿದ್ಯಾರ್ಥಿಯಂತೆ ಎಲ್ಲರನ್ನು ಎದುರಿಸಿದ ಖುರ್ಚಿಯೊಂದಿತ್ತು. ಅದರಲ್ಲಿ ಕೂಡುವಂತೆ ಅಪ್ಪಣೆಯಾಯಿತು. ಇದುವರೆಗೆ ಜೀವನದಲ್ಲಿ ಪಾಪ-ಪುಣ್ಯದ ಕೆಲಸಗಳನ್ನೆಲ್ಲ ಮುಗಿಸಿ ಪರಮಾತ್ಮನ ಕರೆಗಾಗಿ ಕಾಯುವ ವಯಸ್ಸಿನ ಮುದಿಯನೊಬ್ಬ ಕುಳಿತಿದ್ದ. ಭಾರತದಿಂದ ಇದೀಗ ಇಳಿದಿದೆ ಸವಾರಿ ಎಂಬುದು ಕುಳಿತ ಠೀವಿಯಿಂದ ವಿರಾಜಮಾನನಾಗಿದ್ದ. ಬಹಳ ಕಾಲದಿಂದ ಅಮೇರಿಕೆಯಲ್ಲಿದ್ದಾನೆಂಬುದಕ್ಕೆ ಆತ ಧರಿಸಿದ ಬಟ್ಟೆಗಳೇ ಸಾಕ್ಷಿಯಾಗಿದ್ದವು. ಮೂರನೆಯ ಖುರ್ಚಿಯಲ್ಲಿ ಅಮೇರಿಕನ್ ಪ್ರಾಧ್ಯಾಪಕನೊಬ್ಬನನ್ನು ಒತ್ತಾಯದಿಂದ ಕೂಡ್ರಿಸಿದಂತಿತ್ತು. ಮುದಿಯ ಮಾತಿಗೆ ಪ್ರಾರಂಭಿಸಿದ.

"ನೀನು ಎಂದು ಭಾರತಕ್ಕೆ ಮರಳಬೇಕೆಂದಿದ್ದೀ?"

"ಆದಷ್ಟು ತೀವ್ರವಾಗಿ" ಎಂದು ಉತ್ತರಿಸಿದಾಗ,

"ನೀನು ಯಾವ ಪರೀಕ್ಷೆ ಪಾಸುಮಾಡಿರುವಿ?" ಎಂಬ ಪ್ರಶ್ನೆ ಬಂದಿತು. ನಂತರ,

"ನೀನು ಎಷ್ಟು ಗುಣಗಳನ್ನು ಪಡೆದಿರುವಿ?" ಎಂಬ ಪ್ರಶ್ನೆ ಬಂದಿತು. ಇವುಗಳ ವಿವರಗಳನ್ನೆಲ್ಲ ಹತ್ತೆಂಟು ಫಾರ್ಮುಗಳಲ್ಲಿ ಈಗಾಗಲೇ ತುಂಬಿ ಕಳಿಸಿದ್ದರೂ ಮತ್ತೊಮ್ಮೆ ಬೊಗಳಿದೆ. ನಂತರ,

"ನಿನಗೆ ಭಾರತದಲ್ಲಿ ನೌಕರಿ ದೊರಕಿದೆಯೇ?" ಎಂದು ಕೇಳಿದ. 'ಅದಕ್ಕಾಗಿಯೇ ನಾನು ಮೂರು ನೂರು ಮೈಲಿ ದೂರದಿಂದ ಈ 'ಇಂಟರ್‌ವ್ಯೂ'ಗೆ ಬಂದಿದ್ದೇನೆ"ಂದು ಬೊಗಳಿದೆ. ನಂತರ,

"ನಮ್ಮ ಹತ್ತಿರ ಈಗ ಖಾಲಿ ಜಾಗಗಳಿಲ್ಲ (no vacancy). ಮುಂದೆ ಸ್ಥಳಗಳು ಖಾಲಿಯಾದರೆ ಯಾರಾರು ಸಿಗಬಹುದೆಂದು ಟಿಪ್ಪಣಿ ಮಾಡಿಕೊಳ್ಳಲು ಈ 'ಇಂಟರ್‌ವ್ಯೂ' ಇಡಲಾಗಿದೆ. ಭಾರತಕ್ಕೆ ಮರಳಿದ ಮೇಲೆ ಕೂಡಲೇ ನೌಕರಿ ಸಿಗದಿದ್ದರೆ ವಿಜ್ಞಾನಿ-ಪಂಗಡ (Scientist' pool)ದಲ್ಲಿ ಸೇರಿಕೊ. ಅಲ್ಲಿ ಸೇರಲು ತೊಂದರೆಯಾದಲ್ಲಿ ನಮ್ಮ ರಾಯಭಾರಿ-ಕಚೇರಿಯಿಂದ ಒಂದು ಸೂಚನಾ-ಪತ್ರ ಒಯ್ದಲ್ಲಿ ಎಲ್ಲ ಸುಸೂತ್ರವಾಗಿ ನಡೆಯುವುದು. ನೌಕರಿಯ ಸ್ಥಳಗಳು ಖಾಲಿಯಾದಲ್ಲಿ 'ಇಂಟರ್‌ವ್ಯೂ' ಕೂಡ ಇಲ್ಲದೇ ನಿಮ್ಮೆಲ್ಲರನ್ನು ಸೇರಿಸಿಕೊಳ್ಳಲಾಗುವುದು." ಎಂಬ ಅಭಯದೊಂದಿಗೆ ಮುದಿಯ ಮಾತು ಮುಗಿಸಿದ. ಪಾಪ, ಅಮೇರಿಕನ್ ಮಹನೀಯ ವಾಡಿಕೆಯ ಒಂದೆರಡು ಪ್ರಶ್ನೆಗಳನ್ನು ಕೇಳಿದ. ಸರದಾರಜೀ ಮುಚ್ಚಿದ ಬಾಯನ್ನು ತೆರೆಯಲೇ ಇಲ್ಲ. ಐದು ನಿಮಿಷಗಳಲ್ಲಿ

'ಇಂಟರ್‌ವ್ಯೂ' ಮುಗಿದು ಹೋಗಿತ್ತು. ಇಂಥದಕ್ಕಾಗಿ ಎಷ್ಟೋ ಕೆಲಸ ಬಿಟ್ಟು ಹುಚ್ಚಾಪಟ್ಟೆ ಖರ್ಚುಮಾಡಿ ಇಲ್ಲಿಗೆ ಓಡಿ ಬಂದೆನಲ್ಲ ಎಂದು ಬಹಳ ಅನುತಾಪವೆನಿಸಿತು. ಉಳಿದವರ ಅನುಭವಗಳಾದರೂ ನನ್ನದಕ್ಕಿಂತ ಭಿನ್ನವಾಗಿರಲಿಲ್ಲ. ಒಬ್ಬ ಮಹಿಳಾ ಡಾಕ್ಟರ್ ಅಂತೂ ಅಮೇರಿಕನ್ನನ ಎದುರಿಗೇ ನಮ್ಮ. ಅಧಿಕಾರಿಗೆ ಛೀ-ಥೂ ಹಾಕಿದಳು!

ಇಂಥ ಭಾರತೀಯ 'ಇಂಟರ್‌ವ್ಯೂ'ಗಳಿಗೆ ಅಮೇರಿಕನ್ 'ಇಂಟರ್‌ವ್ಯೂ'ಗಳಿಗೂ ಶಿಕ್ಷಣದಲ್ಲಿದ್ದಷ್ಟೆ ಅಂತರವಿದೆ. ವಿಶ್ವವಿದ್ಯಾಲಯದಲ್ಲಾಗಲಿ ಇತರ ಶಿಕ್ಷಣಸಂಸ್ಥೆಗಳಲ್ಲಾಗಲಿ ನೌಕರಿ ಇದ್ದರೆ ಅವರು ವಿವಿಧ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಗೆ ಬರೆಯುತ್ತಾರೆ. ಪ್ರಾಧ್ಯಾಪಕರು ಸೂಚಿಸಿದವರನ್ನು ವಿಶ್ವವಿದ್ಯಾಲಯದ ಆವಾರದಲ್ಲಿಯೇ ಅಧಿಕಾರಿಯೊಬ್ಬ ಬಂದು ಭೆಟ್ಟಿಯಾಗುತ್ತಾನೆ. ಆತನೊಡನೆ ಮಾತುಕತೆಮಾಡಿ ನೌಕರಿ ಸೇರಲು ಸಾಧ್ಯಾಸಾಧ್ಯತೆಗಳ ಬಗ್ಗೆ ವಿಚಾರಿಸಿ ಅವನ ಅನುಕೂಲವನ್ನು ಗೊತ್ತುಪಡಿಸುತ್ತಾನೆ. ಪ್ರಾಧ್ಯಾಪಕ ಸ್ಥಳಕ್ಕೆ ಭರ್ತಿ ಮಾಡುವದಿದ್ದರೆ 'ಸೆಮಿನಾರ್' ಒಂದನ್ನು ಏರ್ಪಡಿಸುತ್ತಾರೆ. ಈ ಸೆಮಿನಾರ್‌ನಲ್ಲಿ ಉಮೇದುವಾರನ ಯೋಗ್ಯತೆ ನಿರ್ಣಯಿಸಲ್ಪಡುತ್ತದೆ. ಯಾವುದಾದರೂ ಕಂಪನಿಯ ಕೆಲಸಕ್ಕೆ 'ಇಂಟರ್‌ವ್ಯೂ' ಬಂದರಂತೂ ರಾಜಭೋಗ ಒದಗಿದಂತೆ. ಅಂತೆಯೇ ಕಂಪನಿಯ ಕೆಲಸಕ್ಕೆ ಅಮೇರಿಕನ್ನರೂ, ಭಾರತೀಯರೂ ಹಾತೊರೆಯುತ್ತಾರೆ. ಅವನ ವಾಸಸ್ಥಾನದಿಂದ 'ಇಂಟರ್‌ವ್ಯೂ' ನಡೆಯಲಿರುವ ಕಂಪನಿಯ ಆಫೀಸಿನ ತನಕ ಕಾರು, ವಿಮಾನ, ಅಲ್ಲಿಂದ ಕಾರುಗಳ ವ್ಯವಸ್ಥೆಯಾಗುತ್ತದೆ. ಕಾರಿನಲ್ಲಿ ಕಂಪನಿಯ ಆವಾರವನ್ನು ಪ್ರವೇಶಿಸುತ್ತಿದ್ದಂತೆ ಕಂಪನಿಯ ಅಧಿಕಾರಿಯೊಬ್ಬ ಬಂದು ಸ್ವಾಗತಿಸುತ್ತಾನೆ. ವಿಶ್ರಾಂತಿ, ತಿಂಡಿ-ತೀರ್ಥಗಳ ವ್ಯವಸ್ಥೆಯಾಗುತ್ತದೆ. ನಂತರ ಕಂಪನಿಯ ಇತರ ಅಧಿಕಾರಿಗಳ ಪರಿಚಯ ಮತ್ತು ಅವರ ಕೆಲಸದ ಪರಿಚಯಮಾಡಿಕೊಡಲಾಗುತ್ತದೆ. ಮಧ್ಯಾನ್ಹ ಊಟದ ಹೊತ್ತಿಗೆ ಭರ್ಜರಿ ಊಟವಾಗುತ್ತದೆ. ಅಧಿಕಾರಿಯೂ ದಿನವಿಡೀ ಉಮೇದುವಾರನೊಂದಿಗಿದ್ದು ಆತನೊಂದಿಗೆ ಅನೇಕ ವಿಷಯ ಚರ್ಚಿಸಿರುತ್ತಾನೆ. ಆದರೆ ಶಾಲಾಮಕ್ಕಳ ತೆರದಲ್ಲಿ (ಭಾರತೀಯ 'ಇಂಟರ್‌ವ್ಯೂ'!) ಪ್ರಶ್ನೋತ್ತರಗಳಿಗೆ ಅವಕಾಶವಿರುವುದಿಲ್ಲ. ಜಾಣ್ಮೆಯಿಂದ ತಮಗೆ ಬೇಕಾದ ರೀತಿಯಲ್ಲಿ ಉಮೇದುವಾರನ ಪರೀಕ್ಷೆಯಾಗಿರುತ್ತದೆ. ವಸತಿಗೆ ಉತ್ತಮ ಹೋಟೆಲಿನಲ್ಲಿ ವ್ಯವಸ್ಥೆಯಾಗಿರುತ್ತದೆ. ಇಷ್ಟೆಲ್ಲ ಸತ್ಕಾರದ ನಂತರ ಬರುವ ವೆಚ್ಚ, ಹೋಟೆಲ್ ವೆಚ್ಚ, ತಿರುಗಿ ಹೋಗುವುದಕ್ಕೆ ಚೆಕ್ ತಯಾರಾಗಿ ಉಮೇದುವಾರನ ಕೈಯಲ್ಲಿ ಇಡಲಾಗುತ್ತದೆ. ಇಂತಹ 'ಇಂಟರ್‌ವ್ಯೂ'ಗಳಿಗೂ ತನ್ನೊಬ್ಬನನ್ನು ಬಿಟ್ಟರೆ ಉಳಿದವರೆಲ್ಲರೂ ಶತಮೂರ್ಖರೆಂದು ನಂಬಿದ ಭಾರತೀಯ ಅಧಿಕಾರಿಗಳು ನಡೆಸುವ 'ಇಂಟರ್‌ವ್ಯೂ'ಗಳಿಗೂ ಎಲ್ಲಿಯ ಸಂಬಂಧ? ನಮ್ಮ ನ್ಯೂಯಾರ್ಕ 'ಇಂಟರ್‌ವ್ಯೂ' ತೆಗೆದುಕೊಂಡ ಭಾರತೀಯ ಮಹನೀಯನ ಮಗಳೊಬ್ಬಳು ಅಮೇರಿಕನನ್ನು ಮದಿವೆಯಾಗಿ ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಳಂತೆ. ಪ್ರತಿವರ್ಷ ಭಾರತೀಯ ವಿಜ್ಞಾನಿಗಳ 'ಮನ ಒಲಿಸಿ' ಭಾರತಕ್ಕೆ ಹಿಂದಿರುಗುವಂತೆ ಮಾಡುವ ಮಹಾಕಾರ್ಯದ ನೆವದಿಂದ ಮಗಳ ಹತ್ತಿರ ಬರುತ್ತಾನೆ ಈ ಮುದಿಯ! ಭಾರತದಂತಹ ಬಡದೇಶ ಇಂತಹ ಅಧಿಕಾರಿಗಳಿಗೆ ಪರದೇಶ-ಪ್ರವಾಸದ ಅವಕಾಶ ಈ ರೀತಿ ಒದಗಿಸುತ್ತದೆಂದು ನೆನಸಿಕೊಂಡರೆ ನಾಚಿಕೆಯಾಗುತ್ತದೆ.

ಹತ್ತಾರು ಪತ್ರಗಳನ್ನು 'ವಿಜ್ಞಾನಿ-ಪಂಗಡ'ಕ್ಕೆ ಬರೆದರೂ ಅವರಿಂದ ಉತ್ತರವೇನೂ ದೊರೆಯಲಿಲ್ಲ. ಕೊನೆಗೂ ಯಾವ ಆಶ್ವಾಸನೆಯೂ ಇಲ್ಲದೇ ಅಮೇರಿಕವನ್ನು ಶೂನ್ಯಮನಸ್ಕನಾಗಿ ಬಿಡಬೇಕಾಯಿತು. ಇಂಗ್ಲಂಡ್, ಫ್ರಾನ್ಸ್, ಹಾಲಂಡ್, ಜರ್ಮನಿ, ಸ್ವಿಟ್‌ಝರ್‌ಲಂಡ್, ಇಟಲಿ, ಗ್ರಿಸ್, ಇಜಿಪ್ತ್, ಪಾಕಿಸ್ತಾನ್ ಮೊದಲಾದ ದೇಶಗಳಲ್ಲಿ ಸಂಚರಿಸುತ್ತ ನಾಲ್ಕು ವರ್ಷಗಳ ವಿದೇಶ-ವಾಸ್ತವ್ಯದ ನಂತರ ತಿರುಗಿ ಭಾರತಕ್ಕೆ ಬಂದೆ. ಊರಿನಲ್ಲಿ ನಾಲ್ಕೆಂಟು ದಿನ ಅಮೇರಿಕೆಯ ಅನುಭವಗಳ ಕುರಿತು ಮಾತನಾಡಲು ಮೋಜೆನಿಸಿದರೂ ಪದೇ ಪದೇ ಅದನ್ನೇ ಹೇಳುವ ಸಂದರ್ಭ ಬಂದಾಗ ಬೇಸರಕಿಟ್ಟುಕೊಂಡಿತು. ಸಾಲದ್ದಕ್ಕೆ ನನ್ನ ವಯಸ್ಸಿನ ಗೆಳೆಯರೆಲ್ಲ ನೌಕರಿ ನಿಮಿತ್ತ ಎಲ್ಲೆಲ್ಲೊ ಚದುರಿಹೋಗಿದ್ದರು. ಹೀಗಾಗಿ ಮನೆಯಲ್ಲಿಯೇ ಹೆಚ್ಚಿನ ವೇಳೆ ಕಳೆಯಬೇಕಾಯಿತು. ದಿನಕ್ಕೆ ಹದಿನಾರು-ಹದಿನೆಂಟು ತಾಸು ದುಡಿಯುತ್ತಿದ್ದವನಿಗೆ, ಅವೇ ತಾಸುಗಳನ್ನು ಏನೇನೂ ಕೆಲಸವಿಲ್ಲದೇ ಕಳೆಯುವ ಸಂದರ್ಭ ಬಂದಿತು. ಮುಂದೇನು? ಎಂಬ ಪ್ರಶ್ನೆ ಇನ್ನೂ ಹೆಚ್ಚಾಗಿ ಪೀಡಿಸತೊಡಗಿತು. ಕೊನೆಗೊಮ್ಮೆ ಬಹಳ ಬೇಸತ್ತು ವಿಜ್ಞಾನಿಗಳ ಕೂಟಕ್ಕೆ (scientist' poll) ಕಟುವಾದ ಕಾಗದವೊಂದನ್ನು ಬರೆದೆ.

ಆಶ್ಚರ್ಯದ ಮಾತೆಂದರೆ ಅನಿರೀಕ್ಷಿತವಾಗಿ ಅವರಿಂದ ತೀವ್ರದಲ್ಲಿಯೇ ಉತ್ತರ ಬಂದಿತು. ನನ್ನ ರಾಜೀನಾಮೆಯ ಪತ್ರದ ಪ್ರತಿ. ನಾನು ನಿರುದ್ಯೋಗಿಯೆಂಬ ಪುರಾವೆಯ ಪತ್ರ ಮತ್ತು ನನಗೆ ಬೇರೆಲ್ಲೂ ನೌಕರಿ ಸಿಕ್ಕಿಲ್ಲವೆಂದು ದೃಢೀಕರಿಸುವ ಪತ್ರಗಳನ್ನು ಕೇಳಿದ್ದರು. ಇವನ್ನೆಲ್ಲ ಕಳಿಸಿದ ಒಂದು ತಿಂಗಳ ಮೇಲೆ ರಾಜಸ್ತಾನದ ಕೃಷಿ ಕಾಲೇಜಿನಲ್ಲಿ ಹಾಜರ ಆಗಬೇಕೆಂದು ಆರ್ಡರ್ ಬಂದಿತು. ಆ ಕಾಲೇಜಿನ ವಿಶ್ವವಿದ್ಯಾಲಯದ ಆಫೀಸಿಗೆ ಹೋಗಿ ವಿಚಾರಿಸಿದಾಗ, ತಮಗೆ ಯಾವ ಸಂದೇಶವೂ ಬಂದಿಲ್ಲವೆಂದು ಹೇಳಿದರು. ಆದರೆ ಆ ಕಾಲೇಜು ಇರುವ ಸ್ಥಳವನ್ನು ತಿಳಿಸಿ ಅಲ್ಲಿ ಹೋಗಿ ವಿಚಾರಿಸಬಹುದೆಂದರು. ಕೊನೆಗೊಮ್ಮೆ ಅವರು ಹೇಳಿದ ಸ್ಥಳಕ್ಕೆ ಮುಟ್ಟಿದೆ! ಅಲ್ಲಿ ದೊರೆತ ಆದರದ ಸನ್ಮಾನ ಈ ಹಿಂದಿನ ಕಹಿ ಅನುಭವಗಳನ್ನು ಕೆಲಕಾಲ ಮರೆಯುವಂತೆ ಮಾಡಿತು.

* * *

ದೇವರ ಮಕ್ಕಳು

ಎರಡನೇ ಮಹಾಯುದ್ಧದಲ್ಲಿ ಜರ್ಮನಿ ಪಾಶ್ಚಾತ್ಯ-ದೇಶಗಳೊಡನೆ ಯುದ್ಧಮಾಡಿದರೂ ಜರ್ಮನಿಯ ಮೇಲೆ 'ಆ್ಯಟಂ-ಬಾಂಬ್' ಒಗೆಯಲಿಲ್ಲ. ಅದೇ ಜಪಾನದ ಮೇಲೆ ಅಮೇರಿಕೆ ಯುದ್ಧ ಸಾರಿದ ಕೆಲವೇ ದಿನಗಳಲ್ಲಿ ತಾಳ್ಮೆಯಿಲ್ಲದೆ ಎರಡು 'ಆ್ಯಟಂ-ಬಾಂಬ್' ಹಾಕಿತು. ಇದಕ್ಕೆ ಕಾರಣವೊಂದೇ; ಜಪಾನ್ ಶ್ವೇತಜನಾಂಗಕ್ಕೆ ಸೇರಿದ ದೇಶವಲ್ಲ ಎಂದು ಬಹುಸಂಖ್ಯಾತರು ಇಂದಿಗೂ ನಂಬುತ್ತಾರೆ. ತಮ್ಮ ದೇಶದಲ್ಲಿಯೇ ಸಮಾನತೆ ಪಾಲಿಸದ ಅಮೇರಿಕನ್ನರಿಗೆ ವಿಶ್ವಬಂಧುತ್ವದ ಬಗ್ಗೆ ಪಾಠ ಕಲಿಸಲು ಏನು ಅಧಿಕಾರವಿದೆ? ಎಂದು ಯಾರೇ ಆಗಲಿ ಕೇಳುವ ಪ್ರಶ್ನೆ. ಜಗತ್ತಿನಲ್ಲಿ ದೇಶದೇಶಗಳ ಅಸಮಾನತೆ ಮೈಬಣ್ಣದ ಮೇಲೆ ಅವಲಂಬಿಸಿದೆ ಎಂದು ಅಮೇರಿಕೆಯೂ ಇನ್ನೂ ಇತರ ಎಷ್ಟೋ ದೇಶಗಳೂ ನಂಬಿದಂತಿದೆ. ನಾವು ಬಿಳಿಯರಲ್ಲದ್ದರಿಂದ ಎಷ್ಟು ಕೀಳಾಗಿ ನಮ್ಮನ್ನು ಕಾಣಲಾಗುತ್ತದೆಯೆಂದು ಎಷ್ಟೋ ಭಾರತೀಯರು ಪುಸ್ತಕರೂಪವಾಗಿ ತೋಡಿಕೊಂಡಿದ್ದಾರೆ. ಅಮೇರಿಕೆಯ ನಿಗ್ರೋ-ಸಮಸ್ಯೆ ಜಗತ್ತಿನ ಎಷ್ಟೋ ದೇಶಗಳಿಗೆ ಕಟುವಿಮರ್ಶೆ ವಿಷಯವಾಗಿದೆ. ನಗೆಚಾಟಿಕೆ ವಿಷಯವೂ ಆಗಿದೆ. ಅವರ ಈ ವರ್ಣದ್ವೇಷಕ್ಕೆ ಅಸೂಯೆ ಕಾರಣವೇ ಅಥವಾ ಅಸಮಾನತೆ ಕಾರಣವೇ ಎಂದು ಕಂಡುಹಿಡಿಯುವ ಕುತೂಹಲವೂ ನನಗಿತ್ತು.

ಅಮೇರಿಕೆಯ ಮೂಲನಿವಾಸಿಗಳಾದ 'ರೆಡ್-ಇಂಡಿಯನ್' ಜನಾಂಗಗಳನ್ನು ಸೋಲಿಸಿ, ಕೆಲವಡೆ ಪೂರ್ಣ ನಾಶಗೊಳಿಸಿ ಬಿಳಿಯರು ಈ ನಾಡನ್ನು ತಮ್ಮದನ್ನಾಗಿ ಮಾಡಿಕೊಂಡರಷ್ಟೆ. ಈ ದೇಶದಲ್ಲಿ ವಿದೇಶೀಯರಾಗಿ ನಿಗ್ರೋ ಜನರು ಹೇಗೆ ಬಂದರೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ತಮ್ಮ ದೈನಂದಿನ ಕೂಲಿಯ ಕೆಲಸಕ್ಕೆ ಈ ಬಿಳಿಯರಿಗೆ ಆಳುಗಳು ಬೇಕಾದರು. ಹೊಲಗಳಲ್ಲಿ, ತೋಟಗಳಲ್ಲಿ ದುಡಿಯಲಿಕ್ಕೆ, ಅರಣ್ಯವನ್ನು ಕಡಿಮೆ ಮಾಡಲಿಕ್ಕೆ ಜನಬಲ ಬೇಕಾಯಿತು. ಅದಕ್ಕಾಗಿ ಕೈಕೊಂಡ ಅವರ ಉಪಾಯ ಆಫ್ರಿಕದಿಂದ ಗುಲಾಮರನ್ನು ತರುವುದು. ಹದಿನೆಂಟನೇ ಶತಮಾನದ ಕೊನೆ ಮತ್ತು ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಆ ನಿಗ್ರೋ ಗುಲಾಮರ ಆಮದವಾಗಹತ್ತಿತು. ಉತ್ತರ ಅಮೇರಿಕೆಯ ಶಿತ ಹವೆ ಅವರಿಗೆ ತಡೆಯದ್ದರಿಂದ ದಕ್ಷಿಣಪ್ರಾಂತ (ರಾಜ್ಯ)ಗಳಲ್ಲಿ ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ರಫ್ತಮಾಡಲಾಗುತ್ತಿತ್ತು. ಹೀಗಾಗಿ ಇಂದು ಅಮೇರಿಕೆಯ ದಕ್ಷಿಣ-ಪ್ರಾಂತ್ಯ (ರಾಜ್ಯ)ಗಳಾದ ಕೆರೋಲಿನ್, ಉತ್ತರ, ದಕ್ಷಿಣ ಫ್ಲೋರಿಡಾ, ಅಲಬಾಮಾ, ಮಿಸಿಸಿಪಿ, ಮತ್ತು ಲುಯಿಸಿಯಾನಗಳಲ್ಲಿ ಅಲ್ಲಿಯ ಜನಸಂಖ್ಯೆಯ ಶೇಕಡಾ ಐವತ್ತರಿಂದ ಎಂಬತ್ತರಷ್ಟು ಜನ ನಿಗ್ರೋ ವಂಶಜರಿದ್ದಾರೆ. ಅದೇ ಉತ್ತರದ ಪ್ರಾಂತಗಳಲ್ಲಿ ಶೇಕಡಾ ಐದರಿಂದ ಇಪ್ಪತ್ತೈದರಷ್ಟು ಮಾತ್ರ ನಿಗ್ರೋಗಳಿದ್ದಾರೆ.

ಕೆಲವರ ಮೈಬಣ್ಣವಂತೂ ಕಗ್ಗತ್ತಲೆಯನ್ನೂ ಹಿಂದೆ ಹಾಕುವಷ್ಟು ಕಪ್ಪು. ಅಂತೆಯೇ ಅವರ ಈ ಕಪ್ಪು ಬಣ್ಣ ದೇವರಿಗೆ ಹತ್ತಿರವಾದದ್ದಂತೆ. ತಾವು 'ದೇವರ ಮಕ್ಕಳು' ಎಂದು ಅವರು ಸಾರಿಕೊಳ್ಳುತ್ತಾರೆ. ಬಣ್ಣದಂತೆ ಅವರ ಸ್ವರೂಪವಾದರೂ ವಿಚಿತ್ರವಾಗಿರುತ್ತದೆ. ಒಂದು ಇರುವೆಗೆ ಕೂಡ ಹಾಯಲು ಆಸ್ಪದವಿಲ್ಲದ ಅತಿ ದಪ್ಪ

ಗಂಗುರು-ಕೂದಲು, ಅಗಲವಾದ ಮೂಗು, ದಪ್ಪವಾದ ತುಟಿಗಳು ನೋಡಿ ಪರಿಚಯವಿಲ್ಲದವರು ಯಾರೂ ಬೆಚ್ಚಿಬೀಳುವಂತೆ ಅವರ ರೂಪ ವಿಕಾರವಾಗಿರುತ್ತದೆ.

ಇನ್ನು ಅವರ ಇರುವಿಕೆಯಾದರೂ ಇದಕ್ಕೆ ಅಪವಾದವಲ್ಲ. ತೀರ ಕೀಳುಮಟ್ಟದ ಜೀವನವನ್ನು ಇವರು ನಡೆಸುತ್ತಾರೆ. ಇವರು ವಾಸಿಸುವ ಓಣಿಗಳು ಪ್ರತ್ಯೇಕವಾಗಿದ್ದು ತುಂಬ ಕೊಳಕಾಗಿರುತ್ತವೆ. ಎಂದೂ ಬಣ್ಣ, ಬ್ರಶ್‌ಗಳನ್ನು ಕಾಣದ ಮನೆಯ ಗೋಡೆಗಳು, ಕುಡಿದೋ, ಸಿಟ್ಟಿನ ಭರದಲ್ಲೊ ಒಡೆದ ಕಾಜುಗಳ ಕಿಟಕಿ ಮತ್ತು ಮನೆಯ ಬಾಗಿಲುಗಳು, ಈ ಬಿರುಕುಗಳಿಂದ ತಂಗಾಳಿ ಬರಬಾರದೆಂದು ಹಚ್ಚಿದ ವರ್ತಮಾನ-ಪತ್ರಗಳು; ಅಲ್ಲೊಂದಿಷ್ಟು ಇಲ್ಲೊಂದಿಷ್ಟು ರಾಶಿಯಾಗಿ ಬಿದ್ದ ಹರಕು ಬಟ್ಟೆಗಳು, ಅಂಗಳದ ತುಂಬ ಖಾಲಿಯಾದ ಸೆರೆಯ ಬಾಟ್ಲಿಗಳು, ಬರಿದಾದ 'ಬಿಯರ್'ದ ಡಬ್ಬಿಗಳು, ತಿಪ್ಪೆಯ ರಾಶಿಯೆನಿಸುವ ಇಂಥ ಹಲವಾರು ಮನೆಗಳ ಮುಂದೆ ನಿಂತಿರುತ್ತದೆ. ಹೊಸ ವರ್ಷದ ಹೊಸ ಮಾದರಿಯ ಕೆಡಿಲಕ್ ಕಾರು!

ಈ ದೇವರ ಮಕ್ಕಳ ಆಕಾರ, ಮೈಬಣ್ಣ, ಮನೆಗಳಷ್ಟೆ ಅಸ್ತವ್ಯಸ್ತವಾಗಿದೆ ಅವರ ನಡತೆ, ಮೊದಲಿನಿಂದಲೂ ಶಿಕ್ಷಣದ ಕಡೆಗೆ ಲಕ್ಷ್ಯ ಕೊಟ್ಟಿರುವುದಿಲ್ಲ. (ಇವರ ಪೂರ್ವಜರು ಕೇವಲ ದೇಹಶ್ರಮಕ್ಕಾಗಿ ತರಲ್ಪಟ್ಟವರಷ್ಟೆ!) ಹೆಚ್ಚಿನ ಜನ ಪ್ರಾಥಮಿಕ, ಮಾಧ್ಯಮಿಕ ಮಟ್ಟಕ್ಕಿಂತ ಮುಂದೆ ಹೋಗುವದೇ ಇಲ್ಲ, ಹೀಗಾಗಿ ಕಟ್ಟಡದ ಕೆಲಸ, ಕಾರಖಾನೆಯ ಕೆಲಸ, ಪೆಟ್ರೋಲು ಮಾರುವುದು, ಊರಿನ ಸಫಾಯಿ ಮಾಡುವುದು ಇವೇ ಸಣ್ಣ-ಪುಟ್ಟ ವೃತ್ತಿಗಳನ್ನು ಕೈಕೊಂಡಿದ್ದಾರೆ. ಮನೆಯ ಇರುವಿಕೆ ಹೇಗಿದ್ದರೂ ಉತ್ತಮ ಪೋಷಾಕುಬೇಕು. ಎರಡೂ ಹೊತ್ತು ಹೊಟ್ಟೆ ತುಂಬ ಊಟ ಸಿಗದಿದ್ದರೂ ಕುಡಿಯಲು ಸೆರೆ ಬೇಕು. ರಜೆಯ ದಿನಗಳು ಬಂದರಂತೂ ನಾಲ್ಕಾರು ದೇವರ ಮಕ್ಕಳು ಒಂದು ಮನೆಯ ಅಂಗಳದಲ್ಲಿ ಸೇರಿ ಒಂದೇ ಸವನೆ ಸುರಾಪಾನ ನಡೆಸಿರುತ್ತಾರೆ. ಕುಡಿತಕ್ಕೆ ಸಂಬಂಧ ಪಟ್ಟ ಅಪರಾಧಗಳಾದರೂ ಕಡಿಮೆಯಿಲ್ಲ. ಜನಸಂಖ್ಯೆ ವಿಪರೀತ ಭರದಿಂದ ಬೆಳೆಯುತ್ತಿರುವ ಈ ಜನಾಂಗದಲ್ಲಿ ವಿವಾಹಬಾಹ್ಯ ಮಕ್ಕಳೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ಜನನ-ಪ್ರಮಾಣ (birth-rate) ಬಿಳಿಯರ ಜನನ-ಪ್ರಮಾಣದ ಆರು ಪಟ್ಟು ಇದೆ! ವಿವಾಹ ವಿಚ್ಛೇದನ-ಪ್ರಮಾಣದಲ್ಲಿಯೂ ಬಿಳಿಯರನ್ನು ಹಿಂದೆ ಹಾಕುತ್ತಾರೆ. ತಂದೆ-ತಾಯಿಯರಿಂದ ಪ್ರತ್ಯೇಕಿಸಲ್ಪಟ್ಟ ಮಕ್ಕಳು ಬೀದಿಪಾಲಾಗುತ್ತಾರೆ. ಬಾಲಾಪರಾಧಿಗಳೂ ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಾಲ್ಕಾರು ಮಕ್ಕಳು ಕೂಡಿ ಹೊಂಚುಹಾಕಿ ಅಂಗಡಿಯೊಂದನ್ನು ಮುತ್ತಿ ಹಣ ದೋಚಿಕೊಂಡು ಹೋಗುವುದು ಸಾಮಾನ್ಯ ಮಾತು. ಮುದುಕಿಯರಿಗೆ ಚೂರಿ ತೋರಿಸಿ ಅವರ ಪರ್ಸನ್ನು ಅಪಹರಿಸುತ್ತಾರೆ. ಕಾರಿನ ಪೆಟ್ರೋಲ್ ಕದಿಯುವದು, ಹಾಸ್ಟೆಲ್ಲಿನ ಕೋಣೆಗಳ ಕೀಲಿ ಮುರಿದು ವಿದ್ಯಾರ್ಥಿಗಳ ಸಾಮಾನುಗಳನ್ನು ಕಳುವು ಮಾಡುವದು ಇವು ದೈನಂದಿನ ಘಟನೆಗಳಾಗಿವೆ. ಶ್ವೇತ ತರುಣಿಯರನ್ನು ಹಿಂಸಿಸುವ ನಿಗ್ರೋಗಳಿಗೂ ಕೊರತೆಯಿಲ್ಲ.

ಈ ಕುಸಂಸ್ಕೃತಿ ಹೆಚ್ಚಿನ ಕರಿಯರಿಗೆ ಮೈಯುಂಡಿದೆ. ಅವರ ನಡತೆ ಅಸಹ್ಯವಾಗಿದ್ದಂತೆ ಮೃಗಳ್ಳತನದ್ದೂ ಆಗಿದೆ. ಯಾವದೇ ನೌಕರಿಯನ್ನು ಹೆಚ್ಚು ದಿನ ಕೈಕೊಳ್ಳುವುದು ಇವರಿಗೆ ಸೇರುವುದಿಲ್ಲ. ಚಿಕ್ಕ-ಪುಟ್ಟ ಕೆಲಸಗಳನ್ನು ವರ್ಷ ಎರಡು ವರ್ಷಗಳಿಗೆ ಬದಲಿಸುತ್ತಲೇ ಇರುತ್ತಾರೆ. ನೌಕರಿಯಿಲ್ಲದಿದ್ದರೆ ಹೊಟ್ಟೆಗೇನು ಎಂದು

ಇವರು ಯೋಚಿಸಬೇಕಾಗಿಯೇ ಇಲ್ಲ ಅಮೇರಿಕನ್ನರು ನಿರುದ್ಯೋಗದಿಂದ ಬಳಲಬಾರದೆಂದು ಅಮೇರಿಕನ್ ಸರಕಾರವು ಸಾಮಾಜಿಕ-ಸುರಕ್ಷತೆ (social-security)ಯ ಖಾತೆಯನ್ನು ತೆಗೆದಿದೆ. ನಿರುದ್ಯೋಗಿಯಾದ ಯಾವನೇ ಅಮೇರಿಕನ್ ಮಹನೀಯ ಅಥವಾ ಮಹಿಳೆ ಈ ಖಾತೆಯ ಆಫೀಸಿನಲ್ಲಿ ಹೆಸರು ನೋಂದಾಯಿಸಬಹುದು. ವಾರಕ್ಕೊಮ್ಮೆ ಇವರಿಗೆ ಸಂಬಳ ದೊರೆಯುತ್ತದೆ. ಇದು ತಾತ್ಪೂರ್ತಿಕ ಸಹಾಯವೆಂದಿದ್ದರೂ ದೀರ್ಘಾವಧಿಯವರೆಗೆ ಇದರ ಉಪಯೋಗ ಪಡೆದ, ಪಡೆಯುತ್ತಿರುವ ದೇವರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಏನೂ ದುಡಿತವಿಲ್ಲದೇ ಈ 'ಡೋಲ್' (dole) ಸಂಬಳ ಸಿಗುತ್ತಿರುವಾಗ ಯಾಕೆ ಕಷ್ಟಪಡಬೇಕು ಎಂಬುದು ಅವರ ವಾದ. ಉತ್ತರದ ರಾಜ್ಯಗಳಲ್ಲಿ ನಿಗ್ರೋಗಳು ಸಾಕಷ್ಟು ಮುಂದುವರಿದಿದ್ದರೂ ಅವರ ಕೆಲವು ಅಸಹ್ಯ ಚಟಗಳು ಸುಲಭದಲ್ಲಿ ಕಳಚದಷ್ಟು ಆಳವಾಗಿ ಬೇರೂರಿವೆ. ಎಷ್ಟೇ ಕಲಿತಿರಲಿ, ಎಷ್ಟೇ ಒಳ್ಳೆಯ ಬಟ್ಟೆ ಧರಿಸಿರಲಿ, ಅವರು ವೈಯಕ್ತಿಕ ಕೊಳಕುತನ ಬಿಟ್ಟಿರುವುದಿಲ್ಲ. ಪ್ರವಾಸದಲ್ಲಿ ಇವರು ತಮ್ಮೊಂದಿಗೆ ಸೆರೆ, ಹುರಿದ ಕೋಳಿಯ ಮಾಂಸ, ಬೇಯಿಸಿದ ತತ್ತಿ ಮುಂತಾದವುಗಳನ್ನು ತಂದಿರುತ್ತಾರೆ. ಬಸ್ಸು ಬಿಡುವ ಪುರುಸೊತ್ತಿಲ್ಲ, ಬುತ್ತಿಯ ಗಂಟು ಬಿಚ್ಚಿದರೇ! ಮಾಂಸವನ್ನು ಅಗಿದು, ಎಲವುಗಳನ್ನು ಚೀಪಿ ಚೀಪಿ ಅತ್ಯಂತ ಸ್ವಚ್ಛವಾಗಿಟ್ಟ ಬಸ್ಸಿನ ಒಳಗೇ ಚೆಲ್ಲುತ್ತಾರೆ! (ನಮ್ಮಲ್ಲಿಯ ಟ್ರೇನು, ಬಸ್ಸುಗಳೂ ನಮ್ಮವರ ಈ ಚಟವನ್ನು ಎತ್ತಿ ತೋರಿಸುತ್ತವೆ ನಿಜ. ಆದರೆ ಇಲ್ಲಿ ಉಲ್ಲೇಖಿಸಲ್ಪಟ್ಟ ಅಮೇರಿಕನ್ನರು - ಅರ್ಥಾತ್ ಅಮೇರಿಕನ್ ನಿಗ್ರೋಗಳು ಸುಶಿಕ್ಷಿತರು, ಮೇಲಿನ ವರ್ಗಕ್ಕೆ ಸೇರಿದವರು!} ಐದೇ ನಿಮಿಷಗಳಲ್ಲಿ ಸ್ವಚ್ಛವಾಗಿ ಹೊಳೆಯುತ್ತಿದ್ದ ಬಸ್ಸಿನ ತಳವೆಲ್ಲ ಎಲುವಿನ ಚೂರು, ತತ್ತಿಯ ಕವಚ, ಖಾಲಿ ಬಾಟ್ಲಿ, ಸಿಗರೇಟಿನ ಬರಿದಾದ ಪ್ಯಾಕುಗಳು, ಕೈ ಒರೆಸಿಕೊಂಡು ಒಗೆದ ಕಾಗದದ ಟಾವೆಲ್‌ಗಳಿಂದ ತುಂಬಿಹೋಗುತ್ತದೆ.

ಕರಿಯರ ಪಕ್ಕದಲ್ಲಿ ಬಿಳಿಯರು ಕೂಡ್ರಲು ಒಪ್ಪುವುದಿಲ್ಲ ಎಂಬ ಸಾಮಾನ್ಯ ದೂರು ಇದೆ. ನಿಗ್ರೋಗಳ ಬಗ್ಗೆ ತುಂಬ ಸಹಾನುಭೂತಿಯಿಟ್ಟುಕೊಂಡ ನಾನೇ ಅವರ ಪಕ್ಕದಲ್ಲಿ ಕೂಡ್ರಲು ಒಪ್ಪದಿದ್ದಾಗ, ಅಮೇರಿಕನ್ನರು ನಿರಾಕರಿಸಿದರೆ ತಪ್ಪೇನಿದೆ? ನಿಗ್ರೋಗಳ ಕೇರಿಯಲ್ಲಿ ಬಿಳಿಯರು ಸಹಸಾ ವಾಸಿಸಲಾರರು. ಬಿಳಿಯರ ವಸತಿಯಲ್ಲಿ ನಿಗ್ರೋಗಳು ನೆಲೆಸುವುದು ಅವರಿಗೆ ಸರಿಬರಲಾರದು. ಅವರ ಅನಾಗರಿಕ ನಡತೆ, ದುಶ್ಚಟಗಳು, ಅನಾರೋಗ್ಯಕರ ಚಟಗಳು, ಕಳವು, ದೊಂಬಿ ಮುಂತಾದವನ್ನು ಯಾರು ತಾನೇ ಸಹಿಸಿಯಾರು? ಹಗಲಿನಲ್ಲಿ ಕೂಡ ನಿಗ್ರೋಗಳ ಕೇರಿಯಲ್ಲಿ ಹಾಯ್ದಾಡಲು ಎಷ್ಟೋ ಜನ ಹೆದರುತ್ತಾರೆ. ಹೀಗಿದ್ದಾಗ ಅವರನ್ನು ನೆರೆಯಲ್ಲಿ ಹೇಗೆ ತಾನೆ ವಾಸಿಸಲು ಕೊಟ್ಟಾರು?

ಅಮೇರಿಕೆಗೆ ಹೋದ ಹೊಸದರಲ್ಲಿ ನನಗೆ ವರ್ಣದ್ವೇಷದ ಬಗ್ಗೆ ಸಂತಾಪವೂ, ನಿಗ್ರೋ ಜನರ ಬಗ್ಗೆ ಹೆಚ್ಚಿನ ಸಹಾನುಭೂತಿ ಆದರಗಳೂ ಇದ್ದವು. ಅವರೊಂದು ಹತ್ತಿಕ್ಕಲ್ಪಟ್ಟ (depressed community) ಜನಾಂಗವೆಂದು ಕೊಂಡಿದ್ದೆ. ಆದರೆ ಅಮೇರಿಕೆಯ ವಾಸ್ತವ್ಯದಲ್ಲಿ ಈ ಜನರನ್ನು ವಿವಿಧ ಕೋನಗಳಿಂದ ತಿಳಿದುಕೊಳ್ಳಲು ಅವಕಾಶ ಸಿಕ್ಕಿತು. ಕೇವಲ ಬಣ್ಣದ ಮೇಲಿಂದಲೇ ಅಮೇರಿಕನ್ನರು ನಿಗ್ರೋಗಳನ್ನು ದ್ವೇಷಿಸುವುದಿಲ್ಲ. ಅದಕ್ಕೆ ಅನೇಕ ಆಂತರಿಕ ಕಾರಣಗಳಿವೆಯೆಂದು ನಾನು ತೀವ್ರವೇ

ಕಂಡುಕೊಳ್ಳುವಂತಾಯಿತು. ನಾನು ನಿಗ್ರೋ ಅಲ್ಲದಿದ್ದರೂ ಕರಿಯ ಜನಾಂಗಕ್ಕೆ ಸೇರಿದವನಷ್ಟೇ? ಆದರೆ ನನ್ನ ಮೈಬಣ್ಣಕ್ಕಾಗಿ ಅವಮಾನಿತನಾಗುವ ಸಂದರ್ಭ ನಾಲ್ಕು ವರ್ಷಗಳಲ್ಲಿ ಒಮ್ಮೆಯಾದರೂ ಬರಲಿಲ್ಲ. ನಾನೊಬ್ಬ ಭಿನ್ನ ಜನಾಂಗದ ವ್ಯಕ್ತಿಯೆಂದು ಅನಿಸುವ ಸಂದರ್ಭ ಒಮ್ಮೆ ಕೂಡ ಬರಲಿಲ್ಲ.

ನಿಗ್ರೋ ಜನರ ನಡತೆ ಅನಾಗರಿಕವಾಗಿದ್ದರೆ ನಮ್ಮನ್ನೇಕೆ ನಿಗ್ರೋಗಳಂತೆ ನಡೆಸಿಕೊಳ್ಳಬೇಕು? ನಾವು ನೀಗ್ರೋಗಳಿಗಿಂತ ಭಿನ್ನವಾಗಿಲ್ಲವೇ? ಎಂದು ಎಷ್ಟೋ ಭಾರತೀಯ ವಿದ್ಯಾರ್ಥಿಗಳು ದೂರಿಕೊಳ್ಳುವದುಂಟು.

ನಿಗ್ರೋಗಳಷ್ಟು ಕೀಳುಮಟ್ಟದಲ್ಲಿ ಅಲ್ಲವಾದರೂ ಬಿಳಿಯರಿಗೆ ಅಸಹ್ಯವೆನಿಸುವ ರೀತಿಯಲ್ಲಿ ಅಮೇರಿಕೆಯಲ್ಲಿ, ಬಹುಸಂಖ್ಯಾತ ಭಾರತೀಯರು ಜೀವನ ನಡೆಸುತ್ತಾರೆಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ಸ್ವಚ್ಛತೆಯ ಕಲ್ಪನೆಗೂ ಅವರ ಸ್ವಚ್ಛತೆಯ ಕಲ್ಪನೆಗೂ ಬಹಳ ವ್ಯತ್ಯಾಸವಿದೆ. (ನಮ್ಮಲ್ಲಿ ಸ್ವಚ್ಛತೆ ವೈಯಕ್ತಿಕ ವಿಚಾರ; ಅವರಲ್ಲಿ ಸ್ವಚ್ಛತೆಯೆಂದರೆ ಸಾಮಾಜಿಕ ಆಚಾರ) ಇಷ್ಟಾಗಿಯೂ ಉತ್ತರದ ಅಮೇರಿಕನ್ನರು, ತಾವು ನಿಗ್ರೋಗಳನ್ನು ಸರಿಸಮಾನತೆಯಿಂದ ಕಾಣುತ್ತೇವೆ. ಲಿಂಕನ್ನರು ದಾಸ್ಯತ್ವವನ್ನು ಕೊನೆಗೊಳಿಸಿ ಒಂದು ನೂರು ವರ್ಷ ದಾಟದರೂ ಇನ್ನೂ ದಕ್ಷಿಣದಲ್ಲಿ ಅದು ಉಳಿದುಕೊಂಡಿದೆ. ದಕ್ಷಿಣದವರು ಸಂಕುಚಿತ ಮನೋಭಾವದವರು ಎಂದು ದಕ್ಷಿಣ ರಾಜ್ಯಗಳನ್ನು ದೂರುತ್ತಾರೆ! ಪ್ರೆಸಿಡೆಂಟ್ ಕೆನಡಿಯವರು ಅಧಿಕಾರಕ್ಕೆ ಬಂದ ಮೇಲೆ 'ಸಮಾನತೆ'ಯ ಅಂದೋಲನಕ್ಕೆ ಹೆಚ್ಚಿನ ಪುಟ ದೊರೆಯಿತು. ಅವರ ನಾಗರಿಕ-ಸಮಾನ ಹಕ್ಕುಗಳು ಕಾನೂನು (civil-rights-law) ಉತ್ತರ ಅಮೇರಿಕನ್ನರನ್ನು ಪ್ರಚೋದಿಸಿತು. ಇದೇ ಸಮಯವೆಂದು ಸಮಾನತೆಯ ಹಕ್ಕನ್ನು ಜನರಿಗೆ ತಿಳಿಸುವ, ಸಮಾಜ-ಸುಧಾರಣೆ ಕೈಕೊಳ್ಳುವ 'ನಾಯಕರು' ಅಲ್ಲಲ್ಲಿ ತಲೆಯೆತ್ತಲಾರಂಭಿಸಿದರು. ರಾಜ್ಯ ಸರಕಾರ ಇದನ್ನು ತಡೆಯಲು ಪೋಲಿಸುಪಡೆ ಕಳಿಸಿದಾಗ ಕೇಂದ್ರವರ್ತಿ ಸರಕಾರ ತನ್ನ ಸೈನ್ಯ ಕಳಿಸಿ ನಿಗ್ರೋಗಳಿಗೆ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಕೊಡಿಸಿತು. ರೊಚ್ಚಿಗೆದ್ದ ಬಿಳಿಯರು ಕೊಲೆ, ಸುಲಿಗೆ, ಹೊಡೆದಾಟಗಳನ್ನು ನಡೆಸಿದರು. ಉತ್ತರದಲ್ಲಿದ್ದು ವರ್ತಮಾನಪತ್ರಗಳನ್ನು ಓದುತ್ತಿದ್ದವರಿಗೆ ದಕ್ಷಿಣದಲ್ಲಿ ಮೈಬಣ್ಣದ ಹೆಸರಿನಲ್ಲಿ ದಕ್ಷಿಣದ ಬಿಳಿಯರು ಹತ್ಯಾಕಾಂಡ ನಡೆಸಿದ್ದಾರೆ ಎಂಬ ಕಲ್ಪನೆ ಬಾರದಿರದು. ಉತ್ತರದ ವಿದ್ಯಾರ್ಥಿಗಳು ಕೂಡ ಆಂದೋಲನ ನಡೆಸಿದರು. ಇದೆಲ್ಲವನ್ನು ದಿನನಿತ್ಯ ಓದಿ ನೋಡಿ ನನಗೆ ದಕ್ಷಿಣಕ್ಕೆ ಹೋಗಿ ನಿಜ ಸಂಗತಿಯನ್ನು ಕಣ್ಣಾರೆ ನೋಡಬೇಕೆಂಬ ಹಂಬಲ ಹುಟ್ಟಿತು. ಅಂತೆಯೇ ಆ ಬಗ್ಗೆ ಪ್ರಯತ್ನಿಸತೊಡಗಿದೆ.

ನಿಶ್ಚಯಿಸಿದಷ್ಟು ಹೋಗುವುದು ಸುಲಭವಾಗಿರಲಿಲ್ಲ. ಒಂದು ವರ್ಷದ ಸತತ ಪ್ರಯತ್ನ ಮಾಡಬೇಕಾಯಿತು. ಅಮೇರಿಕ ಸರಕಾರದೊಂದಿಗೆ ಪತ್ರವ್ಯವಹಾರ ನಡೆಸಿ ಅದರ ದಕ್ಷಿಣದ ಕೆಲವು ಸಂಶೋಧನಾ-ಕೇಂದ್ರಗಳಲ್ಲಿ ತರಬೇತಿ ಪಡೆಯಲು ಅವಕಾಶಕ್ಕಾಗಿ ಕೇಳಿಕೊಂಡೆ. ತರಬೇತಿ ಕೊಡಲು ಒಪ್ಪಿದರೂ ದಕ್ಷಿಣದ ಪ್ರವಾಸಕ್ಕೆ ಕಳಿಸಲು ಸರಕಾರ ಅಷ್ಟು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ.

ಒಂದು ದಿನ ಬೆಳಿಗ್ಗೆ, ನಮ್ಮ ಡೀನ್ (ಪ್ರಿನ್ಸಿಪಾಲ್)ರಿಂದ ನನಗೆ ಕರೆ ಬಂದಿತು. 'ಹಾಯ್‌ಹಾಯ್'ಗಳ ನಂತರ ಅಂದು ಬೆಳಿಗ್ಗೆ ತಮಗೆ ವಾಶಿಂಗ್‌ಟನ್ನಿನಿಂದ ಫೋನ್

ಬಂದಿತ್ತೆಂದು ಹೇಳಿದರು.

"ನಿಮ್ಮ ಕಾಲೇಜಿನ ಕಾಮತನೆಂಬ ಭಾರತೀಯ ವಿದ್ಯಾರ್ಥಿಯಿದ್ದಾನಷ್ಟೆ. ಆತನ ಬೇಡಿಕೆಯ ಪ್ರಕಾರ ತರಬೇತಿಗೆ ದಕ್ಷಿಣಕ್ಕೆ ಕಳಿಸಲಿದ್ದೇವೆ. ಆದರೆ ನಿಮಗೆ ಗೊತ್ತಿದ್ದಂತೆ ಅಲ್ಲಿ ವರ್ಣಭೇದ ಚಳುವಳಿ ಜೋರಾಗಿದೆ. ಕಪ್ಪುಬಣ್ಣದವರನ್ನು ಹಿಂದೆ ಮುಂದೆ ನೋಡದೇ ಬಡಿಯುತ್ತಾರೆ..... ನಿಮ್ಮ ಈ ಕಾಮತ ಕಾಣಲು ನಿಗ್ರೋವಿನಂತೆ ಇದ್ದಾನೆಯೇ? ತಂಟೆಖೋರ ಅಥವಾ ಇಲ್ಲದ ಉಸಾಬರಿಯ ಮನುಷ್ಯನೇ? ದಂಗೆ-ಗಿಂಗೆಯ ಪ್ರವೃತ್ತಿಯವನೇ?" ಎಂದು ಮುಂತಾಗಿ ಫೋನಿನ ಮೇಲೆ ಕೇಳಿದರಂತೆ. ಅದಕ್ಕೆ ಡೀನರು-

"ಕಳೆದ ಮೂರು ವರ್ಷಗಳಿಂದ ಕಾಮತನನ್ನು ವೈಯಕ್ತಿಕವಾಗಿ ನಾನು ಬಲ್ಲೆ. ನಮ್ಮ ವಿದ್ಯಾರ್ಥಿಗಳಲ್ಲಿ ಆತನೊಬ್ಬ ಸಾಧು ಮತ್ತು ನಿರುಪದ್ರವಿ ಪ್ರಾಣಿ. ಕಾಣಲು ಬಿಳಿಯನಂತೆ ಇಲ್ಲದಿದ್ದರೂ ಖಂಡಿತ ನಿಗ್ರೋವಿನಂತೆ ಇಲ್ಲ. ಆತನನ್ನು ಎಲ್ಲಿಯೇ ಕಳಿಸಲು ನಾನು ಅಳುಕುವುದಿಲ್ಲ." ಎಂದು ಉತ್ತರಿಸಿದರಂತೆ. ಇದೆಲ್ಲ ನನಗೆ ವಿವರಿಸಿ.

"ನೀನು ಯಾವ ತಂಟೆಯಲ್ಲೂ ಭಾಗವಹಿಸುವುದಿಲ್ಲವೆಂಬ ಆತ್ಮವಿಶ್ವಾಸ ನನಗಿದ್ದರೂ ದಕ್ಷಿಣದಲ್ಲಿ ಸಂಚರಿಸುವಾಗ ಜಾಗರೂಕವಾಗಿರು. ಇಂತಹ ವರ್ಣದ್ವೇಷ ನಮ್ಮಲ್ಲಿರುವುದು ನಮಗೆ ಬಹಳ ಅಪಮಾನಕರವಾಗಿದೆ. ಬಿಳಿಯರೊಡನೆ ಸರಿಸಮಾನತೆ ತೋರಿಸುವ ಗೊಡವೆಗೆ ಹೋಗದೇ ನಿನಗೆ ಬೇಕಾದಲ್ಲಿ ಊಟಮಾಡುವ, ವಸತಿ ಹಾಕುವ ಅಧಿಕಾರವಿದ್ದರೂ ಅದನ್ನು ದೃಢೀಕರಿಸದೇ ಎಲ್ಲಿ ಸುಲಭವಾದ ಸೌಕರ್ಯಗಳು ದೊರೆಯುತ್ತವೋ (ಅಂದರೆ ನಿಗ್ರೋ ಸಂಸ್ಥೆಗಳಲ್ಲೇ ಇರು ಎಂದರ್ಥ!) ಅಲ್ಲೇ ಇರು." ಎಂದು ತಡವರಿಸುತ್ತ ಬೋಧಿಸಿದರು. ನಂತರ ನನ್ನ ವರ್ತನೆ ಹೇಗಿರಬೇಕು, ಹೇಗೆ ಇರಬಾರದು ಎಂದು ಉಪದೇಶಿಸಿದರು. ಇದೆಲ್ಲ ದೀರ್ಘ ಪ್ರಸ್ತಾಪನೆ ನೋಡಿ ದಕ್ಷಿಣಕ್ಕೆ ಹೋಗಲೋ ಬೇಡವೋ ಎಂದು ಅಧೈರ್ಯವೆನಿಸಿತು. ಆದರೂ ಅಲ್ಲಿಯ ಹತ್ಯಾಕಾಂಡ ಕಣ್ಣಾರೆ ಕಾಣುವ ಹಂಬಲ ಹೆಚ್ಚಾಗಿದ್ದರಿಂದ ಹೋಗಿಯೇ ತೀರುವದೆಂದು ನಿರ್ಧರಿಸಿದೆ.

ಪ್ರವಾಸಕ್ಕೆ ಹೊರಡುವ ಮೊದಲು ಕನ್ನಡಿಯಲ್ಲಿ ಎರಡೆರಡು ಬಾರಿ ನೋಡಿಕೊಡು ನಿಗ್ರೋವಿನಂತೆ ಕಾಣುತ್ತೇನೆಯೇ ಇಲ್ಲವೇ ಎಂದು ಖಚಿತಪಡಿಸಿಕೊಂಡೆ. ವಾಶಿಂಗ್ಟನ್ ಡಿ.ಸಿ.ಗೆ ಹೋಗಿ ಉತ್ತರ ದಕ್ಷಿಣ ಕೆರೊಲಾಯಿನಾ ರಾಜ್ಯಗಳನ್ನು ಸಂದರ್ಶಿಸಿದೆ. ಕರಿಯರು ನನ್ನನ್ನು ನೋಡಿ ತಮ್ಮ ಬಂಧುವೆಂದು ಹ್ಯಾಟ್ ಮುಟ್ಟಿ ವಿನಯವನ್ನು ತೋರಿಸುತ್ತಿದ್ದರು. ಕೆಲವರಂತೂ ಹ್ಯಾಟನ್ನು ತೆಗೆದು ತಲೆ ಬಗ್ಗಿಸಿ ನಮ್ರತೆಯನ್ನು ವ್ಯಕ್ತಪಡಿಸಿದರು.

ಉತ್ತರದಲ್ಲಿ ಇಲ್ಲದ ಆ ಸೌಜನ್ಯವನ್ನು ದಕ್ಷಿಣದವರಲ್ಲಿ ಕಂಡು ಸಂತೋಷವಾಯಿತು. ನಾನು ಅಲ್ಪಾವಧೀ-ತರಬೇತಿ ಪಡೆಯಲಿದ್ದ ಸಂಸ್ಥೆಗಳಲ್ಲಿ ಮೇಲಧಿಕಾರಿಗಳೆಲ್ಲ ಶ್ವೇತವರ್ಣೀಯರು. ನಿಗ್ರೋಗಳೆಲ್ಲ ಚಿಕ್ಕ-ಪುಟ್ಟ ನೌಕರಿಯಲ್ಲಿದ್ದರು. ಯಾವಾಗಲೂ ಬಿಳಿಯರೊಡನೆಯೇ ಸಂಚರಿಸುತ್ತಿದ್ದುದರಿಂದ ನನಗೆ ಯಾವ ತೊಂದರೆಯೂ ಆಗಲಿಲ್ಲವೆಂದುಕೊಂಡೆ. ನಂತರ ಫ್ಲೋರಿಡಾ, ಅಲಬಾಮಾ, ಮಿಸಿಸಿಪಿ ರಾಜ್ಯಗಳಲ್ಲಿ ಒಬ್ಬನೇ ಸುತ್ತಾಡಲಾರಂಭಿಸಿದೆ. ಆದರೂ ನಿರೀಕ್ಷಿಸಿದ ಯಾವ ಆತಂಕವೂ ಒದಗಲಿಲ್ಲ. ಬದಲಾಗಿ ನನಗೆ ಹೊಸ ಜ್ಞಾನೋದಯವಾಗತೊಡಗಿತು.

ಈ ರಾಜ್ಯಗಳ ಊರುಗಳಲ್ಲೆಲ್ಲ ಹೋದಲ್ಲಿ ಬಸ್‌ನಿಲ್ದಾಣಗಳಲ್ಲಿ ಕರಿಯರಿಗೆ ಬೇರೆ, ಬಿಳಿಯರಿಗೆ ಬೇರೆ ಕೂಡ್ರಲು ವ್ಯವಸ್ಥೆಯಿತ್ತು. ನಾನು ಮೊದಲಿಗೆ ಹೋದವನು ಕರಿಯರಿಗೆ ಮೀಸಲಾದ ಕುರ್ಚಿಯ ಮೇಲೆ ಕುಳಿತೆ. ಹತ್ತು ನಿಮಿಷಗಳ ನಂತರ ಎದ್ದುಹೋಗಿ ಬಿಳಿಯರೊಡನೆ ಕುಳಿತೆ? ಯಾರೂ ಏನೂ ಅನ್ನಲಿಲ್ಲ. ಪಕ್ಕದಲ್ಲಿ ಕುಳಿತ ಬಿಳಿಯರೂ ಎದ್ದು ಹೋಗಲಿಲ್ಲ. ಕುಡಿಯುವ ನೀರಿನ ವ್ಯವಸ್ಥೆ, ಮೂತ್ರಾಲಯಗಳು, ಟಿಕೆಟಿನ ಕಿಡಿಕಿಗಳು ಎಲ್ಲೆಲ್ಲೂ ಪ್ರತ್ಯೇಕವಾಗಿದ್ದವು. ನಾನು ನನ್ನ ಅನುಕೂಲದಂತೆ ಎರಡರ ಉಪಯೋಗವನ್ನು ಪಡೆಯುತ್ತಿದ್ದೆ. ಎಲ್ಲೂ ನನಗೆ ವಿರೋಧ ಬರದೇ ಇದ್ದುದನ್ನು ನೋಡಿ ನಿರಾಶೆಯಾಯಿತು. ವರ್ಣದ್ವೇಷ ಹೆಚ್ಚಾಗಿರುವ ಅಲಬಾಮಾ, ಮಿಸಿಸಿಪಿ ರಾಜ್ಯಗಳಲ್ಲಿ ಕೂಡ ಶ್ವೇತವರ್ಣೀಯರ ಹೊಟೇಲಿನಲ್ಲೇ ಇಳಿದುಕೊಂಡಿದ್ದೆ.* ಒಮ್ಮೆ ಜಾಕ್‌ಸನ್ (ಮಿಸಿಸಿಪಿ) ಊರಿಗೆ ಹೋದಾಗ ಹೀಗೆಯೇ ಸುತ್ತಾಡುತ್ತ ಹೊರಟಿದ್ದೆ. ಹೊಟ್ಟೆ ಹಸಿದಾಗ ಹೊಟೇಲುಗಳತ್ತ ಕಣ್ಣು ಹಾಯಿಸಿದೆ. ಕೊನೆಗೊಮ್ಮೆ ಶ್ವೇತವರ್ಣಿಯರಿಗೇ ಮೀಸಲೆಂದು ತೋರುವ ಭೋಜನಾಲಯವನ್ನು ನೋಡಿ, ಧೈರ್ಯಮಾಡಿಕೊಂಡು ಒಳಹೊಕ್ಕೆ.

"ನಾನು ನಿಮ್ಮಲ್ಲಿ ಊಟಮಾಡಬಹುದೇ?" ಎಂದು ಕೇಳಿದೆ ಮ್ಯಾನೇಜರ್ ಹೆಚ್ಚಿನ ವಿನಯದಿಂದ,

"ಯಾಕಾಗಬಾರದು?" ಎಂದ. ಅಲ್ಲಿ ತೂಗುಹಾಕಿದ "ಪ್ರವೇಶಾಧಿಕಾರ ನಮ್ಮದು" (right of admission with the manager) ಎಂಬ ಬೋರ್ಡಿನತ್ತ ತೋರಿಸುತ್ತ,

"ಕರಿಯರಿಗೆ ಪ್ರವೇಶವಿಲ್ಲ ಎಂಬ ಅರ್ಥದಲ್ಲಿ ಅದನ್ನು ತೂಗುಹಾಕಿರಬಹುದು ಎಂದುಕೊಂಡು ಕೇಳಿದೆ" ಎಂದೆ. ಮ್ಯಾನೇಜರ್ ಮುಗುಳುನಗೆ ನಗುತ್ತ,

"ನೀವು ಉತ್ತರದಿಂದ ಬಂದಿದ್ದೀರಿ ಎನ್ನುವುದಕ್ಕೆ ಬೇರೆ ಪುರಾವೆ ಬೇಕಾಗಿಲ್ಲ. ಉತ್ತರದವರಿಗೆಲ್ಲ ನಮ್ಮ ಬಗ್ಗೆ ತೀರ ತಪ್ಪು ಕಲ್ಪನೆಯಿದೆ. ಕರಿಯದೆಲ್ಲ ಕಹಿ ಎಂದು ನಾವು ನಂಬಿದ್ದೇವೆ, ಎಂದು ಅವರು ತಿಳಿಯುತ್ತಾರೆ. ನೀವು ನಿಗ್ರೋ ಎಂದು ಭ್ರಮಿಸುವಷ್ಟು ಮಂಕಲ್ಲ ನಾವು. ಒಂದು ವೇಳೆ ನಿಗ್ರೋ ಆಗಿದ್ದರೂ ಮೈಬಣ್ಣದಿಂದ ಮಾನವನ ಯೋಗ್ಯತೆಯನ್ನು ನಿರ್ಧರಿಸುವಷ್ಟು ಅಧೋಗತಿಗೆ ನಾವು ಇನ್ನೂ ಇಳಿದಿಲ್ಲ.... ಅಸಂಸ್ಕೃತ, ಕ್ರೂರ ನಿಗ್ರೋಗಳಿಗೂ ನಮ್ಮಲ್ಲಿ ಪ್ರವೇಶವಿಲ್ಲದಿದ್ದರೆ, ಅದೇ ಗುಂಪಿಗೆ ಸೇರಿದ ಬಿಳಿಯರಿಗೂ ನಮ್ಮಲ್ಲಿ ಪ್ರವೇಶವಿಲ್ಲ. ಮೊನ್ನೆ ಕುಡಿದು ಬಂದ ಬಿಳಿಯನೊಬ್ಬ ನಮ್ಮ ಪರಿಚಾರಿಕೆಯ ಮೇಲೆ ಕೈಮಾಡಲು ಹೋದಾಗ ನಾನೇ ಅವನಿಗೆ ಎರಡೇಟು ಬಿಗಿದು ಪೋಲಿಸರ ಕೈಗೆ ಕೊಟ್ಟು ಬಂದಿದ್ದೇನೆ. ತಿರುಗಿ ನಮ್ಮ ಭೋಜನಾಲಯದ ಮೆಟ್ಟಲು ಏರಗೊಟ್ಟಿಲ್ಲ. ಇದೆಲ್ಲ ಉತ್ತರದವರಿಗೆ ಹೇಗೆ ತಿಳಿಯಬೇಕು?" ಎಂದು ನಿರಾಶೆಯನ್ನು ವ್ಯಕ್ತಪಡಿಸಿದ. ಊಟ ಮಾಡುತ್ತಿದ್ದಾಗ ಸ್ವತಃ ಎರಡು ಮೂರು ಬಾರಿ ವಿಚಾರಿಸಿದ. ನಾನಿದ್ದ ಎಂಟು ಹತ್ತು ದಿನ ಬೇರೆ ಬೇರೆ ಭೋಜನಾಲಯಗಳಿಗೆ ಹೋಗುತ್ತಿದ್ದೆ. ಅವರೆಲ್ಲ ಬಿಳಿಯರಾದರೂ

---

* Hot spot for civil-rights movement. ಇದು ವರ್ಣದ್ವೇಷ ನಿರ್ಬಂಧಕ ಕೇಂದ್ರಬಿಂದುವಾದ ಪ್ರದೇಶ.

ನನ್ನನ್ನು ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಿದ್ದರು. ಒಂದು ರೀತಿಯಿಂದ ನೋಡಿದರೆ ಉತ್ತರದಲ್ಲಿ ಎಂದೂ ಸಿಗದ ಸೌಜನ್ಯಪೂರ್ಣ ಸ್ವಾಗತ, ಆದರಪೂರ್ವಕ ಸತ್ಕಾರ ದಕ್ಷಿಣದಲ್ಲಿ ದೊರೆತವು. ಗಲ್ಫ್‌ಪೋರ್ಟ (ಮಿಸಿಸಿಪಿ)ದಲ್ಲಿ ಹೊಟೇಲೊಂದರಲ್ಲಿ ಇಳಿದುಕೊಂಡಿದ್ದೆ. ಭಾರತೀಯರು ಹೆಚ್ಚಾಗಿ ಹೋಗದ ಊರಾದ್ದರಿಂದ ಹಲವರು ಹೆಚ್ಚಿನ ಕುತೂಹಲದಿಂದ ಆಗಾಗ್ಗೆ ನನ್ನ ಕೋಣೆಗೆ ಬಂದು ಭಾರತದ ಬಗ್ಗೆ ನೂರಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಮಾತು ಅವರತ್ತ ಹೊರಳಿದಾಗ ತಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದರು.

"ಈ ಉತ್ತರದವರು ನಮ್ಮ ಹೆಸರನ್ನು ಎಲ್ಲೆಡೆ ಕೆಡಿಸಿಬಿಟ್ಟಿದ್ದಾರೆ. ದಕ್ಷಿಣದವರ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಇವರಿಗೇನು ಗೊತ್ತು? ಮೊನ್ನೆ ಹುಟ್ಟಿದ ಮಕ್ಕಳು..... ನಾವೇನು ಮಾಡಬೇಕು. ಏನು ಮಾಡಬಾರದು ಎಂದು ಕಲಿಸಲು ಉತ್ತರದಿಂದ ಬರುತ್ತಿದ್ದಾರೆ. ತಲೆತಿರುಕ ದಾಕ್ಷಿಣಾತ್ಯರು ಅವರಿಗೆ ಚೆನ್ನಾಗಿಯೇ ಬುದ್ಧಿ ಕಲಿಸಿದ್ದಾರೆ. (ಸಮಾನತೆಯ ಮಹತ್ವವನ್ನು ದಕ್ಷಿಣದವರಿಗೆ ಬೋಧಿಸಲು ಬಂದ ಕಾಲೇಜು ವಿದ್ಯಾರ್ಥಿಗಳನ್ನು ಮಿಸಿಸಿಪಿ ಅಲಬಾಮಾಗಳಲ್ಲಿ ಚೆನ್ನಾಗಿ ಥಳಿಸಿದ್ದರು, ಕೆಲವರ ಕೊಲೆಯೂ ಆಗಿತ್ತು.) ಶತಮಾನಗಳಿಂದ ನಿಗ್ರೋಗಳೂ ನಾವೂ ಒಟ್ಟಿಗೆ ಬದುಕುತ್ತಿಲ್ಲವೇ? ಒಂದು ಕಾನೂನು, ಕೆಲವು ಭಾಷಣಗಳಿಂದ ಬಿಡಿಸುವಷ್ಟು ಸುಲಭವೇ ಈ ಸಮಸ್ಯೆ? ಇಲ್ಲಿ (ದಕ್ಷಿಣದಲ್ಲಿ) ಕೂಡ ಇದೇ ಸಮಯವೆಂದು ಬಿಳಿಯ ಮತ್ತು ಕರಿಯ ನಾಯಕರು ನಾಯಿಕೊಡೆಯಂತೆ ಬೆಳೆದುಬಿಟ್ಟಿದ್ದಾರೆ. ನಮ್ಮಷ್ಟಕ್ಕೆ ನಮ್ಮನ್ನು ಬಿಟ್ಟರೆ ಈ ಸಮಸ್ಯೆಗೆ ಉತ್ತರ ಹುಡುಕೇವು! ಒಂದಿಲ್ಲ ಒಂದು ದಿನ, ಸರಕಾರ ಏನೋ ಮಾಡಹೋಗಿ ಏನಾದರೊಂದು ಘಟಿಸಿರುತ್ತದೆ.

ದಕ್ಷಿಣದ ಪ್ರವಾಸದಲ್ಲಿ ನನಗೆ ಕಂಡುಬಂದದ್ದು ಇಷ್ಟು; ನಿಗ್ರೋ ಜನರನ್ನು ಮುಂದೆ ತರಲು ಅಲ್ಲಿಯ ಬಿಳಿಯರು ಯಾವ ಪ್ರಯತ್ನ ಮಾಡದಿದ್ದರೂ ಹತ್ತಿಕ್ಕುವ ಯತ್ನ ನಡೆಸಿಲ್ಲ. ನಿಗ್ರೋ ಜನರಾದರೂ ತಮಗೆ ಇದ್ದ ಸವಲತ್ತುಗಳ ಪ್ರಯೋಜನ ಪಡೆದುಕೊಂಡಿಲ್ಲ. ಮುತ್ತಾತಂದಿರ ಪರಂಪರೆಯಲ್ಲಿ ಅಜ್ಜ, ತಂದೆ, ಮಕ್ಕಳು, ಮರಿಮಕ್ಕಳು ಬದುಕುತ್ತಿದ್ದಾರೆ, ಬಿಳಿಯರನ್ನು ತಮಗಿಂತ ಮುಂದುವರಿದ ಜನಾಂಗವೆಂದು ಒಪ್ಪಿಕೊಂಡಿದ್ದಾರೆ. ಅಂತೆಯೇ ಅವರಿಗಿಂತ ಕಡಿಮೆ ಸಂಬಳಕ್ಕೆ ಅವರಿಗಾಗಿ ದುಡಿಯಲು ಹಿಂಜರಿಯುವುದಿಲ್ಲ. ಬಿಳಿಯರಿಗಾದರೂ ಅವರು ನಿಕೃಷ್ಟರೆಂಬ ಭಾವನೆ ಸರ್ವಸಾಮಾನ್ಯವಾಗಿ ಇಲ್ಲ. ಇಬ್ಬರೂ ಪ್ರತ್ಯೇಕವಾಗಿ ತಮ್ಮ ಬಾಳನ್ನು ಸಾಗಿಸುತ್ತಾರೆ. ಇಷ್ಟು ವರ್ಷಗಳಲ್ಲಿ ನಿಗ್ರೋ ಜನರು ತಮ್ಮ ಮತಪ್ರದರ್ಶನದ ಗೋಜಿಗೆ ಹೋಗಿಲ್ಲ. ಅಂತೆಯೇ ಬಹುಸಂಖ್ಯಾತ ನಿಗ್ರೋ ಜನರಿಗೆ ಮತಾಧಿಕಾರವಿಲ್ಲ, ಈ ರಾಜ್ಯಗಳಲ್ಲಿ. ಈಗ 'ಹೊಸ ಜಾಗೃತಿ'ಯ ನಾಯಕರು ನಿಗ್ರೋಗಳಿಗೆ ಮತಪ್ರಜ್ಞೆಯನ್ನು ಒದಗಿಸುತ್ತಾರೆ. ಇವರಿಗೆಲ್ಲ ಮತಾಧಿಕಾರದ ಹಕ್ಕು ಬಂದರೆ ಕ್ರಮೇಣ ಕರಿಯರ ಕೈಯಲ್ಲಿ ಅಧಿಕಾರ ಹೋಗಿ ತಾವು ಅವರ 'ಮರ್ಜಿ'ಗೆ ಒಳಪಡಬೇಕಾದಿತೆಂಬ ಕಳವಳ ಬಿಳಿಯರದು. ನಿಗ್ರೋ ಜನರು ಬಹುಸಂಖ್ಯಾಕರಾದ ಅಲಬಾಮಾ. ಮಿಸಿಸಿಪಿಗಳಲ್ಲಿ ಈ ಭಾವನೆ ಪ್ರಬಲವಾಗಿದೆ. ಕೇಂದ್ರಸರಕಾರ ಹೊಸ ಕಾನೂನನ್ನು (civil-rights-law) ಬಲಾತ್ಕಾರವಾಗಿ ಜಾರಿಯಲ್ಲಿ ತರಲು ಯತ್ನಿಸಿದ್ದರಿಂದ ಜನ ರೊಚ್ಚಿಗೆದ್ದಿದ್ದಾರೆ. ಸಾವಧಾನದಿಂದ ಹೃದಯ ಪರಿವರ್ತನೆಯಾಗಬೇಕಾದರೆ ಕೆಲಸಕ್ಕೆ ಕಾನೂನು,

ಸೈನ್ಯಬಲಗಳನ್ನು ಪ್ರಯೋಗಿಸಿದರೆ ಸಮಸ್ಯೆ ಇನ್ನಷ್ಟು ಜಟಿಲವಾಗದೇ ಇದ್ದೀತೇ? ನಮ್ಮ ಸರಕಾರ ಎಷ್ಟೊಂದು ಕಾಯದೆಗಳಿಂದ, ಧನಸಹಾಯದಿಂದ, ಸಮಾಜ-ಸುಧಾರಕ ಕಾರ್ಯಕ್ರಮಗಳಿಂದ ಹರಿಜನರ ಸಮಸ್ಯೆ ಬಿಡಿಸಲು ಯಶಸ್ವಿಯಾಗದಿದ್ದಾಗ ಅಮೇರಿಕೆಯಲ್ಲಿ ನೂರಾರು ವರ್ಷಗಳಿಂದ ಬೆಳೆದು ಬಂದ ಎರಡು ತೀರ ವಿರುದ್ಧ ಜನಾಂಗಗಳ ಈ ಸಮಸ್ಯೆಯನ್ನು ಸುಲಭದಲ್ಲಿ ಹೇಗೆ ಬಿಡಿಸಲಾದೀತು?

ದಿವಂಗತ ಕೆನಡಿಯವರ 'civil-rights' ಕಾನೂನು ಸಾಮಾಜಿಕವಾಗಿ ಸಮಾನತೆಯನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾಗದೇ ಅಮೇರಿಕನ್ ಜನಾಂಗದಲ್ಲಿ ಅಲ್ಲೋಲಕಲ್ಲೋಲವನ್ನೆಬ್ಬಿಸಿದೆ. ಇಂದು ದಕ್ಷಿಣದವರು ನಿಗ್ರೋಗಳನ್ನಷ್ಟೆ ಅಲ್ಲದೇ ಉತ್ತರದವರನ್ನೂ ದ್ವೇಷಿಸುತ್ತಿದ್ದಾರೆ. ಉತ್ತರದವರು ಇದನ್ನೊಂದು ಸಾಮಾಜಿಕ-ಕ್ರಾಂತಿಯೆಂದು ನಂಬಿದರೆ, ದಕ್ಷಿಣದವರು ಇದೊಂದು ಅವ್ಯಾವಹಾರಿಕ, ಅನಪೇಕ್ಷಿತ ಗೊಂದಲವೆಂದು ತಿಳಿಯುತ್ತಾರೆ. ಏನೇ ಆದರೂ ನಿಗ್ರೋ ಜನರಿಗೆ ಮಾತ್ರ ಇದಾವುದರ ನೈಜ ಲಾಭ ದೊರೆತಿಲ್ಲ. ಅವರು ಮಾಡಿಕೊಳ್ಳುವಂತೆಯೂ ಇಲ್ಲ.

ದೇವರ ಮಕ್ಕಳ ಪ್ರಗತಿಗೆ ಅಡ್ಡ ಬಂದಿರುವದು ಬಿಳಿಯರ ವಿರೋಧವಲ್ಲ. ತಮ್ಮ ತಮ್ಮಲ್ಲಿಯ ಒಳ-ಜಗಳ, ಒಳ-ಭೇದ, ಗುಂಪು, ಪಂಗಡಗಳು, ನಿಗ್ರೋಗಳು ಒಟ್ಟಾಗಿ ಮಾಡಿದ ಒಂದೂ ಸಂಘಟನೆಯುಳ್ಳ ವಿಧಾಯಕ ಸಂಸ್ಥೆಯಿಲ್ಲ, ಕೆಲವು ಪಂಗಡಗಳಂತೂ ಉಗ್ರ ವೈರಿಗಳಂತೆ ಒಂದನ್ನೊಂದು ಕಂಡರೆ ಕೆಂಡ ಕಾರುತ್ತವೆ. ಈ ವಿರೋಧಿಗಳಲ್ಲಿ ಆಗಾಗ ಚಕಮಕಿ ನಡೆದು ದೊಂಬಿ, ಕೊಲೆಗಳು ಆಗುವುದುಂಟು.

ಶಿಕಾಗೋದಲ್ಲಿ ಕರಿಯ ಮುಸಲ್ಮಾನರ (black muslims) ಪಂಗಡವೊಂದು ಭರದಿಂದ ಬೆಳೆಯುತ್ತಿದೆ. ಸಾವಿರಾರು ನಿಗ್ರೋಗಳು ಇದರ ಸದಸ್ಯರಿದ್ದಾರೆ. ಜಗತ್ತಿನ ಭಾರಿ-ತೂಕ-ಚಾಂಪಿಯನ್ (heavy-weight-champion) ಕೆಸಿಯಸ್ ಕ್ಲೇ (Cassius Clay) ಈ ಸಂಸ್ಥೆಯ ಪ್ರಮುಖ ಸದಸ್ಯ, ಇತ್ತೀಚಿಗೆ ಇಸ್ಲಾಂ ಧರ್ಮ ಸ್ವೀಕರಿಸಿ ಮಕ್ಕಾ, ಮದೀನಾಗಳಿಗೆ ಹೋಗಿ ಬಂದಿದ್ದಾನೆ. ಈಗವನ ಹೊಸ ಹೆಸರು ಮಹಮ್ಮದ ಎಂದಿದೆ. ಯಾರಾದರೂ ಅವನನ್ನು ಮರೆತು ಹಿಂದಿನ ಹೆಸರಿನಿಂದ ಕರೆದರೆ ಕೆಂಡ ಕಾರುತ್ತಾನೆ. ಇದೇ ಜಟ್ಟಿ ಹಿಂದೆ ಸೈನ್ಯ ಸೇರಲು ಹೋದಾಗ, ಮಾನಸಿಕ ಬೆಳವಣಿಗೆ (I.Q) ಕಡಿಮೆಯಿದೆಯೆಂದು ಸೇರಿಸಿಕೊಳ್ಳಲಿಲ್ಲವಂತೆ! ಇದು ನಿಜವಿರಬಹುದೆಂದು ಆತನ ವರ್ತನೆ ನೋಡಿದ, ಕೇಳಿದ ಯಾರೂ ನಂಬುವಂತಿದೆ. ಆತನಲ್ಲಿ ಕ್ರೀಡಾಪಟುವಿನ ವೃತ್ತಿ (sportsman spirit) ಎಳ್ಳಷ್ಟೂ ಇಲ್ಲ. ತನ್ನ ಪ್ರತಿಸ್ಪರ್ಧಿಗಳನ್ನು ಕರಡಿ, ಕತ್ತೆ, ನಾಯಿ, ಕೋತಿ ಎಂದು ಸಂಬೋಧಿಸುತ್ತಾನೆ. ತನ್ನ ಶಕ್ತಿಯಲ್ಲಿ ಅಪರಿಮಿತ ವಿಶ್ವಾಸ ಆತನಿಗೆ. ತನ್ನ ಬಗ್ಗೆ ತಾನೇ ಕವಿತೆಗಳನ್ನು ಕಟ್ಟಿ ಹಾಡುತ್ತಿರುತ್ತಾನೆ. ಅಲ್ಲಾನ ಕೃಪೆ ತನ್ನ ಮೇಲಿರುವದರಿಂದ ತನಗೆಂದೂ ಸೋಲು ಬಾರದು ಎಂಬ ದೃಢವಾದ ನಂಬಿಕೆ ಈತನದು. ಈತ ಇತ್ತೀಚೆಗೆ ನಿಧನ ಹೊಂದಿದ.

ಈ ಪಂಗಡಕ್ಕೂ ನ್ಯೂಯಾರ್ಕಿನ ಇನ್ನೊಂದು ದೇವರ ಮಕ್ಕಳ ಪಂಗಡಕ್ಕೂ ಹತ್ತಿದರೆ ಹರಿಯದ ದ್ವೇಷ. ಈ ಎರಡನೇ ಪಂಗಡದವನೊಬ್ಬನು ಶಿಕಾಗೋ ಪಂಗಡದ ಒಬ್ಬನ ಕೊಲೆ ಮಾಡಿದನಂತೆ. ಸರಿ, ಶಿಕಾಗೋದಲ್ಲಿ ನಡೆಯಲಿದ್ದ ಮುಸ್ಲಿಂ ವಾರ್ಷಿಕ ಧರ್ಮಸಮ್ಮೇಳನಕ್ಕೆ ಮುಯ್ಯಿ ತೀರಿಸಿಕೊಳ್ಳಲು ಸಶಸ್ತ್ರರಾಗಿ ಈ ಜನ ಧಾವಿಸಿದರು.

ಕರಿಯ ಮುಸಲ್ಮಾನರ ನಾಯಕರನ್ನು ಸಂರಕ್ಷಿಸಬೇಕಾದರೆ ಅಂಗರಕ್ಷಕರ ಪಡೆಯನ್ನೇ ಅವರ ಸುತ್ತಲೂ ಕೆಲ ದಿನ ಪಹರೆಗೆ ಇಡಬೇಕಾಯಿತು. ಅಮೇರಿಕೆಯ ವರ್ತಮಾನಪತ್ರಗಳು ಇಂತಹ ಘಟನೆಯನ್ನು ರೋಮಾಂಚಕಾರವಾಗಿ ವರ್ಣಿಸುತ್ತವೆ.

ಕ್ರೈಸ್ತ ನಿಗ್ರೋಗಳಲ್ಲೂ ಹತ್ತಾರು ಉಪಪಂಗಡಗಳಿವೆ. ಮೈಬಣ್ಣದ ಮೇಲೂ ಅನೇಕ ಗುಂಪುಗಳಿವೆ. (ಶ್ವೇತ-ನಿಗ್ರೋ-ಮಿಶ್ರ-ಸಂತತಿ ಅನೇಕ ಬಣ್ಣ, ಆಕಾರ, ರೂಪಗಳಿಂದ ಕೂಡಿದೆ!) ಕೆಲವರು ಕಾಣಲು ಶ್ವೇತವರ್ಣಿಯರಂತೇ ಇರುತ್ತಾರೆ. ಆದರೆ ಅವರ ಮಕ್ಕಳ ಮೈಯ ಬಣ್ಣವು ನಾಲ್ಕು ವಿಧದಿಂದ ಕೂಡಿರಬಹುದು. (ಬಿಳಿ, ನಸುಗೆಂಪು, ಕಂದು, ಕಪ್ಪು) ಮೈಬಣ್ಣ ಬಿಳಿಯದಿದ್ದ ನಿಗ್ರೋಗಳು ಕರಿಯ ನಿಗ್ರೋಗಳನ್ನು ಕೀಳೆಂದು ತಿಳಿಯುತ್ತಾರೆ. ಒಮ್ಮೊಮ್ಮೆ ಮೈಬಣ್ಣ ಅಚ್ಚ ಬಿಳಿಯದಿದ್ದ ಮಗುವಿಗೆ ಗುಂಗುರುಗೂದಲು ಬಂದು ಅದರ ಪೂರ್ವಜರ ಪರಿಚಯ ಚೆನ್ನಾಗಿ ಆಗಿಬಿಡುತ್ತದೆ! ಇಂದಿನ ಕೃತ್ರಿಮ ಗುಂಗುರು ಕೂದಲಿನ ಯುಗದಲ್ಲಿ ಇದೂ ಕೂಡ ಕ್ಷಮ್ಯವಾಗಬಹುದು. ಆತ ಏನೂ ಆತಂಕವಿಲ್ಲದೇ ಬಿಳಿಯನೆನ್ನಿಸಿಕೊಳ್ಳಬಹುದು. ಆದರೆ ಅವನಿಗೆ ಕರಿಯ ಮಗುವಾದಾಗ ಮಾತ್ರ ಹೆಚ್ಚಿನ ತೊಂದರೆಗಿಟ್ಟುಕೊಳ್ಳುತ್ತದೆ.

* * *

ಅಮೇರಿಕೆಯಲ್ಲಿ ಭಾರತೀಯರು

ಬಹಳಷ್ಟು ಭಾರತೀಯ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ವಿದೇಶಕ್ಕೆ (ಇತ್ತೀಚಿಗೆ ಅಮೇರಿಕಕ್ಕೆ ಹೋಗುವವರ ಸಂಖ್ಯೆ ಹೆಚ್ಚಿದೆ) ಕಳಿಸಲು ಒಪ್ಪುವುದಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಅಮೇರಿಕೆಗೆ ಹೋದವರು ಭಾರತಕ್ಕೆ ತಿರುಗಿ ಬರುವುದೇ ಇಲ್ಲ. ಬಂದರೂ ಭಾರತದಲ್ಲಿರಲು ಅವರ ಮನಸ್ಸು ಒಪ್ಪದೇ ತಿರುಗಿ ಅಮೇರಿಕೆಗೇ ಧಾವಿಸುತ್ತಾರೆ, ಎಂದು ಅವರ ಕಲ್ಪನೆ. ಈ ಮಾತಿನಲ್ಲಿ ಬಹಳ ಸತ್ಯಾಂಶವಿದೆ ಎಂದು ಭಾರತೀಯ ಮತ್ತು ಅಮೇರಿಕನ್ ಸರಕಾರದ ಅಂಕಿಸಂಖ್ಯೆಗಳಿಂದ ಕಂಡುಕೊಳ್ಳಬಹುದು. ಆದರೆ ಅಮೇರಿಕದಲ್ಲಿ ಶಿಕ್ಷಣ ಪಡೆದ ಅನೇಕ ಭಾರತೀಯರು ಮರಳಿ ಅಮೇರಿಕೆಗೆ ಹೋಗಲು ಹಾತೊರೆಯವದಕ್ಕೆ ಊಹಾಪೋಹಗಳು ಅನೇಕ. ಪಾಲಕರು ಶ್ವೇತ ಯಾಂಕಿ ಕುಮಾರಿಗೆ ಮಗ ಮನಸೋತಿದ್ದಾನೆಂದು ನಂಬುತ್ತಾರೆ. ಗಾಂಧಿ-ಟೊಪ್ಪಿಗೆಯ ದೇಶಭಕ್ತರು, ಇಂದಿನ ಜನಾಂಗದಲ್ಲಿ ದೇಶಾಭಿಮಾನ ಕಡಿಮೆಯಾಗಿದೆಯೆಂದು ಸಾರುತ್ತಾರೆ. ಅಮೇರಿಕೆಯಲ್ಲಿ ಕಡಿಮೆ ಕೆಲಸಕ್ಕೆ ದೊರೆಯುವ ಹೇರಳ ಪಗಾರಕ್ಕಾಗಿ ಭಾರತೀಯರು ಅಲ್ಲಿ ಧಾವಿಸುತ್ತಾರೆಂದು ವ್ಯಾಪಾರಿ-ಬುದ್ಧಿಯವರು ನಂಬುತ್ತಾರೆ. ಅಲ್ಲಿಯ ಸುಖಜೀವನಕ್ಕಾಗಿ ಓಡಿಹೋಗುತ್ತಾರೆಂದು ಸಾಮಾನ್ಯರು ಭಾವಿಸುತ್ತಾರೆ. ಆ ದೇಶದಲ್ಲಿ ನಾಲ್ಕುವರ್ಷಗಳನ್ನು ಕಳೆದ ತರುವಾಯ, ನಾನು ಇವಾವ ಊಹೆಗಳಲ್ಲೂ ಹೆಚ್ಚಿನ ಹುರುಳು ಇಲ್ಲವೆಂದು ಹೇಳಬಲ್ಲೆ.

ಅಮೇರಿಕೆಗೆ ಹೋಗುವ ವಿದ್ಯಾರ್ಥಿಗಳನ್ನು ಸಾಮಾನ್ಯವಾಗಿ ಎರಡು ಭಾಗವಾಗಿ ವಿಂಗಡಿಸಬಹುದು. ಮೊದಲನೇ ಗುಂಪು ನವಯುವಕರದು, ಇವರು ಅಮೇರಿಕೆಯ 'ಹಾಲಿವುಡ್' ಜಗತ್ತು, ಅಲ್ಲಿಯ ಸುಕೋಮಲೆಯರ ಜಗತ್ತು, ಅಲ್ಲಿಯ ಐಶ್ವರ್ಯ, ಅಲ್ಲಿಯ ಸುಖ-ಸೌಕರ್ಯಗಳ ಕತೆ ಕೇಳಿ, ಅವನ್ನು ಕಣ್ಣಾರೆ ಕಂಡು ಅನುಭವಿಸಲು ತವಕಿಸಿ ಹೋದವರದು. ಅಮೇರಿಕೆ ಜಗತ್ತಿನಲ್ಲಿ ಇಂದು ಮುಂದುವರಿದ ರಾಷ್ಟ್ರವಾಗಿದ್ದರೆ, ಅದರ ಏಳ್ಗೆಗೆ ಕಾರಣವೇನೆಂದು ಅರಿಯಲು ಹೋದವರದು ಎರಡನೇ ಗುಂಪು. ಇವರಲ್ಲಿ ಹೆಚ್ಚಿನ ಜನ ವಿದ್ಯಾಭಿಲಾಷಿಗಳಾಗಿ ತಮ್ಮ ದೇಶದಲ್ಲಿಲ್ಲದ, ದೊರೆಯದ ವಿಶೇಷ ತರಬೇತಿಗೆಂದು ಇಲ್ಲಿ ಬಂದವರು; ತಿರುಗಿ ತಮ್ಮ ದೇಶಕ್ಕೆ ಹೋಗಿ ಕೈಲಾದ ಸೇವೆ ಸಲ್ಲಿಸಬೇಕು ಎನ್ನುವ ವಿಚಾರದವರು. ಇವರು ಅಮೇರಿಕೆಗೆ ಬಂದರೂ ತಮ್ಮ ಭಾರತೀಯ ಸಂಸ್ಕಾರವನ್ನು ಮರೆಯುವುದಿಲ್ಲ. ಅಲ್ಲಿಯ ಕುಡಿತ, ಕುಣಿತಗಳಿಗೆ ಬಲಿಯಾಗದೇ ಸಂಯಮದಿಂದಲೇ ತಮ್ಮ ಓದು ನಡೆಸುತ್ತಾರೆ. ವಿದ್ಯಾಭ್ಯಾಸದಲ್ಲಾಗಲೀ, ಸಂಶೋಧನೆಯಲ್ಲಾಗಲೀ ಅಮೇರಿಕನ್ನರನ್ನು ಇವರು ಸಹಜವಾಗಿ ಮೀರಿಸುತ್ತಾರೆ. ಇಂಥವರ ಬಗ್ಗೆ ಅವರ ದೇಶಕ್ಕೆ ಇರುವ ಅಭಿಮಾನಕ್ಕಿಂತ ಇವರಿಗೆ ತಮ್ಮ ದೇಶಾಭಿಮಾನ ತುಂಬಿತುಳುಕುತ್ತಿರುತ್ತದೆ. ಅಮೇರಿಕೆಯಲ್ಲಿ ಯಾವ ವಿಜ್ಞಾನಿ, ಅಥವಾ ಸಂಶೋಧಕರನ್ನೂ ಇವರು ಸರಿಗಟ್ಟಬಲ್ಲರು, ಅಮೇರಿಕೆಯಲ್ಲಿ ಎಷ್ಟೋ ಭಾರತೀಯರು ಉಚ್ಚ ಸ್ಥಾನದಲ್ಲಿದ್ದಾರೆ, ನಾನಿದ್ದ ವಿಶ್ವವಿದ್ಯಾಲಯದಲ್ಲಿ ಎಂಟು ಹತ್ತು ಭಾರತೀಯರಿದ್ದರು. (ವಿಶ್ವವಿದ್ಯಾಲಯದಲ್ಲೇ ಹೆಚ್ಚಿನ ಸಂಬಳ ಪಡೆಯುತ್ತಿದ್ದವರು ಮೈಸೂರಿನ ಡಾ॥ ಸುದರ್ಶನರು, ಖ್ಯಾತಿವೆತ್ತ ವಿಜ್ಞಾನಿಗಳವರು) ಹೊಸ ಭಾರತ ಕಟ್ಟಬೇಕೆಂದು ಈ ಎರಡನೇ ಗುಂಪು ತುಂಬ ಕನಸು ಕಾಣುವುದು. ಅಂತೆಯೇ ಅಮೇರಿಕೆಯಲ್ಲಿ ವಾಸಿಸಲು ಹಲವು ಆಕರ್ಷಣೆಗಳಿದ್ದರೂ ಅವುಗಳನ್ನೆಲ್ಲ ತುಳಿದು ತನ್ನ ದೇಶ, ತಮ್ಮ ಜನರೆಂದು ಮಾತೃಭೂಮಿಗೆ ಮರಳುತ್ತಾರೆ. ಧನಸಂಗ್ರಹವಾಗಲಿ, ಅಧಿಕಾರದಾಹವಾಗಲಿ ಇವರಲ್ಲಿ ಹಲವರಿಗೆ ಇಲ್ಲ. ತಾನು ಕಲಿತದ್ದರ ಪೂರ್ಣ ಲಾಭ ತನ್ನ ದೇಶಕ್ಕೆ ಆಗಬೇಕೆಂದು ಹಂಬಲವಿರುತ್ತದೆ ಮತ್ತು ಇದಕ್ಕಾಗಿ ಯಾವ ಅಡತಡೆಯೂ ಇರಬಾರದು ಎಂಬ ನಿರೀಕ್ಷೆಯೂ ಇರುತ್ತದೆ. ತನ್ನ ಶ್ರಮ ಮತ್ತು ತ್ಯಾಗಗಳಿಗೆ ಯೋಗ್ಯ ಅವಕಾಶವನ್ನು ಮಾತ್ರ ಇವರು ಬಯಸುವರು.

ಕನಸು ಕಾಣುತ್ತಿದ್ದವರು ಕಣ್ಣನ್ನು ತೆರೆದಾಗ ಭಾರತದಲ್ಲಿರುತ್ತಾರೆ. ತಾವು ನೋಡಿದ ಮೂರು ನಾಲ್ಕು ವರ್ಷಗಳ ಹಿಂದಿನ ಭಾರತಕ್ಕೂ ಈಗಿನ ಭಾರತಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಅದೇ ಬಡತನ, ಅದೇ ನಿರಕ್ಷರತೆ, ಅದೇ ಅಜ್ಞಾನ, ಅದೇ ಪಕ್ಷಪಾತ, ಅದೇ ಜಾತೀಯತೆ. ಸರಕಾರ, ಜನತೆ, ಸಮಾಜ ಎತ್ತ ಹೊರಟಿದೆಯೆಂದು ಯಾರಿಗೂ ತಿಳಿಯದು. ಸಾಹುಕಾರರು ಲಕ್ಷ್ಮೀದೇವಿಯನ್ನು ಸೆರೆಹಿಡಿದಿದ್ದಾರೆ. ಬಡವರು ಕಡು ಬಡವರಾಗುತ್ತಿದ್ದಾರೆ. ಈ ಜನಕೋಟಿಯಲ್ಲಿ ಅಮೇರಿಕೆಯಲ್ಲಿ ಅಮೇರಿಕೆಯಿಂದ ಕಲಿತು ಬಂದ ತರುಣನೂ ಒಬ್ಬನಾಗುತ್ತಾನೆ. ನೌಕರಿ ಹುಡುಕುತ್ತಿರುವ ಲಕ್ಷಗಟ್ಟಲೆ ತರುಣರಲ್ಲಿ ಈತನೂ ಒಬ್ಬ. ಇವನಿಗೆ ಯೋಗ್ಯವೆನಿಸುವ ನೌಕರಿ ಎಲ್ಲಿಂದ ಬರಬೇಕು? ಇಂಥ ವಿದೇಶಿ ಶಿಕ್ಷಣ ಪಡೆದವರಿಗೆಂದು ದೊಡ್ಡ ಮನಸ್ಸು ಮಾಡಿ ನಮ್ಮ ಸರಕಾರ (scientists' pool) ವಿಜ್ಞಾನಿಗಳ ಕೇಂದ್ರವೆಂಬ ಧರ್ಮಸತ್ರವನ್ನು ತೆರೆದಿದ್ದಾರೆ. ಇದರಲ್ಲಿ ಸೇರ್ಪಡೆಯಾದವರಿಗೆ ಅವರವರ ಶೈಕ್ಷಣಿಕ ಅರ್ಹತೆಗನುಸಾರವಾಗಿ ನಾಲ್ಕನೂರೋ

ಐದುನೂರೋ ರೂಪಾಯಿಗಳ 'ಅಶನಾರ್ಥ' ದಯಪಾಲಿಸುತ್ತಾರೆ. ಸಾಲದ್ದಕ್ಕೆ ಆತ ವಿಶೇಷ ತರಬೇತಿ ಪಡೆದ ವಿಷಯಕ್ಕೆ ಯಾವ ರೀತಿಯಿಂದಲೂ ಸಂಬಂಧವಿಲ್ಲದ ಸಂಸ್ಥೆಯೊಂದರಲ್ಲಿ ಯಾವದೋ ಕಲಸ ಕೊಡಿಸುತ್ತಾರೆ. ಆತನ ಮೇಲಧಿಕಾರಿ ಕೆಳದರ್ಜೆಯಿಂದ ಮೇಲೇರುತ್ತ ಏರುತ್ತ ಈಗಷ್ಟೆ ಉಚ್ಚಸ್ಥಾನ ಪಡೆದಿರುತ್ತಾರೆ. ಆಧುನಿಕ ವಿಜ್ಞಾನದ ಪ್ರಗತಿಯ ಬಗ್ಗೆ ಆತನಿಗೆ ಏನೇನೂ ಗೊತ್ತಿಲ್ಲ (ಗೊತ್ತಿರಬೇಕಾದ ಕಾರಣವೂ ಇಲ್ಲ). ವಯಸ್ಸು ಸಿನಿಯಾರಿಟಿಗಳಷ್ಟೆ ಮಹತ್ವದವು. ಮುದಿ ಕತ್ತೆ ಎಂದೂ ಕುದುರೆಯಾಗದು! ಎಂಬ ತಿಳುವಳಿಕೆ ನಮ್ಮ ಸರಕಾರಕ್ಕಿಲ್ಲ. ಇಂತಹ ಮೇಲಧಿಕಾರಿಗಳು ಈ ಇಪ್ಪತ್ತು ವರ್ಷಗಳಲ್ಲಿ ಒಂದು ಚಿಕ್ಕ ಹೊಸ ವಿಷಯ ತಿಳಿಯುವ ಪ್ರಯತ್ನ ಮಾಡಿರುವುದಿಲ್ಲ. ಆದರೆ ಅರವತ್ತು ರೂಪಾಯಿಯಿಂದ ನೌಕರಿ ಪ್ರಾರಂಭಿಸಿದ ಅವರಿಗೆ ಈ 'ಚೋಟುದ್ದದ ಹುಡುಗ'ನಿಗೆ ಅಮೇರಿಕೆಯಲ್ಲಿ ಮೂರು ನಾಲ್ಕು ವರ್ಷ ಇದ್ದು ಮಜಾ ಮಾಡಿ. ಯಾವದೋ 'ಸರ್ಟಿಫಿಕೇಟ' (ಅದು 'Doctorate' ಇರಬಹುದು) ಪಡೆದು ಬಂದದ್ದಕ್ಕೆ ಸರಕಾರ ಐದು ನೂರೋ ಆರು ನೂರೋ ಮಾಸಾಶನ ಕೊಡುವುದು ಎಳ್ಳಷ್ಟೂ ಒಪ್ಪಿಗೆಯಿಲ್ಲ. ಅದರಿಂದ ತಮಗೆಲ್ಲ ಅನ್ಯಾಯವಾಗುತ್ತಿದೆ ಎಂಬ ಮತ್ಸರ ಬೇರೆ. ಹೀಗಾಗಿ ಈ ಆಗುಂತುಕನಿಗೆ ಯಾವುದೇ ಸೌಕರ್ಯವಾಗಲಿ ಸಹಕಾರವಾಗಲಿ ದೊರೆಯದು. ಬೆಳಿಗ್ಗೆ ವೇಳೆಗೆ ಸರಿಯಾಗಿ ಆಫೀಸಿಗೊ, ಸಂಸ್ಥೆಗೊ ಬಂದು ಸಹಿ ಹಾಕಿ ಸಂಜೆ ವೇಳೆ ಸರಿಯಾಗಿ ಮನೆಗೆ ಹೋಗುವುದರಲ್ಲೇ ತೃಪ್ತಿ ಪಡೆಯಬೇಕು ಈತ.

ಈ ನರಕವೇದನೆಯಿಂದ ಮುಕ್ತಿ ಪಡೆಯೋಣವೆಂದು ಇನ್ನೂ ಹಲವಾರು ಕಡೆ ಅರ್ಜಿ ಸಲ್ಲಿಸುತ್ತಾನೆ. ಆದರೆ ಪರಿಚಯ, ವಶೀಲಿಗಳಿಲ್ಲದೇ ಎಲ್ಲೂ ನೌಕರಿ ಸಿಗದೆಂದು ಶೀಘ್ರದಲ್ಲಿಯೇ ಕಂಡುಕೊಳ್ಳುತ್ತಾನೆ. ದೊಡ್ಡ ಅಧಿಕಾರಿಯೊಬ್ಬನನ್ನು ಮಾವನನ್ನಾಗಿ ಪಡೆದರೆ ಒಳ್ಳೆಯ ಸ್ಥಾನ ದೊರೆಯುತ್ತಿತ್ತೊ ಏನೋ! ಆದರೆ ಈಗಾಗಲೇ ಸಂಸಾರ ಕಟ್ಟಿಕೊಂಡಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಿಂದಿರುಗಿ ಬರುವಾಗ ಉತ್ಸಾಹದಿಂದ ಪುಟಿಯುತ್ತಿದ್ದ ಕಾರಂಜಿ ಒಂದು ವರ್ಷದೊಳಗೆ ಮಾಯವಾಗಿಬಿಡುತ್ತದೆ. ಇದೆಲ್ಲ ಸಮಸ್ಯೆಗಳನ್ನು ನಿರ್ಲಕ್ಷಿಸಿದವ, ಭಾರತದಲ್ಲೆ ಉಳಿದುಕೊಳ್ಳುತ್ತಾನೆ. ತನ್ನ ವಿದ್ಯೆ ಬುದ್ಧಿ ಮತ್ತು ಗಳಿಕೆಗೆ ಹೆಚ್ಚಿನ ಅವಕಾಶ ಬಯಸುವವ ಮರಳಿ ಯಾಂಕಿ-ದೇಶಕ್ಕೆ ಹೋಗಿಬಿಡುತ್ತಾನೆ. ಬುದ್ಧಿಮತ್ತೆಗೆ ವಿಶೇಷ ಸ್ಥಾನ ಕೊಡುವ ಅಮೇರಿಕನ್ನರು ಇಂತಹ ವಿಜ್ಞಾನಿಗಳು ಬರುತ್ತಾರೆಂದರೆ ಎಲ್ಲಿಲ್ಲದ ಹಿಗ್ಗಿನಿಂದ ಬರಮಾಡಿಕೊಳ್ಳುತ್ತಾರೆ. ಇವರಿಗೆ ಎಲ್ಲ ತರದ ಸೌಕರ್ಯಗಳನ್ನು ಕೊಡಮಾಡುತ್ತಾರೆ. ನೌಕರಿ ಪ್ರಾರಂಭಿಸುವ ಮೊದಲೇ ಒಂದು ತಿಂಗಳ ಸಂಬಳವನ್ನು ಮುಂಗಡವಾಗಿ ಒದಗಿಸುತ್ತಾರೆ. ಎಷ್ಟೊಂದು ಅಂತರ-ತಾನು ಬಯಸಿ ಬಯಸಿ ಮರಳಿ ಹೋದ ತನ್ನ ದೇಶಕ್ಕೆ ಮತ್ತು ನಿರುಪಾಯನಾಗಿ ಮರಳಿದ ಈ ಸಾಕುದೇಶಕ್ಕೆ!

ಹೀಗೆ ಅಮೇರಿಕೆಗೆ ತಿರುಗಿ ಹೋದ ಎಷ್ಟೋ ಜನ ಅಮೇರಿಕನ್ ಸಂಸ್ಕೃತಿಯನ್ನು ಮನಸಾ ಸ್ವೀಕರಿಸುವದಿಲ್ಲ. ಆದರೆ ಪ್ರತಿಯೊಂದು ವಿಧದಲ್ಲೂ ಭಿನ್ನವಾದ ವಾತಾವರಣದಲ್ಲಿ ಯಾವಾಗಲೂ ಭಾರತೀಯನಾಗಿರುವುದು ಸಾಧ್ಯವಿಲ್ಲ. ಈ ವಾತಾವರಣದಲ್ಲಿ ಬೆಳೆಯುತ್ತಿರುವ ಮಕ್ಕಳು ಸ್ವಾಭಾವಿಕವಾಗಿಯೇ ಅಮೇರಿಕನ್ ಸಂಸ್ಕೃತಿಯನ್ನು ಸ್ವೀಕರಿಸುತ್ತಾರೆ. ಅಮೇರಿಕನ್ ವಿದ್ಯಾರ್ಥಿಗಳ ಸ್ನೇಹ ಬೆಳೆಸುತ್ತಾರೆ. 'ಡೇಟಿಂಗ್' ಪಾರ್ಟಿಗಳಲ್ಲಿ

ಭಾಗವಹಿಸುತ್ತಾರೆ. ಅವರ ತಂದೆ-ತಾಯಿಗಳೇನೋ ಇದನ್ನು ವಿರೋಧಿಸಬಹುದು, ಆಗ ಜೊತೆಯ ಸಂಗಡಿಗರಿಲ್ಲದೇ ಮಕ್ಕಳು ಚಡಪಡಿಸಬಹುದು. ಮಕ್ಕಳು ಬೆಳೆದಂತೆ ಸಮಸ್ಯೆಗಳೂ ಬೆಳೆಯುತ್ತವೆ. ಅತ್ತ ಅಮೇರಿಕನ್‌ರೂ ಆಗುವಂತಿಲ್ಲ. ಇತ್ತ ಭಾರತೀಯರಂತೆ ಬಾಳುವ ಅವಕಾಶವೂ ಇಲ್ಲ. ಬೆಳೆದ ಮಗಳಿದ್ದರಂತೂ ತೀರಿಹೋಯಿತು. ಅಮೇರಿಕನ್ ಕುಮಾರಿಯರಂತೆ ತನ್ನ ಪ್ರಿಯತಮನನ್ನು ಆರಿಸಿಕೊಳ್ಳುವ ಅಧಿಕಾರವಿಲ್ಲ ಆಕೆಗೆ. ಭಾರತೀಯ ಪದ್ಧತಿಯಂತೆ ಆಕೆಗೆ ವರನನ್ನು ದೊರಕಿಸಿಕೊಡುವ ಸಾಮರ್ಥ್ಯವಿಲ್ಲ ಆಕೆಯ ತಂದೆಗೆ. ಇದು ಹೆಚ್ಚಿನ ಅಸಂತೋಷಕ್ಕೆ ಕಾರಣವಾಗುತ್ತದೆ. ಮದುವೆಯಾಗದ ಅಮೇರಿಕನ್ ಯುವತಿಯನ್ನು ಮೆಚ್ಚದ ಭಾರತೀಯನ ಗೋಳಂತೂ ಹೇಳತೀರದು. ತನ್ನ ಹತ್ತಾರು ಗೆಳೆಯರಿಗೆ ಪತ್ರ ಬರೆದು, ಕಾಡಿಸಿ, ಪೀಡಿಸಿ, ತನಗಾಗಿ ಕನ್ಯೆಯೊಬ್ಬಳನ್ನು ಹುಡುಕಲು ಹೇಳುತ್ತಾನೆ. ಕನ್ಯೆ ಒಪ್ಪಿದರೆ ಹೇಗೋ ತಂದೆ-ತಾಯಿಗಳಿಗೆ ಮನವೊಲಿಸಿ ಆಕೆಯನ್ನು ಅಮೇರಿಕೆಗೆ ಕಳಿಸುವಂತೆ ಪ್ರೋತ್ಸಾಹಿಸಿ ಅಲ್ಲಿಯೇ ಮದುವೆಯಾಗುತ್ತಾನೆ. ಇಲ್ಲವೇ ಕೈಯಲ್ಲಿ ನಾಲ್ಕು ಕಾಸು ಉಳಿದರೆ ಒಂದೆರಡು ತಿಂಗಳಿಗಾಗಿ ಭಾರತಕ್ಕೆ ಬಂದು ಮದುವೆಯಾಗಿ ಪತ್ನಿಯೊಡನೆ ಮತ್ತೆ ಮರಳಿ ಅಮೇರಿಕೆಗೆ ಹೋಗುತ್ತಾನೆ.

ಇವೆಲ್ಲ ಕಾಲ್ಪನಿಕ ವಿಚಾರಗಳಲ್ಲ. ಅಮೇರಿಕೆಯಲ್ಲಿರುವ ಅಲ್ಲಿಂದ ಬಂದು, ತಿರುಗಿ ಹೋಗಿರುವ ಅನೇಕ ಭಾರತೀಯರನ್ನು ಭೆಟ್ಟಿಯಾಗಿ, ಚರ್ಚಿಸಿ ಕಂಡುಕೊಂಡ ಸತ್ಯಾಂಶಗಳು.

ಕೆಲವು ಭಾರತೀಯರ ಅನುಭವ-ಕಥನಗಳನ್ನು ಕೇಳಿದರೆ ಕಳವಳವೆನಿಸದೇ ಇರದು. ಸಕ್ಸೇನಾ ದಂಪತಿಗಳಿಬ್ಬರೂ ಡಾಕ್ಟರರು. ಉಚ್ಚ ಪದವಿ ಪಡೆದ ವಿದ್ವಾಂಸರಲ್ಲದೇ ತಮ್ಮ ವೃತ್ತಿಯಲ್ಲಿ ಒಳ್ಳೇ ಪರಿಶ್ರಮವಿದ್ದವರು. ವಿದೇಶೀಯ ಶಿಕ್ಷಣ ಪಡೆದ ನಂತರ ತಮ್ಮ ದೇಶಕ್ಕೆ ಮರಳಿ ಇಲ್ಲಿಯೇ ವೃತ್ತಿಯನ್ನು ಮುಂದುವರಿಸುವ ವಿಚಾರ ಇಟ್ಟುಕೊಂಡಿದ್ದರು. ಎರಡು ವರ್ಷಗಳವರೆಗೆ ವಿಶ್ವಪ್ರಯತ್ನ ಮಾಡಿದರೂ "ಸಾಯಿಂಟಿಸ್ಟ್ ಪೂಲಿ'ನ 'ಪೋಟಗಿ'ಯ ಹೊರತು ಬೇರೆ ಇನ್ನಾವ ಅವಕಾಶವೂ ದೊರೆಯಲಿಲ್ಲ ಅವರಿಗೆ. ಹತಾಶರಾಗಿ ಪತಿ ಮೊದಲು ಅಮೇರಿಕೆಗೆ ಮರಳಿದರು. ಒಂದು ವರ್ಷದ ನಂತರ ಪತ್ನಿಯನ್ನು ಕರೆಸಿಕೊಂಡರು. ತಮ್ಮ ದೇಶದಲ್ಲಿ ದೊರೆಯದ ಮನ್ನಣೆ, ಗೌರವ, ಧನ ಅವರಿಗೆ ವಿದೇಶದಲ್ಲಿ ದೊರೆಯುತ್ತಿದೆ. ಇಬ್ಬರೂ ಕೈತುಂಬ ಗಳಿಸುತ್ತಿದ್ದಾರಲ್ಲದೇ, ಸಾಕಷ್ಟು ಪ್ರಸಿದ್ಧಿ ಪಡೆದಿದ್ದಾರೆ. ಅವರಿಗೆ ಇಬ್ಬರು ಮಕ್ಕಳು, ಮಕ್ಕಳ ಸಲುವಾಗಿಯಾದರೂ ಭಾರತಕ್ಕೆ ಬರಲು ಅವರು ಹಂಬಲಿಸುತ್ತಾರೆ. ಆದರೆ ತಮ್ಮ ಹಿಂದಿನ ಕಹಿ ಅನುಭವಗಳನ್ನು ನೆನೆದು ಹಿಂದೆಗೆಯುತ್ತಾರೆ ಅಷ್ಟೆ.

ಡಾ। ರಾನಡೆಯವರು ಮೊದಲಿನಿಂದಲೂ ಉತ್ತಮ ವಿದ್ಯಾರ್ಥಿ. ಎಂದೂ ಪ್ರಥಮ ಸ್ಥಾನವನ್ನು ಬಿಟ್ಟುಕೊಟ್ಟವರಲ್ಲ. ಅಮೇರಿಕೆಯಲ್ಲೂ ಉಚ್ಚವ್ಯಾಸಂಗ ಕೈಕೊಂಡು ಪಿಎಚ್.ಡಿ.ಡಿಗ್ರಿ ಪಡೆದರು. ಭಾರತಕ್ಕೆ ಹಿಂದಿರುಗುವ ಹೆಚ್ಚಿನ ಆತುರ ಅವರಲ್ಲಿತ್ತು. ಆದರೆ ಒಳ್ಳೇ ನೌಕರಿ ಸಿಗದಿದ್ದರೆ ಎಂದೂ ಆಧ್ಯೆರ್ಯವಿತ್ತು. ಅಂತೆಯೇ ತನ್ನದೆಂದು ಅಭಿಮಾನ ಪಡುತ್ತಿದ್ದ ತಾನು ಕಲಿತ ವಿಶ್ವವಿದ್ಯಾಲಯದಲ್ಲಿ ಒಂದು ಲೆಕ್ಚರರ ಸ್ಥಾನಕ್ಕೆ ಅರ್ಜಿ ಹಾಕಿದರು. ನೌಕರಿ ಕೊಡುವುದಂತೂ ಇರಲಿ, ಬರೆದ ಪತ್ರಕ್ಕೆ ಉತ್ತರವನ್ನು

ಕೊಡುವಷ್ಟು ಕೂಡ ಸೌಜನ್ಯವಿರಲಿಲ್ಲ ಆ ವಿದ್ಯಾಲಯದ ಅಧಿಕಾರಿಗಳಿಗೆ! ಅಲ್ಲಿ ಇಲ್ಲಿ ಭಾರತದ ಅನೇಕ ವಿಶ್ವವಿದ್ಯಾಲಯಗಳಿಗೂ ಸಂಸ್ಥೆಗಳಿಗೂ ಅರ್ಜಿ ಸಲ್ಲಿಸಿ ಬೇಸತ್ತರು. ಕೊನೆಗೆ ಅಮೇರಿಕೆಯ ಒಳ್ಳೆಯ ವಿಶ್ವವಿದ್ಯಾಲಯದಲ್ಲೇ ಉತ್ತಮ ನೌಕರಿಯೆಂದು ದೊರಕಿತು. ಇಂದು ಅಲ್ಲಿಯ ಹಳಬ ಅಮೇರಿಕನ್ನರನ್ನೆಲ್ಲ ಹಿಂದೆ ಹಾಕುವಷ್ಟು ಹೆಸರು ಗಳಿಸಿದ್ದಾರೆ. ಮೂರು ವರ್ಷ ಅಮೇರಿಕೆಯಲ್ಲಿದ್ದು ಭಾರತಕ್ಕೆ ಬಂದು ಮದುವೆಯಾಗಿ ಮತ್ತೆ ಅಮೇರಿಕೆಗೆ ಮರಳಿದರು.

ಶ್ರೀ.ಕಾಳೆಯವರು ಕೃಷಿ ಕಾಲೇಜಿನಲ್ಲಿ ಅನೇಕ ವರ್ಷ ಕೆಲಸ ಮಾಡಿ, ಸರಕಾರಿ ರಜೆ ಪಡೆದು ಅಮೇರಿಕೆಗೆ ಹೋಗಿ ಹೆಚ್ಚಿನ ವ್ಯಾಸಂಗ ಮುಗಿಸಿಕೊಂಡು ಬಂದರು. ಭಾರತೀಯ ಅಧಿಕಾರಿಗಳು ಅವರಿಗೆ ಹೆಚ್ಚಿನ ನೌಕರಿ ಕೊಡಲೊಲ್ಲರು. ಬೇರೆ ಕಡೆಗೆ ಹೋಗಲೂ ಬಿಡಲೊಲ್ಲರು. ಕಾಳೆಯವರು ಅಷ್ಟಕ್ಕೇ ಬಿಡದೇ ವಿದ್ಯಾಮಂತ್ರಿಗಳವರೆಗೂ ದೂರನ್ನೊಯ್ದರು. ಅವರಾದರೂ 'ಏನು? ಒಂದು ಅಮೇರಿಕನ್ ಪದವಿ ಪಡೆದು ಬಂದಾಕ್ಷಣ ಇಂದ್ರಲೋಕ ಜಯಸಿ ಬಂದಂತೆ ಮಾಡುತ್ತೀಯಲ್ಲ? ಡಿಗ್ರಿ ತಂದದ್ದು ಸಂತೋಷ. ಆದರೆ ಅದನ್ನೇ ದೊಡ್ಡದನ್ನಾಗಿ ಯಾಕೆ ಮಾಡಬೇಕು?" ಎಂದು ದಬಾಯಿಸಿದರಂತೆ! ಕೊನೆಗೂ ಹತಾಶರಾಗಿ ಆಫ್ರಿಕೆಗೆ ಹೋಗುವುದನ್ನು ನಿಶ್ಚಯಿಸಿದರು. ಇಂದು ನೈಜೀರಿಯದಲ್ಲಿ ಉಚ್ಚಪದವಿಯಲ್ಲಿದ್ದಾರೆ. ಇರಲು ಮನೆ, ಕಾರು, ವರ್ಷಕೊಮ್ಮೆ ಭಾರತಕ್ಕೆ ಹೋಗಿ ಬರುವ ರಜೆ ಭತ್ತೆ ಮತ್ತು ಧಾರಾಳ ಸಂಬಳವನ್ನು ಪಡೆಯುತ್ತಿದ್ದಾರೆ.

ಡಾಕ್ಟರ್ ದಾಸ್‌ರವರು ಆರೇಳು ವರ್ಷಗಳಿಂದ ಅಮೇರಿಕೆಯಲ್ಲಿದ್ದರು. ಇಂಜನಿಯರಿಂಗ್‌ದಲ್ಲಿ ಡಾಕ್ಟರೇಟ ಗಳಿಸಿ, ಅಲ್ಲಿಯೆ ಕೆಲ ಕಾಲ ನೌಕರಿ ಮಾಡಿ ಸಾಕಷ್ಟು ಹಣ ಗಳಿಸಿದರು. ಆದರೆ ಮನಶ್ಯಾಂತಿ ಇರದ್ದರಿಂದ ಭಾರತದಲ್ಲಿಯೇ ನೆಲೆಸಲು ನಿಶ್ಚಯಿಸಿ, ಇಂಜನಿಯರಿಂಗ್ ಸಲಹೆಗಾರನೆಂದು ಕೆಲಸವನ್ನು ಪ್ರಾರಂಭಿಸಿದರು. ಆದರೆ ಇಲ್ಲಿಯ ಪಳಗಿದ ವ್ಯಾಪಾರಿವೃಂದ ಎರಡೇ ವರ್ಷದಲ್ಲಿ ಅವರು ದಿವಾಳಿಯಾಗುವಂತೆ ಮಾಡಿ ಅವರನ್ನು ತಿರುಗಿ ಅಮೇರಿಕೆಗೆ ಕಂಬಿಕೀಳುವಂತೆ ಮಾಡಿಬಿಟ್ಟಿತು.

ಇಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು. ಭಾರತದಲ್ಲಿ ಸಿಗದ ಉಚ್ಚವ್ಯಾಸಂಗಕ್ಕೆ ವಿದೇಶಗಳಿಗೆ ಹೋಗಿ ಕಷ್ಟಪಟ್ಟು ಗಳಿಸಿದ ವೈಜ್ಞಾನಿಕ ಲಾಭವನ್ನು ತನಗಾಗಿ, ತನ್ನ ಜನರಿಗಾಗಿ ಮಾಡಿಕೊಳ್ಳುವ ಯೋಗ್ಯತೆ ನಮ್ಮ ದೇಶಕ್ಕೆ ಇಲ್ಲವಾಯಿತೇ? ಎಂದು ಕಳವಳವಾಗುತ್ತದೆ. ಸರಕಾರ ಮತ್ತು ಸಂಸ್ಥೆಗಳು ಈ ದಿಕ್ಕಿನಲ್ಲಿ ಸ್ವಲ್ಪ ಹೆಚ್ಚು ಲಕ್ಷ್ಯ ಪೂರೈಸಿದರೆ ಭಾರತೀಯ ಬುದ್ಧಿಮತ್ತೆ ಭಾರತದಲ್ಲೇ ಉಳಿದೀತು. ಈ ಬಗ್ಗೆ ನನಗನಿಸಿದ ವಿಚಾರಗಳು ಇಷ್ಟು :

ವಿದೇಶದಿಂದ ಮರಳಿದವರನ್ನು ಬೇರೆಯೇ 'ಪಂಗಡ'ವೆಂದು ನಡೆಸಿಕೊಳ್ಳಕೂಡದು. ನವಜನಾಂಗಕ್ಕೆ ಕೆಲ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕು. ಸಂಶೋಧನೆಯ ಬೆಲೆಯನ್ನು ಪ್ರಸಿದ್ಧವಾದ ಪೇಪರುಗಳ ಮೇಲಿನಿಂದ ಕಟ್ಟಲಾಗುತ್ತಿದೆ. ಬೇರೆ ಬೇರೆ ಹುದ್ದೆಗಳಿಗೆ ವಿಜ್ಞಾನಿಗಳನ್ನಾಗಲಿ, ಶಾಸ್ತ್ರಜ್ಞರನ್ನಾಗಲಿ ನೇಮಿಸುವಾಗ ಅವರೆಷ್ಟು ಪೇಪರುಗಳನ್ನು ಪ್ರಸಿದ್ಧಿಸಿದ್ದಾರೆಂದು ನೋಡಲಾಗುತ್ತದೆಯೇ ಹೊರತು, ವ್ಯಾವಹಾರಿಕ–

ಪ್ರಯೋಗಗಳನ್ನು ಎಷ್ಟು ಮಾಡಬಲ್ಲರು ಎಂಬುದರ ಕಡೆಗೆ ಲಕ್ಷ್ಯವೀಯಲಾಗುವುದಿಲ್ಲ. ಎಲ್ಲೆಡೆಯಲ್ಲೂ ಪ್ರಸಿದ್ಧಿ ಪೇಪರುಗಳಿಗೆ ಬೆಲೆಯಿಲ್ಲದಿದ್ದರೂ ಮಹತ್ವವಿದ್ದುದ್ದರಿಂದ ಒಳ್ಳೆಯ ನೌಕರಿ ಬಯಸುವವರು ಹಾತೊರೆದು ಹಾತೊರೆದು ಎಂಥವನ್ನೋ ಹತ್ತಾರು ಸಂಶೋಧನೆಯ ಪೇಪರುಗಳನ್ನು ಪ್ರಸಿದ್ಧಿಸಲು ಹವಣಿಸಿ ಶೇಂಗ, ಕಡಲೆ, ಅವಲಕ್ಕಿ ಮಾರುವವರಿಗೆ ಸಹಾಯ ಮಾಡುತ್ತಾರೆ! ಇಂಥ ಔಪಚಾರಿಕ ಕೆಲಸದ ಬದಲಾಗಿ ದೈನಂದಿನ ಕೆಲಸಕ್ಕೆ ಮೇಲ್ವಿಚಾರಣೆ ಮೀರಲಾರದೆ ನಿಷ್ಪ್ರಯೋಜಕ-ವೃತ್ತಿ ನಿಲ್ಲಬಹುದು. ಇಂದು ಮೇಲಧಿಕಾರಿ ಉಳಿದವರೊಂದಿಗೆ ಸಂಧಾನ ಮಾಡಿ ಸರಕಾರದೊಂದಿಗೆ ಯುದ್ಧಹೂಡಿದ್ದಾನೆ. ತನ್ನ ಕೈಕೆಳಗಿನ ಅಧಿಕಾರಿಗಳ ಉಪಯೋಗವಿಲ್ಲದ ಲೇಖನಗಳನ್ನು ಪ್ರಸಿದ್ಧಿಗೆ ಕಳಿಸುವಾಗ ತಡೆಹಿಡಿಯುವ ಬದಲು ಈ ಮೇಲಧಿಕಾರಿ ತನ್ನ ಹೆಸರನ್ನೂ ಆ ಲೇಖನದಲ್ಲಿ ಸೇರಿರುವ ಹವಣಿಕೆಯಲ್ಲಿರುತ್ತಾನೆ.

ಇಂದು ಸರಕಾರಿ ನೌಕರಿಯಲ್ಲಿ ಸೇರುವವನಿಗೆ ತನಗೆ ಯಾರೂ ಏನೂ ಮಾಡುವಂತಿಲ್ಲ ಎಂಬ ಆತ್ಮವಿಶ್ವಾಸ ಬಲವಾಗಿರುತ್ತದೆ. ನಮ್ಮ ಸರಕಾರದ ಎಲ್ಲ ವಿಭಾಗಗಳಲ್ಲಿ ಕತ್ತೆ ಮುದಿಯಾದರೆ ಕುದುರೆಯೆನಿಸಿಕೊಳ್ಳಲು ಅವಕಾಶವಿದೆ! ಕೆಲವು ಖಾತೆಗಳಲ್ಲಂತೂ ಉಚ್ಚ-ಅಧಿಕಾರಿ-ಪದಗಳಿಗೆ ನೇರ (direct) ಸೇರ್ಪಡೆ ಇಲ್ಲವೇ ಇಲ್ಲ. ಇಂತಹ ಖಾತೆಗಳಲ್ಲಿ ನೌಕರಿಗೆ ಸೇರುವವರಿಗೆ ಕೆಲಸ ಮಾಡಲಿ ಮಾಡದಿರಲಿ ಸೀನಿಯಾರಿಟಿಯ ಪ್ರಕಾರದಲ್ಲಿ ಬಡ್ತಿ (promotion) ದೊರೆತೇ ದೊರೆಯುವುದೆಂಬ ವಿಶ್ವಾಸವಿರುತ್ತದೆ. ಹೀಗಾಗಿ ಕೆಲಸದತ್ತ ಲಕ್ಷ್ಯ ತಾನಾಗಿ ಕಡಿಮೆಯಾಗುತ್ತದೆ. ಇಂಥಲ್ಲಿ ವಯಸ್ಸಿನ ಬದಲಾಗಿ ಬುದ್ಧಿಮತ್ತೆಗೆ ಬೆಲೆಕೊಟ್ಟರೆ ದೇಶಕ್ಕೂ ಜನಾಂಗಕ್ಕೂ ಕೂಡಿಯೇ ಲಾಭವಾಗುತ್ತದೆ.

ಇಂದು ಯಾವುದೇ ಕಾಲೇಜು, ವಿಶ್ವವಿದ್ಯಾಲಯ, ಸಂಶೋಧನ-ಸಂಸ್ಥೆಗಳಿಗೆ ಹೋಗಿ ನೋಡಿದರೆ ಹೆಚ್ಚಿನ ಸಂಶೋಧಕರು ಹತ್ತು ರೂಪಾಯಿ ಡಿ.ಎ. ಹೇಗೆ ಗಿಟ್ಟಿಸಬೇಕೆಂದು ವಿಚಾರದಲ್ಲಿರುತ್ತಾರೆಯೇ ಹೊರತು, ತನ್ನ ಕ್ಷೇತ್ರದಲ್ಲಿ ತನ್ನ ಕೊಡುಗೆ ಏನು? ಅದು ಹೇಗಿರಬೇಕು? ಎನ್ನುವುದರ ಕಡೆಗೆ ಲಕ್ಷ್ಯ ಕೊಡುವುದು ತೀರ ಕಡಿಮೆ.

ನಮ್ಮಲ್ಲಿ ತನಗೆ ಲಾಭವಿಲ್ಲವೆಂದು ಸರಕಾರ ಕಂಡುಕೊಂಡ ಕೆಲವು ಸಂಶೋಧನೆಯ ಕಾರ್ಯಗಳನ್ನು ಖಾಸಗಿ ಉದ್ದಿಮೆಗಳಿಗೂ ಇತರ ಸಂಸ್ಥೆಗಳಿಗೂ ಒಪ್ಪಿಸಲಿ, ನಿಷ್ಕಾರಣವಾಗಿ ಖರ್ಚಾಗುತ್ತಿರುವ ಹೊನ್ನಿನ ಹೊಳೆಯ ಒಂದು ಭಾಗ ಇಂಥ ಖಾಸಗಿ ಸಂಸ್ಥೆಗಳಿಗೆ ಕೊಟ್ಟರೆ, ಅತ್ಯಲ್ಪ ಅವಧಿಯಲ್ಲಿ ಸಂಶೋಧನೆಯ ಲಾಭ ದೊರೆಯಬಲ್ಲದು. ಇದಲ್ಲದೇ ಪ್ರತಿಯೊಬ್ಬ ಉದ್ದಿಮೆದಾರ ತನ್ನ ಉತ್ಪನ್ನದ, ಲಾಭದ ಶೇಕಡಾ ಹತ್ತರಷ್ಟನ್ನು ಸಂಶೋಧನೆಗೆ ಮೀಸಲಿಡಬೇಕೆಂದು ಕಡ್ಡಾಯ ಮಾಡಬೇಕು. ಅಂಥಲ್ಲಿ ಯೋಗ್ಯತಾವಂತರಿಗೆ, ಸಂಶೋಧಕರಿಗೆ ಅವಕಾಶ ದೊರೆತು ದೇಶದ ಉನ್ನತಿಗೆ ಸಹಾಯವಾದೀತು.

* * *

ದಿನಕ್ಕೊಂದು ಡಾಲರ್

ಅಮೇರಿಕೆಯ ವಾಸ್ತವ್ಯದ ಸರ್ವೋಪಯೋಗ ಹೇಗೆ ತಾವು ಮಾಡಿಕೊಳ್ಳಬೇಕೆಂದು ವಿವಿಧ ಜನರ ವಿವಿಧ ವಿಚಾರಗಳಿರುತ್ತವೆ. ಕೆಲವರು ಟೇಪ-ರಿಕಾರ್ಡರ್, ಕೆಮರಾ, ಪ್ರೊಜೆಕ್ಟರ್‌ಗಳನ್ನೂ ಭಾರತದಲ್ಲಿ ದೊರೆಯದ ಇತರ ಸೌಕರ್ಯ ಸಲಕರಣೆಗಳನ್ನು ತರುತ್ತಾರೆ. ಕೆಲವರು ಅಮೇರಿಕೆಯಲ್ಲಿ ದೊರಕುವ ಉತ್ತಮ ಪುಸ್ತಕಗಳನ್ನು ಕಲೆಹಾಕಬಹುದು. ಕೆಲವರು 'ಯಾಂಕಿ-ಕನ್ಯೆ'ಯನ್ನು ಪತ್ನಿಯನ್ನಾಗಿ ಪಡೆಯಬಹುದು. ಕೆಲವರು ಸಾಧ್ಯವಿದ್ದಷ್ಟು ಅಮೇರಿಕನ್ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಬಹುದು.

ನನಗೂ ಇಂಥ ಒಂದು ಹಿರಿಯಾಸೆ ಇತ್ತು. ಅಮೇರಿಕೆಯ ನಾಲ್ಕೂ ಮೂಲೆಗಳನ್ನು ನೋಡಬೇಕು ಎಂದು. ಆದರೆ ಭಾರತದ ಮೂರು ಪಟ್ಟು ದೊಡ್ಡದಾದ ದೇಶವನ್ನು ಸುತ್ತುಹಾಕಿ ಬರುವುದು ಸುಲಭಸಾಧ್ಯವಾದ ಮಾತಾಗಿರಲಿಲ್ಲ. ಹಣ ತುಂಬಬೇಕು, ಸಾಕಷ್ಟು ವಿರಾಮಬೇಕು. ಮೋಟಾರಿನ ಪ್ರಯಾಣವೇ ಸಾಕಷ್ಟು ವೆಚ್ಚದ್ದು. ಸುಖಪ್ರಯಾಣಕ್ಕೆ ಮೀಸಲಾದ ಖಾಸಗಿ ಟ್ರೇನುಗಳು ಇನ್ನೂ ವೆಚ್ಚದವು. ಕೇವಲ ಪೂರ್ವಕರಾವಳಿಯಿಂದ ಪಶ್ಚಿಮ ಕರಾವಳಿಗೆ ಹೋಗಲು (೩೦೦ ಮೈಲು) ವಾಹನದ ಖರ್ಚೆ ಏಳು ನೂರು ಡಾಲರ್ ಆಗುತ್ತಿದ್ದಾಗ ಇಡೀ ಅಮೇರಿಕೆ ತಿರುಗುವ ತ್ರಾಣ ಕೇವಲ ವಿದ್ಯಾರ್ಥಿಯಾದ ನನಗೆ ಹೇಗೆ ಬರಬೇಕು? ಏನೋ ಕಷ್ಟಪಟ್ಟು ರಜೆಯಲ್ಲಿ ನೌಕರಿ ಮಾಡಿ ಹಣಗಳಿಸಿದೆನೆಂದು ಇಟ್ಟುಕೊಳ್ಳೋಣ. ಆದರೆ ಎರಡು ತಿಂಗಳಿಗೂ ಮಿಕ್ಕಿ ಕಾಲೇಜು-ಅಭ್ಯಾಸಗಳ ಪರಿವೆಯಿಲ್ಲದೇ ಸುತ್ತಾಡಲು ಪ್ರಾಧ್ಯಾಪಕರು ಬಿಡಬೇಕಲ್ಲ? ಅಂತೆಯೇ ತುಂಬ ಆಲೋಚಿಸಿ ಉಪಾಯವೊಂದನ್ನು ಹುಡುಕಿದೆ. ನನ್ನ ವಿಷಯಕ್ಕೆ ಹೊಂದಿದ ಹೆಚ್ಚಿನ ತರಬೇತಿಗೆ ಹೋಗುತ್ತೇನೆಂದರೆ ನನ್ನನ್ನು ಅಡ್ಡಗಟ್ಟಲಾರರೆಂದು ನನಗೆ ಗೊತ್ತು. ಹೀಗಾಗಿ ಕೀಟಶಾಸ್ತ್ರದ ವ್ಯಾವಹಾರಿಕ ತರಬೇತಿಯನ್ನು (applying and practical training) ಅಮೇರಿಕನ್ ಸರಕಾರದಿಂದ ನನಗೆ ಕೊಡಿಸುವಂತೆ ಭಾರತೀಯ ರಾಯಭಾರ ಕಚೇರಿಗೆ ಅರ್ಜಿ ಸಲ್ಲಿಸಿದೆ. ವಿದೇಶಗಳಲ್ಲಿದ್ದರೂ ನಮ್ಮ ಭಾರತೀಯ ಆಫೀಸುಗಳ ಹುಟ್ಟುಗುಣ ಮಾಯವಾಗುವುದಿಲ್ಲ. ಹೀಗಾಗಿ ಯಾವ ಕೆಲಸವೂ ಸಕಾಲಕ್ಕೆ ಆಗುವುದಿಲ್ಲ. ತಿಂಗಳಾನುಗಟ್ಟಲೆ ಕಾದರೂ ನನ್ನ ಪತ್ರಕ್ಕೆ ಉತ್ತರ ಬರಲಿಲ್ಲ. ಒಂದೆರಡು ನೆನಪಿನ ಪತ್ರಗಳನ್ನೂ ಕಳಿಸಿಯಾಯಿತು. ಅದಕ್ಕೂ ಉತ್ತರವಿಲ್ಲ. ಕೊನೆಗೆ ನಾನು ಈ ವಿಚಾರವನ್ನು ಮರೆವಿನ ಖಾತೆಗೆ ಜಮಾಮಾಡಿಬಿಟ್ಟೆ!

ಎಂಟು ತಿಂಗಳ ನಂತರ ಒಂದು ದಿನ ನಾನು ಎಂದೋ ಮರೆತ ಪತ್ರಕ್ಕೆ ಉತ್ತರವಾಗಿ ಅಮೇರಿಕನ್ ಸರಕಾರ ವಿವಿಧ ರಾಜ್ಯಗಳಲ್ಲಿಯ ವಿಶಿಷ್ಟ-ತರಬೇತಿ-ಕೇಂದ್ರಗಳಲ್ಲಿ ನನಗೆ ತರಬೇತಿಯನ್ನು ಕೊಡಲು ಒಪ್ಪಿದ್ದಾರೆಂದು ಪತ್ರ ಬಂದಿತು. ಎರಡು ತಿಂಗಳ ಅವಧಿಯಲ್ಲಿ ವಾಶಿಂಗ್‌ಟನ್ (ಡಿ.ಸಿ) ಮೇರಿಲಂಡ್, ಉತ್ತರ ಮತ್ತು ದಕ್ಷಿಣ ಕೆರೊಲಾಯನಾ, ಟೆನೆಸಿ, ಜೊರ್ಜಿಯಾ, ಫ್ಲಾರಿಡಾ, ಅಲಬಾಮಾ, ಮಿಸಿಸಿಪಿ ರಾಜ್ಯಗಳಲ್ಲಿ ನನ್ನ ತರಬೇತಿಯ ಏರ್ಪಾಡು ಮಾಡಲಾಗಿತ್ತು. ಪತ್ರವನ್ನೂ ತರಬೇತಿಯ

ವೇಳಾಪತ್ರಿಕೆಯನ್ನೂ ತೆಗೆದುಕೊಂಡು ಪ್ರಾಧ್ಯಾಪಕರತ್ತ ಧಾವಿಸಿದೆ. ಎಲ್ಲ ವಿವರಗಳನ್ನೂ ಓದಿದ ಪ್ರಾಧ್ಯಾಪಕರು ಹರ್ಷದಿಂದ,

"ಕ್ರಿಶ್ ಇಂಥ ಸುಸಂಧಿ ಎಷ್ಟು ಜನರಿಗೆ ತಾನೇ ದೊರೆಯುತ್ತದೆ? ನನಗೆ ಏನಾದರೂ ಇಂಥ ಸಂಧಿ ಸಿಕ್ಕರೆ ಇದೊ ಈಗಲೇ ಹೊರಟುಬಿಡುತ್ತೇನೆ" ಎಂದರು. ಇದರ ಹೊರತಾಗಿ ಬೇರೆ ಅನುಮತಿ ಬೇಕಿರಲಿಲ್ಲ. ಪತ್ರದೊಂದಿಗೆ ನನ್ನನ್ನು ಕರೆದುಕೊಂಡು ಡಿಪಾರ್ಟಮೆಂಟಿನ ಮುಖ್ಯಸ್ಥರತ್ತ ಹೋದರು. ಮುಖ್ಯಸ್ಥರೂ ಕೂಡಲೇ ಒಪ್ಪಿ, ನನ್ನ ಅನುಮತಿ ಪಡೆದು ವಾಶಿಂಗ್‌ಟನ್‌ನಿಂದ ನನಗೆ ಬಂದ ಪತ್ರದ ಹತ್ತೆಂಟು ನಕಲುಗಳನ್ನು ಮಾಡಿಸಿ ತಮ್ಮೊಡನೆ ಇಟ್ಟುಕೊಂಡರು. ಅವರೆಲ್ಲರ ದೃಷ್ಟಿಯಲ್ಲಿ ನಾನೀಗ ಆದರ್ಶ-ವಿದ್ಯಾರ್ಥಿ. ಈ ತನಕ ತಮ್ಮ ಕಾಲೇಜಿನ ಯಾವ ವಿದ್ಯಾರ್ಥಿಯೂ ಈ ತರಬೇತಿ ಬಗ್ಗೆ ವಿಚಾರಿಸಿರಲಿಲ್ಲವಂತೆ!

ಸರಿ, ಅಮೇರಿಕೆಯಲ್ಲಿ ಸುತ್ತಾಡುವ ಸುಯೋಗ ಅಂತೂ ಒದಗಿತು. ಆದರೆ ಪ್ರಯಾಣದ ವೆಚ್ಚಕ್ಕೆ ಏನು ಮಾಡುವದೆಂದು ವಿಚಾರಿಸಿದಾಗ ಭಯವಾಗತೊಡಗಿತು. ಮೋಟಾರು-ರೇಲ್ವೆ ಕಂಪನಿಯವರೇನಾದರೂ ಸವಲತ್ತುಗಳನ್ನು ಕೊಡುತ್ತಾರೆಯೇ ಎಂದು ಬರೆದು ವಿಚಾರಿಸಿದೆ. ಇಲ್ಲವೆಂದು ಉತ್ತರ ಬಂದಿತು. ಯಾರೋ ಎಂದೋ ವಿದೇಶದವರಿಗೆ ಅಮೇರಿಕೆಯ ಹೊರಗಿನಿಂದ ಟಿಕೆಟ್ ತರಿಸಿದರೆ ತೊಂಬತ್ತೊಂಬತ್ತು ಡಾಲರುಗಳಲ್ಲಿ ತೊಂಬತ್ತೊಂಬತ್ತು ದಿವಸ ಅಮೇರಿಕ-ಕೆನಡಾಗಳಲ್ಲಿ ಬೇಕಾದಲ್ಲಿ ಬೇಕಾದಷ್ಟು ಹೋಗಿ ಬರುವ ಸೌಕರ್ಯವಿದೆಯೆಂದು ಹೇಳಿದ್ದು ನೆನಪಿಗೆ ಬಂತು. ಅಂತೆಯೇ ಅಮೇರಿಕೆಯ ಪ್ರಮುಖ ಮೋಟಾರ್ ಕಂಪನಿಯಾದ 'ಗ್ರೇಹೌಂಡ್'ದ ಲಂಡನ್ ಆಫೀಸಿಗೆ ಪತ್ರ ಬರೆದು ಹಾಕಿದೆ. ದುರ್ದೈವಕ್ಕೆ ಅವರ ಆಫೀಸು ಬದಲಾಗಿದ್ದರಿಂದ ಅವರಿಗೆ ಅದು ಕೂಡಲೇ ಸಿಗಲಿಲ್ಲ. ಪ್ರಯಾಣ ಪ್ರಾರಂಭಿಸಲು ಬಹಳ ದಿನಗಳಿರಲಿಲ್ಲ. ಕೊನೆಯ ಪ್ರಯತ್ನವೆಂದು ಲಂಡನ್‌ದಲ್ಲಿದ್ದ ನನ್ನ ಸ್ನೇಹಿತನಿಗೆ 'ಗ್ರೇಹೌಂಡ' ಕಂಪನಿಗೆ ಹೋಗಿ ವೈಯಕ್ತಿಕವಾಗಿ ವಿಚಾರಿಸಲು ಕೇಳಿಕೊಂಡೆ. ಎಂಟೇ ದಿನಗಳಲ್ಲಿ ಇಬ್ಬರಿಂದಲೂ ಉತ್ತರ ಬಂದಿತು. ಅಂತಹ ಟಿಕೆಟ್ ಲಭ್ಯವಿದೆಯೆಂದು, ನನಗಾದ ಆನಂದಕ್ಕೆ ಮಿತಿಯಿರಲಿಲ್ಲ. ಕೂಡಲೇ ಹಣ ಕಳಿಸಿ ಟಿಕೆಟ್ ತರಿಸಿಕೊಂಡೆ. ಅಮೇರಿಕೆಯಲ್ಲಿ ಸ್ವಂತ ಕತ್ತೆಯ ಮೇಲೆ ಪ್ರವಾಸ ಮಾಡಿದರೂ ಇಷ್ಟು ಅಗ್ಗದಲ್ಲಿ ದೇಶವನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ!

ಹೊರಡುವ ತಯಾರಿ ನಡೆಸಿದೆ, ಕೆಲವೇ ಬಟ್ಟೆ-ಬರೆ, ಕ್ಯಾಮರಾ, ಚಲನಚಿತ್ರ ಕ್ಯಾಮರಾ, ದೂರದರ್ಶಕಯಂತ್ರಗಳನ್ನು ತೆಗೆದುಕೊಂಡೆ. ಸಾಯರೆಕ್ಯೂಸಿನ ನನ್ನ ಭಾರತೀಯ ಮಿತ್ರರೆಲ್ಲ ತಮಗೆ ದೊರೆಯದ ಈ ಸುಸಂಧಿಯ ಬಗ್ಗೆ ನನ್ನನ್ನು ಅಭಿನಂದಿಸಿ ಉತ್ಸಾಹದಿಂದ ಬೀಳ್ಕೊಟ್ಟರು. ಅಮೇರಿಕೆಯಲ್ಲಿ ಎರಡೇ ಮೋಟಾರ್ ಕಂಪನಿಗಳಿವೆ. ಒಂದು ಗ್ರೆಹೌಂಡ್ ಇನ್ನೊಂದು ಟ್ರೇಲ್‌ವೇಸ್ ಇವು ಖಾಸಗಿಯಾದರೂ ಅತ್ಯುತ್ತಮ ಸಂಘಟನೆಯುಳ್ಳವು. ಈ ಕಂಪನಿಯ ಬಸ್ಸುಗಳು ಅಮೇರಿಕೆಯಲ್ಲಿ ನಾಲ್ಕೂ ಮೂಲೆಗೆ ಹಗಲಿರಳೂ ಓಡಾಡುತ್ತಿರುತ್ತವೆ. ಬಸ್ಸುಗಳಲ್ಲಿ ಸಾಮಾನುಗಳೊಂದಿಗೆ ಪ್ರವಾಸಮಾಡುವ ಪರಿಪಾಠವಿಲ್ಲ. ಎಲ್ಲರ ಕೈಯಲ್ಲಿ ಹಗುರಾದ ಒಂದೊಂದು ಸೂಟಕೇಸ್. ಬಸ್-ನಿಲ್ದಾಣದಲ್ಲಿ ಗದ್ದಲ, ಕೂಗಾಟ, ನೂಗ್ಗಾಟ, ಚೀರಾಟಗಳಿಲ್ಲ. ಬಸ್ಸಿನ ಒಳಗೆ ಹೊಕ್ಕ ಕೂಡಲೇ ಕುಳಿತುಕೊಳ್ಳಲು

ಅಚ್ಚುಕಟ್ಟಾದ ಸುಖಾಸನಗಳು. ಇನ್ನೊಂದು ಬಾರಿ ಹೋಗಿಬರುತ್ತೇನೆಂದು ಪ್ರಿಯತಮೆಗೆ ಹೇಳುವದಿದ್ದರೆ ಹಲವಾರು ಫೋನುಗಳು ಸಿದ್ಧವಾಗಿ ನಿಂತಿರುತ್ತವೆ. ಇನ್ನೊಂದು ಕಡೆ ನೂರಾರು ಉಕ್ಕಿನ ಕಪಾಟುಗಳು ನಿಮ್ಮ ಸಾಮಾನು ಸ್ವೀಕರಿಸಲು ತಯಾರಾಗಿ ನಿಂತಿರುತ್ತವೆ. ನಿಮ್ಮ ಸಾಮಾನುಗಳನ್ನು ಈ ಕಪಾಟುಗಳ ವಶಕ್ಕೆ ಒಪ್ಪಿಸಿದರಾಯಿತು. ಇಪ್ಪತ್ತು ಸೆಂಟು ಕೊಟ್ಟರೆ ಇಪ್ಪತ್ತುನಾಲ್ಕುಗಂಟೆಯೂ ಕಾಯುತ್ತಿರುತ್ತವೆ. ಒಂದೆಡೆ ಬೇಕಾದ ತಿಂಡಿ-ತಿನಿಸುಗಳ ಅಂಗಡಿ ನಿಮ್ಮ ಸೇವೆಗೆ ಸದಾ ಸಿದ್ಧವಿದೆ. ಅಮೇರಿಕೆಯ ರಾಜಧಾನಿ ವಾಂಶಿಗಟನ್ನಿಗೆ ಮೊದಲು ಹೋಗಬೇಕಾದ್ದರಿಂದ ಟಿಕೆಟ್ಟಿನ ಮೇಲೆ ಅದರ ಹೆಸರನ್ನು ಬರೆಸಿಕೊಂಡೆ. ಸಾಮಾನಿನ ಸಂಪೂರ್ಣ ಜವಾಬ್ದಾರಿ ಕಂಪನಿಯವರದು. ನಾವು ಏನೂ ಯೋಚಿಸಬೇಕಾಗಿಲ್ಲ. ಬಸ್ಸು ಬಿಡಲು ಹದಿನೈದು ನಿಮಿಷಗಳಿದ್ದವು. ಅಂತೆಯೇ ಸುಖಾಸನವೊಂದರಲ್ಲಿ ಕುಳಿತೆ. ಬಸ್ಸಿನಲ್ಲಿ ಎಷ್ಟೋ ಮುದುಕಿಯರು ಮದುಮಗಳ ಶಿಸ್ತಿನಿಂದ ಅಲಂಕರಿಸಿಕೊಂಡು ಪುಸ್ತಕವನ್ನೊ ಪತ್ರಿಕೆಯನ್ನೊ ಓದುತ್ತ ಕುಳಿತಿದ್ದರು.

ಸ್ಪೀಕರಿನ ಮೇಲೆ ಬಸ್ಸು ಇನ್ನು ಐದು ನಿಮಿಷಗಳಲ್ಲಿ ಬಿಡಲಿದೆಯೆಂದು ತಿಳಿಸಿ ಪ್ರಯಾಣಿಕರಿಗೆ ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳುವಂತೆ ಕೇಳಿಕೊಳ್ಳಲಾಯಿತು. ಸುಖಪ್ರಯಾಣವನ್ನು ಬಯಸಿ ತಮ್ಮ ಬಸ್ಸಿನಲ್ಲಿ ಪ್ರವಾಸ ಕೈಕೊಂಡದ್ದಕ್ಕೆ ಅಭಿನಂದಿಸಲಾಯಿತು. ಬಸ್ಸಿನ ಡ್ರಾಯವ್ಹರನು (ಈ ಬಸ್ಸುಗಳಲ್ಲಿ ಕಂಡಕ್ಟರ್ ಇರುವುದಿಲ್ಲ. ಆತನ ಅಗತ್ಯವೂ ಇಲ್ಲ.) ನಗುಮುಖದಿಂದ ನಮ್ಮನ್ನೆಲ್ಲ ಬರಮಾಡಿಕೊಂಡ. ಬೃಹದಾಕಾರದ ದೊಡ್ಡ ಬಸ್ಸು. ಅದಕ್ಕೆ ಒಂದೇ ಬಾಗಿಲು. ಡ್ರಾಯವ್ಹರನೇ ತೆಗೆದು ಮುಚ್ಚುತ್ತಾನೆ. ಮೋಟಾರಿನ ಒಳಗೆಲ್ಲ ವಿಮಾನಿನ ಒಳಗಿರುವಂತೆ ವ್ಯವಸ್ಥೆ. ಪ್ರತಿಯೊಂದು ಸುಖಾಸನಕ್ಕೆ ಒಂದೊಂದು ದೀಪ. ಪ್ರತಿಯೊಬ್ಬರಿಗೂ ಒಂದೊಂದು ರೇಡಿಯೋ. ತಮಗೆ ಬೇಕಾದ ಸ್ಟೇಷನ್ ಕೇಳಬಹುದು. ಪಕ್ಕದ ಪ್ರಯಾಣಿಕರಿಗೆ ತೊಂದರೆಯಾಗದಂತೆ 'ಇಯರ್-ಫೋನ್'ಗಳನ್ನು ಇಟ್ಟಿದ್ದಾರೆ. ಅವನ್ನು ಹಾಕಿಕೊಂಡು ತಮಗೆ ಬೇಕಾದ ಕಾರ್ಯಕ್ರಮವನ್ನು (ಇತರರಿಗೆ ತೊಂದರೆಯಾಗದಂತೆ) ಕೇಳಬಹುದು. ಅಮೇರಿಕೆಯ ದರ್ಶನಕ್ಕೆ ಹೊರಟವರಿಗೆ ಸೃಷ್ಟಿ ಸೌಂದರ್ಯದ ಪೂರ್ಣ ಕಲ್ಪನೆಯಾಗಬೇಕೆಂದು ದೊಡ್ಡ ದೊಡ್ಡ ಕಾಜುಗಳನ್ನು ಕೂಡ್ರಿಸಿದ್ದಾರೆ; ತಿಳಿನೀಲಿ-ಬಣ್ಣದ ಈ ಕಾಜುಗಳಿಂದ ಬಸ್ಸಿನಲ್ಲೂ ಕಣ್ಣಿಗೆ ತೊಂದರೆಯಾಗಲಾರದು. ಬಸ್ಸನ್ನು 'ಏರ್-ಕಂಡೀಶನ್' ಮಾಡಿದ್ದಾರೆ. ಒಳಗೇ ಕಕ್ಕಸದ ವ್ಯವಸ್ಥೆಯೂ ಇರುತ್ತದೆ. ಕುಳಿತಿದ್ದ ಹಾಗೆಯೇ ನಮ್ಮ ದೇಶದಲ್ಲಿಯ ಬಸ್ಸಿನ ಪ್ರಯಾಣ ನೆನಪಿಗೆ ಬಂದಿತು!

ದೆವ್ವದಂತಹ ಮೋಟಾರು, ನಿಲ್ದಾಣವನ್ನು ಬಿಟ್ಟಿತು. ಊರಿನ ಹಸಿರು ದೀಪಗಳನ್ನು ದಾಟಿ ಮುಖ್ಯ ರಾಜ್ಯಮಾರ್ಗವನ್ನು ಸೇರಿತು. ಬಸ್ಸು ಹಿತವಾದ ವೇಗದಿಂದ ಚಲಿಸುತ್ತಿದ್ದಂತೆ ಡ್ರಾಯವ್ಹರನು ಧ್ವನಿವರ್ಧಕವನ್ನು ಎತ್ತಿಕೊಂಡು ತನ್ನ ಹೆಸರೇನು, ತಾನು ಎಲ್ಲಿಯ ತನಕ ನಮ್ಮ ಸಂಗಾತಿಯಾಗಲಿರುವ, ನಮ್ಮ ಫಲಹಾರ ಎಲ್ಲಿ ದೊರೆಯುತ್ತದೆ. ಊಟವೆಲ್ಲಿ ದೊರೆಯುತ್ತದೆ ಎಂದು ಮುಂತಾಗಿ ವಿವರಿಸಿ ಹೇಳಿದ. ಮೋಟಾರು ತಾಸಿಗೆ ಎಪ್ಪತ್ತು-ಎಂಬತ್ತು ಮೈಲು ವೇಗದಿಂದ ಓಡುತ್ತಿತ್ತು. ಅಮೇರಿಕೆಯಲ್ಲಿ ರಾಜಮಾರ್ಗಗಳೆಲ್ಲ ಊರ ಹೊರಗಿವೆ. ಊರೊಳಗಿಂದ ರಾಜಮಾರ್ಗಗಳಿಗೆ ಹೋಗಲು ಕವಲು-ದಾರಿಗಳಿರುತ್ತವೆ. ಕವಲು-ದಾರಿಗಳ ಮೇಲೆ ಅಧಿಕಾರಿಗಳು ಪ್ರಯಾಣ ಎಲ್ಲಿಂದ ಪ್ರಾರಂಭವಾಯಿತೆಂದು ತೋರಿಸುವ ಟಿಕೆಟು ಕೊಟ್ಟಿರುತ್ತಾರೆ. ಬೇರೆ ಊರನ್ನು

ಪ್ರವೇಶಿಸಿದಾಗ ಕವಲು-ದಾರಿಯಲ್ಲಿ ಹೋಗುತ್ತಿದ್ದಂತೆ ಅಲ್ಲಿ ಆ ಟಿಕೆಟು ಕೊಟ್ಟು ಪ್ರತಿ ಮೈಲಿಗೆ ಇಂತಿಷ್ಟು ಕರ ಎಂದು ಕೊಡಬೇಕು. ನಮ್ಮ ಬಸ್ಸು ಸಣ್ಣ ಊರೊಳಗೆ ಪ್ರವೇಶಿಸುವ ಗೋಜಿಗೆ ಹೋಗದೇ ರಾಜಮಾರ್ಗದಲ್ಲೇ ಸಾಗುತ್ತ ದೊಡ್ಡ ಊರುಗಳಲ್ಲಿ ಮಾತ್ರ ತಂಗುತ್ತಿತ್ತು. ಈ ಊರುಗಳಲ್ಲಿ ತಿಂಡಿ, ತೀರ್ಥ, ಊಟಗಳಿಗೆ ಅಥವಾ ಆ ಊರಿನ ವೈಶಿಷ್ಟ್ಯಪೂರ್ಣ ಚಿತ್ರವುಳ್ಳ ಪೋಸ್ಟಕಾರ್ಡುಗಳ ಮೇಲೆ ನಾಲ್ಕು ಸಾಲು ಗೀಚಿ ಪೋಸ್ಟಿಗೆ ಹಾಕುವಷ್ಟು ಹೊತ್ತು ಬಸ್ಸು ನಿಂತಿದ್ದು ಮತ್ತೆ ಮುಂದುವರಿಯುತ್ತಿತ್ತು.

ಹೊಸ ಬಸ್-ನಿಲ್ದಾಣ ಸೇರುವ ಮೊದಲು, ಡ್ರಾಯವ್ಹರನು ಬಸ್ಸಿನ ನಂಬರನ್ನು ಒತ್ತಿ ಹೇಳಿ, ಬಸ್ಸು ಎಷ್ಟು ಹೊತ್ತು ನಿಲ್ಲುವದೆಂದು ಸ್ಪಷ್ಟಪಡಿಸುತ್ತಿದ್ದ. 'ಗೆಟಿಸ್‌ಬರ್ಗ'ದಲ್ಲಿ ಬಸ್ಸು ಇಪ್ಪತ್ತೈದು ನಿಮಿಷ ನಿಲ್ಲುವದೆಂದು ಮೊದಲೇ ಹೇಳಲಾಗಿತ್ತು. ಒಂದಿಷ್ಟು ತಿಂಡಿ ತಿಂದು ಬರುವದೊರಳಗಾಗಿ ಬಸ್ಸಿನ ನಂಬರು ಮರೆತುಹೋಯಿತು! ಒಂದೇ ತೆರನಾಗಿ ನಿಲ್ದಾಣದಲ್ಲಿ ನಿಂತಿದ್ದ ಹದಿನೆಂಟು ಇಪ್ಪತ್ತು ಬಸ್ಸುಗಳಲ್ಲಿ ನನ್ನದು ಯಾವುದೆಂದು ತಿಳಿಯದೆ ಗಲಿಬಿಲಿಗೊಂಡೆ. ಅಲ್ಲಿ ನಿಂತಿದ್ದ ಡ್ರಾಯವ್ಹರನಿಗೆ ನನ್ನ ಬಸ್ಸಿನ ವಿವರವನ್ನು ಹೇಳಿದಾಗ ಅದಾಗಲೇ ಹೋಗಿಬಿಟ್ಟಿದೆಯೆಂದ. ಆಕಾಶವೇ ನನ್ನ ಮೇಲೆ ಕಳಚಿಬಿದ್ದಂತಾಯಿತು. ಲಗುಬಗೆಯಿಂದ ಆಫೀಸಿನೊಳಗೆ ಹೋಗಿ ವಿಚಾರಿಸಿದೆ. ಅರ್ಧತಾಸಿನಲ್ಲಿ ಇನ್ನೊಂದು ಬಸ್ಸು ಬಿಡಲಿದೆಯೆಂದು ಹೇಳಿ ಅದರಲ್ಲಿ ಹೋಗಬಹುದೆಂದರು. ಸಾಮಾನಿನ ಬಗ್ಗೆ ವಿಚಾರಿಸಿದಾಗ 'ವಾಶಿಂಗ್‌ಟನ್ನಿನಲ್ಲಿ ಗೊತ್ತಾಗಬಹುದು' ಎಂದು ಹೇಳಿದರು. ಒಂದಿಷ್ಟು ಚಿಲ್ಲರೆ ಹಣ, ಟಿಕೆಟಿನ ತುಣುಕು ಬಿಟ್ಟರೆ ಉಳಿದೆಲ್ಲ ಸಾಮಾನೂ ಮೊದಲ ಬಸ್ಸಿನಲ್ಲಿತ್ತು. ವಾಶಿಂಗ್‌ಟನ್ ತಲುಪಿದ ಮೇಲೆ ಅಲ್ಲಿಯ ಆಫೀಸಿನಲ್ಲಿ ಬಸ್ಸಿನಲ್ಲಿ ಬಿಟ್ಟ ಸಾಮಾನುಗಳೂ ಎಲ್ಲಿ ದೊರೆಯುತ್ತವೆಂದು ಒಬ್ಬನಿಗೆ ವಿಚಾರಿಸಿದಾಗ ಕೋಣೆಯೊಂದನ್ನು ತೋರಿಸಿದ. ಎರಡು ಮೂರು ಸಲ ಬಾಗಿಲು ತಟ್ಟಿದರೂ ಯಾರೂ ತೆಗೆಯದದ್ದನ್ನು ನೋಡಿ, ನಾನೇ ಒಳ ಹೋದೆ. ಯಾರೂ ಇರಲಿಲ್ಲ. ಆದರೆ ಎದುರಿಗೆ ನನ್ನ ಸಾಮಾನುಗಳು ಕಾಣುವಂತೆ ಇಟ್ಟಿದ್ದರು. ಹೋದ ಜೀವ ಮರಳಿ ಬಂದಂತಾಯಿತು. ಹತ್ತು ನಿಮಿಷಗಳಲ್ಲಿ ಅಧಿಕಾರಿಯೊಬ್ಬ ಬಂದ. ನಾನು ಮಾತನಾಡುವ ಮೊದಲೆ 'ತಡವಾಗಿ ಬಂದದ್ದಕ್ಕೆ ಕ್ಷಮಿಸಬೇಕು ಇವು ತಮ್ಮ ಸಾಮಾನುಗಳಷ್ಟೆ? ತೆಗೆದುಕೊಂಡು ಹೋಗಬಹುದು' ಎಂದ. ಒಂದೂ ಸಾಕ್ಷಿ ಪುರಾವೆಗಳಿಲ್ಲದೇ ತೀರ ಅಪರಿಚಿತ ಊರಿನಲ್ಲಿ ಕಳೆದುಹೋಗಿರಬಹುದೆಂದು ನಂಬಿದ್ದ ಸಾಮಾನುಗಳು ಸುರಕ್ಷಿತವಾಗಿ ಸಿಗಬಹುದೆಂದು ಕನಸು-ಮನಸಿನಲ್ಲಿಯೂ ಎಣಿಸಿರಲಿಲ್ಲ.

ಮೊದಲೇ ನಿರ್ದಿಷ್ಟಪಡಿಸಿದಂತೆ ವಾಶಿಂಗ್‌ಟನ್ನಿನಲ್ಲಿ 'ವಾಯ್.ಎಂ.ಸಿ.ಎ.'ದಲ್ಲಿ ಇಳಿದುಕೊಂಡೆ. ಬಹಳ ನಿದ್ರೆ ಬಂದಿದ್ದರಿಂದ ಊಟ ಕೂಡ ಮಾಡದೇ ಮಲಗಿಬಿಟ್ಟೆ. ಮರುದಿನ ಬೆಳಿಗ್ಗೆ ತರಬೇತಿ-ಕೇಂದ್ರದ ಅಧಿಕಾರಿಯನ್ನು ಭೇಟ್ಟಿಯಾಗಬೇಕಾದ್ದರಿಂದ ಲಗುಬಗೆಯಿಂದ 'ಬಾತ್-ರೂಮ್'ದತ್ತ ಪ್ರಾತರ್ವಿಧಿಗೆ ಧಾವಿಸಿದೆ. ಎದುರಿಗೆ ದೊಡ್ಡದೊಂದು ಬೋರ್ಡು. "ವಸತಿಗಾರರು ತಮ್ಮ ಕೋಣೆಯಿಂದ ಹೊರಗೆ ಬರುವಾಗ ಒಂದು ಟಾವೆಲ್ ಆದರೂ ಸೊಂಟಕ್ಕೆ ಸುತ್ತಿರಬೇಕು" ಎಂದು ಸ್ಪಷ್ಟವಾಗಿ ಬರೆಯಲಾಗಿತ್ತು! ಅರ್ಥವಾಗದ್ದರಿಂದ ಎರಡು ಬಾರಿ ಓದಿದೆ. ತಿಳಿಯದೇ ಹಾಗೇ ಒಳಹೊಕ್ಕೆ. ಎದುರಿನ ನೋಟ ಅಚ್ಚರಿಗೂ ಹೊರತಾಗಿತ್ತು. ನಾಲ್ವರು ನಗ್ನ ತರುಣರು ಬಾಗಿಲಿಲ್ಲದ ಕಮೋಡ್-ಕಕ್ಕಸಗಳ ಮೇಲೆ ವಿಶ್ರಮಿಸಿ, ನಡೆದ ಹಿಂದಿನ ಸಭೆಯೊಂದರ ಗೊತ್ತುಗುರಿಗಳನ್ನು

ಗಂಭೀರವಾಗಿ ಚರ್ಚಿಸುತ್ತಿದ್ದರು. ಅತ್ತ ಮುಕ್ಕಾಲು-ನಗ್ನನೊಬ್ಬ ಕನ್ನಡಿಯಲ್ಲಿ ನೋಡುತ್ತ ದಂತಧಾವನ ನಡೆಸಿದ್ದ. ಇನ್ನೊಬ್ಬ ನಗ್ನಮೂರ್ತಿ ಶೇವಿಂಗ್ ನಡೆಸಿದ್ದ. ಹಾಗೇ ಮುಂದೆ ಹೋದರೆ ಇನ್ನೊಬ್ಬರು ನಗ್ನರು ಸ್ನಾನ ಮಾಡುತ್ತಿದ್ದರು. ಇವರ ನಡುವೆ ಸಾಕಷ್ಟು ಬಟ್ಟೆ ಧರಿಸಿದ ನನಗೇ ನಾಚಿಕೆಯಾಯಿತು. ಆದರೆ ಅವರಾರೂ ಇದನ್ನು ಲಕ್ಷಿಸಿದಂತಿರಲಿಲ್ಲ. ಆಗ ಅರ್ಥವಾಯಿತು. ಹೊರಗೆ ತೂಗುಹಾಕಿದ ಬೋರ್ಡಿನ ಬರಹ ಏನು ಹೇಳುತ್ತದೆ ಎಂದು. ಅತ್ತಿತ್ತ ನೋಡದೆ ಮುಖ ತೊಳೆದು ಹೊರಗೆ ಬಂದೆ. ಆಮೇಲೆ ಅಲ್ಲಿದ್ದಷ್ಟು ದಿನ ಎಲ್ಲರಿಗಿಂತ ಮೊದಲು ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿಬಿಡುತ್ತಿದ್ದೆ.

ವಾಶಿಂಗ್‌ಟನ್ನಿನಲ್ಲಿ ತರಬೇತಿಯ ಜೊತೆಗೆ ಪ್ರೇಕ್ಷಣೀಯ ಸ್ಥಳಗಳಾದ ಶ್ವೇತಭವನ, ಪೆಂಟೋನ, ವಾಶಿಂಗ್‌ಟನ್, ಲಿಂಕನ್, ಜಾಫರ್‌ಸನ್ನರ ಸ್ಮಾರಕಗಳು, ಕಲಾಕೇಂದ್ರ, ವಸ್ತುಸಂಗ್ರಹಾಲಯ, ಕೆಪಿಟಾಲ್-ಭವನ ಮುಂತಾದವುಗಳನ್ನು ನೋಡಿದೆ.

ಕೃಷಿಭಾಗದ ಪ್ರಯೋಗ-ವಿಭಾಗವೆಲ್ಲ ಬೆಲ್ಸವಿಲ್ (ಮೆರಿಲಂಡ್)ದಲ್ಲಿ ಇದ್ದುದ್ದರಿಂದ ಅಲ್ಲಿಯೂ ಹೋಗಬೇಕಾಯಿತು. ಅದೊಂದು ಪ್ರಶಾಂತವಾದ ಹಳ್ಳಿಯಾದ್ದರಿಂದ ಸಂಶೋಧಕರು ಯಾವ ಅಡತಡೆಗಳೂ ಇಲ್ಲದೇ ತಮ್ಮ ಕೆಲಸದಲ್ಲಿ ತೊಡಗಿರುತ್ತಾರೆ. ಮೂರುನಾಲ್ಕು ದಶಕಗಳ ಹಿಂದೆ-ಪ್ರಥಮ ಮಹಾಯುದ್ಧದ ನಂತರ ಅಮೇರಿಕಕ್ಕೆ ಭಾರೀ ನಿರುದ್ಯೋಗ-ಸಮಸ್ಯೆ ಒದಗಿದಾಗ ಅದನ್ನೆದುರಿಸಲು ಆಗಿನ ಸರಕಾರ ಸಾವಿರಾರು ಜನರಿಗೆ ಕಟ್ಟಿಗೆ ಕಟ್ಟಡಗಳನ್ನು ಕಟ್ಟುವ ಕೆಲಸ ಒದಗಿಸಿತು. ಈ ಕಟ್ಟಡಗಳು ಅತ್ಯಂತ ಪ್ರೇಕ್ಷಣಿಯವಾಗಿವೆ. ಅಂದಿನ ಸಂತ್ರಸ್ತರು ಕಟ್ಟಿದ ಮಾರ್ಗಗಳು ಇಂದು ದೇಶಕ್ಕೆ ವರದಾನವಾಗಿ ಪರಿಣಮಿಸಿವೆ.

ಡೂರಹೆಮ್ (ಉತ್ತರ ಕೆರೊಲಿಯನ್)ದಲ್ಲಿ ಇಳಿದಾಗ ತಿರುಗಿ 'ವಾಯ್.ಎಂ.ಸಿ.ಎ.ಗೆ ಹೋಗುವ ಮನಸ್ಸಾಗಲಿಲ್ಲ. ಸಾಮಾನುಗಳನ್ನು ಬಸ್-ನಿಲ್ದಾಣದ ಕೋಣೆಯ ಉಕ್ಕಿನ ಕಪಾಟಿನ ವಶಕ್ಕೆ ಒಪ್ಪಿಸಿ, ಇರಲು ವಸತಿಯನ್ನು ಹುಡುಕುತ್ತ ಹೊರಟೆ. ಬಹಳಷ್ಟು ಮಧ್ಯಮ ವರ್ಗದ ಅಮೇರಿಕನ್ನರು ತಮ್ಮ ಮನೆ ಸಾಕಷ್ಟು ದೊಡ್ಡದಿದ್ದರೆ, ಅದರೊಳಗಿನ ಒಂದೆರಡು ಕೋಣೆಗಳನ್ನು ಬೇರ್ಪಡಿಸಿ ಪ್ರವಾಸಿಗರಿಗೆ ದಿನ-ಬಾಡಿಗೆ ಕೊಡುವ ಪರಿಪಾಠವಿದೆ. ಇದು ನನಗೆ ಗೊತ್ತಿದ್ದುದರಿಂದ ಇಂಥದೊಂದು ಮನೆಯನ್ನು ಹುಡುಕಿಕೊಂಡು ಹೊರಟೆ. ಒಳ್ಳೆಯ ಕೋಣೆಯೂ ಸಿಕ್ಕಿತು. ಇದುವರೆಗೆ ಹೊರಗೆ ಊಟ ಮಾಡುತ್ತಿದ್ದೆ. ಖರ್ಚು ಬಹಳ ಬರುತ್ತಿದ್ದುದರಿಂದ ಈ ಬಾರಿ ಸುಪರ್-ಮಾರ್ಕೆಟ್ಟಿಗೆ ಹೋಗಿ ಮೂರು-ನಾಲ್ಕು ವಿಧದ ತಿಂಡಿಗಳನ್ನು ಕೊಂಡು ತಂದೆ.* ಅರ್ಧ ಗೆಲನ್ ಹಾಲಿನ ಡಬ್ಬಿಯನ್ನು ತಂದೆ.* ಪ್ರತಿಯೊಂದು ಮನೆಯಲ್ಲೂ ಬಿಸಿನೀರಿನ ವ್ಯವಸ್ಥೆಯಿದ್ದುದರಿಂದ, ಬಿಸಿನೀರಿನಲ್ಲಿ ಈ ಡಬ್ಬಿಗಳನ್ನು ಇಟ್ಟು ಆಹಾರವನ್ನು ಬಿಸಿಮಾಡಿಕೊಳ್ಳಲು ಅನುಕೂಲವಾಗುತ್ತಿತ್ತು. ಅಲ್ಲಿಂದ ಮುಂದೆ ಹೊರಗೆ ಊಟ ಮಾಡುವುದನ್ನೇ ನಿಲ್ಲಿಸಿಬಿಟ್ಟೆ.

ಭಾರತ ಸರಕಾರ ನನ್ನ ತರಬೇತಿಗಾಗಿ ಏರ್ಪಾಟು ಮಾಡಿದ್ದರಿಂದ ನನಗೆ ಅಮೇರಿಕನ್ ಸರಕಾರದ ವತಿಯಿಂದ ಒಳ್ಳೇ ಆತಿಥ್ಯ ದೊರೆಯುತ್ತಿತ್ತು.

---

* ಎಲ್ಲ ತರದ ಸಿದ್ಧ ಆಹಾರ, ಡಬ್ಬಿ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ದೊರೆಯುತ್ತದೆ. ಅಮೇರಿಕನ್ನರು ಹೆಚ್ಚಾಗಿ ಇದನ್ನೇ ಉಪಯೋಗಿಸುತ್ತಾರೆ.

ಭಾರತದಲ್ಲಿದ್ದಾಗ ಆಗಂತುಕರು ವಿಶಿಷ್ಟ ಸನ್ಮಾನ (V.I.P treatment) ಪಡೆಯುವದನ್ನು ನೋಡಿದ್ದೇನೆ ಹೊರತು ನಾನೂ ಒಂದು ದಿನ ಈ ಆದರಕ್ಕೆ ಪಾತ್ರನಾಗಬಹುದೆಂದು ಎಂದೂ ಎಣಿಸಿರಲಿಲ್ಲ. ನಾನು ಹೋದಲ್ಲೆಲ್ಲ ಸಂಸ್ಥೆಯ ಉಚ್ಚ ಅಧಿಕಾರಿ ನನ್ನನ್ನು ಸ್ವತಃ ಬರಮಾಡಿಕೊಳ್ಳುತ್ತಿದ್ದ. ಆತನೊಂದಿಗೆ ಸಂಸ್ಥೆಯ ಎಲ್ಲ ಕಾರ್ಯಕಲಾಪಗಳನ್ನು ನೋಡುವ ಭಾಗ್ಯ ನನ್ನದಾಗುತ್ತಿತ್ತು. ಪ್ರತಿಯೊಬ್ಬ ಸಂಶೋಧಕರ ಪರಿಚಯಮಾಡಿಕೊಟ್ಟು ಅವರು ನಡೆಸಿದ ಸಂಶೋಧನೆಯ ಬಗ್ಗೆ ವಿವರಿಸಲು ಕೇಳಿಕೊಳ್ಳುತ್ತಿದ್ದ ಅಧಿಕಾರಿ. ಊರಿನಿಂದ ದೂರ ಪ್ರಯೋಗಶಾಲೆ ಇದ್ದಲ್ಲಿ ಬರಹೋಗಲು ಅಧಿಕಾರಿಯ ಸ್ವಂತ ಕಾರು ನನಗಾಗಿ ಕಾದಿರುತ್ತಿತ್ತು. ಅಧಿಕಾರಿ ಸ್ವತಃ ಡ್ರೈವ ಮಾಡುವ. ನಾಲ್ಕು ದಿನ, ಐದು ದಿನ, ನಾನಲ್ಲಿ ಇದ್ದಷ್ಟು ದಿನ ಸದಾ ನನ್ನೊಟ್ಟಿಗೆ ಇರುವ. ಅವನೇ ಬರದಿದ್ದರೇ ನಾನಿಳಿದಿದ್ದ ಹೊಟೇಲಿಗೆ ಕಾರೊಂದು ಬರುವುದು. ಸಂಜೆಗೆ ಬಿಡಲು ಮತ್ತೆ ಬರುವುದು. ಕೆಲವು ಕಡೆ ಕೀಟಗಳಿಂದ ನಾಶವಾದ ಅರಣ್ಯದ ಭಾಗಗಳನ್ನು ನೋಡಲು 'ಹೆಲಿಕ್ಯಾಪ್ಟರ್'ದ ಮೂಲಕ ವ್ಯವಸ್ಥೆಮಾಡಿದ್ದರು. ಅದರಲ್ಲಿ ನಾಲ್ವರೊಂದಿಗೆ ಕುಳಿತು ಹಗುರವಾಗಿ ಹವೆಯಲ್ಲಿ ತೇಲಾಡಿದ್ದಾಯಿತು. ಬಹಳಷ್ಟು ಅಧಿಕಾರಿಗಳು ನನ್ನನ್ನು ಮನೆಗೂ ಕರೆದೊಯ್ದಿದ್ದರು. ತಮ್ಮ ಮಕ್ಕಳು ಭಾರತೀಯನನ್ನು ಭೆಟ್ಟಿಯಾಗಲು ಉತ್ಸುಕರಾಗಿದ್ದರೆಂದು ಕೆಲವರು ಹೇಳುವರು. ಭಾರತೀಯ ಸ್ಟಾಂಪು, ನಾಣ್ಯಗಳನ್ನು ಕಳಿಸುವಂತೆ ಕೆಲವರು ಕೇಳಿಕೊಳ್ಳುವರು, ಹಲವರು ಮನೆಗಳಿಗೆ ಹೋದಲ್ಲೆಲ್ಲ ತೀರ ಆತ್ಮೀಯ ಸ್ವಾಗತ ದೊರೆಯುತ್ತಿತ್ತು. ವಿದೇಶಿಯರ ಈ ಆದರ-ಗೌರವಗಳಿಗೆ ನಾನು ಪಾತ್ರನೇ? ಎಂಬ ವಿಚಾರ ಆಗಾಗ ನನ್ನನ್ನು ಬಾಧಿಸುತ್ತಿತ್ತು.

ಡೂರಹೆಮ್‌ದಲ್ಲಿ ಪ್ರಸಿದ್ಧವಾದ 'ಡ್ಯೂಕ್' ವಿಶ್ವವಿದ್ಯಾಲಯವಿದೆ. ಅಲ್ಲಿ ಹಲವಾರು ಭಾರತೀಯರಿದ್ದಾರೆ. ಅಲ್ಲಿ ಅನೇಕರ ಪರಿಚಯವಾಯಿತು. ನಾನು ಸಂದರ್ಶಿಸಿದ ಅನೇಕ ಸಂಸ್ಥೆಗಳಲ್ಲಿ ಭಾರತೀಯರ ಸಂಖ್ಯೆ ಸಾಕಷ್ಟು ಇರುತ್ತಿತ್ತು. ಉತ್ತರ ಕೆರೊಲಿನದಲ್ಲಿ ರ್‍ಯಾಲೇದಲ್ಲಿ ದೊಡ್ಡ ವಿಶ್ವವಿದ್ಯಾಲಯವಿದೆ. ಅಲ್ಲೂ ನೂರಾರು ಭಾರತೀಯರ ಪರಿಚಯವಾಯಿತು.

"ಏಶ್‌ವಿಲ್ (ಉತ್ತರ ಕೆರೋಲಿನ) ವನಸಿರಿಯಿಂದ ತುಂಬಿತುಳುಕುವ ಪರ್ವತಶ್ರೇಣಿಗಳುಳ್ಳ ಸುಂದರ ಊರು. ಇಲ್ಲಿಯ ಪ್ರಸಿದ್ಧವಾದ 'ನೀಲಿ ಅಂಚಿನ ಹೆದ್ದಾರಿ' (blue-ridge-highway)ಯಿಂದ ಪ್ರವಾಸ ಮಾಡಿದರೆ ನಿಸರ್ಗದೇವಿಯ ಮಡಿಲ ಸಾನ್ನಿಧ್ಯ ದೊರೆಯುತ್ತದೆ. ಇಲ್ಲಿಂದ ಪ್ರಸಿದ್ಧ ವಿಶ್ರಾಂತಿಸ್ಥಳವಾದ 'ಗ್ರೇಟರ್ ಸ್ಮೋಕೀಸ್' ನಾಶನಲ್-ಪಾರ್ಕಿಗೆ ಮುಟ್ಟುತ್ತೇವೆ. ಅಲ್ಲಲ್ಲಿ ಡೇರೆಗಳನ್ನು ಹೂಡಿ ವಿಶ್ರಾಂತಿ ಪಡೆಯುತ್ತಿರುವ ಅಮೇರಿಕನ್ನರು ಗೋಚರಿಸುತ್ತಾರೆ. ಸಂಜೆಯಾಯಿತೆಂದರೆ ಕರಡಿಗಳು ಜನರ ನಿವಾಸದ ಅಕ್ಕಪಕ್ಕದಲ್ಲಿ ಸಂಚರಿಸುತ್ತವೆ. ಜನರ ಚಲನವಲನ ಇವಕ್ಕೆ ಅಭ್ಯಾಸವಾಗಿದೆಯಂತೆ. ಹೀಗಾಗಿ ಅವು ಹೆದರುವುದಿಲ್ಲ. ಆದರೆ ಒಮ್ಮೆ ಈ ಕರಡಿ ಆಕ್ರಮಣ ಮಾಡಿತೆಂದರೆ ಅದರಿಂದ ತಪ್ಪಿಸಿಕೊಳ್ಳುವುದು ದುಸ್ಸಾಧ್ಯ.

ಉತ್ತರ ಅಮೇರಿಕವು ಹಿಮದಿಂದ ತುಂಬಿದರೂ ದಕ್ಷಿಣಕ್ಕೆ ಹೋದಂತೆ ಹಿಮದ ಹೆಸರೇ ಇಲ್ಲ. ಆದರೆ ಉತ್ತರದಿಂದ ಬರುವ ಪ್ರವಾಸಿಗಳು ಇಲ್ಲೂ ಹಿಮದ ಆಟಗಳನ್ನು ಬಯಸುತ್ತಾರೆ. ಹೀಗಾಗಿ ಅಲ್ಲಲ್ಲಿ ಇಂಥ ಹಿಮದ ಆಟಗಳ ವ್ಯವಸ್ಥೆಯಿದೆ. 'ಮಯಾಮಿ'

(ಫ್ಲೋರಿಡಾ)ದಲ್ಲಿ ಹನ್ನೆರಡೂ ತಿಂಗಳು ಸೂರ್ಯ ಪ್ರಕಾಶವಿರುವುದರಿಂದ ಅಮೇರಿಕನ್ನರು ಅದನ್ನು ನಂದನವನವನ್ನಾಗಿ ಪರಿವರ್ತಿಸಿದ್ದಾರೆ. 'ಮಯಾಮಿ' ಸಮುದ್ರ ದಂಡೆಯಂತೂ ರಂಭೆಯರ ನಾಡೇ! ಇಂದ್ರಲೋಕವೆಂದರೆ ಹೀಗೇ ಇರಬಹುದೇನೋ ಅನಿಸುತ್ತದೆ. ಇದು ಅತ್ಯಂತ ಜನಪ್ರಿಯ ಪ್ರವಾಸಿ-ಕೇಂದ್ರವಾಗಿದೆ. ಭವ್ಯವಾದ ಹೋಟೇಲುಗಳು, ಸುಂದರ ಉದ್ಯಾನಗಳು, ಕೃತ್ರಿಮ-ಸರೋವರಗಳು ಎಲ್ಲೆಲ್ಲೂ ಕಂಗೊಳಿಸುತ್ತವೆ. ಅಲ್ಲಲ್ಲಿ ಸರೋವರದ ದಂಡೆಯಲ್ಲಿ ಕುರ್ಚಿಗಳನ್ನು ಹಾಕಿಯೋ ಮರಳಿನ ರಾಶಿಯ ಮೇಲೋ ಅರೆನಗ್ನ ಯುವಕ-ಯುವತಿಯರು ಬಿಸಿಲು ಕಾಯಿಸುತ್ತ ಬಿದ್ದಿರುತ್ತಾರೆ. ಹೊಟೆಲಿಗೆ ಹೊಂದಿದ್ದ ಸಮುದ್ರವಂತೂ ಕೇವಲ ಆ ಹೋಟೆಲನವರಿಗೆ ಮೀಸಲು. ಜನಸಾಮಾನ್ಯರಿಗೆ ಕೆಲ ಭಾಗ ಬೇರೆಯೇ ಮೀಸಲಾಗಿದೆ. ಅಲ್ಲಿ ದೊಡ್ಡ ಜಾತ್ರೆಯೇ ಸೇರುತ್ತದೆ. ಅಮೇರಿಕನ್ನರ ಅಂಗಸೌಷ್ಠವದ ಪೂರ್ಣಪರಿಚಯ ಇಲ್ಲಿ ಆಗುತ್ತದೆ. ಒಬ್ಬರ ಪರಿವೆ ಇನ್ನೊಬ್ಬರಿಗೆ ಇರುವುದಿಲ್ಲ. ಎಲ್ಲರೂ ತಮ್ಮ ತಮ್ಮ ಗುಂಗಿನಲ್ಲಿ ಇರುತ್ತಾರೆ.

ಇಲ್ಲಿಯ ಜನಸಮುದಾಯವನ್ನು ನೋಡಿ ಲಾಭವಾದೀತೆಂದು ಬಟ್ಟೆಯ ವ್ಯಾಪಾರಿಗಳೇನಾದರೂ ಇಲ್ಲಿ ಆಸೆಯಿಂದ ವ್ಯಾಪಾರ ಸುರುವು ಮಾಡಿದರೆ ತೀರ ಬೇಗ ದಿವಾಳಿಯಾಗುವುದಲ್ಲಿ ಸಂದೇಹವಿಲ್ಲ. ಬಟ್ಟೆಯ ಬಗ್ಗೆ ಅಷ್ಟು ಆದರವಿದೆ. ಪಾಪ, ಇಲ್ಲಿ ಬರುವವರಿಗೆ! ಆದರೆ ಎಲ್ಲರೂ ಸಾಮಾನ್ಯ ಅಷ್ಟೆ ಪ್ರಮಾಣದ ಬಟ್ಟೆ ಧರಿಸುವುದರಿಂದ ಯಾರಿಗೂ ಸಂಕೋಚವೆನಿಸಲಾರದು. ಹೀಗಾಗಿ ಪೂರ್ಣ ಬಟ್ಟೆ ಧರಿಸಿದ ನಾನು ಅನೇಕ ಫೋಟೋಗಳನ್ನು ತೆಗೆದರೂ ಯಾರೂ ಆಕ್ಷೇಪವೆತ್ತಲಿಲ್ಲ. ಅಷ್ಟರಲ್ಲಿ ಒಮ್ಮಿಂದೊಮ್ಮೆ ಮಳೆ ಬಂದಿತು. ಆ ಸಮುದ್ರದ ದಂಡೆಯ ಮೇಲೆ ಒಂದೇ ಶೆಡ್ ಇತ್ತು. ಬಟ್ಟೆ ಬದಲಾಯಿಸುವ ಸ್ಥಳ ಅದು. ಎಲ್ಲರೂ ಅಲ್ಲಿಗೆ ಓಡಿದೆವು. ಅರೆ-ನಗ್ನ, ಮುಕ್ಕಾಲು-ನಗ್ನ ಜನರಿದ್ದೂ ಎಷ್ಟು ಜನ ಹಿಡಿದಾರು? ಆದರೂ ಜನ ಬಂದು ತುಂಬುತ್ತಲೇ ಇದ್ದರು. ಪೆಟ್ಟಿಗೆಯಲ್ಲಿ ಕಪ್ಪೆಗಳನ್ನು ತುಂಬಿದಂತೆ, ನನ್ನ ಸುತ್ತ ನೂರಾರು ಮಹಿಳೆಯರಿದ್ದರು. ಶ್ರೀಕೃಷ್ಣನ ರಾಸಕ್ರೀಡೆಯ ನೆನಪಾಗಿ ಹದಿನಾರು ಸಾವಿರ ಗೋಪಿಯರಿಂದ ಸುತ್ತುವರಿಯಲ್ಪಟ್ಟ ಆ ಧೀರನನ್ನು ಮನಸ್ಸಿನಲ್ಲೇ ಅಭಿನಂದಿಸಿದೆ.

'ಮಯಾಮಿ'ಯಲ್ಲಿ ಇನ್ನೂ ಒಂದು ಆಕರ್ಷಣೆಯಿದೆ. ಅಲ್ಲಿಯ ಸಮುದ್ರ ಜಲಾಶ್ರಯದಲ್ಲಿ ನೀರ-ನಾಯಿ (dolphins)ಗಳನ್ನು ಸಾಕಿದ್ದಾರೆ. ಅವು ತರಬೇತಿ ಹೊಂದಿವೆ. ಎಲ್ಲ ತರಹದ ಸರ್ಕಸ್ಸುಗಳನ್ನು ಮಾಡಿ ತೋರಿಸುತ್ತವೆ. ಪುಪ್ಪುಸಗಳಿಂದ, ಶ್ವಾಸೋಚ್ಛ್ವಾಸ ಮಾಡುವ ಜಲಚರವಾದ್ದರಿಂದ ನೀರಿನಿಂದ ಹೊರಗೆ ಇವು ಬೇಕಾದಷ್ಟು ಸಮಯ ಇರಬಲ್ಲವು. ಹೀಗಾಗಿ ಬಹುವೇಗದಿಂದ ನೀರ ಮೇಲೆ ಎತ್ತರಕ್ಕೆ ಜಿಗಿಯುವದು, ಜನರ ಕೈಯಲ್ಲಿ ಹಿಡಿದ ತಿಂಡಿ ತಿನ್ನುವುದು, ಗಂಟೆಯನ್ನು ಬಾರಿಸುವುದು, ಚಕ್ರಾಕಾರವಾಗಿ ಜಿಗಯುವುದು ಮುಂತಾದ ತಮಾಷೆಯಾಟಗಳನ್ನು ಮಾಡಿ ತೋರಿಸಿ ಇವು ಸಾವಿರಾರು ಡಾಲರಗಳನ್ನು ಗಳಿಸುತ್ತವೆ. ಇವಲ್ಲದೇ ಬಗೆಬಗೆಯ ಮೀನುಗಳು, ಆಮೆಗಳು ಮಕ್ಕಳಿಗಷ್ಟೇ ಅಲ್ಲದೆ ಎಲ್ಲರಿಗೂ ಆಕರ್ಷಣಿಯ ವಸ್ತುಗಳಾಗಿವೆ. ಇದಲ್ಲದೇ ಜಲವಿಹಾರಕ್ಕಾಗಿ ಹೋಗಲು ಎಲ್ಲ ಪ್ರಕಾರದ ನೌಕೆಗಳು ಬಾಡಿಗೆಗೆ ದೊರೆಯುತ್ತವೆ.

'ಮಯಾಮಿ' ಕ್ಯೂಬಾದಿಂದ ಬಂದ ನಿರಾಶ್ರಿತರಿಂದ ತುಂಬಿಹೋಗಿದೆ. ಇವರು ವ್ಯಾಪಾರದಲ್ಲಿ ಸ್ಥಾನೀಯರೊಡನೆ ಸ್ಪರ್ಧಗೆ ನಿಂತಿದ್ದಾರೆ. ಒಂದು ಡಾಲರ್‌ಕೊಟ್ಟರೆ

ಒಳ್ಳೆಯ ಸ್ಪ್ಯಾನಿಶ್ ಅಥವಾ ಚೀನೀ ಊಟ ದೊರೆಯುತ್ತದೆ. ಇದು ಸುಮಾರು ಭಾರತೀಯ ಭೋಜನವನ್ನು ಹೋಲುತ್ತದೆ. (ಹೋಟೇಲಿನ ಅಮೇರಿಕನ್ ಪದ್ಧತಿಯ ಊಟಕ್ಕೆ ಕಡಿಮೆಯೆಂದರೆ ಐದು ಡಾಲರು ತೆರಬೇಕಾಗುತ್ತದೆ. ಸರ್ವೀಸ್ (ಬಡಿಸಿದ್ದಕ್ಕೆ) ಕಾಣಿಕೆಯೆಂದು ಬೇರೆ .೭೫ ಸೆಂಟ್ಸ್ ತೆತ್ತಬೇಕು) ಈ ದಕ್ಷಿಣ-ಅಮೇರಿಕನ್ನರು ನಮ್ಮಂತೆ ಕಂದು-ಬಣ್ಣದವರು. ಮೀಸೆ ಇಡುವ ಧೀರರಾದ್ದರಿಂದ ನನ್ನನ್ನು ಬಹಳಷ್ಟು ಜನ ತಮ್ಮವನೇ ಎಂದು ನಂಬಿ ಸ್ಪ್ಯಾನಿಶ್‌ದಲ್ಲಿ ಮಾತನಾಡಿಸುತ್ತಿದ್ದರು. ಇನ್ನೂ ಕೆಲವರು ನಾನು ಇಟಾಲಿಯನ್ನನ್ನೇ ಎಂದು ಕೇಳುತ್ತಿದ್ದರು. ನಾನು ಭಾರತೀಯನೆಂದಾಗ ಅವರಿಗಾದ ಅಚ್ಚರಿ ಅಷ್ಟಿಷ್ಟಲ್ಲ!

ಗಲ್ಫ್-ಪೋರ್ಟ (ಮಿಸಿಸಿಪಿ)ದಲ್ಲಿ ಸಮುದ್ರ ನೆಲದೊಳಗೆ ದೂರದ ತನಕ ಬಂದಿದೆ. ಹೀಗಾಗಿ ಆಳವಿಲ್ಲದ ಉಪ್ಪುನೀರಿನ ಮೀನುಗಾರಿಕೆಗೆ ಇದು ಅತ್ಯುತ್ತಮ ಸ್ಥಳವಾಗಿದೆ. ನಿಶ್ಚಯಿಸಿದ್ದಕ್ಕಿಂತ ಒಂದು ದಿನ ಮೊದಲೇ ಈ ಚಿಕ್ಕ ಊರಿಗೆ ತಲುಪಿದ್ದರಿಂದ ಈ ಜನರ ಮೀನುಗಾರಿಕೆಯ ಪ್ರಕಾರಗಳನ್ನು ನೋಡುವದೆಂದು ನಿರ್ಧರಿಸಿದೆ. ಮನರಂಜನೆಗೆಂದು ಸ್ತ್ರೀಯರು, ಪುರುಷರು, ಮಕ್ಕಳು, ಮುದುಕರು ಎಲ್ಲರೂ ಮೀನು ಹಿಡಿಯುತ್ತಿದ್ದರು. ಹಾಗೆಯೇ ಸುತ್ತಾಡುತ್ತಿದ್ದಾಗ, ಗರಿ ಹಚ್ಚಿದ ಹ್ಯಾಟು ಧರಿಸಿದ ಮುದುಕನೊಬ್ಬ 'ಹಾಯ್' ಎಂದು ಸ್ವಾಗತಿಸಿದ. ಮಾತನಾಡುತ್ತಿದ್ದಂತೆ ಇವು ಒಳ್ಳೆಯ ಬಿಸಿಲಿನ ದಿನಗಳಾಗಿದ್ದರಿಂದ ಮೀನು ಹಿಡಿಯಲು ಅನುಕೂಲವೆಂದು, ರಜೆ ಪಡೆದು ತಾನು ಇಲ್ಲಿ ಬಂದದ್ದಾಗಿ ಹೇಳಿದ. ಅಷ್ಟರಲ್ಲಿ ಆತ ಹಾಕಿದ ಗಾಳಕ್ಕೆ ಮೀನೊಂದು ಸಿಕ್ಕಿಕೊಂಡಿತು. ಮಾತು ನಿಲ್ಲಿಸಿ ಬಹಳ ಜಾಗೃತೆಯಿಂದ ಅದನ್ನು ದಂಡೆಗೆ ಎಳೆದ. ಆಚೆ ಈಚೆ ಜನರಿಗೆ ಮೀನು ಬೇಕೇ?! ಎಂದು ಕೇಳಿದ. ಒಬ್ಬಿಬ್ಬರು ಬೇಡವೆಂದರೂ ಕೊನೆಗೆ ಒಬ್ಬ ಅದನ್ನು ಸ್ವೀಕರಿಸಿದ. ತಾನು ಮುಂಜಾವಿನಿಂದ ಬಹಳ ಮೀನು ಹಿಡಿದಿರುವದಾಗಿ ಮುದುಕ ಹೇಳಿದ. ಅದಕ್ಕೇ ಆತನಲ್ಲಿ ದಾನಪ್ರವೃತ್ತಿ ಹೀಗೆ ಜಾಗೃತವಾಗಿರಬೇಕು ಎಂದುಕೊಂಡೆ. ಅಷ್ಟರಲ್ಲಿ ಇನ್ನೊಂದು ಮೀನು ಸಿಕ್ಕಿಕೊಂಡಿತು. ಅದನ್ನು ಯಾರೂ ತೆಗೆದುಕೊಳ್ಳದ್ದರಿಂದ ತಿರುಗಿ ಸಮುದ್ರದೊಳಗೇ ಒಗೆದ!

"ಏನು ನಿನಗೆ ಬಹಳಷ್ಟು ಮೀನು ದೊರೆತಂತೆ ತೋರುತ್ತದೆ?" ಎಂದಾಗ,

"ಹೂಂ, ಆದರೂ ನಾನು ಒಂದನ್ನು ಇಟ್ಟುಕೊಳ್ಳಲಿಲ್ಲ. ಹಿಡಿದ ಎಲ್ಲ ಮೀನನ್ನೂ ಕೊಟ್ಟುಬಿಟ್ಟೆ. ಇಲ್ಲವೇ ತಿರುಗಿ ಒಗೆದೆ. ನನ್ನ ನೌಕರಿಯಿಂದ ಬೇಸರವಾದಗಲೆಲ್ಲ ರಜೆ ತೆಗೆದುಕೊಂಡು ಇಲ್ಲಿ ಬರುತ್ತೇನೆ. ಮತ್ತು ಮೀನು ಹಿಡಿಯುತ್ತ ವಿಶ್ರಾಂತಿ ಪಡೆಯುತ್ತೇನೆ" ಎಂದ.

ಅವನ ವಿಶ್ರಾಂತಿಯ ಈ ಪದ್ಧತಿಯನ್ನು ನೋಡಿ ನಗು ಬಂತು. ರಜೆ ತೆಗೆದುಕೊಂಡು ದೂರದಿಂದ ಬಂದು ಆಮಿಷದ ಹುಳುಗಳಿಗಾಗಿ ಹಣ ಸುರಿದು, ಉರಿಬಿಸಿಲಿನಲ್ಲಿ ದಿನವಿಡೀ ಮೀನು ಹಿಡಿಯುತ್ತ, ಸಿಕ್ಕಿದ ಮೀನುಗಳನ್ನೆಲ್ಲ ಬಿಟ್ಟುಕೊಟ್ಟು ವಿಶ್ರಾಂತಿ ಪಡೆಯುತ್ತಾನಂತೆ! ಶ್ರೀಮಂತರ ಕೆಲಸ, ವಿಶ್ರಾಂತಿಗಳೇ ಹೀಗೇನೋ! ಬೇಸಾಯಗಾರರು ಹೆಚ್ಚು ಗೋದಿ ಬೆಳೆದು ಸುಡುತ್ತಾರೆ, ಕಾರಖಾನೆದಾರರು ಹೆಚ್ಚಿನ ಉತ್ಪಾದನೆ ಮಾಡಿ ಹಾಳುಮಾಡುತ್ತಾರೆ; ಈತ ಮೀನುಗಳನ್ನು ಹಿಡಿದು ಹಿಡಿದು ಜೀವದಾನಮಾಡುತ್ತಾನೆ.

ನನ್ನ ಪ್ರವಾಸ ಮುಂದುವರಿಯಿತು. ಫ್ಲೆಗ್‌ಪೋಸ್ಟ (ಅರಿಝೋನಾ)ಗೆ ಬಂದಾಗ ನನ್ನ ನಿರೀಕ್ಷೆ ಮೀರಿ ಹಣ ಖರ್ಚಾದ್ದರಿಂದ ಯೋಚನೆಗಿಟ್ಟುಕೊಂಡಿತು. ಅಲ್ಲಿಂದ ಜಗತ್ ಪ್ರಸಿದ್ಧವಾದ 'ಗ್ರ್ಯಾಂಡ್‌ಕೆನಿಯನ್' ನೋಡಲು ಹೋಗುವ ಮನಸ್ಸಿತ್ತು. ಆದರೆ ಇದಕ್ಕೆ ಕಡಿಮೆಯೆಂದರೆ ಇಪ್ಪತ್ತು ಡಾಲರಗಳನ್ನಾದರೂ ಸುರಿಯಬೇಕಾಗಿತ್ತು. ನನ್ನಂತೆ ಹಣದ ತೊಂದರೆಗೀಡಾದ ಇನ್ನೂ ನಾಲ್ಕೈದು ಪ್ರವಾಸಿಕರಿದ್ದರು. ನಾವೆಲ್ಲ ಕೂಡಿ ದೀರ್ಘಾಲೋಚನೆ ಮಾಡಿ ಕಾರೊಂದನ್ನು ಬಾಡಿಗೆಗೆ ಕೊಂಡುಕೊಂಡೆವು. ನಮ್ಮಲ್ಲಿಯ ಫ್ರೆಂಚ್ ವಿದ್ಯಾರ್ಥಿಯೊಬ್ಬನಿಗೆ ಅಂತರ್‌ರಾಷ್ಟ್ರೀಯ ಡ್ರಾಯವ್ಹರನ 'ಲೈಸನ್ಸ್' ಇತ್ತು. ಡ್ರಾಯವ್ಹರನ ಸಂಪೂರ್ಣ ಜವಾಬ್ದಾರಿಯನ್ನು ಆತ ಹೊತ್ತ. ಆತನಲ್ಲದೇ ಮೂವರು ಬ್ರಿಟಿಶರು. ಒಬ್ಬನು ಬೆಲ್ಜಿಯನ್ ಮತ್ತು ನಾನು ಕೂಡಿ ಹೊರೆಟೆವು. ಮೂರು ಗಂಟೆಗಳ ನಂತರ ಆ ಸ್ಥಳ ಮುಟ್ಟಿದಾಗ, ನನ್ನ ಕಣ್ಣುಗಳನ್ನು ನಾನೇ ನಂಬದಾದೆ. ಸಣ್ಣ ಪ್ರವಾಹದಂತೆ ಕಾಣುವ 'ಕೊಲರೆಡೂ' ನದಿ, ಯುಗಗಳಿಂದ ಹರಿದು ಬಣ್ಣಬಣ್ಣದ ಕೊರಕಲುಗಳನ್ನು ನಿರ್ಮಿಸಿದೆ. ಯಾವ ಕಲಾಕಾರನೂ ನಿರ್ಮಿಸಲಾಗದ ಸುಂದರ ಬಣ್ಣಗಳೆಲ್ಲ ಅಲ್ಲಿದ್ದವು. ಕೆಲವರು ಕುದುರೆಗಳನ್ನು ಹತ್ತಿ ಕೊರಕಲುಗಳಲ್ಲಿ ಇಳಿಯಲಾರಂಭಿಸಿದರು. ನಾನು ನಡೆದೇ ಅರ್ಧದಾರಿಯ ತನಕ ಹೋಗಿ ಮರಳಿ ಬಂದೆ. ಹಲವಾರು ಕಡೆ ಕಾರನ್ನು ನಿಲ್ಲಿಸಿ. ಅಪ್ರತಿಮವಾದ ಸೃಷ್ಟಿ ಸೌಂದರ್ಯವನ್ನು ಕಣ್ತುಂಬ ನೋಡಿದೆವು. ಮೈಲುಗಟ್ಟಲೆ ಮರುಭೂಮಿಯಲ್ಲಿ ನಡೆದು ಚಿತ್ರವಿಚಿತ್ರವಾದ ಮುಳ್ಳುಗಿಡಗಳನ್ನು ಕೂಡಿಹಾಕಿದೆವು. ಒಂದೇ ದಿನದಲ್ಲಿ ನಮ್ಮೆಲ್ಲರ ವಿದೇಶಿಯತ್ವ ಮಾಯವಾಗಿ ನಾವೆಲ್ಲ ಬಹಳ ಆತ್ಮೀಯರಾಗಿಬಿಟ್ಟಿದ್ದೆವು. ತಿರುಗಿ 'ಫ್ಲೆಗ್‌ಪೋಸ್ಟಿ'ಗೆ ಬಂದು ಒಬ್ಬರನ್ನೊಬ್ಬರು ಬೀಳ್ಕೊಟ್ಟಾಗ ನಮ್ಮೆಲ್ಲರ ಹೃದಯ ಭಾರವಾಗಿತ್ತು. ನಮಗೆ ತಲಾ ನಾಲ್ಕು ಡಾಲರಷ್ಟು ಮಾತ್ರ ಖರ್ಚು ಬಂದಿತು!

ಅಲ್ಲಿಂದ 'ಲಾಸ್‌ಏಂಜಲಿಸ್' ಪಟ್ಟಣಕ್ಕೆ ಹೋದೆ. ಇದು ಬಹಳ ವಿಸ್ತಾರವಾದ ಪಟ್ಟಣ. ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಐವತ್ತು ಮೈಲುಗಳಷ್ಟು ಅಂತರವಿದೆ. ರಸ್ತೆಗಳು ಬಹಳ ಅಗಲವಾಗಿವೆ. ಆದರೂ ವಾಹನಗಳ ಸಂಖ್ಯೆ ವಿಪರೀತ ಹೆಚ್ಚಾಗಿರುವುದರಿಂದ ಬಯಸಿದಷ್ಟು ವೇಗದಿಂದ ಸಾಗಲಾಗುವುದಿಲ್ಲ. ಪಟ್ಟಣದಲ್ಲೆಲ್ಲ ಒಂದು ಪ್ರಕಾರದ ಹೊಗೆ ತುಂಬಿದೆ. ಬಹಳ ಹೊತ್ತಿನ ತನಕ ಕಣ್ಣು ಬಿಟ್ಟು ನೋಡಿದರೆ ಕಣ್ಣೀರು ಸುರಿಯಲಾರಂಭಿಸುತ್ತದೆ. ತಲೆ-ನೋವೂ ಪ್ರಾರಂಭವಾಗುತ್ತದೆ. ಆದ್ದರಿಂದ ಇಲ್ಲೆಲ್ಲ 'ಏಯರ್-ಕಂಡಿಷನ್' ಕಾರುಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. 'ಲಾಸ್-ಏಂಜೆಲಿಸ್'ದ ಚಲನಚಿತ್ರ ಪ್ರಪಂಚವಾದ 'ಹಾಲಿವುಡ್' ಜಗತ್‌ಪ್ರಸಿದ್ಧ ಸ್ಥಳವಾದ್ದರಿಂದ ಪ್ರವಾಸಿಗಳು ಇಲ್ಲಿ ಕಿಕ್ಕಿರಿದಿರುತ್ತಾರೆ. ಅವರಿಗಾಗಿ ಬಹಳಷ್ಟು ಆಕರ್ಷಣೆಗಳ ಏರ್ಪಾಡಿದೆ. 'ಹಾಲಿವುಡ್' ನೋಡಬೇಕೆಂದು ಯುವಜನಾಂಗ ಕನಸಿದ್ದರೂ ಅದನ್ನು ನೋಡಬೇಕೆಂದು ಹಾಲಿವುಡ್‌ಗೆ ಹೋದರೆ ವೈಜಯಂತಿಮಾಲಾಳನ್ನು ನೋಡಲು ಮುಂಬೈಗೆ ಹೋದಂತೆಯೇ! ಈ ಪ್ರದೇಶವೆಲ್ಲ ಗುಡ್ಡಗಾಡಾದ್ದರಿಂದ ರಸ್ತೆಗಳು ಅಂಕುಡೊಂಕಾಗಿ ಹರಡಿಕೊಂಡಿವೆ. ಕುಡಿದು ಮತ್ತರಾಗಿ ಡ್ರಾಯ್‌ವ್ಹ ಮಾಡುತ್ತಿದ್ದ ಅನೇಕ ಚಲನಚಿತ್ರ-ನಾಯಕರನ್ನು ಈ ರಸ್ತೆಗಳು ಬಲಿ ತೆಗೆದುಕೊಂಡಿವೆಯಂತೆ. ನಟನಟಿಯರೆಲ್ಲ ಹೇರಳ ಹಣ ವೆಚ್ಚ ಮಾಡಿ ತಮ್ಮ ಮನಸ್ಸಿಗೆ ಒಪ್ಪುವ ಭವ್ಯ ಭವನಗಳನ್ನು ಕಟ್ಟಿಸಿದ್ದಾರೆ. ಅವುಗಳಲ್ಲಿ ಎಲ್ಲ ಪ್ರಕಾರದ ವಿಹಾರ-ಸಾಮಗ್ರಿಗಳ ಏರ್ಪಾಡಿದೆ.

ಪಾಸಡಿನಾ (ಕೆಲಿಫೋರ್ನಿಯಾ)ದಲ್ಲಿನ ನಕ್ಷತ್ರಗಳಿಗೆ ಮುಟ್ಟುವ ಮಾನವನ ಕನಸನ್ನು ನನಸು ಮಾಡುವ ಕಾರ್ಯಾಚರಣೆಯನ್ನು ಯೋಜಿಸಲಾಗುತ್ತಿದೆ. ಅಲ್ಲಿ ಹತ್ತಾರು ವಸ್ತು ಸಂಗ್ರಹಾಲಯಗಳಿವೆ. ಸುಂದರ ಉದ್ಯಾನಗಳಿವೆ. ಒಂದು ಸ್ಥಳದಲ್ಲಿ ಎರಡು ನೂರು ವರ್ಷಗಳ ಹಿಂದಿನ ಅಮೇರಿಕನ್ ಜನಜೀವನವನ್ನು ಚಿತ್ರಿಸುವ ಪ್ರತಿರೂಪಗಳನ್ನು (models) ನಿರ್ಮಿಸಿದ್ದಾರೆ? ಅಲ್ಲಿರುವ ಜನರು, ಪ್ರಖ್ಯಾತವಾದ 'ಡಿಝುನಿ-ಲ್ಯಾಂಡ್' ಇದೇ ಪಟ್ಟಣದಲ್ಲಿದೆ. ಇದು ಐಂದ್ರಜಾಲಿಕ ಪ್ರಪಂಚದಂತೆ ಭಾಸವಾಗುತ್ತಿದ್ದರೂ ಒಮ್ಮೆ ಒಳಹೊಕ್ಕರೆ ನೀರಿನಂತೆ ಹಣ ಖರ್ಚುಮಾಡಬೇಕಾಗುವುದು. ಕಾರು ನಿಲ್ಲಿಸುವುದರಿಂದ ಹಿಡಿದು 'ಮೊನೋಟ್ರೇನ್' (ಒಂದೇ ಹಳಿಯ ಮೇಲೆ ಚಲಿಸುವ ಟ್ರೇನು)ನಲ್ಲಿ ಸುತ್ತಾಡುವವರೆಗೆ ಎಲ್ಲದ್ದಕ್ಕೂ ಹಣ ಧಾರಾಳವಾಗಿ ತೆತ್ತಬೇಕಾಗುವುದು.

ಮುಂದೆ 'ಸಾನ್‌ಫ್ರಾನ್ಸಿಸ್ಕೋ'ಕ್ಕೆ ಹೋದೆ. ಇದೂ ಗುಡ್ಡಗಾಡಿನ ಪಟ್ಟಣವಾದ್ದರಿಂದ ಇತರ ವಾಹನಗಳಿಗೆ ಸರಾಗವಾಗಿ ಚಲಿಸಲು ಅಷ್ಟೊಂದು ಅನುಕೂಲವಾಗಿಲ್ಲ. ಅಲ್ಲಿನ್ನೂ ಟ್ರಾಮಗಾಡಿಗಳೇ ಬಳಕೆಯಲ್ಲಿವೆ. ಈ ಹಳೇ ವಾಹನವನ್ನು ನೋಡಿದಾಗ ಕೆಲ ವರ್ಷಗಳ ಹಿಂದಿನ ಮುಂಬೈ ಮತ್ತು ಕಲಕತ್ತ ನಗರಗಳ ನೆನಪಾಗುತ್ತದೆ. ಟ್ರಾಮು ನಿಲ್ಲುವ ಸ್ಥಳಕ್ಕೆ ಬಂದೊಡನೆ ಜನರು ಅದನ್ನು ತಿರುವಲು ಸಹಾಯಮಾಡುತ್ತಾರೆ. ಆಗೊಮ್ಮೆ ಈಗೊಮ್ಮೆ ಟ್ರಾಮನ್ನು ನಿಲ್ಲಿಸುವ ಗೊಡುವೆಗೇ ಹೋಗದೇ ಹತ್ತುತ್ತಾರೆ. ಇಳಿಯುತ್ತಾರೆ. ಟ್ರಾಮು ತನ್ನಷ್ಟಕ್ಕೆ ತಾನು ಚಲಿಸುತ್ತಲೇ ಇರುತ್ತದೆ. ಈ ಟ್ರಾಮುಗಾಡಿಗಳನ್ನು ತೆಗೆದುಹಾಕಬೇಕೆಂದು ನಗರಸಭೆಯವರು ಒಂದೆರಡು ಬಾರಿ ಪ್ರಯತ್ನಿಸಿದಾಗ ನಗರದವರೆಲ್ಲ ಆಂದೋಲನ ಮಾಡಿ ನಗರದ ಅಭಿಮಾನಸೂಚಕವಾದ ಈ ವಾಹನವನ್ನು ಇಡಲೇಬೇಕೆಂಬ ಒತ್ತಾಯ ತರುವುದರಲ್ಲಿ ಯಶಸ್ವಿಯಾದರು. ಇಂದಿಗೂ ಅಮೇರಿಕೆಯಲ್ಲಿ ಎಲ್ಲೂ ಪ್ರಚಾರದಲ್ಲಿಲ್ಲದ ಟ್ರಾಮು ಸಾನ್‌ಫ್ರಾನ್ಸಿಸ್ಕೋದ ಹೆಮ್ಮೆಯ ವಿಷಯವಾಗಿದೆ.

ಈ ನಗರದಲ್ಲಿ ಚೀನಿಯರು ದೊಡ್ಡ ಪ್ರಮಾಣದಲ್ಲಿದ್ದಾರೆ. ಅವರ ಅಂಗಡಿಗಳಲ್ಲಿ ಏಶಿಯಾದ ಎಲ್ಲ ದೇಶಗಳ ಸಾಮಗ್ರಿಗಳು ದೊರೆಯುತ್ತವೆ. ಈ ಚೀನಿಯರು ವಾಸಿಸುವ ಕೇರಿಗಳೇ ಬೇರೆ ಇವೆ. ಸಂಜೆ ಇವರ ಕೇರಿಗಳಲ್ಲಾಗಲೀ, ಪೇಟೆಗಳಲ್ಲಾಗಲಿ ಹೋದರೆ, ಕ್ಯಾಂಟನ್ ನಗರಕ್ಕೆ ಹೋದಂತಾಗುತ್ತದೆ. ಬಣ್ಣಬಣ್ಣದ ದೀಪಗಳು ಚಿತ್ರ-ವಿಚಿತ್ರವಾಗಿ ರಚಿಸಲ್ಪಟ್ಟ ಮನೆಗಳ ಮುಂದೆ ಕಂಗೊಳಿಸುತ್ತವೆ. ಹಲವಾರು ದಶಕಗಳಿಂದ ಅಮೇರಿಕೆಯಲ್ಲಿ ವಾಸಿಸಿದರೂ ಇವರ ಉಡುಪು, ಆಹಾರಗಳು ಚೀನಿಯಾಗಿಯೇ ಉಳಿದಿವೆ. ಇವರ ವಸತಿಗಳನ್ನೆಲ್ಲ ದಾಟಿ ಗುಡ್ಡವನ್ನು ಸುತ್ತುವರಿದ ಮಾರ್ಗದಿಂದ ಹೋದರೆ ಅನೇಕ ಏರಿಳಿತಗಳ ತರುವಾಯ ಪ್ಯಾಸಿಫಿಕ್ ಮಹಾಸಾಗರದ ದರ್ಶನ ಲಭಿಸುವುದು. ಸಾಗರದ ದಂಡೆಯ ಗುಂಟ ನೂರಾರು ಮೀನುಗಾರರು ಹಲವಾರು ಜಾತೀಯ ಮೀನುಗಳನ್ನು ಹುರಿದೋ, ಒಣಗಿಸಿಯೋ, ಅನೇಕ ತಿಂಡಿಗಳ ರೂಪದಲ್ಲಿ ಮಾರುತ್ತಿರುತ್ತಾರೆ. ನಾವು ಶೇಂಗಾ, ಹುರಿಗಡಲೆ ಕೊಂಡು ತಿನ್ನುವಂತೆ ಇಲ್ಲಿ ಪ್ರವಾಸಿಗರು ಹುರಿದ ಮೀನುಗಳನ್ನು ಕೊಂಡು ತಿನ್ನುತ್ತಾರೆ. ನೌಕಾವಿಹಾರಕ್ಕೂ ಉತ್ತಮ ವ್ಯವಸ್ಥೆ ಇಲ್ಲಿದೆ. ವಿಹಾರ-ನೌಕೆಗಳಲ್ಲಿ ಸಂಗೀತ, ನೃತ್ಯ, ಕುಡಿತಗಳಿಗೆ ಏರ್ಪಾಡಿದೆ. ಅಲ್ಲಿಂದ ಕೊಂಚ ಮುಂದೆ ಹೋದರೆ ಅದ್ಭುತವಾದ ಜಗತ್‌ಪ್ರಸಿದ್ಧವಾದ ಸುವರ್ಣದ್ವಾರದ ಬ್ರಿಜ್ ಇದೆ. ಸಾನ್‌ಫ್ರಾನ್ಸಿಸ್ಕೋನಗರದ

ಹೊರಗಡೆ ಪ್ರಪಂಚದಲ್ಲಿಯೇ ಎತ್ತರವಾದ ಚಂದನ-ವೃಕ್ಷಗಳ (red-wood) ಅರಣ್ಯವನ್ನು ನೋಡಬಹುದು. ಅಮೇರಿಕನ್ನರು ಕಣ್ಣುಬಿಡುವುದಕ್ಕೂ ಮೊದಲಿನ ಎರಡು ಸಾವಿರ ವರ್ಷಕ್ಕಿಂತ ಹಿಂದಿನ ಇತಿಹಾಸವನ್ನು ಈ ವೃಕ್ಷಗಳು ಕಂಡಿವೆ. ಕೆಲವು ವೃಕ್ಷಗಳನ್ನು ಕೊರೆದು ಕಾರು ಹೋಗಲು ಮಾರ್ಗವನ್ನು ಮಾಡಿದ್ದಾರೆ.

'ಕೆಲಿಫೋರ್ನಿಯ'ದಿಂದ 'ಒರೆಗೊನ್' ರಾಜ್ಯಕ್ಕೆ ಹೋಗುವ ಹೆದ್ದಾರಿ, ವನಸಿರಿಯಿಂದ ಸುತ್ತುವರಿದಿದೆ. ಹನ್ನೆರಡೂ ತಿಂಗಳು ಜುಳುಜುಳು ಹರಿಯುವ ನದಿಗಳು, ಉನ್ನತವಾದ ಪರ್ವತಾವಳಿಗಳು, ಆಳವಾದ ಕಂದರಗಳು, ಗಗನಚುಂಬಿ ಸೂಚಿಪರ್ಣವೃಕ್ಷಗಳು, ಬಹಳ ರಮಣೀಯವಾಗಿವೆ. ವರ್ಷವರ್ಷಕ್ಕೂ ಈ ಅರಣ್ಯ ಧನಪಿಶಾಚಿ ಮಾನವನಿಗೆ ಕ್ರಮೇಣ ಆಹುತಿಯಾಗುತ್ತಿದೆ. 'ಸ್ವೀಟ್-ಹೋಮ್'ದಲ್ಲಿ ಕಟ್ಟಿಗೆಯ ವ್ಯಾಪಾರವೇ ಮುಖ್ಯ. ದೊಡ್ಡ ದೊಡ್ಡ ಮರಗಳನ್ನು ಯಂತ್ರದ ಸಹಾಯದಿಂದ ಎಳೆದು ತಂದು ಅವುಗಳನ್ನು ತೀರ ತೆಳ್ಳಗಿನ ಹಾಳೆಯಂತೆ ಕೊರೆದು ಒಂದು ಹಾಳೆಗೆ ಇನ್ನೊಂದು ಹಾಳೆ ಅಂಟಿಸಿ 'ಪ್ಲಾಯುವುಡ್' ತಯಾರಿಸುವರು. ಅಮೇರಿಕೆಯಲ್ಲಿ ಬಹಳ ಮನೆಗಳೆಲ್ಲ ಕಟ್ಟಿಗೆಯವೇ ಇರುವುದರಿಂದ ಕಟ್ಟಿಗೆಯ ವ್ಯಾಪಾರದಿಂದ ತುಂಬ ಹಣ ಗಳಿಸಲಾಗುತ್ತಿದೆ. ಅಮೇರಿಕೆಯ ಪಶ್ಚಿಮ ಕರಾವಳಿಯಲ್ಲಿ ಇನ್ನೂ ಅಷ್ಟಾಗಿ ಜನವಸತಿ ಬೆಳದಿಲ್ಲವಾದ್ದರಿಂದ ಅಲ್ಲಿ ಇನ್ನೂ ಅರಣ್ಯ ಸಂಪತ್ತು ಸಾಕಷ್ಟು ಉಳಿದುಕೊಂಡಿದೆ.

ವಾಶಿಂಗ್‌ಟನ್ ರಾಜ್ಯ ಸದಾ ಹಸಿರು ರಾಜ್ಯ ಎಂದು ಕರೆಯಲ್ಪಡುತ್ತದೆ. ಅದರ ರಾಜಧಾನಿಯಿಂದ ಸಿಯಾಟಲ್‌ಗೆ ಹೋಗಬೇಕಾದರೆ ಎಷ್ಟೋ ಸರೋವರಗಳನ್ನು ದಾಟಬೇಕು. ಎಷ್ಟೋ ಕಾಲುವೆಗಳಿಂದ ಹಾಯಬೇಕು. ಸಾಕಷ್ಟು ಮಳೆಯಾಗುವುದರಿಂದ ಎಲ್ಲೆಲ್ಲೂ ನೀರೇ ನೀರು. ಇಲ್ಲಿಯು ಎತ್ತರವಾದ ಪರ್ವತಶಿಖರಗಳು ಸದಾ ಹಿಮಾಚ್ಛಾದಿತವಾಗಿರುತ್ತವೆ. ಹತ್ತಿರ ಹೋದಾಗಲೇ ಅವುಗಳ ಶೀತದ ಪರಿಚಯವಾಗುತ್ತದೆ. ಸಿಯಾಟಲ್ ಆರೇಳು ಗುಡ್ಡಗಳ ಮೇಲೆ ಪಸರಿಸಿದೆ.

ಇದು ಉತ್ತಮವಾದ ಬಂದರವಿದ್ದು ಬಹಳಷ್ಟು ಬೆಳವಣಿಗೆ ಹೊಂದಿದೆ. ನಾಲ್ಕೈದು ವರ್ಷಗಳ ಹಿಂದೆ ಅಂತರ್‌ರಾಷ್ಟ್ರೀಯ ಜಾತ್ರೆ ಇದೇ ಪಟ್ಟಣದಲ್ಲಿ ಜರಗಿತ್ತು. ಇಂದಿಗೂ ಆ ಜಾತ್ರೆಯ ಬಹ್ವಂಶವನ್ನು ಇದ್ದಕ್ಕಿದ್ದಂತೆ ಇಟ್ಟಿದ್ದನ್ನು ನೋಡಬಹುದು. ಗಗನಸೂಚಿ (space-needle) ಸ್ತಂಭವೊಂದು ನಿಂತಿದೆ ಇಲ್ಲಿ. 'ಟ್ರಾಲಿ'ಯಿಂದ ಅದರ ಮೇಲೆ ಏರಿದರೆ ಪರಿಸರದ ದೃಶ್ಯಗಳೆಲ್ಲ ಕಾಣುತ್ತವೆ. ಈ ಅಂತರ್‌ರಾಷ್ಟ್ರೀಯ ಪ್ರದರ್ಶನದಲ್ಲಿ ಇಟ್ಟ ಯಾಂತ್ರಿಕ, ವೈಜ್ಞಾನಿಕ ಭಾಗವೆಲ್ಲ ಅತ್ಯಂತ ಉದ್ಬೋಧಕವಾಗಿದೆ.

ಸಿಯಾಟಲ್‌ದಿಂದ ಉತ್ತರ-ರಾಜ್ಯಗಳೊಳಗಿಂದ ಸಾಯಿರೆಕ್ಯೂಸಿಗೆ ಹೋಗುವಾಗ ಚಳಿಗಾಲ ನರ್ತಿಸುತ್ತ ಭೂಮಿಗೆ ಇಳಿಯುವದರಲ್ಲಿತ್ತು. ಗಿಡಮರಗಳೆಲ್ಲ ಹಸಿರು, ತಿಳಿಹಸಿರು ಕಂದು, ಹಳದಿ, ಕೆಂಪು ಬಣ್ಣಗಳನ್ನು ತಳೆದು ನಿಂತಿದ್ದವು. ಒಂದರ ಹಿಂದೊಂದು ಉತ್ತರ-ಡೆಕೋಟ, ದಕ್ಷಿಣ-ಡೆಕೋಟ, ಐಡಾಹೋ ರಾಜ್ಯಗಳು ಬಂದವು. ಹಿಂದುಳಿದವು. ನಮ್ಮ ಬಸ್ಸು ಚಲಿಸುತ್ತಲೇ ಇತ್ತು. ಶಿಕಾಗೋ ಪಟ್ಟಣ ಬಂದಾಗ ಅದು ನಿಂತಿತು. ಶಿಕಾಗೋ ಅಸಂಖ್ಯ ಉನ್ನತ ಕಟ್ಟಡಗಳ ಪಟ್ಟಣ. ವರ್ಷ ವರ್ಷ ಬೆಳೆಯುತ್ತಲೇ ಇದೆ.

ಬಹಳಷ್ಟು ರಾಜಮಾರ್ಗಗಳು ನೆಲದ ಒಳಗಿಂದ ಹೋಗುತ್ತವೆ. ಶಿಕಾಗೋದಿಂದ ಕ್ಲೀವ್‌ಲಂಡ್ ಮಾರ್ಗವಾಗಿ ಬಫೆಲೋಕ್ಕೆ ಬಂದಿತು ಬಸ್ಸು. 'ಇರಿ' ಸರೋವರದ ಮೇಲಿದ್ದ ಈ ಪಟ್ಟಣ ಸಾಕಷ್ಟು ಹಳೆಯದು. ಬಹಳಷ್ಟು ಕಾರಖಾನೆಗಳಿದ್ದು ಪಟ್ಟಣ ಹೊಗೆಯಿಂದ ತುಂಬಿದಂತಿದೆ. ಇಲ್ಲಿಂದ ಹೆಸರುವಾಸಿಯಾದ ನಾಯಗರಾ ಧಬಧಬಿ (ತಡಸಲು) ಬಹಳ ಸಮೀಪದಲ್ಲಿದೆ.

ಸಾಯರೆಕ್ಯೂಸೇ ಅಲ್ಲಿಂದ ನನ್ನ ಕೊನೆಯ ನಿಲ್ದಾಣದ ಸ್ಥಳವಾಗಿತ್ತು.

ಪ್ರವಾಸದ ದಣುವಾರಿಸಿಕೊಳ್ಳಲು ಹದಿನೈದು ದಿನಗಳು ಹಿಡಿದವು. ನನ್ನ ಟಿಕೆಟಿನ ಮೇಲೆ ಇನ್ನೂ ಒಂದು ತಿಂಗಳು ಪ್ರವಾಸಮಾಡಲು ಬರುವಂತಿದ್ದರೂ ಮೈಮನಗಳೆರಡೂ ವಿಪರೀತ ದಣಿದಿದ್ದವು.

'ಗ್ರೇಹೌಂಡ್' ಕಂಪನಿಯೊಡನೆ ಪ್ರವಾಸಮಾಡುವುದು ಮುಗಿದಿದ್ದರೂ ಅವರ ಘೋಷಣೆ ಮಾತ್ರ ಇನ್ನೂ ಮರೆತಿರಲಿಲ್ಲ:

"go with us and leave worrying with us"

"ನಮ್ಮೊಂದಿಗೆ ಪ್ರಯಾಣದ ಸುಖ ನಿಮಗಿರಲಿ–ಅದರ ತಾಪತ್ರಯ ನಮಗಿರಲಿ"

ಇದೇ ಆ ಘೋಷಣೆಯಾಗಿತ್ತು.

ಈ ಭಾರ ಅವರು ಹೊರದಿದ್ದರೆ ಈ ಅಪೂರ್ವ ಪ್ರವಾಸದ ಭಾಗ್ಯ ನನ್ನ ಪಾಲಿಗಿರುತ್ತಿತ್ತೋ ಇಲ್ಲವೋ.....

* * * * * *

ಈ ಕಂಪನಿಯಂತೆಯೇ ನಾನೂ ನನ್ನ ಈ ಪ್ರವಾಸಕಥನದ ಬೆನ್ನುಹತ್ತಿ ಬಂದ ವಾಚಕರಿಗೆ "ಪ್ರವಾಸ–ಕಥಾ–ಶ್ರವಣದ ಸುಖ ನಿಮಗಿರಲಿ, ಪ್ರವಾಸಾನುಭವದ ದುಃಖ ನನಗಿರಲಿ" ಎಂದು ಹಾರೈಸಬಹುದೇ?

* * * *

ಪ್ರಗತಿಯ ಹಾದಿಯಲ್ಲಿ

1. ಮಲೆಯ ಸಂತ	– ಬಿಳುಮನೆ ರಾಮದಾಸ್	2006	ರೂ. 180
2. ದೇವರುಗಳ ರಾಜ್ಯದಲ್ಲಿ	– ಬೊಳುವಾರು ಮಹಮದ್ ಕುಂಞ	2006	ರೂ. 80
3. ನಾತಿಚರಾಮಿ	– ಎಂ.ಎ. ಇಂದಿರ	2006	ರೂ. 45
4. ಭಾವ ಬಂಧನ	– ಎಂ.ಎ. ಇಂದಿರ	2006	ರೂ. 50
5. ಸುಪ್ತ ಸಾಗರ	– ಎಂ.ಎ. ಇಂದಿರ	2006	ರೂ. 70
6. ತಮ್ಮ ತೊಟ್ಟಿಲುಗಳ ತಾವೇ ಜೀಕಿ...	– ಎನ್.ಸಿ. ಮಹೇಶ್	2006	ರೂ. 80
7. ಒಂದು ಕೈಫಿಯತ್	–ಚಂದ್ರಕಾಂತ ಕುಸನೂರ	2007	ರೂ. 075
8. ಬೇಲಿಮ್ಯಾಲಿನ ಹೂವು	–ಡಾ. ನಿಜಲಿಂಗಪ್ಪ ಮಟ್ಟಿಹಾಳ	2007	ರೂ. 80
9. ತಲ್ಲಣದ ಆ ಕ್ಷಣ	– ಕಂನಾಡಿಗಾ ನಾರಾಯಣ	2007	ರೂ. 60
10. ಕಾಲನೌಕೆ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 50
11. ಬೆನ್‌ಹರ್	– ಡಾ. ಕೆ. ಪುಟ್ಟಸ್ವಾಮಿ	2007	ರೂ. 60
12. ಮಾತಾಹರಿ	– ಡಾ. ಜೆ. ಬಾಲಕೃಷ್ಣ	2007	ರೂ. 25
13. ಪುಟ್ಟರಾಜಕುಮಾರ	– ಡಾ. ಜೆ. ಬಾಲಕೃಷ್ಣ	2007	ರೂ. 40
14. ಬೊಕಾಷಿಯೋನ ರಸಿಕತೆಗಳು	– ಡಾ. ಜೆ. ಬಾಲಕೃಷ್ಣ	2007	ರೂ. 45
15. ಮಾಯಾ ಮನುಷ್ಯ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 90
16. ಭೂ ಮಧ್ಯಕ್ಕೆ ಒಂದು ಪಯಣ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 80
17. Sociology for pre law students	- Adinarayanappa	2007	Rs.125
18. ಕುವೆಂಪು ಸಾಹಿತ್ಯ ದರ್ಶನ	– ಡಿ.ಎಸ್. ನಾಗಭೂಷಣ	2007	ರೂ. 50
19. ಇಳೆಯ ಬೆಳಗು	– ಪ್ರೊ. ಬಿ.ಎ. ಶ್ರೀಧರ	2007	ರೂ. 175
20. ಪಲ್ಲಟ ಪರ್ವ	– ಪ್ರೊ. ಬಿ.ಎ. ಶ್ರೀಧರ	2007	ರೂ. 200
21. ಗೀತಾಂಜಲಿ	– ನವೀನ್ ಹಳೆಮನೆ	2007	ರೂ. 100
22. ಸಾಹಿತ್ಯ ಸಂಭ್ರಮ	– ಸಂ. ಎಂ. ಬೈರೇಗೌಡ	2007	ರೂ. 100
23. ಬಹುಜನ ಚಿಂತನ	– ಡಾ. ಕುಂಸಿ ಉಮೇಶ್	2007	ರೂ. 60
25. ತರುಣಿ ಮಾ (ಹಿಂದಿ)	– ಪಿಂಟು ನಂಗಾವತ್	2008	ರೂ. 40
26. ದೇವರುಗಳ ರಾಜ್ಯದಲ್ಲಿ	– ಬೊಳುವಾರು ಮ. ಕುಂಞ	2008	ರೂ. 80
27. ಉತ್ಪಾತ	– ಡಾ. ಲಕ್ಷ್ಮಣಕೌಂಟೆ	2008	ರೂ. 110

28. ಕಣ್ಣ ಕಣಿವೆ	– ರೇಣುಕಾ ನಿಡಗುಂದಿ	2008	ರೂ. 50
29. 80 ದಿನಗಳಲ್ಲಿ ಭೂ ಪ್ರದಕ್ಷಿಣೆ	– ಡಾ. ಕೆ. ಪುಟ್ಟಸ್ವಾಮಿ	2008	ರೂ. 120
30. ಮಾಳಸುತ್ತಿನ ಮೂಲಿಕೆ ವೈದ್ಯ	– ಡಾ. ಸ.ನಾ.ಭಟ್	2008	ರೂ. 125
31. ಕನ್ನಡ ಸಾಹಿತ್ಯ–ಸಂಸ್ಕೃತಿ:....	– ಡಾ. ಡೊಮಿನಿಕ್	2008	ರೂ. 150
32. ಡೊಂಕು ಬಾಲದ ನಾಯಕರು	– ಡಾ.ಎಲ್. ಬಸವರಾಜು	2008	ರೂ. 100
33. ಯುಗ ಪುರುಷ	– ಡಾ. ಲಕ್ಷ್ಮಣ ಕೌಂಟೆ	2008	ರೂ. 250
34. ಹಿಂದಣ ಹೆಜ್ಜೆಯನರಿಯದೆ	– ಡಾ. ಕುಮಾರ ಚಲ್ಯ	2008	ರೂ.250
35. ನಾನು ಅವನಲ್ಲ... ಅವಳು...	– ಕನ್ನಡಕ್ಕೆ: ಡಾ. ತಮಿಳ್ ಸೆಲ್ವಿ	2008	ರೂ. 150
36. ಹುಚ್ಚು ದಾಳಿಂಬೆ ಗಿಡ	–ಡಾ. ವಿಜಯಾ ಗುತ್ತಲಾ, ಡಾ. ವಿ.ವಿಸಾಜಿ	2008	ರೂ. 70
37. ಪದ್ಯದ ಮರ	– ಕೃಷ್ಣಮೂರ್ತಿ ಬಿಳಿಗೆರೆ	2008	ರೂ. 75
38. ಜೋಳಿಗೆಯಲ್ಲೊಂದು ಅಗುಳು	– ಕೃಷ್ಣ ರಾಯಚೂರ್	2008	ರೂ. 80
39. ನದಿಯ ತೀರದ ನಡಿಗೆ	– ಡಾ. ರಂಗನಾಥ ಕಂಟನಕುಂಟೆ	2008	ರೂ. 50
40. ಅಸ್ತಿತ್ವ	– ಎಚ್.ಆರ್. ಶಿವಕುಮಾರ್	2008	ರೂ. 045
41. ಯಕ್ಷರಂಗ	– ರವಿ ರಾ. ಅಂಚನ್	2009	ರೂ. 80
42. ಅರಿವೆಂಬ ಮಾಯೆ	– ರವಿ ರಾ. ಅಂಚನ್	2009	ರೂ. 150
43. ಮಳೆ ಕೋಗಿಲೆ	(ಸಂ)–ಡಾ.ಎಂ. ಬೈರೇಗೌಡ	2009	ರೂ. 150
44. ಮಲೆಯ ಪ್ರಬಂಧಗಳು	–ಬಿಳುಮನೆ ರಾಮದಾಸ್	2009	ರೂ. 100
45. ನೀರದೀವಿಗೆ	– ಡಾ. ಕೆ.ವೈ. ನಾರಾಯಣಸ್ವಾಮಿ	2009	ರೂ. 150
46. ಮಹಿಳೆ: ಅಸ್ತಿತ್ವದ ಸಂಕಥನ	– ಡಾ. ಕವಿತಾ ರೈ	2009	ರೂ. 250
47. ಶಿಷ್ಯಗಾಥೆ	– ಶ್ರೀಧರ ಕೋಟೆಕಾರ್	2009	ರೂ. 200
48. The Ballad of Sikhs	- Sridhar Kotekar	2009	Rs.250
49. ರಾಗೌ ಕಾವ್ಯ ವಿಮರ್ಶೆ	– ಸಂ. ಡಾ. ಬೆಳ್ಳೂರು ವೆಂಕಟಪ್ಪ	2009	ರೂ. 100
50. ಕವನ ಕೂಡಲಸಂಗಮ	– ಡಾ. ಎಲ್. ಬಸವರಾಜು	2009	ರೂ. 350
51. ಬೆಳಕು–ಬೆರಗು	– ಪ್ರೊ. ಲಿಂಗದೇವರು ಹಳೆಮನೆ	2009	ರೂ. 100
52. ಯಮನ ಕೋಣವು...	– ಪ್ರೊ. ಎಸ್. ತಮ್ಮಾಜಿರಾವ್ ನಂಗ್ಲಿ	2009	ರೂ. 100
53. ಡಾರ್ವಿನ್ ಕಂಡ ಗಲಪಗಾಸ್ ದ್ವೀಪ	– ಟಿ.ಆರ್. ಅನಂತರಾಮು	2009	ರೂ. 40
54. ಭಕ್ತಿಪಂಥದಲ್ಲಿ ಸ.ಕಾ. ಬೇರುಗಳು,	– ಡಾ. ಎಚ್.ಎಂ. ಮರುಳಸಿದ್ಧಯ್ಯ	2009	ರೂ. 125
55. ದೂರದರ್ಶಕ ಕಂಡ ವಿಶ್ವರೂಪ	– ಟಿ.ಆರ್. ಅನಂತರಾಮು	2009	ರೂ. 150
56. ಪ್ರಕ್ಷುಬ್ಧ ಕಣಿವೆ	– ನ. ರಮೇಶ್, ವಿ.ಎಸ್. ಶ್ರೀಧರ	2009	ರೂ. 150
57. ಪೂರ್ವ ಪಶ್ಚಿಮ ಅಪೂರ್ವರು	– ಪುಸ್ತಕಮನೆ ಹರಿಹರಪ್ರಿಯ	2009	ರೂ. 150
58. ದೊಡ್ಡವರೆಲ್ಲ ಜಾಣರಲ್ಲಾ...!	–ಸ್ನೇಹಪ್ರಿಯ ನಾಗರಾಜ್	2009	ರೂ. 125
59. ಬಾಧೆಯ ವೃಕ್ಷದಲ್ಲಿ ಬೋಧಿಯ ಪರಿಮಳ	–ಜಂಬಣ್ಣ ಅಮರಚಿಂತ	2009	ರೂ. 100

60. ಟ್ರ್ಯಾಕುಗಳ ಮೇಲೆ ಹುಣ್ಣಿಮೆ –ಬಿ.ಎನ್. ಮಲ್ಲೇಶ್ 2009 ರೂ. 45

61. ಬ್ರೇಕಿಂಗ್ ನ್ಯೂಸ್ –ಬಿ.ಎನ್. ಮಲ್ಲೇಶ್ 2009 ರೂ. 200

62. ಪಳಯನ್ನರು ಮತ್ತು ದ್ರೌಪದಿ –ವೇಣುಗೋಪಾಲ 2010 ರೂ. 150

63. ಅಲ್ಲಮನು ಮೈಮೇಲೆ ಬಂದಾಗ... – ಡಾ. ಎಲ್. ಬಸವರಾಜು 2010 ರೂ. 150

64. Mevaric Forester - H.A. Purushothama Rao 2010 ರೂ. 150

65. ಮಕ್ಕಳ ಆರೋಗ್ಯ –ಡಾ. ಪಿ.ಎಸ್. ಶಂಕರ್ 2010 ರೂ. 250

66. ಆರೋಗ್ಯ ಪಥದಲ್ಲಿ ಮುನ್ನಡೆ –ಡಾ. ಪಿ.ಎಸ್. ಶಂಕರ್ 2010 ರೂ. 100

67. ಚಿತ್ರಗುಪ್ತ ಚಂಪೂ – ಡಾ. ಎಲ್. ಬಸವರಾಜು 2010 ರೂ. 100

68. ಪಾಶ್ಚಾತ್ಯ ಚಿಂತಕರ ದೃಷ್ಟಿಯಲ್ಲಿ ಭಾ. ಸಮಾಜ–ಡಾ. ಎಚ್.ಎಂ.ಎಂ.2010 ರೂ. 100

69. Objective Plant Nemotology -B. Manjunath 2010 Rs. 150

70. ಚರಿತ್ರೆಯ ಐಸಿರಿ –ಡಾ. ಕೆ. ಸಾವಿತ್ರಿ 2010 ರೂ. 150

71. ಅನಾವರಣ –ಬಿಳುಮನೆ ರಾಮದಾಸ್ 2010 ರೂ. 225

72. ದಿಗ್ಭ್ರಾಂತ ಸಮಾಜಕ್ಕೆ .... ಸಂ.1 – ಎಚ್.ಎಂ.ಎಂ. 2010 ರೂ. 450

73. ದಿಗ್ಭ್ರಾಂತ ಸಮಾಜಕ್ಕೆ .... ಸಂ.2 – ಎಚ್.ಎಂ.ಎಂ. 2010 ರೂ. 450

74. Tv Tolls for Teens -Dr. Rnld. Anil Fernandiz 2010 Rs.. 250

75. ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ–ಡಾ. ಆರ್. ಚಲಪತಿ 2010 ರೂ. 150

76. Computer Aplication in Business -Suresh Palimat 2010 Rs. 150

77. Computer Business Aplication -Suresh Palimat 2010 Rs. 150

78. ಕಥಾಕಥನ – ಡಾ. ಎಲ್. ಹನುಮಂತಯ್ಯ 2010 ರೂ. 125

79. ಲೋಹಿಯಾವಾದಿ ಡಾ.ಎಂ.ನಾಗಪ್ಪ –ಡಾ. ಎನ್.ಡಿ. ತಿಪ್ಪೇಸ್ವಾಮಿ 2010 ರೂ. 300

80. ಮಣ್ಣ ಬಳೆನಾದ –ಡಾ. ಸಿ.ಎಸ್. ದ್ವಾರಕಾನಾಥ್ 2010 ರೂ. 150

81. ಹೆಣ್ಣುತನ ಎಂಬ ಕಣ್ಕಟ್ಟು – ಎಚ್.ಎಸ್. ಶ್ರೀಮತಿ 2010 ರೂ. 300

82. ಜಾಹೀರಾತುಗಳಲ್ಲಿ ಮಹಿಳಾ ಪ್ರಾತಿನಿಧೀಕರಣ–ಡಾ. ಕಲಾವತಿ ಬಿ.ಜಿ2010 ರೂ. 250

83. ಹೆಣ್ಣುಬರೆಹದ ಒಳಬಂಡಾಯ –ಎಚ್.ಎಸ್. ಶ್ರೀಮತಿ 2010 ರೂ. 125

84. Maverick Forester -Vijayaraghavan 2010 Rs. 150

85. ಬ್ಲಾಗಿಲನು ತೆರೆದು – ಬಿ.ಎ. ವಿವೇಕ ರೈ 2011 ರೂ. 80

86. ತುಳಿಯುವ ಕಾಲಿಗೆ ಬಿದ್ದೀರ –ಡಾ. ಎಲ್. ಬಸವರಾಜು 2011 ರೂ. 50

87. ಅಳಿದುಳಿದವರು –ಬೋಲ ಚಿತ್ತರಂಜನದಾಸ್ ಶೆಟ್ಟಿ 2011 ರೂ. 250

88. ಸಂಸ್ಕೃತಿ ವಿನ್ಯಾಸ – ಪ್ರೊ. ಶಿವರಾಮಯ್ಯ 2011 ರೂ. 200

89. ಕಾಮರಸಾಯನ –ರಾಹು 2011 ರೂ. 450

90. SOUTH INDIA: An Expedition....- Dr. Srinivasa Havanur 2011 Rs. 550

91. ಕ್ಲಿಕ್ [ಅ]ಸ್ಥಿರ ಚಿತ್ರಗಳು –ಡಿ.ಜಿ. ಮಲ್ಲಿಕಾರ್ಜುನ 2011 ರೂ. 450

92. ಸಮಾಜಕಾರ್ಯದ ಕಣಸುಗಾರ ಎಚ್.ಎಂ.ಎಂ. 2011 ರೂ. 125

93. ಹಂಪೆಯ ಹರಿಹರ ಕಂಡರಿಸಿದ ಭಕ್ತಿ-ಜ್ಞಾನ-ವೈರಾಗ್ಯದ ನುಡಿ ಶಿಲ್ಪಗಳು -ಡಾ. ಎಲ್. ಬಸವರಾಜು 2011 ರೂ. 30

94. ಒಂದು ಬುಡಕಟ್ಟಿನ ಲೋಕದೃಷ್ಟಿ -ಹಿ.ಚಿ. ಬೋರಲಿಂಗಯ್ಯ 2011 ರೂ. 150

95. ಗೋಡೆಯ ಚಿತ್ರ -ಡಾ. ರಂಗನಾಥ ಕಂಟನಕುಂಟೆ 2011 ರೂ. 120

96. Infact... SHE -Dr. Kavitha K 2011 Rs. 300

97. ಕನ್ನಡ ಆಡು ನುಡಿಯ ಸೊಲ್ಲರಿಮೆ:1 ಕೆ.ವಿ. ನಾರಾಯಣ 2011 ರೂ. 50

98. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ-1 ಡಾ. ಎಚ್.ಎಸ್. ಶ್ರೀಮತಿ 2011 ರೂ. 300

100. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ-2 ಡಾ. ಎಚ್.ಎಸ್. ಶ್ರೀಮತಿ 2011 ರೂ. 250

101. ಪ್ರಾಚೀನ ಭಾರತದ ಚರಿತ್ರೆ -ಡಾ. ಎಚ್.ಎಸ್. ಶ್ರೀಮತಿ 2012 ರೂ. 150

102. ಆಧುನಿಕ ಭಾರತದಲ್ಲಿ ಮಹಿಳೆ -ಡಾ. ಎಚ್.ಎಸ್. ಶ್ರೀಮತಿ 2012 ರೂ. 260

103. ನಾನು ಅವನಲ್ಲ... ಅವಳು...! -ಡಾ. ತಮಿಳ್ ಸೆಲ್ವಿ 2012 ರೂ. 200

104. BUSINESS AND ACCOUNTING DICTIONARY-Nagaraju 2012 Rs.300

105. A Historical Discorse -Dr. H.B. Ramesh 2012 Rs. 200

106. ನಿಮ್ಮನೀಗೆ ಗುಡ್ಡದಯ್ಯ -ಎಂ.ಎನ್. ವೆಂಕಟೇಶ 2012 ರೂ. 150

107. ಸ್ತ್ರೀವಾದ: ತಾತ್ತ್ವಿಕತೆ - ಎಚ್.ಎಸ್. ಶ್ರೀಮತಿ 2012 ರೂ. 350

108. ಸ್ತ್ರೀವಾದ : ಆನ್ವಯಿಕತೆ -ಎಚ್.ಎಸ್. ಶ್ರೀಮತಿ 2012 ರೂ. 300

109. ಕುರ್ಚಿ -ಡಾ. ಆರ್. ಶಿವಪ್ಪ 2012 ರೂ. 50

110. ಪಶು-ಪಕ್ಷಿ ಪ್ರಪಂಚ -ಡಾ. ಕೃಷ್ಣಾನಂದ ಕಾಮತ್ 2012 ರೂ. 125

111. ಕೀಟ ಜಗತ್ತು -ಡಾ. ಕೃಷ್ಣಾನಂದ ಕಾಮತ್ 2012 ರೂ. 125

112. ಕಾವಿ ಕಲೆ -ಡಾ. ಕೃಷ್ಣಾನಂದ ಕಾಮತ್ 2012 ರೂ. 100

113. ಕಾಮತರ ಕುಂಚ ಪ್ರಪಂಚ -ಡಾ. ಕೃಷ್ಣಾನಂದ ಕಾಮರ್ 2012 ರೂ. 220

114. ಕಲ್ಪಶೋಧ -ಡಾ. ಡಿ.ಎನ್. ಯೋಗೀಶ್ವರಪ್ಪ 2012 ರೂ. 400

115. Business education in India ISSUES AND IMPERATIVES Dr. B. Shekhar 2012 Rs. 500

116. Business education in India DIRECTIONS FOR DEVELOPMENT Dr. B. Shekhar 2012 Rs. 500


117. MACRO DYNAMICS OF BUSINESS EDUCATION Dr. B. Shekhar 2012 Rs. 500

118. ಕಟಕಟೆಯಲ್ಲಿ ಮಿಡಿದ ಹೃದಯಗಳು -ಸುಚೇತನಾ ನಾಯ್ಕ 2013 ರೂ. 125

119. MANGALORE MATTERS -Ronald Anil Fernondes 2013 Rs. 150

120. ಪ್ರಹಸನ ಪರಾಮರ್ಶೆ –ಎಸ್.ಎಲ್.ಎನ್. ಸ್ವಾಮಿ	2013	ರೂ. 80
121. ಮ. ರಂಗನಾಥನ್ ಕಥೆಗಳು –ಡಾ. ತಮಿಳ್ ಸೆಲ್ವಿ	2013	ರೂ. 100
122. ಜಂಗಲ್ ತಂತ್ರಂ –ಅನು: ಡಾ. ಎನ್. ದೇವರಾಜ್	2013	ರೂ. 100
123 ಇಂಗ್ಲಿಷ್–ಕನ್ನಡ ಉಭಯಭಾಷಿ – ಕೆ.ಟಿ. ಗಟ್ಟಿ	2013	ರೂ. 200
124. ದಡ್ಡ ಬುರುಡೆ ಪ್ರೇತ ಇತರ ಕತೆಗಳು –ಡಿ.ಎಸ್. ನಾಯ್ಕ	2013	ರೂ. 100
125. ಬದುಕು ಜಟಕಾ ಬಂಡಿ –ಎನ್ ಅರ್ಜುನದೇವ	2013	ರೂ. 40
126. ಹೆಣ್ಣೆಂದರೆ –ಡಾ. ಶಿವರಾಮ ಅಸುಂಡಿ	2013	ರೂ. 100
127. ನಾಟಕ ಸಂಗಮ –ಶಿವಮೂರ್ತಿ ನಂದನ ಹೊಸೂರು	2013	ರೂ. 150
128. ಬೋಧಿಯ ಬೆಳಕಿನಲ್ಲಿ –ಡಾ. ಮಲ್ಲಿಕಾರ್ಜುನ ಅಮ್ಮೆ	2013	ರೂ. 150
129. ಆಧುನಿಕ ಬೆಂಗಳೂರು –ವೇಮಗಲ್ ಸೋಮಶೇಖರ್	2013	ರೂ. 200
130. ಎನ್.ಆರ್. ನಾಯಕ ಬದುಕು ಬರಹ –ಡಾ. ಜ್ಯೋತಿನಾಯಕ	2013	ರೂ. 400
131. ಎಣ್ಯಾಗ ಬತ್ತಿ ಉರಿದ್ಹಾಂಗ –ಡಾ. ಜಿ.ಆರ್. ತಿಪ್ಪೇಸ್ವಾಮಿ	2013	ರೂ. 200
132. ದ್ರಾವಿಡ ನೆಲದ ಜಾನಪದ: ಪರದೇಶೀ ಸಿದ್ಧಾಂತಗಳ ಮಿತಿಗಳು –ಡಾ. ಎಂ.ಎನ್. ವೆಂಕಟೇಶ	2013	ರೂ. 150
133. ಎಲ್ಲರ ಜಾಗತಿಕರಣ: ನಮ್ಮ ಜಾನಪದ –ಡಾ. ಎಂ.ಎನ್. ವೆಂಕಟೇಶ	2013	ರೂ. 100
134. ದೇವರು ರುಜು ಮಾಡಿದನು –ಡಾ. ಸತ್ಯನಾರಾಣ ಭಟ್ ಪಿ	2013	ರೂ. 200
135. ಮಾರ್ಗಾದರ್ಶ –ಡಾ. ಹೆಚ್. ನಟರಾಜ್	2014	ರೂ. 200
136. ತೇಜಸ್ವಿಯನ್ನು ಹುಡುಕುತ್ತಾ... ಪರಮೇಶ್ವರ ಕೆ.	2014	ರೂ. 300
137. ಆದಿಮ ಜಾನಪದ –ಡಾ. ಮೊಗಳ್ಳಿ ಗಣೇಶ್	2014	ರೂ. 200
138. ಸೋರೇಬುರುಡೆ –ಡಾ. ಎಂ. ಬೈರೇಗೌಡ	2014	ರೂ. 100
139. ದೇವನಾಂಪ್ರಿಯ ಅಶೋಕ –ಡಾ. ಎಂ. ಬೈರೇಗೌಡ	2014	ರೂ. 150
140. ಸಮಗ್ರ ಹರಿದಾಸ ವಾಙ್ಮಯ ಕೋಶ –ಡಾ. ಶ್ರೀನಿವಾಸ ಹಾವನೂರ	2014	ರೂ. 600
141. ಎಲ್ಲರೂ ಸಹೋದರರೆ ! –ಕನ್ನಂಬಾಡಿ ಶಿವಶಂಕರ	2014	ರೂ. 80
142. ಅಮ್ಮಾ... ಕೊಲ್ಬ್ಯಾಡ!? ಡಾ. ಶಿವರಾಮ ಅಸುಂಡಿ	2014	ರೂ. 100
143. ಕ್ರಾಂತಿಕಾರಿ ಸಮಾಜ ಪರಿವರ್ತಕ ಸಂತ ಗಾಡಗೆ ಮಹಾರಾಜ ಹಿಂದಿ ಮೂಲ: ಸತನಾಮಸಿಂಹ, ಕನ್ನಡಕ್ಕೆ :ಡಾ. ಸೂರ್ಯಕಾಂತ ಎಸ್. ಸುಜ್ಯಾತ್	2014	ರೂ. 120

144. ಕನ್ನಡ ಚಲನಚಿತ್ರ: ಭಾಷೆ –ಡಾ. ಪ್ರೇಮಪಲ್ಲವಿ ಸಿ.ಬಿ.		2014	ರೂ. 150
145. ಬಿಸಿಲನಾಡಿನ ಮಹಿಳಾ ಕಾವ್ಯ –ಡಾ. ಪ್ರೇಮ ಆರ್.ಜಿ		2014	ರೂ 150
146. On the wings of the peaceful Dragon	-D.G. Mallikarjuna	2015	Rs. 250
147. ಉದರದೊಳು ಹಸಿರುಕ್ಕಿ –ಡಾ. ರಾಜೇಗೌಡ ಹೊಸಹಳ್ಳಿ		2015	ರೂ 300
148. ಅರಣ್ಯದಂಚಿನ ಬದುಕು –ಡಾ. ಯು.ಎಂ. ರವಿ		2015	ರೂ. 250
149. ಅಂತರಾಳ –ರತ್ನ ಕೆ		2015	ರೂ. 100
150. ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡ ಪದಗಳು	ಡಾ. ಕೆ.ವಿ. ನಾರಾಯಣ	2015	ರೂ. 150
151. ಕಳೆಯುವ ಮುನ್ನ –ಶಾಂತರಾಜ್ ಆರ್.		2015	ರೂ. 200
152. ಗುಂಡು–ತುಂಡೇಶ್ವರ ಶತಕಗಳು	–ಕುಡುದರಹಾಳು ಡಾ. ಶಿವಕುಮಾರತಾತ	2015	ರೂ. 90
153. ಈಶ್ವರ ಅಲ್ಲಾ ತೇರೋ ನಾಮ್ –ಡಾ. ಮಹೇಶ್ ಕುಮಾರ್ ಸಿ.ಎಸ್		2015	ರೂ. 200
154. ಅಮರ ಮಧುರ ಪ್ರೇಮ –ವೇಣುಗೋಪಾಲ್ ಕೆ.		2015	ರೂ. 80
155. ವಿಭೂತಿ ಗುಂಡಪ್ಪನವರ ಸಾಮಾಜಿಕ ಹಗಲು ವೇಷದ ರೂಪಕಗಳು	ಡಾ. ಎನ್.ಡಿ. ತಿಪ್ಪೇಸ್ವಾಮಿ	2015	ರೂ. 125
156. ವಿಭೂತಿ ಗುಂಡಪ್ಪನವರ ಪೌರಾಣಿಕ ಹಗಲು ವೇಷದ ರೂಪಕಗಳು	ಡಾ. ಎನ್.ಡಿ. ತಿಪ್ಪೇಸ್ವಾಮಿ	2015	ರೂ. 125
157. ಕಾನ್ಮನೆಯ ಕತೆಗಳು –ಶಿವಾನಂದ ಕಳವೆ		2015	ರೂ. 150
158. Indian and South East Asian Themes in Traditional Theatre	Ghulam-Sarwar Yousof	2015	Rs. 300
159. ನಾನು ಅಮೇರಿಕೆಗೆ ಹೋಗಿದ್ದೆ –ಡಾ. ಕೃಷ್ಣಾನಂದ ಕಾಮತ		2016	ರೂ. 125
160. ಅಕ್ಕ ಬಿಕ್ಕುತ್ತಾಳೆ –ಎಚ್.ಸಿ. ಭುವನೇಶ್ವರಿ		2016	ರೂ. 80
161. ಎರಡೂವರೆ ಅಕ್ಷರ –ಎಚ್.ಸಿ. ಭುವನೇಶ್ವರಿ		2016	ರೂ. 100
162. ದೆವ್ವ ಬಂತ್ ದೆವ್ವ –ಡಾ. ಶಿವರಾಮ ಅಸುಂಡಿ		2016	ರೂ. 125
163. ಮೌಖಿಕ ಕಥನಗಳ ಮಂಥನ –ಸಂ: ಡಾ. ಎಂ.ಎನ್. ವೆಂಕಟೇಶ		2016	ರೂ. 200
164. ಪ್ರಜಾಬಪ್ರಭುತ್ವದ ಚಿಂತನೆಗಳು –ಡಾ. ಕೆ.ಎಲ್. ನಾಗೇಶ್		2016	ರೂ. 150
165. ಸಾಹಿತ್ಯ ನಿಧಿ –ರಾಜಕುಮಾರ ಎಸ್ ಮಾಳಗೆ,	ಬಸವರಾಜ ಎಸ್ ಮೋಘ	2016	ರೂ. 125





ನಾನೂ ಅಮೇರಿಕೆಗೆ
ಹೋಗಿದ್ದೆ

ಷ್ಣಾನಂದ ಕಾಮತ ಕನ್ನಡ ನಾಡು ಕಂಡ ಅಪೂರ್ವ ಸಂಶೋಧಕರು. ಧ್ಯಯನ ಕಾರರಿಗೆ ಕ್ಷೇತ್ರಕಾರ್ಯ ಮಾರ್ಗದರ್ಶಿ, ಸೃಜನಶೀಲ ಬರಹ, ಂಚ ಕಲೆ, ಛಾಯಾಗ್ರಹಣ, ಪ್ರಾಣಿ-ಪಕ್ಷಿ ಕೀಟ ಅಧ್ಯಯನಿ, ಪರಿಸರ ಲಜಿ, ಪಾಕಶಾಸ್ತ್ರ ಪ್ರವೀಣ -ಹೀಗೆ ಬಹು ಆಯಾಮಗಳಲ್ಲಿ ಕೆಲಸ ಾಡಿದ ಕೃಷ್ಣಾನಂದ ಕಾಮತರು ತಮ್ಮ ಅಮೇರಿಕಾದ ಪ್ರವಾಸದ ನುಭವಗಳನ್ನು ಕಥನರೂಪದಲ್ಲಿ ನಿರೂಪಿಸಿದ್ದಾರೆ. ವಾಚಾಳಿತನಕ್ಕೆ ಸ್ಪದ ನೀಡದೆ, ಅತಿರೇಕದ ವಿವರಣೆಗೆ ಹೋಗದೆ ಸರಳವಾಗಿ ರೂಪಿಸುತ್ತಲೇ ಅಮೇರಿಕಾದ ಎಲ್ಲ ಮಗ್ಗುಲುಗಳನ್ನು ವಿಷದ ಡಿಸಿದ್ದಾರೆ. ಪ್ರವಾಸ ಕಥನವೊಂದು ಹೇಗಿರಬೇಕು ಎಂಬುದರ ಮಾದರಿ ಕೃತಿ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ 1934ರಲ್ಲಿ ಜನಿಸಿದ ಷ್ಣಾನಂದ ಕಾಮತರು 2002ರಲ್ಲಿ ನಿಧನ ಹೊಂದಿದರು.

159

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು

GATI GRAPHICS

ISBN 938144171-5

RS. 60/-